" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕರ್ನಾಟಕ ವಿಧಾನ ಪರಿಷತ್ತು**

**4ನೇ ಮಾರ್ಚ್ 2020**

**ಬುಧವಾರ**

**ವಿಷಯಾನುಕ್ರಮಣಿಕೆ**

**01. ನಿಯಮ 342ರಡಿಯಲ್ಲಿ ಮುಂದುವರೆದ ಚರ್ಚೆ**

**ವಿಧಾನ ಸಭೆಯ ಸದಸ್ಯರೊಬ್ಬರು ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆನ್ನಲಾದ ವಿಚಾರದ ಬಗ್ಗೆ.**

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಎನ್.ರವಿಕುಮಾರ್
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಡಾ: ತೇಜಸ್ವಿನಿ ಗೌಡ
ಶ್ರೀ ಎಸ್.ಎಲ್. ಭೋಜೇಗೌಡ
ಶ್ರೀ ಟಿ.ಎ.ಶರವಣ
ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ರಘುನಾಥ ರಾವ್ ಮಲ್ಕಾಪೂರೆ
ಶ್ರೀ ಎಸ್.ವ್ಹಿ.ಸಂಕನೂರ
ಶ್ರೀ ಐವನ್ ಡಿ'ಸೋಜಾ
ಶ್ರೀ ಅರುಣ ಶಹಾಪುರ

**2. ಕೊರೋನಾ ವೈರಾಣು ಕಾಯಿಲೆ ಹರಡುತ್ತಿರುವ ಬಗ್ಗೆ.**

ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಡಾ: ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು)
ಶ್ರೀ ಕೆ.ಎ.ತಿಪ್ಪೇಸ್ವಾಮಿ
ಶ್ರೀ ಪಿ.ಆರ್.ರಮೇಶ್
ಶ್ರೀ ಅರುಣ ಶಹಾಪುರ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಎಸ್.ಎಲ್.ಭೋಜೇಗೌಡ
ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ಆರ್.ಧರ್ಮಸೇನ
ಶ್ರೀ ಟಿ.ಎ.ಶರವಣ
ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು)
ಶ್ರೀ ಐವನ್ ಡಿ'ಸೋಜಾ
ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಎನ್.ಅಪ್ಪಾಜಿಗೌಡ
ಶ್ರೀ ಅಲ್ಲಂ ವೀರಭದ್ರಪ್ಪ
ಶ್ರೀ ಹೆಚ್.ಎಂ.ರಮೇಶ ಗೌಡ
ಶ್ರೀ ಎಂ.ನಾರಾಯಣಸ್ವಾಮಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀ ಕೆ.ಸಿ.ಕೊಂಡಯ್ಯ
ಶ್ರೀ ಅರಬೈಲು ಹೆಬ್ಬಾರ ಶಿವರಾಮ್(ಕಾರ್ಮಿಕ ಮತ್ತು ಸಕ್ಕರೆ ಸಚಿವರು)
ಶ್ರೀ ಎಸ್.ರುದ್ರೇಗೌಡ
ಡಾ: ತೇಜಸ್ವಿನಿ ಗೌಡ
ಶ್ರೀ ತಿಪ್ಪಣ್ಣ ಕಮಕನೂರ
ಡಾ: ವೈ.ಎ.ನಾರಾಯಣಸ್ವಾಮಿ
ಶ್ರೀ ಶರಣಪ್ಪ ಮಟ್ಟೂರು
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀಮತಿ ಜಯಮ್ಮ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

3. **ಸದನದಲ್ಲಿ ಮಂತ್ರಿಗಳು ಮತ್ತು ಅಧಿಕಾರಿಗಳು ಸಾಕಷ್ಟು ಸಂಖ್ಯೆಯಲ್ಲಿ ಹಾಜರಿಲ್ಲದಿರುವ ಬಗ್ಗೆ.**

4. **ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

ಶ್ರೀ ಎನ್.ಎಸ್.ಬೋಸ್‌ರಾಜು
ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ)

5. **ಭಾರತ ಸಂವಿಧಾನದ ಮೇಲಿನ ವಿಶೇಷ ಚರ್ಚೆಯ ಪ್ರಸ್ತಾಪನೆ**

6. **<u>ಪ್ರಶ್ನೋತ್ತರಗಳು</u>**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**289 – ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡದಲ್ಲಿನ ಕಾಗಿಣಾ ಸೇತುವೆ ಬಗ್ಗೆ.**
– ಶ್ರೀ ತಿಪ್ಪಣ್ಣ ಕಮಕನೂರ
– ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

**234 – ದೇವದುರ್ಗ ತಾಲ್ಲೂಕಿನ ರಸ್ತೆಗಳ ಬಗ್ಗೆ (APPENDIX-E)**
– ಶ್ರೀ ಬಸವರಾಜ ಪಾಟೀಲ್ ಇಟಗಿ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

228 – **ಮೀನುಗಾರಿಕೆ ಇಲಾಖಾ ಅಧಿಕಾರಿಗಳ ವೇತನ ತಾರತಮ್ಯ ಕುರಿತು**
– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

**269 – ರಾಯಚೂರು ಜಿಲ್ಲೆಗೆ ಮಂಜೂರಾಗಿರುವ ಮನೆಗಳ ಬಗ್ಗೆ**
– ಶ್ರೀ ಎನ್.ಎಸ್.ಬೋಸ್‌ರಾಜು
– ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**258+305 – ವಸತಿ ಯೋಜನೆಗಳಲ್ಲಿ ಮನೆ ನಿರ್ಮಾಣದ ಕುರಿತು**

– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಎನ್.ಅಪ್ಪಾಜಿ ಗೌಡ
– ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

**242+ – ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿನ ವಸತಿ ಶಾಲೆಗಳ ಬಗ್ಗೆ**

– ಶ್ರೀ ಮರಿತಿಬ್ಬೇಗೌಡ

**254 – ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿಲೀನ ಕುರಿತು**

– ಶ್ರೀ ಅರುಣ ಶಹಾಪುರ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

**217– ಬಂದರು ಇಲಾಖೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಗೆ ಕಿರುಕುಳ ನೀಡುತಿರುವ ಬಗ್ಗೆ**

– ಶ್ರೀ ಘೋಟೇಕರ ಶ್ರೀಕಾಂತ ಲಕ್ಷ್ಮಣ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

**247– ಬೆಂಗಳೂರು–ಮಾಗಡಿ ರಾಷ್ಟ್ರೀಯ ಹೆದ್ದಾರಿ–85ರಲ್ಲಿ ಚತುಷ್ಪಥ ರಸ್ತೆ ಕಾಮಗಾರಿ ಬಗ್ಗೆ.**

– ಶ್ರೀ ಅ.ದೇವೇಗೌಡ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

**233 – ಹೊಸ ತಾಲ್ಲೂಕುಗಳಿಗೆ ಸೌಲಭ್ಯ ನೀಡುವ ಬಗ್ಗೆ.**

– ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.
– ಶ್ರೀ ಆರ್.ಅಶೋಕ (ಕಂದಾಯ ಸಚಿವರು)

**306 – ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಯೋಜನೆ ಹಂತ–4ರ ಕಾಮಗಾರಿಗಳ ಕುರಿತು.**

– ಶ್ರೀ ಎನ್.ಅಪ್ಪಾಜಿಗೌಡ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

**237 – ಕೆ.ಎಫ್.ಸಿ.ಸಿ. ಮೀನು ಕ್ಯಾಂಟೀನ್‌ನಲ್ಲಿ ಶುಚಿತ್ವ ಕಾಪಾಡದೇ ಇರುವ ಬಗ್ಗೆ.**

– ಶ್ರೀ ಹೆಚ್.ಎಂ.ರಮೇಶ್ ಗೌಡ
– ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ)

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ.**

7. **<u>ನಿಯಮ 330ಎ ಅಡಿಯಲ್ಲಿ ಈ ಹಿಂದೆ ಪ್ರಸ್ತಾಪಿಸಲಾಗಿದ್ದ ವಿಷಯಕ್ಕೆ ಸಂಬಂಧಿಸಿದಂತೆ ಸಚಿವರ ಲಿಖಿತ ಹೇಳಿಕೆ.</u>**

**"ರಾಜ್ಯದಲ್ಲಿ ಅಕ್ರಮವಾಗಿ ಬಿ.ಪಿ.ಎಲ್. ಕಾರ್ಡ್ ದಂಧೆಯು ಹೆಚ್ಚಾಗಿ ಅರ್ಹ ಫಲಾನುಭವಿಗಳಿಗೆ ಬಿ.ಪಿ.ಎಲ್. ಕಾರ್ಡ್ ಸಿಗದೆ ಸ್ಥಿತಿವಂತರಿಗೆ ಬಿ.ಪಿ.ಎಲ್. ಕಾರ್ಡ್ ದೊರೆಕುತ್ತಿರುವ ಬಗ್ಗೆ."**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**8. ಶೂನ್ಯವೇಳೆಯಲ್ಲಿ ಈ ಹಿಂದೆ ಪ್ರಸ್ತಾಪಿಸಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತರ ನೀಡುವಲ್ಲಿ ಸರ್ಕಾರ ವಿಳಂಬ ಮಾಡುತ್ತಿರುವ ಬಗ್ಗೆ.**

– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**9. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.</u>**

**ಅ) ಕೊರೋನಾ ವೈರಾಣು ಕಾಯಿಲೆ ಹರಡುತ್ತಿರುವ ಬಗ್ಗೆ.**

– ಶ್ರೀ ಲಹರ್ ಸಿಂಗ್ ಸಿರೋಯಾ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ಪಡಿತರ ವಿತರಣೆಯ ಮೂಲದಲ್ಲಿಯೇ ಪ್ರತಿ ತಿಂಗಳು 5,400 ಟನ್ ಪಡಿತರ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ 25,000 ಟನ್ ಪಡಿತರ ಸೋರಿಕೆಯಾಗುತ್ತಿರುವ ಬಗ್ಗೆ.**

– ಡಾ: ವೈ.ಎ.ನಾರಾಯಣಸ್ವಾಮಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಮಂಗಳೂರು ಮಹಾನಗರದಲ್ಲಿ ಪರವಾನಗಿ ಪಡೆದ ರಿಕ್ಷಾ ಚಾಲಕರು ತಮ್ಮ ರಿಕ್ಷಾಗಳನ್ನು ಮಾರಾಟ ಮಾಡಲು ಅಥವಾ ವರ್ಗಾವಣೆ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ.**

– ಶ್ರೀ ಐವನ್ ಡಿ'ಸೋಜಾ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಮಂಡ್ಯ ಜಿಲ್ಲೆಯ ರೈತರು ಹೊಸ ತಳಿಯ ಭತ್ತ ಬಿತ್ತನೆ ಮಾಡಿ ಬೆಳೆ ನಷ್ಟವಾಗಿರುವ ಬಗ್ಗೆ.**

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

~~~~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~~~~

(131)4–3–2020/11–40/ಬಿಕೆಪಿ–ಕೆ.ಎಸ್

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಬುಧವಾರ, 4ನೇ ಮಾರ್ಚ್ 2020**

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಬೆಳಿಗ್ಗೆ 11 ಗಂಟೆ 48 ನಿಮಿಷಕ್ಕೆ**
**ಸಮಾವೇಶಗೊಂಡಿತು.**

**ಸಭಾಪತಿ(ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು**
**ಪೀಠದಲ್ಲಿ ಉಪಸ್ಥಿತರಿದ್ದರು**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

1. ನಿಯಮ 342ರಡಿಯಲ್ಲಿ ಮುಂದುವರೆದ ಚರ್ಚೆ

**"ವಿಧಾನ ಸಭೆಯ ಸದಸ್ಯರೊಬ್ಬರು ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆನ್ನಲಾದ ವಿಚಾರದ ಬಗ್ಗೆ."**

– – – –

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಜೆ.ಡಿ.(ಎಸ್) ಪಕ್ಷದ ನಾಯಕರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ಹೊರತುಪಡಿಸಿ ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕಳೆದ ಎರಡು ದಿನಗಳಿಂದ ಸದನ ಈ ರೀತಿಯಲ್ಲಿ ನಡೆದಿದ್ದು, ಬಗ್ಗೆ ಇಡೀ ರಾಜ್ಯದ ಜನತೆ ನಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೆನ್ನುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ನಮ್ಮ ಪಕ್ಷದ ವತಿಯಿಂದ ಮತ್ತು ಕಾಂಗ್ರೆಸ್ ಪಕ್ಷದವರು ಸೇರಿಕೊಂಡು ಒಂದು ವಿಷಯವನ್ನು ಸಭೆಯಲ್ಲಿ ಮಂಡಿಸಿದ್ದೇವೆ. ಪ್ರತಿದಿನವೂ ಸಹ ಆ ಮನೆಯ ಸದಸ್ಯರಾಗಲಿ, ಈ ಮನೆಯ ಸದಸ್ಯರಾಗಲಿ ಇದೇ ವಿಚಾರವನ್ನು ಬೆಳಸಿಕೊಂಡು ಹೋಗಿದ್ದೇವೆ. ಇದಕ್ಕೆ ಒಂದು ಅಂತ್ಯ ಬೇಕು. ಸರ್ಕಾರ ಜವಾಬ್ದಾರಿ ಸ್ಥಾನದಲ್ಲಿ ಇದ್ದಾಗ ಇದಕ್ಕೆ ಏನಾದರೊಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇದೇ ರೀತಿ ಮುಂದುವರಿದರೆ, ಈ ಬಜೆಟ್ ಅಧಿವೇಶನ ಮುಗಿಯುವವರೆಗೆ ನಾವುಗಳು ಯಾರೂ ಸಹ ಈ ಸದನಕ್ಕೆ ಬರುವುದಿಲ್ಲ. ಇದು ಸರಿಯಾದ ಪದ್ಧತಿ ಅಲ್ಲ. ಈ ರೀತಿ ಇದನ್ನು ಬೆಳೆಸಿಕೊಂಡು ಹೋಗುವುದು ಸೂಕ್ತವಾಗುವುದಿಲ್ಲ. ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಸಮಾಜದಲ್ಲಿ ಆಗುವಂತಹ ನ್ಯೂನತೆಗಳನ್ನು ಸರ್ಕಾರದ ಗಮನಕ್ಕೆ ತರುವುದು ನಮ್ಮ ಜವಾಬ್ದಾರಿಯಾಗಿದ್ದು, ಅದನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅದಕ್ಕೋಸ್ಕರ ಈ ವಿಚಾರದಲ್ಲಿ ಸರ್ಕಾರ ಮೊಂಡುತನವನ್ನು ವ್ಯಕ್ತ ಮಾಡುವುದು ಸೂಕ್ತವಲ್ಲ. ಈ ಬಗ್ಗೆ ತಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇವೆ. ನೀವೇ ಇಲ್ಲಿ ಕುಳಿತುಕೊಂಡು ಬೇಕಾದುದನ್ನು ಮಾಡಿ. ಈ ವಿಚಾರದಲ್ಲಿ ನಾವೆಲ್ಲರೂ ಚರ್ಚೆ ಮಾಡಿ, compromise ಮಾಡಿ ಪರಿಸ್ಥಿತಿಯನ್ನು ಒಂದು ದಾರಿಗೆ ತಂದಿದ್ದೇವೆ. ರಾಜ್ಯದಲ್ಲಿ ಜನರ ನೂರಾರು ಸಮಸ್ಯೆಗಳಿವೆ. Flood ಸಂಬಂಧ ಕೆಲಸ ಮಾಡಿಲ್ಲ. ಸಂತ್ರಸ್ತರಿಗೆ ಮನೆಗಳಿಲ್ಲ. ಬರಗಾಲ ಬಂದು, ಎಷ್ಟೋ ಕಡೆ ಕುಡಿಯಲಿಕ್ಕೆ ನೀರು ಇರುವುದಿಲ್ಲ. ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಸಹ ಇದೇ ಸಮಸ್ಯೆಯನ್ನು ಮುಂದುವರಿಸಿಕೊಂಡು ಹೋದರೆ ಹೇಗೆ? ಮಕ್ಕಳ ಅಧಿವೇಶನವನ್ನು ನೋಡಲಿಕ್ಕೆ ಬರುತ್ತಾರೆ. ಇದನ್ನು ಅವರುಗಳು ನೋಡಿದರೆ ಮುಂದೆ ಯಾರೂ ಸಹ ರಾಜಕೀಯಕ್ಕೆ ಬರುವುದಿಲ್ಲ. ಯುವಕರೆಲ್ಲರೂ ರಾಜಕೀಯಕ್ಕೆ ಬನ್ನಿ, ಬನ್ನಿ ಎಂದು ಹೇಳುತ್ತೀರಿ. ಅವರುಗಳು ಹೇಗೆ ಬರುತ್ತಾರೆ? ಅದಕ್ಕೋಸ್ಕರ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ರೀತಿಯ ಸರ್ಕಾರದ ಮೊಂಡುತನ ಸರಿಯಾದುದಲ್ಲ. ಈ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರಬೇಕಾಗಿದ್ದು, ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಚಾರವಾಗಿ ಚರ್ಚೆ ಮಾಡಲು ಮಾನ್ಯ ಸಭಾಪತಿಯವರ ಕೊಠಡಿಗೆ ಆ ಕಡೆಯಿಂದ 4 ಮಂದಿ, ಈ ಕಡೆಯಿಂದ 4 ಮಂದಿ ಬನ್ನಿ. ಅಲ್ಲಿ ಈ ವಿಚಾರವಾಗಿ ಚರ್ಚೆ ಮಾಡಿ ಏನಾದರೊಂದು ತೀರ್ಮಾನ ತೆಗೆದುಕೊಳ್ಳೋಣ.

**(ಮುಂದು..**

**(132) 04.03.2020 11.50 ಎಸ್‌ವಿ–ಕೆಎಸ್**
**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಮುಂದು):**

ಇಲ್ಲವೇ ನೀವೇನಾದರೂ ಮಾಡಿ. ವಿಷಾದ ವ್ಯಕ್ತಪಡಿಸುವುದರಿಂದ ಆಕಾಶ ಕಳಚಿ ಬೀಳುವುದಿಲ್ಲ. ಅದರಿಂದ ಏನೂ ಆಗುವುದಿಲ್ಲ. ವಿಷಾದ ವ್ಯಕ್ತಪಡಿಸುತ್ತೇವೆಂದು ಹೇಳುವ ವ್ಯಕ್ತಿಯಷ್ಟು ದೊಡ್ಡ ಮನುಷ್ಯರು ಯಾರೂ ಇರುವುದಿಲ್ಲ. ವಿಷಾದ ವ್ಯಕ್ತ ಪಡಿಸಲು ಮೊಂಡುತನವನ್ನು ಪ್ರದರ್ಶಿಸುತ್ತಾ ಇಡೀ ಸದನದ ಸಮಯವನ್ನು ಹಾಳು ಮಾಡುವುದು ಸರಿಯಾದುದಲ್ಲ.

ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಭಾನಾಯಕರಲ್ಲಿ ನಾನು ಬಹಳ ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಹೊರಗೆ ಜನರು ಏನು ಮಾತನಾಡಿಕೊಳ್ಳುತ್ತಾರೆಂದು ನಾವು ಕೇಳುತ್ತಿದ್ದೇವೆ. ಅದಕ್ಕೆ ನಾವು scope ಕೊಡುವುದು ಬೇಡ. ದಯಮಾಡಿ ಇದಕ್ಕೆ ಒಂದು ತಾರ್ಕಿಕ ಅಂತ್ಯವನ್ನು ಹಾಡಲೇಬೇಕು. ನಂತರ ಸದನವನ್ನು ನಡೆಸಲೇಬೇಕು. ಸದನವು ನಡೆಯದಿದ್ದರೆ ನಾವು ಈ ಬಜೆಟ್ ಅಧಿವೇಶನ ಮುಗಿಯುವವರೆವಿಗೂ ಸದನಕ್ಕೆ ಬರುವುದಿಲ್ಲ ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಆದ್ದರಿಂದ ದಯಮಾಡಿ ಸರ್ಕಾರ ಒಂದು ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸದನವು ವ್ಯವಸ್ಥಿತವಾಗಿ ನಡೆಯಬೇಕು ಎಂದು ಸರ್ಕಾರವು ಯಾವಾಗಲೂ ತಮ್ಮ ಮುಂದೆ ವಿನಂತಿ ಮಾಡಿಕೊಳ್ಳುತ್ತಲೇ ಬಂದಿದೆ. ಈಗಲೂ ಕೂಡ ನಾನು ವಿರೋಧಪಕ್ಷದವರಲ್ಲಿ ವಿನಂತಿ ಮಾಡುತ್ತೇನೆ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ಬಗ್ಗೆ ಚರ್ಚೆಗಳು ಮುಂದುವರೆಯಬೇಕಾಗಿದ್ದು, ಅದಕ್ಕೆ ಉತ್ತರ ಕೊಡಲು ಸರ್ಕಾರ ಸಿದ್ಧವಾಗಿದೆ. ಪ್ರಶ್ನೋತ್ತರಗಳು ನಮ್ಮ ಮುಂದೆ ಕಾಯುತ್ತಿದೆ. ಶೂನ್ಯವೇಳೆ ಹಾಗೂ ಅನೇಕ ಕಾರ್ಯಕಲಾಪಗಳು ಆಗಬೇಕಾಗಿದೆ. ಕೆಳಮನೆಯಲ್ಲಿ ನಡೆದಿರುವ ಚರ್ಚೆಯು ಒಂದು ಹಂತಕ್ಕೆ ತೀರ್ಮಾನವಾಗಿ, ನಿನ್ನೆ ಸದನದ ಬಾವಿಗೆ ಬಂದಿದ್ದ ಸದಸ್ಯರು ಇಂದು ತಮ್ಮ ಸ್ಥಾನಗಳಿಗೆ ಹಿಂತಿರುಗಿದ್ದಾರೆ. ಕೆಳಮನೆಯ ವಿಚಾರಕ್ಕೆ ಸಂಬಂಧಪಟ್ಟಂತೆ ಮೇಲ್ಮನೆಯಲ್ಲಿ ಚರ್ಚೆಯಾಗಿದೆ. ನಮ್ಮಲ್ಲಿ ಯಾವ ಗೊಂದಲವೂ ಇಲ್ಲ. ಚರ್ಚೆಗೂ ಸರ್ಕಾರ ಸಿದ್ಧವಾಗಿದೆ ಹಾಗೂ ಉತ್ತರ ಕೊಡಲು ಸರ್ಕಾರ ಸಿದ್ಧವಿದೆ. ತಾವು ಕೊಟ್ಟ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಎಲ್ಲರೂ ಮಾತನಾಡುತ್ತಿರುವಾಗ ವಿಷಯ ತಾರಕಕ್ಕೇರಿ ಅವರು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪುನಃ ಬಾವಿಗೆ ಬಂದಿದ್ದಾರೆ. ನಮ್ಮ ಸದಸ್ಯರಿಂದ ಬೇಕಾದರೆ ತಾವು ಸ್ಪಷ್ಟೀಕರಣವನ್ನು ಕೇಳಿ. ತಾವು ಅವಕಾಶ ಕೊಟ್ಟರೆ ಅವರು ಸ್ಪಷ್ಟೀಕರಣವನ್ನು ಕೊಡುತ್ತಾರೆ. ನಾನು ತಮ್ಮ ಮೂಲಕ ವಿರೋಧಪಕ್ಷದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡೋಣ. ವಿರೋಧಪಕ್ಷದವರು ಏನೇನು ಪ್ರಶ್ನೆಯನ್ನು ಕೇಳಿದ್ದಾರೆ ಅವುಗಳಿಗೆ ಉತ್ತರವನ್ನು ನೀಡೋಣ. ಮಾನ್ಯ ಬಸವರಾಜ ಹೊರಟ್ಟಿಯವರು ವ್ಯಕ್ತಪಡಿಸಿರುವ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಉತ್ತರಗಳನ್ನು ಕೊಡುತ್ತೇವೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ನಾನು ವಿನಂತಿ ಮಾಡುತ್ತೇನೆ. ಏನೇ ಸಮಸ್ಯೆ ಇದ್ದರೂ ಚರ್ಚೆಯ ಮೂಲಕ ಪರಿಹಾರವನ್ನು ಕಂಡುಕೊಳ್ಳೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ, ಈ ವಿಷಯದ ಬಗ್ಗೆ ಒಂದು ವಿಷಾದವನ್ನು ವ್ಯಕ್ತಪಡಿಸಿದರೆ ಆಕಾಶವೇನಾದರೂ ಕಳಚಿ ಬೀಳುತ್ತದೆಯೇ? ಇಡೀ ರಾಜ್ಯಕ್ಕೆ ನೀವು ದೊಡ್ಡವರೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಹೊರಟ್ಟಿಯವರು ಹೇಳಿದಂತಹ ವಿಚಾರವನ್ನು ಬಿಟ್ಟು ಉಳಿದ ವಿಚಾರಗಳನ್ನು ಮಾತ್ರ ನೀವು ಚರ್ಚೆ ಮಾಡಿದಿರಿ ಎಂದು ಇತರರು ಆಕ್ಷೇಪ ಮಾಡುತ್ತಾರೆ. ನಮ್ಮ ಸದಸ್ಯರು ಹೇಳಿರುವ ವಿಷಯದ ಬಗ್ಗೆ ಅವರಿಂದ ನಾನು ಸ್ಪಷ್ಟತೆಯನ್ನು ಪಡೆದಾಗ, ಅವರ ಸ್ಪಷ್ಟತೆಯೇನೆಂದರೆ ಮಾನ್ಯ ದೊರೆಸ್ವಾಮಿಯವರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿ ನಮಗೆ ಗೌರವವಿದೆ. ವ್ಯಕ್ತಿಯಾಗಿ ಅವರು ಪ್ರಧಾನಮಂತ್ರಿಯವರನ್ನು, ವೀರ್ ಸಾವರ್ಕರ್ ಅವರನ್ನು ದೂಷಣೆ ಮಾಡಿದ ಹಿನ್ನೆಲೆಯಲ್ಲಿ ನಾನು ಕಟುವಾಗಿ ಆ ಶಬ್ದಕ್ಕೆ ಸೀಮಿತಗೊಳಿಸಿ ಮಾತನಾಡಿದ್ದೇನೆ ಎಂದು ಹೇಳಿದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ. ಅದನ್ನು ನೀವು ಬೇರೆಯ ರೂಪದಲ್ಲಿ ತೆಗೆದುಕೊಂಡು ಬನ್ನಿ. ಇದಕ್ಕೆ ಸಂಬಂಧ ಕಲ್ಪಿಸಬೇಡಿ. ಕಾನೂನನ್ನು ಸರಿಯಾಗಿ ಓದಿ. ನೋಟಿಸ್ ಕೊಟ್ಟು, ಅದನ್ನು ಸದನಕ್ಕೆ ತೆಗೆದುಕೊಂಡು ಬನ್ನಿ. ಚರ್ಚೆಯನ್ನು ಮಾಡೋಣ. ತಪ್ಪಿದ್ದರೆ ತೀರ್ಮಾನ ಮಾಡೋಣ. ಈ ವಿಷಯಕ್ಕೆ ಮಾನ್ಯ ಪ್ರಧಾನಮಂತ್ರಿಯವರನ್ನು ತರಬೇಡಿ. ಮಾನ್ಯ ಪ್ರಧಾನಮಂತ್ರಿಯವರಿಗೆ ಅವಮಾನವಾದರೆ ಇಡೀ ದೇಶಕ್ಕೆ ಅವಮಾನವಾದಂತೆ. ಆ ವಿಷಯವನ್ನು ಪ್ರತ್ಯೇಕವಾಗಿ ಚರ್ಚೆ ಮಾಡಿ ಅದರಲ್ಲಿ ತಪ್ಪಿದ್ದರೆ unanimous decision ಅನ್ನು ತೆಗೆದುಕೊಳ್ಳೋಣ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೆಲವು ಬಾರಿ ಶಾಸಕರು ವ್ಯಕ್ತಿಗತವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಅವರಿಂದ ಸ್ಪಷ್ಟೀಕರಣವನ್ನು ಪಡೆಯಬಹುದೇ ವಿನಃ ಇದೇ ರೀತಿಯಾಗಿ ಕ್ಷಮೆಯಾಚನೆ ಮಾಡಬೇಕು ಎಂದು ಹೇಳಲಾಗುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇದು ನಮ್ಮ ವಿನಂತಿ. ನಾವು ವೈಯಕ್ತಿಕವಾಗಿ ಮಾನ್ಯ ರವಿಕುಮಾರ್ ಅವರಲ್ಲಿ ವಿನಂತಿ ಮಾಡಿಕೊಂಡಿದ್ದೇವೆ. ಈಗಲೂ ಇಡೀ ಸದನದ ಪರವಾಗಿ ನಿಮ್ಮಲ್ಲಿ ಹಾಗೂ ಮಾನ್ಯ ರವಿಕುಮಾರ್ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಜನರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮದು. ಜನ ನಮ್ಮನ್ನು ನೋಡಿ ನಗುತ್ತಾರೆ. ಈ ಹಿನ್ನೆಲೆಯಲ್ಲಿ ಇನ್ನೂ ಹತ್ತು ಬಾರಿ ವಿನಂತಿ ಮಾಡಿಕೊಳ್ಳುತ್ತೇವೆ. ದಯಮಾಡಿ ಇದನ್ನು ಮುಗಿಸುವಂತೆ ಮಾನ್ಯ ರವಿಕುಮಾರ್ ಅವರಿಗೆ ಹಾಗೂ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಸದಸ್ಯರಿಂದ ಸ್ಪಷ್ಟೀಕರಣವನ್ನು ಪಡೆದುಕೊಳ್ಳಿ.

**ಸಭಾಪತಿಯವರು:–** ಈಗ ವಿರೋಧ ಪಕ್ಷದ ನಾಯಕರು.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸದನದ ಅತ್ಯಂತ ಹಿರಿಯ ಸದಸ್ಯರಾದ ಜಾತ್ಯಾತೀತ ಜನತಾದಳದ ಮಾನ್ಯ ಬಸವರಾಜ ಹೊರಟ್ಟಿಯವರು ಬಹಳಷ್ಟು ನೇರವಾಗಿ ಹೃದಯಕ್ಕೆ ಮುಟ್ಟುವಂತಹ ಮಾತುಗಳನ್ನಾಡಿದ್ದಾರೆ. ನಿಜವಾಗಿ ಹೇಳಬೇಕಾದರೆ ಈ ರಾಜ್ಯದ 6.5 ಕೋಟಿ ಜನರ ಸಾಕಷ್ಟು ಸಮಸ್ಯೆಗಳು ನಮ್ಮ ಮುಂದಿವೆ. ಒಂದಲ್ಲ, ಎರಡಲ್ಲ. ನೆರೆ ಹಾವಳಿಯ ಸಂತ್ರಸ್ತರು ಇನ್ನೂ ರಸ್ತೆಯಲ್ಲಿದ್ದಾರೆ. ಬಿದ್ದ ಮನೆಗಳನ್ನು ಸರಿಪಡಿಸಿಕೊಳ್ಳಲು ಇನ್ನೂ ದುಡ್ಡು ಕೊಟ್ಟಿಲ್ಲ. ಅವುಗಳನ್ನು ಈಗ ಹೇಳಲು ಹೋಗುವುದಿಲ್ಲ. ಆ ಪ್ರಸಂಗ ಬಂದಾಗ ಮಾತನಾಡುತ್ತೇನೆ. ರಾಜ್ಯದ ಜನತೆ ಎದುರಿಸುತ್ತಿರುವ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕೆನ್ನುವ ವಿಚಾರ ಬಹುತರವಾಗಿ Treasury bench ನವರಿಗಿಂತ ಹೆಚ್ಚು ನಮಗಿದೆ. ಶ್ರೀ ದೊರೆಸ್ವಾಮಿಯವರ ಬಗ್ಗೆ ಅವಹೇಳನಕಾರಿಯಾದ ಮಾತುಗಳನ್ನಾಡಿದಂತಹ ವಿಷಯವು ಚರ್ಚೆಯಾಗುತ್ತಿದ್ದ ಸಂದರ್ಭದಲ್ಲಿ ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ಎನ್.ರವಿಕುಮಾರ್ ಅವರು "ದೊರೆಸ್ವಾಮಿಯವರಿಗೆ ಧಿಕ್ಕಾರ, ದೊರೆಸ್ವಾಮಿಯವರಿಗೆ ನಾಚಿಕೆಯಾಗಬೇಕಿತ್ತು" ಎನ್ನುವಂತಹ ಮಾತುಗಳನ್ನು ಹೇಳಿದರು. ನಾನು ಇದನ್ನು ಹಾಗೆಯೇ ಹೇಳುತ್ತಿಲ್ಲ. ಕಡತದ ದಾಖಲೆಗಳೊಂದಿಗೆ ಹೇಳುತ್ತಿದ್ದೇನೆ. ನಂತರ ನಮ್ಮ ಸಹೋದರಿಯಾದ ಡಾ:ತೇಜಸ್ವಿನಿ ಗೌಡ ಅವರು "ಮಾನ್ಯ ಪ್ರಧಾನ ಮಂತ್ರಿಯವರನ್ನು ಕೊಲೆ ಮಾಡಬೇಕೆಂದು ಹೇಳಿಕೆಯನ್ನು ಕೊಟ್ಟಂತಹ ಕೊಲೆ ಪಾತಕರಿಗೆ ಬೆಂಬಲ ಕೊಡಬೇಕೆ?" ಎಂದು ಹೇಳಿದರು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ನಿನ್ನೆ ನಾನು ಇಲ್ಲಿ ಏನು ಮಾತನಾಡಿದ್ದೆನೋ ಅಷ್ಟನ್ನು ಮಾತ್ರ ಇಲ್ಲಿ ಹೇಳುತ್ತೇನೆ.

“ಮಾನ್ಯ ಸಭಾಪತಿಯವರೇ, ಕೊಲೆ ಮಾಡಬೇಕೆಂದು ಹೇಳಿಕೆ ಕೊಟ್ಟವರಿಗೆ ಬೆಂಬಲ ಕೊಡಬೇಕೆ ಎಂದರೆ ಅವರು ಕೊಲೆ ಮಾಡಬೇಕೆಂದು ಎಲ್ಲಿ ಹೇಳಿದ್ದಾರೆ? ಚುನಾವಣೆಯಲ್ಲಿ ಬಿ.ಜೆ.ಪಿ. ಪಕ್ಷವನ್ನು ಮುಗಿಸಬೇಕೆಂದು ಈ ರೀತಿಯಾಗಿ ಹೇಳಿದ್ದಾರೆ. ಆದರೆ ಇವರು ಅದನ್ನು ಅಪಾರ್ಥ ಮಾಡಿಕೊಂಡು ಮುಂದೆ ಕೊಲೆಪಾತಕರಿಗೆ ಬೆಂಬಲ ಕೊಡಬೇಕೆ ಎಂದು ಹೇಳಿದ್ದಾರೆ. ಅಂದರೆ ಇವರು ಶ್ರೀ ದೊರೆಸ್ವಾಮಿಯವರನ್ನು ಕೊಲೆಪಾತಕ ಎಂದು ಹೇಳಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾನು ಮಾತನಾಡಿದ್ದೇನೆ. ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಮುಗಿಸಬೇಕೆಂದು ಹೇಳಿದ್ದಾರೆ. ಅದನ್ನು ಇವರು ಅಪಾರ್ಥ ಮಾಡಿಕೊಂಡು ಕೊಲೆಪಾತಕರಿಗೆ ಬೆಂಬಲ ಕೊಡಬೇಕೆಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಶ್ರೀ ದೊರೆಸ್ವಾಮಿಯವರಿಗೆ ಕೊಲೆಪಾತಕರು ಎಂಬ ಶಬ್ದವನ್ನು ಬಳಕೆ ಮಾಡಿದ್ದಾರೆ. ನಾನು ದಾಖಲೆ ಕೊಟ್ಟು ಕಳುಹಿಸುತ್ತೇನೆ.”

ಕೆಳಮನೆಯ ವಿಚಾರವೇ ಬೇರೆ, ಮೇಲ್ಮನೆಯ ವಿಚಾರವೇ ಬೇರೆ. ಮಾನ್ಯ ರವಿಕುಮಾರ್ ಅವರು ದೊರೆಸ್ವಾಮಿಯವರಿಗೆ ಧಿಕ್ಕಾರ, ಅವರಿಗೆ ನಾಚಿಕೆಯಾಗಬೇಕು ಎಂದು ಹೇಳಿರುವ ಈ ಸಂದರ್ಭದಲ್ಲಿ ತಾವು ಪೀಠದಿಂದ ಉದಾತ್ತ ಭಾವನೆಯಿಂದ ಸ್ವಾತಂತ್ರ್ಯ ಹೋರಾಟಗಾರರಾಗಿರುವಂತಹ ಮಾನ್ಯ ದೊರೆಸ್ವಾಮಿಯವರ ಬಗ್ಗೆ ಅವಹೇಳನಕಾರಿಯಾದಂತಹ ಮಾತುಗಳನ್ನು ಹೇಳಿದಂತಹ ಸಂದರ್ಭದಲ್ಲಿ ನಾವು ನೋಟಿಸ್ ಕೊಟ್ಟ ತಕ್ಷಣ ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟಿರಿ. ಹಾಗಾಗಿ ಈ ವಿಷಯವು ತಮ್ಮ ಮನಸ್ಸಿಗೂ ನೋವುಂಟು ಮಾಡಿದೆಯೆಂದು ಭಾವಿಸುತ್ತೇನೆ. ಮಾನ್ಯ ಸಭಾನಾಯಕರು ಸಹ ನಾವು ಚರ್ಚೆಗೆ ಸಿದ್ಧ ಎಂದು ಹೇಳಿದರು. ಚರ್ಚೆ ಚೆನ್ನಾಗಿಯೇ ನಡೆದಿತ್ತು. ನಾನು ಹಾಗೂ ಮಾನ್ಯ ಹೊರಟ್ಟಿಯವರು ಮಾತನಾಡಿದ್ದೆವು. ನಮ್ಮ ನಂತರ ಮಾನ್ಯ ಐವನ್ ಡಿಸೋಜ ಅವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಈ ಘಟನೆ ನಡೆಯಿತು. ಸ್ವಾತಂತ್ರ್ಯ ಯೋಧರಿಗೆ ಧಿಕ್ಕಾರ, ಅವರಿಗೆ ನಾಚಿಕೆಯಾಗಬೇಕು, ಅವರು ಕೊಲೆಗಡುಕರು ಈ ರೀತಿಯಾಗಿ ಮಾತನಾಡುತ್ತಿದ್ದರೆ ನಾವು ಸುಮ್ಮನೆ ಕುಳಿತು ಕೇಳಬೇಕೆ?

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ದಾಖಲೆಗೆ ತಪ್ಪಾಗಿ ಹೋಗಬಾರದು. ಸ್ವಾತಂತ್ರ್ಯ ಯೋಧರು ಎಂಬ ಶಬ್ದವನ್ನು ಉಪಯೋಗಿಸಿಲ್ಲ. ಹೆಸರನ್ನು ಉಪಯೋಗಿಸಿದ್ದಾರಷ್ಟೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಅರುಣ್ ಶಹಾಪುರರವರೆ, ಇಲ್ಲಿ ಕಡತದಲ್ಲಿರುವ ದಾಖಲೆಗಳನ್ನು ಇಟ್ಟುಕೊಂಡು ನಾನು ಮಾತನಾಡುತ್ತಿದ್ದೇನೆ. ಇದರಲ್ಲಿ ಒಂದು ಶಬ್ದ, ಪೂರ್ಣವಿರಾಮ, ಅಲ್ಪವಿರಾಮ ಚಿಹ್ನೆಗಳೂ ಸಹ ಬದಲಾಗಿಲ್ಲ. ನಿನ್ನೆ ಮಾತನಾಡಿರುವುದನ್ನು ಇಲ್ಲಿ ಪುನರುಚ್ಚರಿಸಲಾಗಿದೆ. ದಾಖಲೆಗಳಲ್ಲಿದ್ದುದನ್ನು ನಾನು ಹೇಳಿದ್ದೇನೆ. We all are human beings. Man may commit a blunder. Man is bound to

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

commit a blunder. ತಪ್ಪಾಗಿದ್ದಾಗ ವಿಷಾದ ವ್ಯಕ್ತಪಡಿಸಿದರೆ, ವಿಷಯ ಮುಕ್ತಾಯವಾಗುತ್ತದೆ. ಈ ರಾಜ್ಯದ ಆರೂವರೆ ಕೋಟಿ ಜನರ ಬಗ್ಗೆ ನಮಗೆ ಕಾಳಜಿ–ಕಕ್ಕುಲಾತಿ ಇದೆ. ಜನರ ಸಮಸ್ಯೆಗಳನ್ನು ಬಗೆಹರಿಸಬೇಕು. ಸಮಸ್ಯೆಗಳನ್ನು ಎಳೆ–ಎಳೆಯಾಗಿ ಬಿಡಿಸಿ, ಸರ್ಕಾರ ಎಲ್ಲಿ ತಪ್ಪು ಮಾಡುತ್ತಿದೆ, ಸರ್ಕಾರ ಎಲ್ಲಿ ಎಡವುತ್ತಿದೆ? ಎಂಬುದನ್ನು ಹೇಳಬೇಕೆಂದು ನಾವು ಇಲ್ಲಿ ಬಂದು ಪ್ರತಿಪಕ್ಷದಲ್ಲಿ ಕುಳಿತಿದ್ದೇವೆ.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ಸ್ಪಷ್ಟೀಕರಣ ಕೊಡುವುದಕ್ಕೆ ಅವಕಾಶ ಮಾಡಿಕೊಡಿ. ಸಮಯ ವ್ಯರ್ಥವಾಗುತ್ತದೆಯಲ್ಲವೆ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಪ್ರಾಣೇಶ್ ಅವರೇ, ನಾನು ಮಾತನಾಡಿ ಮುಗಿಸುತ್ತೇನೆ. ನಂತರ ನೀವು ಮಾತನಾಡಿ. ಈಗಾಗಲೇ ಮಾನ್ಯ ರವಿಕುಮಾರ್ ಅವರು ಸ್ಪಷ್ಟೀಕರಣವನ್ನು ನೀಡುತ್ತಾರೆಂದು ಸಭಾನಾಯಕರು ಹೇಳಿದ್ದಾರೆ.

**(...ಮುಂದು)**

(133) 4.3.2020,12.00 KG GR
**ಶ್ರೀ ಎಸ್.ಆರ್.ಪಾಟೀಲ್(ಮುಂದು):**

ಈಗಾಗಲೇ ಮಾನ್ಯ ಸಭಾನಾಯಕರು ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೊಡುತ್ತಾರೆಂದು ಹೇಳಿದ್ದಾರೆ. ಯಾರ ಹೋರಾಟದ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಯಾರ ಹೋರಾಟದ ಫಲವಾಗಿ ಭಾರತ ಮಾತೆ ದಾಸ್ಯ ಸಂಕೋಲೆಗಳಿಂದ ಬಿಡುಗಡೆಯಾಗಿ ಪ್ರಜಾತಂತ್ರ ವ್ಯವಸ್ಥೆ ನಮ್ಮ ದೇಶದಲ್ಲಿ ಬಂತು, ಯಾರ ಹೋರಾಟದ ಫಲವಾಗಿ ಈ ಸದನ ನಿರ್ಮಾಣವಾಯಿತು, ಯಾರ ಹೋರಾಟದ ಫಲವಾಗಿ ಆಡಳಿತ ಹಾಗೂ ವಿರೋಧ ಪಕ್ಷದಲ್ಲಿ ಕುಳಿತಿರುವಂತಹ ಸದಸ್ಯರಾದ ನಾವು ಇವತ್ತು ಬಂದು ಇಲ್ಲಿ ಮಾತನಾಡುವಂತಹ ಅವಕಾಶ ಕೊಟ್ಟರು. ಯಾರು ಕೊಟ್ಟರು? ಸ್ವಾತಂತ್ರ್ಯ ಹೋರಾಟಗಾರರ ಫಲವಾಗಿ ಈ ದೇಶ ಸ್ವತಂತ್ರವಾಯಿತು. ಸೂರ್ಯ ಮುಳಗದ ಸಾಮ್ರಾಜ್ಯದ ಬ್ರಿಟೀಷರನ್ನು ಹೊರಗಟ್ಟಿ ಭಾರತ ಮಾತೆಗೆ ಸ್ವಾತಂತ್ರ್ಯ ಒದಗಿಸುವುದರ ಜೊತೆಗೆ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬರುವುದರ ಜೊತೆಗೆ ದೇಶಕ್ಕೆ ವಿಶ್ವದಲ್ಲಿ ಶ್ರೇಷ್ಠವಾದಂತಹ ಸಂವಿಧಾನವನ್ನು ನೀಡಿ ಮಹಾ ಚುನಾವಣೆಗಳ ಮೂಲಕ ನಾವೆಲ್ಲರೂ ಆಯ್ಕೆಯಾಗಿ ಇಲ್ಲಿಗೆ ಬಂದಿದ್ದೇವೆ. ನಾವು ಅಂತಹವರನ್ನು ಬಿಡುವುದಿಲ್ಲ. ಅವರನ್ನು ಹಿಗ್ಗಾ ಮುಗ್ಗಾ ಜಾಡಿಸುತ್ತೇವೆ. ಅವರಿಗೆ ಧಿಕ್ಕಾರ ಎಂದು ಹೇಳುತ್ತೇವೆ. ಆ ರೀತಿ ಹೇಳುವವರಿಗೆ ನಾಚಿಕೆ ಆಗಬೇಕು. ಅವರನ್ನು ಕೊಲೆಗಡುಕರು ಎನ್ನುವಂತಹ ಮಾತುಗಳನ್ನು ಬಳಕೆ ಮಾಡಿದರು. ನನಗೆ ಬಹಳ ನೋವಾಗಿದೆ. ಇಲ್ಲಿ ಮಾತನಾಡುವಂತಹ ಮಾತುಗಳನ್ನು ಮತ್ತು ಇಲ್ಲಿ ನಡೆಯುವಂತಹ ವಿಚಾರಗಳನ್ನು ನೋಡಿದರೆ ಎಂತಹ ಪರಿಸ್ಥಿತಿ ಬಂತು ಎಂದು ನನಗೆ ಅನಿಸುತ್ತದೆ. ನಾನು ನಿನ್ನೆ ದಿವಸ ಬಹಳಷ್ಟು ವಿಚಾರಗಳನ್ನು ಹೇಳಿದ್ದೇನೆ. ಅದಕ್ಕೆ ನಾನು ತಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖಾಂತರ ಆಡಳಿತ ಪಕ್ಷದ Treasury Bench ನಲ್ಲಿ ಇರುವಂತಹ ಸದಸ್ಯರು ಸ್ಪಷ್ಟೀಕರಣ ಕೊಡಲಿ, ಅವರು ವಿಷಾದ ವ್ಯಕ್ತಪಡಿಸಲಿ. ಅವರು ವಿಷಾದ ವ್ಯಕ್ತ ಮಾಡಿದ ನಂತರವೇ ನಾನು ನಮ್ಮ ಎಲ್ಲಾ ಸದಸ್ಯರಿಗೆ ಮತ್ತು ಜೆಡಿ(ಎಸ್) ಸದಸ್ಯರಿಗೆ ಕೇಳಿಕೊಳ್ಳುತ್ತೇನೆ. They will come back to their seats. ಆಮೇಲೆ ನಾಳೆ ಬಜೆಟ್‌ನ್ನು ಮಂಡಿಸಬೇಕು. ಇನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮುಗಿದಿಲ್ಲ. ಬಜೆಟ್‌ನ್ನು ಮಂಡಿಸಿದ ಮೇಲೆ ನಾವು ಮಾತನಾಡಬಹುದು. ಅದಕ್ಕೆ ಸಾಕಷ್ಟು ಉದಾಹರಣೆಗಳು ಇವೆ. ಈಗ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು sky has got the limit. ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ತಮ್ಮ ಕ್ಷೇತ್ರದ ಬಗ್ಗೆ, ಜಿಲ್ಲೆಗಳ ಬಗ್ಗೆ ಚರ್ಚೆ ಮಾಡಿಕೊಳ್ಳುವುದಕ್ಕೆ ಮಾನ್ಯ ಸದಸ್ಯರಿಗೆ ಇಲ್ಲಿ ಅವಕಾಶ ಇದೆ. ಅದಕ್ಕೆ ನಾವು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿ, ಬಜೆಟ್‌ನಲ್ಲಿ effective ಆಗಿ participation ಮಾಡಬಹುದು. ಅನೇಕ ನಿಯಮಗಳ ಕೆಳಗೆ ಅಂದರೆ, ನಿಯಮ 72 ಇರಬಹುದು, 330 ಇರಬಹುದು, ಪ್ರಶ್ನೋತ್ತರ ಇವುಗಳಲ್ಲಿ ಭಾಗವಹಿಸಿ ಕರ್ನಾಟಕ ಒಂದು ಸಂಪದ್ಭರಿತವಾದಂತಹ ಮತ್ತು ಅಭಿವೃದ್ಧಿ ಪರವಾದಂತಹ ರಾಜ್ಯವನ್ನಾಗಿ ಮುನ್ನಡೆಸುವುದಕ್ಕೆ ಅವರಿಗೆ ಸಹಕಾರ ನೀಡುವುದಕ್ಕೆ ನಾವು ಇಲ್ಲಿ ಕುಳಿತುಕೊಂಡು ಮಾತನಾಡುತ್ತಿದ್ದೇವೆ. ಅದಕ್ಕೆ ನಾನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಅವರು ಸ್ಪಷ್ಟೀಕರಣ ಕೊಟ್ಟು, ವಿಷಾದ ವ್ಯಕ್ತ ಪಡಿಸಿದರೆ ಮುಗಿಸೋಣ. ಅದಕ್ಕೆ ನನ್ನ ಅಭ್ಯಂತರ ಇಲ್ಲ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ನನ್ನ ಕಳಕಳಿಯ ವಿನಂತಿಯನ್ನು ಮಾಡುತ್ತಾ, ಕೆಲವು ವಿಚಾರಗಳನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. ಸ್ವಾತಂತ್ರ್ಯವೀರ ಸಾವರ್ಕರ್ ನಮ್ಮ ದೇಶದ ಇಡೀ ಸ್ವಾತಂತ್ರ್ಯ ಆಂದೋಲನಕ್ಕೆ ಬಹಳ ದೊಡ್ಡ ಸ್ಫೂರ್ತಿ ಶಕ್ತಿಯ ಕೇಂದ್ರ. ಅದಕ್ಕೆ ಅವರನ್ನು ಸ್ವಾತಂತ್ರ್ಯ ವೀರ ಸಾರ್ವರ್ಕರ್ ಎಂದು ಕರೆಯುತ್ತಾರೆ. ಅವರ ಜನನ 1883. 1906 ರಲ್ಲಿ ಅವರು Barrister ಪದವಿಯನ್ನು ಲಂಡನ್‌ನಲ್ಲಿ ಪಡೆಯುತ್ತಾರೆ. ಆ ರೀತಿ Barrister ಪದವಿಯನ್ನು ಮಾಡಿ..

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮೊದಲು ಕ್ರಿಯಾಲೋಪ ಮುಗಿಯಲಿ.

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಸದಸ್ಯರಿಗೆ ಸಷ್ಟೀಕರಣ ಕೊಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅವರನ್ನು ಮಾತನಾಡುವುದಕ್ಕೆ ಬಿಡುತ್ತಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವೀರಸಾರ್ವರ್ಕರ್‌ರವರಿಗೆ ಕೊಟ್ಟಂತಹ ಗೌರವವನ್ನು ನಾವು ಎಂದೂ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರಾದ ಎಸ್.ಆರ್.ಪಾಟೀಲ್‌ರವರು ಹೇಳಿದ್ದಾರೆ. ಅದರ ಬಗ್ಗೆ ನಮ್ಮ ತಕರಾರು ಏನಿಲ್ಲ. ಅವರು ಒಬ್ಬ ಸ್ವಾತಂತ್ರ್ಯ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೋರಾಟಗಾರರು ಸಾಕಷ್ಟು ಹೋರಾಟ ಮಾಡಿದ್ದಾರೆ. ನಾವುಗಳು ಅಂಡಮಾನಿಗೆ ಹೋದಾಗ ಕಣ್ಣಲ್ಲಿ ನೀರು ಬರುವಂತಹ ಭಾವನೆ ಬಂದಿದೆ. ಅದರ ಬಗ್ಗೆ ಎರಡು ಮಾತಿಲ್ಲ. ವೀರ ಸಾವರ್ಕರ್ ಬಗ್ಗೆ ಇಡೀ ಸದನದ ಸದಸ್ಯರು ಅತ್ಯಂತ ಹೆಚ್ಚಿನ ಗೌರವವನ್ನು ಕೊಡುತ್ತೇವೆ. ಅವರ ಬಗ್ಗೆ ನಮ್ಮ ಸದನದಲ್ಲಿ ಯಾರು ಮಾತನಾಡಿಲ್ಲ. ಮಾನ್ಯ ಸಭಾಪತಿಯವರೇ, ಈಗ ಪ್ರಶ್ನೆ ಬಂದಿದ್ದು ಏನೆಂದರೆ, ಕೆಳಮನೆಯಲ್ಲಿ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರ ಬಗ್ಗೆ ಚರ್ಚೆಯಾಗಿದೆ. ಈ ಸದನದಲ್ಲಿ ಸಾವರ್ಕರ್ ಬಗ್ಗೆ ಯಾರೂ ಸಹ ಇಲ್ಲಿ ಮಾತನಾಡಿಲ್ಲ. ಮಾತನಾಡುವುದೂ ಇಲ್ಲ. ಆದರೆ, ಕೆಲವರು ಹೊರಗಡೆ ಮಾತನಾಡಿದಂತಹ ಸಂದರ್ಭದಲ್ಲಿ ಆ ವಿಷಯ ಬಂದಿರಬಹುದು. ಅದಕ್ಕೆ ನಾನು ಹೇಳುವುದೇನೆಂದರೆ, ವೀರ ಸಾವರ್ಕರ್ ಬಗ್ಗೆ ಈ ದೇಶ ಉನ್ನತ ಗೌರವ ಹೊಂದಿದೆ. ಅಷ್ಟೇ ವಿನಃ ನಮ್ಮ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರನ್ನು ಪರಿಗಣಿಸಿ ಇದನ್ನು ಸರಿಪಡಿಸಿ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾವು ಒಂದೊಂದು ಬಾರಿ ತಪ್ಪು ಮಾತನಾಡುತ್ತೇವೆ. ಮೊದಲನೆಯದಾಗಿ, ಮಾತನಾಡುವಾಗ ಆಗಿದ್ದಕ್ಕೆ ವಿಷಾದ ವ್ಯಕ್ತಪಡಿಸಿ ನಮ್ಮ ಕರ್ನಾಟಕದ ಜನತೆ ಪರವಾಗಿ, ವಿಧಾನ ಪರಿಷತ್ತಿನ ಕಲಾಪ ನಡೆಯುತ್ತಿರುವ ಸಂದರ್ಭದಲ್ಲಿ ವಿಷಾದ ವ್ಯಕ್ತಪಡಿಸುವುದು ದೊಡ್ಡವರ ಲಕ್ಷಣವೆಂದು ನಾನು ಭಾವಿಸಿದ್ದೇನೆ. ಎರಡನೆಯದಾಗಿ, ಅವರಲ್ಲಿಯೇ ಅವರ ಪಕ್ಷದವರೇ ವಿಷಾದ ವ್ಯಕ್ತಪಡಿಸಬೇಡ ಎಂದು ಹೇಳುತ್ತಾರೆಂದು ಹೊರಗಡೆ ಜನ ಮಾತನಾಡುತ್ತಾರೆ. ಅವರಲ್ಲಿಯೇ ಎರಡು ಗ್ರೂಪ್‌ಗಳಾಗಿ ಈ ರೀತಿ ನಡೆದಿದೆ ಎಂದು ಹೊರಗಡೆ ಬಂದಿದೆ. ಹೊರಗಡೆ ಜನರು ಏನು ಮಾತನಾಡುತ್ತಾರೆ ಎಂದರೆ, ಬಿಜೆಪಿಯಲ್ಲಿಯೇ ಇದನ್ನು ಮುಂದುವರಿಸಬೇಕೆಂದು..

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅವರ ಹೆಸರು ಹೇಳಬೇಕೆಂದರೆ ಹೇಳುತ್ತೇನೆ. ಮಾನ್ಯ ಸಭಾನಾಯಕರು ಸದನವನ್ನು ನಡೆಸಬೇಕು ಎಂದು ಹೇಳುತ್ತಾರೆ. ಆದರೆ, ಇದನ್ನೇ ಹೇಳುತ್ತಾರೆ. ಈಗ ಮಾನ್ಯ ಸಭಾಪತಿಯವರು ಸದನವನ್ನು ನಡೆಸಬೇಕು. ಸದನ ನಡೆಸುವಾಗ ನಾವು compromise ಆಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ಮನುಷ್ಯರು. Compromise ಆಗಬೇಕಾಗಿದೆ. ನಮ್ಮದೇ ನಡೆಯಬೇಕೆಂದರೆ ಆಗುವುದಿಲ್ಲ. ಇವತ್ತು ಸರ್ಕಾರ ನಡೆಸುವವರು ಸ್ವಲ್ಪ ದೊಡ್ಡ ಮನಸ್ಸು ಮಾಡಬೇಕು. ಮಾಡಿ ನಡೆಸಿ ಎಂದು ನಾವು ಹೇಳುತ್ತೇವೆ. ಅದಕ್ಕೆ ನಾನು ಈ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕೆಂದು ಹತ್ತು ಬಾರಿ ವಿನಂತಿ ಮಾಡಿಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ರವಿಕುಮಾರ್‌ರವರೇ, ತಾವು ಮಾತನಾಡಿ. ವಿಷಯಕ್ಕೆ ಬನ್ನಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನಗೆ 15 ನಿಮಿಷಗಳ ಕಾಲವಕಾಶ ಕೊಡಿ. ಮಾತನಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಈಗ ನಮ್ಮಲ್ಲಿ ವ್ಯವಸ್ಥೆಗಳು ಯಾವ ರೀತಿ ಇವೆ ಎಂದರೆ, ರಾಜಕಾರಣಕ್ಕೆ ಬೇರೆ ವ್ಯವಸ್ಥೆ ಇದೆ, ಜನರ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಬೇರೆ ವ್ಯವಸ್ಥೆಯಲ್ಲಿ ನಾವು ಇದ್ದೇವೆ. ಅದರ ಬಗ್ಗೆ ಆದ್ಯತೆ ಬೇಕು. ಬೇರೆ ವಿಚಾರಗಳನ್ನು ಬೇರೆ ಕಡೆ ಮಾತನಾಡಿ. ಎಲ್ಲಾ ಪಕ್ಷದವರಿಗೂ ಅವಕಾಶ ಇದೆ. ಅಲ್ಲಿ ಬೇರೆ ಬೇರೆ ವೇದಿಕೆಗಳು ಇವೆ. ಇಲ್ಲಿ ಅದನ್ನೆಲ್ಲಾ ಹೆಚ್ಚಿಗೆ ಎಳೆಯುವುದು ಬೇಡ. ನಿಮಗೆ ಸ್ಪಷ್ಟೀಕರಣ ಕೊಡಲು ಅವಕಾಶ ಕೊಟ್ಟಿದ್ದೇನೆ. ತಾವು ಮಾತನಾಡಿ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಕ್ರಿಯಾಲೋಪ ಎತ್ತಿದ್ದೇನೆ. ತಾವು ಆ ಕ್ರಿಯಾಲೋಪಕ್ಕೆ ಸಂಬಂಧಪಟ್ಟಂತೆ ರೂಲಿಂಗ್ ಕೊಡಬೇಕು ಅಲ್ಲವೇ, ಅದು ಮುಕ್ತಾಯವಾಗಬೇಕು ಅಲ್ಲವೇ, ಅದು ಮುಕ್ತಾಯವಾಗದೆ ಬೇರೆ ವಿಷಯದ ಚರ್ಚೆಗೆ ಅವಕಾಶ ಕೊಡಲು ಹೇಗೆ ಸಾಧ್ಯ.

**(ಗೊಂದಲ)**

**ಸಭಾಪತಿಯವರು:–** ಶ್ರೀಕಂಠೇಗೌಡರೇ ಕ್ರಿಯಾಲೋಪದ ಬಗ್ಗೆ ತಾವು ಏನು ಹೇಳುತ್ತೀರಿ ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಈಗ ಕೆಳಮನೆಯಲ್ಲಿ ಕಾರ್ಯಕಲಾಪಗಳು ಸುಗಮವಾಗಿ ನಡೆಯುತ್ತಿವೆ ಎಂದು ಹೇಳಿದ್ದಾರೆ. ನಾವು ನಿನ್ನೆ ದಿವಸವೇ ಸದನ ನಡೆಯುವುದಕ್ಕೆ ಸುಗಮ ಮಾಡಿದ್ದೆವು. ನಾವೆಲ್ಲರೂ ಬಾವಿಯಿಂದ ವಾಪಸ್ಸು ಬಂದು ಗಂಭೀರವಾಗಿ ಚರ್ಚೆಯಲ್ಲಿ ತೊಡಗಿಸಿಕೊಂಡಿದ್ದೆ. ಈಗ ಕ್ರಿಯಾಲೋಪಕ್ಕೆ ಅವಕಾಶ ಮಾಡಿಕೊಟ್ಟಿದ್ದು ಯಾರು?

**ಸಭಾಪತಿಯವರು:–** ಸದಸ್ಯರೇ, ಕ್ರಿಯಾಲೋಪ ಏನು ಹೇಳಿ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕ್ರಿಯಾಲೋಪ ಏನೆಂದರೆ, ತಾವು ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಮಾನ್ಯ ಸದಸ್ಯರು ಮಾತನಾಡುತ್ತಿದ್ದರು. ಆ ಸಂದರ್ಭದಲ್ಲಿ ಪೀಠದ ಅನುಮತಿ ಇಲ್ಲದೆ ಮಾನ್ಯ ಸದಸ್ಯರಾದ ಎನ್.ರವಿಕುಮಾರ್ ಎದ್ದು ನಿಂತು ಏಕಾಏಕಿ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರಿಗೆ ಧಿಕ್ಕಾರ ಕೂಗಿದರು. ಏಕಾಏಕಿ ತಮ್ಮ ಅನುಮತಿ ಇಲ್ಲದೆ ಮಾತನಾಡಿದ್ದು, ಧಿಕ್ಕಾರ ಕೂಗಿದ್ದು ಅದು ಕ್ರಿಯಾಲೋಪ ಅಲ್ಲವೇ, ಇಂತಹ ಕ್ರಿಯಾಲೋಪಗಳು ಬಂದಾಗ, ತಪ್ಪುಗಳು ಆದಾಗ, ಮಾನ್ಯ ಸದಸ್ಯರಾದ ಪ್ರಾಣೇಶ್‌ರವರು ಮೊನ್ನೆ ದಿವಸ ಬಹಳ ಮುಗ್ಧ ಮನಸ್ಸಿನಿಂದ ವಿಷಾದ ಕೇಳಿದರು. ಆಗ ಕಾರ್ಯಕಲಾಪ ಸುಗಮವಾಗಿ ನಡೆಯಿತು. ನಾವು ಸದನದ ಹೊರಗಾದರೆ ಬಿಡೋಣ. ಸದನದ ಒಳಗೆ ಒಬ್ಬ ಸಾಕ್ಷಿ ಪ್ರಜ್ಞೆ ಪ್ರತೀಕ ಸ್ವಾತಂತ್ರ್ಯ ಹೋರಾಟಗಾರರಿಗೆ ಧಿಕ್ಕಾರ ಕೂಗಿದರೆ, ಆ ಬಗ್ಗೆ ಕ್ಷಮೆ ಕೇಳುವುದಕ್ಕೆ ಮತ್ತು ವಿಷಾದ ವ್ಯಕ್ತಪಡಿಸುವುದಕ್ಕೆ ಹಿಂದು ಮುಂದು ನೋಡುವುದಾದರೆ, ಈಗ ಸದನದ ಕಾರ್ಯಕಲಾಪ ನಡೆಸಬಾರದೆಂಬ ಭಾವನೆ ಯಾರಲ್ಲಿದೆ,

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ನಮ್ಮಲ್ಲಿದೆಯಾ? ನಾವು ನಿನ್ನೆ ದಿವಸ ಬೆಳಗ್ಗೆ ವಾಪಸ್ಸು ಏಕೆ ಬಂದಿದ್ದೆವು, ಚರ್ಚೆಯನ್ನು ಏಕೆ ಮುಂದುವರಿಸುತ್ತಿದ್ದೆವು? ದಯಮಾಡಿ ತಾವು ರೂಲಿಂಗ್ ಕೊಡಬೇಕು. ಮಾನ್ಯ ಸದಸ್ಯರಾದ ಶ್ರೀ ರವಿಕುಮಾರ್‌ರವರು ಆ ಪ್ರಕರಣದ ಬಗ್ಗೆ ಪ್ರತಿಕ್ರಿಯೆ ನೀಡಬೇಕು. ಉಳಿದ ವಿಚಾರಗಳನ್ನು ಅವರು ಬೇರೆ ನಿಯಮಗಳ ಅಡಿಯಲ್ಲಿ ತಂದು ಮಾತನಾಡಲಿ.

(ಮುಂದು)

(134)04–03–2020(12–10)ಎಂವಿ–ಜಿಆರ್
**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು)**

ಹಿರಿಯ ಸದಸ್ಯರಾದ ಮಾನ್ಯ ಹೊರಟ್ಟಿಯವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ವೀರ ಸಾವರ್ಕರ್ ಮತ್ತು ಎಲ್ಲಾ ಸ್ವಾತಂತ್ರ್ಯ ಸೇನಾನಿಗಳ ಬಗ್ಗೆ ನಮಗೆ ಗೌರವವಿದೆ. ಅವರಿಗೆ ಗೌರವ ಕೊಡುವುದು ನಮ್ಮ ಕರ್ತವ್ಯ ಕೂಡ ಆಗಿದೆ. ಆದರೆ, ಆಡಳಿತ ಪಕ್ಷದವರು ನಡೆದುಕೊಂಡ ನಡವಳಿಕೆ ಬಗ್ಗೆ...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೇ, ...

**ಡಾ|| ತೇಜಸ್ವಿನಿ ಗೌಡ(ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೀಡುತ್ತಿರುವ ಸ್ಪಷ್ಟೀಕರಣಕ್ಕೆ ಸಮಯ ನೀಡಲಿ. ನಾವು ಇದೆಲ್ಲವನ್ನು ಕೇಳುತ್ತಿದ್ದೇವೆ. ಆದರೆ, ವಿರೋಧ ಪಕ್ಷದವರು ಸ್ಪಷ್ಟೀಕರಣವನ್ನ ಏಕೆ ಕೇಳುತ್ತಿಲ್ಲ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಈಗ ಮಾತನಾಡುವುದಕ್ಕೆ ಮಾನ್ಯ ರವಿಕುಮಾರ್‌ರವರ ಹೆಸರನ್ನು ಕರೆದಿದ್ದೇನೆ. ಮಾನ್ಯ ಭೋಜೇಗೌಡರಿಗೆ ಕೊನೆಗೆ ಅವಕಾಶ ನೀಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, I am going to finish in a minute.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರೇ ಮತ್ತು ಎಲ್ಲಾ ಗೌರವಾನ್ವಿತ ಸದಸ್ಯರೆ. ನಮ್ಮ ದೇಶದಲ್ಲಿ ಶ್ರೀ ವೀರ ಸಾವರ್ಕರ್‌ರವರು, ಶ್ರೀ ಮಹಾತ್ಮಾ ಗಾಂಧೀಜಿ, ಶ್ರೀ ಜವಾಹರ್‌ಲಾಲ್ ನೆಹರುರವರು ಮತ್ತು ಶ್ರೀ ಸರ್ದಾರ್ ವಲ್ಲಭಭಾಯ್ ಪಟೇಲ್ ಹಾಗೂ ಇತರರ ಜೊತೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂತಹವರ ಹೆಸರನ್ನು ಹೇಳಿದ್ದೇನೆ. ಇವರೆಲ್ಲರೂ ಕೂಡ ಬ್ಯಾರಿಸ್ಟರ್ ಪದವಿಯನ್ನು ಮಾಡಿ, ಸ್ವಾತಂತ್ರ್ಯ ಆಂದೋಲನಕ್ಕೆ ಇಳಿದವರು. ನನಗೆ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೀರ ಸಾವರ್ಕರ್ ಬಗ್ಗೆ ಏಕೆ ಹೇಳಬೇಕು ಎನಿಸುತ್ತದೆ ಎಂದರೆ; ಮಹಾರಾಷ್ಟ್ರದಲ್ಲಿರುವಂತಹ ಅವರ ಇಡೀ ಕುಟುಂಬ ಸ್ವಾತಂತ್ರ್ಯ ಆಂದೋಲನಕ್ಕೆ ಆಹುತಿ ಆಗಿದೆ. ಏಕೆಂದರೆ, ನಾನು ಬಹಳ ಯೋಚನೆ ಮಾಡಿ ಈ ಶಬ್ದವನ್ನು ಬಳಕೆ ಮಾಡುತ್ತಿದ್ದೇನೆ. ಒಂದೇ ಜೈಲಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶ್ರೀ ವೀರ ಸಾವರ್ಕರ್, ಶ್ರೀ ವಾಸುದೇವ್ ಹಾಗೂ ಮತ್ತೊಬ್ಬರು. ಈ ಮೂರು ಜನ ಅಣ್ಣ–ತಮ್ಮಂದಿರು ಒಂದೇ ಜೈಲಿನಲ್ಲಿ ಇರುತ್ತಾರೆ. ಆದರೆ, ಇವರ್‍ಯಾರಿಗೂ ಇದು ಗೊತ್ತಿರುವುದಿಲ್ಲ. ಅಂತಹ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೀರ ಸಾವರ್ಕರ್ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡಬೇಕೆಂದು. 1901ರಲ್ಲಿ ಬ್ಯಾರಿಸ್ಟರ್ ಪದವಿಯನ್ನು ಮುಗಿಸಿದ ನಂತರ, ಅದು ನಮ್ಮೆಲ್ಲರಿಗೂ ಸಹ ಗೊತ್ತಿರಲಿ, ಮಹಾತ್ಮಾ ಗಾಂಧೀಜಿಯವರು ಮತ್ತು ಸ್ವಾತಂತ್ರ್ಯ ಹೋರಾಟಗಾರ ಶ್ರೀ ವೀರ ಸಾವರ್ಕರ್‌ರವರು ಲಂಡನ್‌ನಲ್ಲಿ ಹೋರಾಟ ಮಾಡಿದಂತಹ ಇಬ್ಬರು ಮಹಾನ್ ಸ್ವಾತಂತ್ರ್ಯ ಹೋರಾಟಗಾರರು. ಶ್ರೀ ಮಹಾತ್ಮಾ ಗಾಂಧೀಜಿಯವರು ಲಂಡನ್‌ನಲ್ಲಿ ದುಂಡುಮೇಜಿನ ಸಭೆಯಲ್ಲಿ ಸ್ವಾತಂತ್ರ್ಯವನ್ನು ಕೊಡಬೇಕೆಂದು ಬ್ರಿಟಿಷರಿಗೆ ಧಿಕ್ಕಾರವನ್ನು ಹೇಳಿದವರು. ಅದೇರೀತಿ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೀರ ಸಾವರ್ಕರ್ ಪ್ಯಾರಿಸ್ ಜೈಲಿಗೆ ಹೋದರು. ಪ್ಯಾರಿಸ್‌ನಲ್ಲಿ ಶ್ರೀ ವೀರ ಸಾವರ್ಕರ್‌ರವರ ಬಂಧನವಾಗುತ್ತದೆ.

**(ಈ ಹಂತದಲ್ಲಿ ಶ್ರೀ ಕೆ.ಟಿ.ಶ್ರೀಕಂಠೇಗೌಡರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಮೊದಲು ಆಡಿದ ಮಾತುಗಳ ಬಗ್ಗೆ ಸ್ಪಷ್ಟೀಕರಣ ನೀಡಿ, ನಂತರ ಮುಂದುವರೆಯಲಿ. ಈ ವಿಷಯವನ್ನು ಬೇರೆ ನಿಯಮದ ಅಡಿಯಲ್ಲಿ ಚರ್ಚೆ ಮಾಡಲಿ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭೆಯಿಂದ ಆಯ್ಕೆಯಾದವರು):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಸದನದ ಬಾವಿಯಲ್ಲಿ ಇರುವವರು ಮಾತನಾಡದೆ ಇರುವುದಕ್ಕೆ ಹೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮೊದಲು ಅವರು ಆಡಿದ ಮಾತುಗಳ ಬಗ್ಗೆ ಸ್ಪಷ್ಟೀಕರಣ ಆಗಲಿ, ವಿಷಾದ ವ್ಯಕ್ತವಾಗಲಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಹೆಚ್.ಎಂ.ರೇವಣ್ಣನವರೇ, ನೀವು ಇಂತಹ ವಿಷಯಗಳಿಗೆ ಅವಕಾಶ ಕೊಡುವಂತಹವರು, ನೀವು ಏಕೆ ಹೀಗೆ ಆಗಿದ್ದೀರಿ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, This is not the way.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದನ್ನು ನಾವು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಆಡಿದ ಮಾತುಗಳ ಬಗ್ಗೆ ಸ್ಪಷ್ಟೀಕರಣ ನೀಡಲಿ ಆಮೇಲೆ ಬೇರೆ ನಿಯಮದ ಅಡಿಯಲ್ಲಿ ಚರ್ಚೆ ಮಾಡಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ,...

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಹೇಳಿದ ಹೇಳಿಕೆಯ ಬಗ್ಗೆ ಸ್ಪಷ್ಟೀಕರಣ ನೀಡಲಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೀರ ಸಾವರ್ಕರ್‌ರವರು ಲಂಡನ್‌ನಲ್ಲಿ 'ಭಾರತ್ ಹೌಸ್' ಅನ್ನು ಸ್ಥಾಪನೆ ಮಾಡಿ, ಲಂಡನ್‌ಗೆ ಯಾವ್ಯಾವ ವಿದ್ಯಾರ್ಥಿಗಳು ಓದುವುದಕ್ಕೆ ಹೋಗುತ್ತಿದ್ದರು ಆ ಎಲ್ಲಾ ವಿದ್ಯಾರ್ಥಿಗಳನ್ನು ಸಂಘಟನೆ ಮಾಡಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದರು.

(ಗೊಂದಲ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ತಾವು ಅವಕಾಶ ನೀಡಿದ್ದೀರಿ. ಮಾತನಾಡಲಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇವರಿಗೆ ಸ್ವಾತಂತ್ರ್ಯ ಹೋರಾಟಗಾರರ ಇತಿಹಾಸ ಏನೆಂದು ಗೊತ್ತಿಲ್ಲ. ಆದರೆ, ನಾವು ಅದನ್ನು ಕಲಿತ್ತಿದ್ದೇವೆ ಮತ್ತು ನಮಗೆ ಅದು ಗೊತ್ತಿದೆ. ಮಾನ್ಯ ಸದಸ್ಯರು ವಿಷಯಕ್ಕೆ ಬಂದು ಸ್ಪಷ್ಟೀಕರಣ ನೀಡಲಿ.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರು ಆಡಿದ ಮಾತುಗಳ ಬಗ್ಗೆ ಬಗ್ಗೆ ಸ್ಪಷ್ಟೀಕರಣ ನೀಡಲಿ. ಅದರ ಬಗ್ಗೆ ವಿಷಾದ ವ್ಯಕ್ತಪಡಿಸಲಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅದರ ಬಗ್ಗೆ ಮಾತ್ರ ಸ್ಪಷ್ಟೀಕರಣ ನೀಡಲಿ. ಅವರು ಹೆಡ್ ಮಾಸ್ಟರ್ ಅಲ್ಲ, ನಾವುಗಳು ಸ್ಟೂಡೆಂಟ್ಸ್ ಕೂಡ ಅಲ್ಲ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸ್ಪಷ್ಟೀಕರಣ ನೀಡುವಾಗ ವಿರೋಧ ಪಕ್ಷದ ಸದಸ್ಯರೆಲ್ಲರೂ ಮಾತನಾಡುತ್ತಿದ್ದಾರೆ.

**ಶ್ರೀ ಪ್ರಾಣೇಶ್. ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರನ್ನು suspend ಮಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು suspend ಮಾಡುವಂತಹ ಕೆಲಸವನ್ನು ಮಾಡಿಲ್ಲ. ಆ ರೀತಿ ಮಾಡಿದರೆ, ತಾವು ಕ್ರಮ ತೆಗೆದುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅವರ ಉದ್ದೇಶ ಸ್ಪಷ್ಟೀಕರಣವನ್ನು ಕೇಳಿಸಿಕೊಳ್ಳದೆ ಇರುವುದು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ. ಅವರಿಗೆ ಸದನದ ಸಮಯದ ಬಗ್ಗೆ ಗೌರವವಿದ್ದಿದ್ದರೆ ಇತಿಹಾಸವನ್ನು ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ. ದಯಮಾಡಿ ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ನೀಡಬೇಕು. I am going to finish it in a minute.

**ಸಭಾಪತಿಯವರು:–** ನಾನು ಮಾನ್ಯ ರವಿಕುಮಾರ್‌ರವರ ಹೆಸರನ್ನು ಕರೆದಿದ್ದೇನೆ.

**(ಗೊಂದಲ)**

**(ಈ ಹಂತದಲ್ಲಿ ಶ್ರೀ ಟಿ.ಎ.ಶರವಣರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದಕ್ಕೆ ಸದನ ಬಲಿಯಾಗುತ್ತಿದೆ. ಈ ರಾಜ್ಯದಲ್ಲಿ ಜ್ವಲಂತ ಸಮಸ್ಯೆಗಳಿವೆ. ಅದರ ಬಗ್ಗೆ ಚರ್ಚೆ ಮಾಡಬೇಕು. ಅದನ್ನು ಬಿಟ್ಟು ನಾವು ಇವರ ಹರಿಕಥೆ ಕೇಳುವುದಕ್ಕೆ ಬಂದಿದ್ದೇವೆಯೇ? ಅವರು ಕ್ಷಮೆಯಾಚನೆ ಮಾಡುತ್ತಾರೆಯೇ, ಇಲ್ಲವೇ ಎಂದು ಅಷ್ಟನ್ನು ಮಾತ್ರ ಹೇಳಬೇಕು.

**ಸಭಾಪತಿಯವರು:–** ಮಾನ್ಯ ಶರವಣರವರೇ, ನೀವು ಎರಡರಲ್ಲಿ ಒಂದನ್ನು ಮಾಡಬೇಕು. ಧರಣಿಯಲ್ಲಿ ಕುಳಿತುಕೊಳ್ಳಬೇಕು ಇಲ್ಲವೇ ನಿಮ್ಮ ಸ್ಥಳದಲ್ಲಿಯೇ ಕುಳಿತುಕೊಳ್ಳಬೇಕು. ನಿಮಗೆ ಇಷ್ಟ ಬಂದಾಗ ಅಲ್ಲಿಗೆ ಹೋಗುವುದು, ಇಲ್ಲಿಗೆ ಬರುವುದು, ಅದೆಲ್ಲಾ ಆಗುವುದಿಲ್ಲ. ಈಗ ಮಾನ್ಯ ರವಿಕುಮಾರ್‌ರವರು ಮಾತನಾಡಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಲಂಡನ್‌ನಲ್ಲಿ 'ಭಾರತ್ ಹೌಸ್' ಅನ್ನು ಪ್ರಾರಂಭ ಮಾಡಿದಂತಹವರು ಯಾರು ಎಂದು ಹೇಳಿದರೆ ಅದು ಸ್ವಾತಂತ್ರ್ಯ ಹೋರಾಟಗಾರ ಶ್ರೀ ವೀರ ಸಾವರ್ಕರ್.

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ):–** ಮಾನ್ಯ ಸಭಾಪತಿಯವರೇ, ತಾವು ಸ್ಪಷ್ಟೀಕರಣ ಕೊಡುವುದಕ್ಕೆ ಅವಕಾಶ ನೀಡಿದ್ದೀರಿ. ಅವರು ಅದಕ್ಕೆ ಸ್ಪಷ್ಟೀಕರಣ ನೀಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅವರು ನಿಯಮದ ಪ್ರಕಾರ ಅರ್ಜಿ ಕೊಟ್ಟು ಒಂದು ಗಂಟೆ ಮಾತನಾಡಲಿ. ನಿಯಮದ ಪ್ರಕಾರ ಅರ್ಜಿ ನೀಡುವಂತೆ ತಾವು ಅವರಿಗೆ ತಿಳಿಸಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಶ್ರೀ ಮದನ್‌ಲಾಲ್ ದಿಂಗ್ರ ಎಂಬ ಒಬ್ಬ ವಿದ್ಯಾರ್ಥಿಯನ್ನು ಕರೆದು ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೀರ ಸಾವರ್ಕರ್‌ರವರು 'ನೋಡಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರಬೇಕು ಎಂದು ಹೇಳಿದರೆ, ಕೇವಲ ಶಾಂತಿಯುತವಾದ ಹೋರಾಟದಿಂದ ಸಾಧ್ಯವಿಲ್ಲ'. ನಾವು ಬ್ರಿಟಿಷ್ ಸರ್ಕಾರವನ್ನು ಎದುರಿಸಬೇಕಾಗಿದೆ ಎಂದು ಹೇಳಿದರು. ಲಂಡನ್‌ನಲ್ಲಿ 'ಭಾರತ್ ಹೌಸ್' ಅನ್ನು ಸ್ಥಾಪನೆ ಮಾಡಿ, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೀರ ಸಾವರ್ಕರ್‌ರವರ ಪ್ರೇರಣೆಯಿಂದ ಶ್ರೀ ಮದನ್‌ಲಾಲ್ ದಿಂಗ್ರ ಬ್ರಿಟಿಷ್ ಅಧಿಕಾರಿಯಾದ Lord Curzon Wyllie ಯನ್ನು ಕೊಂದು ಹಾಕುತ್ತಾನೆ. ಇದಕ್ಕೆ ಬ್ರಿಟಿಷ್ ಸರ್ಕಾರ ಹೆದರಿಕೊಳ್ಳುತ್ತದೆ. ಆ ಸಂದರ್ಭದಲ್ಲಿ Lord Curzon Wyllie ಯವರ ಕೊಲೆಯ ಹಿಂದೆ ಸಾವರ್ಕರ್ ಎಂದು ಹೇಳಿ...

**(ಈ ಹಂತದಲ್ಲಿ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಗೆ ಬಂದು ಧರಣಿ ನಿರತರಾಗಿ "ಬೇಕೇ ಬೇಕು, ನ್ಯಾಯ ಬೇಕು" ಎಂಬ ಘೋಷಣೆಯನ್ನು ಕೂಗುತ್ತಿದ್ದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ವಿರೋಧ ಪಕ್ಷದವರಿಗೆ ಹೇಳಬೇಕು. ಅವರು ನಿನ್ನೆಯಿಂದ ಸಮಯವನ್ನು ಕಳೆದು ಮಾತನಾಡುತ್ತಿದ್ದಾರೆ. ಈ ಸದನದ ಸದಸ್ಯರಿಗೆ ಜವಾಬ್ದಾರಿ ಇದೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅಭಿವ್ಯಕ್ತಿ ಸ್ವಾತಂತ್ರ್ಯ ವಿರೋಧಿಗಳಿಗೆ... ಸದಸ್ಯರ ಹಕ್ಕು ಮೊಟಕುಗೊಳಿಸಿದ ವಿರೋಧಿಗಳಿಗೆ...

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ವೀರ ಸಾವರ್ಕರ್‌ರವರು ಶ್ರೀ ಮದನ್‌ಲಾಲ್ ಧಿಂಗ್ರ ರವರಿಗೆ ಸ್ಫೂರ್ತಿ ಮತ್ತು ಪ್ರೇರಣೆಯನ್ನು ಕೊಟ್ಟು.

**(ಮುಂದು...)**

(135) 04.03.2020 12.20 LL-MD(VK)

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ. ಸದನ ನಡೆಯಬೇಕೋ, ಬೇಡವೋ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ವೀರ ಸಾವರ್ಕರ್‌ರವರು...**(ಗೊಂದಲ)** ಹೇಡಿ ಆಗಿರಲಿಲ್ಲ. ಸ್ವಾತಂತ್ರ್ಯ ವೀರ ಸಾವರ್ಕರ್‌ರವರು ಇಡೀ ದೇಶದ ಸ್ವಾತಂತ್ರ್ಯ ಹೋರಾಟದ ಹುಲಿ ಆಗಿದ್ದರು.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ಬೆಂಬಲ ವ್ಯಕ್ತಪಡಿಸಿದರು)**

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ... **(ಗೊಂದಲ)**

**(ಈ ಹಂತದಲ್ಲಿ ಪ್ರತಿಪಕ್ಷದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, 'ಭಾರತ ವೀರ, ವೀರ್ ಸಾವರ್ಕರ್‌ರವರಿಗೆ ಜಯವಾಗಲಿ'.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇವರು ಪ್ರಾಂಶುಪಾಲರಾಗಿದ್ದಾರೆ, (ಬಾವಿಯಲ್ಲಿದ್ದ ಕೆಲವು ಮಾನ್ಯ ಸದಸ್ಯರುಗಳನ್ನು ತೋರಿಸುತ್ತಾ) ಇವರ ವಿದ್ಯಾರ್ಥಿಗಳು ಈ ಸದನದ ಪ್ರೇಕ್ಷಕರ ಗ್ಯಾಲರಿಯಲ್ಲಿ ಹಾಜರಿದ್ದು, ಸದನದ ಕಲಾಪಗಳನ್ನು ನೋಡುತ್ತಿದ್ದಾರೆ. ದಯಮಾಡಿ, ಈ ಗಲಾಟೆ–ಗದ್ದಲ ಮುಗಿಯುವವರೆಗೂ ವಿದ್ಯಾರ್ಥಿಗಳನ್ನು ಸದನದ ಪ್ರೇಕ್ಷಕರ ಗ್ಯಾಲರಿಯಲ್ಲಿ ಕೂರಿಸುವುದು ಬೇಡವೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಏಕೆಂದರೆ, ನಾಳೆ ಇದನ್ನೇ ಅವರು ಕಲಿಯಬಾರದು.

**ಸಭಾಪತಿಯವರು:–** ತಾವುಗಳು ಪ್ರತಿನಿತ್ಯ ಇದೇ ರೀತಿ ಗಲಾಟೆ–ಗದ್ದಲ ಮಾಡಿದರೆ...?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ ನಾವು ಏನು ಮಾಡಬೇಕು ಹೇಳಿ. ಆದುದರಿಂದ, ಆ ಮಕ್ಕಳನ್ನು ಇಲ್ಲಿ ಕೂರಿಸುವುದು ಬೇಡ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಆ ಮಕ್ಕಳಿಗೆ ನಿಜವಾದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತಿಳಿಯಲಿ. ವಿದ್ಯಾರ್ಥಿಗಳು ಇದನ್ನು ಕೇಳಬೇಕು.

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯೇ ಹೀಗಿದೆ ಎನ್ನುವುದನ್ನು ವಿದ್ಯಾರ್ಥಿಗಳು ಸಹ ನೋಡಲಿ. ಅದರಲ್ಲಿ ಯಾವುದೇ ತಪ್ಪಿಲ್ಲ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ವೀರ ಸಾವರ್ಕರ್‌ರವರ ಬಗ್ಗೆ ಸರಿಯಾದ ಮಾಹಿತಿಯನ್ನು ಮಾನ್ಯ ರವಿಕುಮಾರ್‌ರವರು ಸದನದ ಮುಖಾಂತರ ರಾಜ್ಯದ ಜನತೆಗೆ ನೀಡುತ್ತಿದ್ದಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧ ನೀಡಿದಂತಹ ಹೇಳಿಕೆಗೆ ಈ ದಿನ ವಿಷಾದ ವ್ಯಕ್ತ ಮಾಡುವುದಾದರೆ 'ಮಾಡುತ್ತೇನೆ' ಎಂದು ಹೇಳಲಿ. ಇಲ್ಲವಾದರೆ 'ಇಲ್ಲ' ಎಂದು ಹೇಳಬಹುದಾಗಿದೆ. ಏಕೆಂದರೆ, ವೀರ ಸಾವರ್ಕರ್ ಬಗ್ಗೆ ಆಡಳಿತ ಪಕ್ಷದವರಿಗಿಂತಲೂ ನಮಗೆ, ಹೆಚ್ಚು ಗೌರವ ಇದೆ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ವೀರ ಸಾವರ್ಕರ್ ಬಗ್ಗೆ ಈಗಲಾದರೂ ತಿಳಿದುಕೊಳ್ಳಲಿ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಮಾನ್ಯ ಎಸ್.ಆರ್. ಪಾಟೀಲ್‌ರವರು ಶ್ರೀ ಹೆಚ್.ಎಸ್. ದೊರೆಸ್ವಾಮಿಯವರು ಸ್ವಾತಂತ್ರ್ಯಕ್ಕಾಗಿ ಏನು ಮಾಡಿದರು, ಎಷ್ಟು ದಿವಸ ಜೈಲಿನಲ್ಲಿ ಇದ್ದರು ಎಂಬ ಬಗ್ಗೆ ಇತಿಹಾಸ ಹೇಳಿದರು. ಅದೇ ರೀತಿ ಈಗ ಮಾನ್ಯ ರವಿಕುಮಾರ್‌ರವರು ವೀರ ಸಾವರ್ಕರ್ ಇತಿಹಾಸ ಹೇಳುತ್ತಿದ್ದಾರೆ. ಇದನ್ನೂ ಕೇಳಬೇಕಲ್ಲವೇ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ...

**(ಈ ಹಂತದಲ್ಲಿ ಪ್ರತಿಪಕ್ಷದವರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಶ್ರೀ ಎಸ್.ವ್ಹಿ.ಸಂಕನೂರ:–** ಮಾನ್ಯ ಸಭಾಪತಿಯವರೇ, ನಾವು ಕೇವಲ ಪ್ರತಿಪಕ್ಷದವರ ಮಾತನ್ನು ಕೇಳಬೇಕೇ? ನಾವು ಹೇಳಿದ್ದನ್ನೇ ಅವರು ಏತಕ್ಕೆ ಕೇಳಬಾರದು? ವೀರ ಸಾವರ್ಕರ್ ಬಗ್ಗೆ ನಾವು ಹೇಳುವುದನ್ನು ಪ್ರತಿಪಕ್ಷದವರು ಕೇಳಲಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ...

**(ಈ ಹಂತದಲ್ಲಿ ಪ್ರತಿಪಕ್ಷದವರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ವೀರ ಸಾವರ್ಕರ್‌ರವರ ಬಗ್ಗೆ ನಾನು ಏತಕ್ಕೆ ಮಾತನಾಡುತ್ತಿದ್ದೇನೆಂದರೆ, ನಮ್ಮ ದೇಶದ ವಿದ್ಯಾರ್ಥಿಗಳಿಗೆ ...

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಈ ಸದನದಲ್ಲಿ ಶ್ರೀ ಹೆಚ್.ಎಸ್.ದೊರೆಸ್ವಾಮಿಯವರ ವಿರುದ್ಧ ನೀಡಿದಂತಹ ಹೇಳಿಕೆಗೆ ವಿಷಾದ ವ್ಯಕ್ತ ಮಾಡುತ್ತಾರೋ ಇಲ್ಲವೋ ಎಂಬ ಬಗ್ಗೆ ಮಾತ್ರ ನಮ್ಮ ಪ್ರಶ್ನೆ ಇತ್ತು. ಆದರೆ, ಮಾನ್ಯ ಸದಸ್ಯರು ಮಾತನಾಡುವಂತಹ ದಾಟಿ ನೋಡಿದರೆ ಇವರು ಯಾರೂ ವಿಷಾದ ವ್ಯಕ್ತ ಮಾಡುವಂತಹ ಸ್ಥಿತಿ ಇರುವುದಿಲ್ಲ. ಅದಕ್ಕೆ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, you have been vested with your powers. ನಿಯಮ 242(ಸಿ) ಕೆಳಗೆ... ಅದಕ್ಕಿಂತಲೂ ಮೊದಲು ಈ ರೀತಿಯಾಗಿ ಸದನದ ಒಳಗೆ ಅಥವಾ ಹೊರಗಡೆ ಇರಲಿ misconduct ಮಾಡಿದಂತಹ ಸದಸ್ಯರನ್ನು ಸಸ್ಪೆಂಡ್ ಮಾಡುವಂತಹ ಅಧಿಕಾರ ತಮಗೆ ಇದೆ. ಇಲ್ಲ, ಅದು ತಮಗೆ stringent action ಅನ್ನಿಸುತ್ತದೆಯೆಂದರೆ, ನೀತಿ ನಿರೂಪಣಾ ಸಮಿತಿಗೆ ನಿಯಮ 242(ಸಿ) ಕೆಳಗೆ ಇದನ್ನು ವರ್ಗಾಯಿಸುವಂತಹ ಪರಮೋಚ್ಛ ಅಧಿಕಾರ ತಮಗೆ ಇದೆ. ನಮಗೆ ಭಯ ಏನಿದೆ ಅಂದರೆ, ಇದೇ ಗದ್ದಲದಲ್ಲಿ ನಾಳೆ ಬಜೆಟ್ present ಮಾಡಿ Money Bill pass ಮಾಡಿಕೊಂಡು ಹೋಗುವ ಸಾಧ್ಯತೆಗಳಿವೆ. ಏಕೆಂದರೆ, ಇವರಿಗೆ ಇಡೀ ರಾಜ್ಯದ ಜನತೆಯ ಬಗ್ಗೆ ಕಾಳಜಿ ಇಲ್ಲ, ಸಮಸ್ಯೆಗಳ ಬಗ್ಗೆ ಕಾಳಜಿ ಇಲ್ಲ. ಅದಕ್ಕೆ ನಾನು ಒಂದು ಮನವಿ ಮಾಡುವುದೇನೆಂದರೆ, ನಾನು ಈ ಬಗ್ಗೆ ತಮಗೆ ಒಂದು ಅರ್ಜಿ ಕೊಟ್ಟಿದ್ದೇನೆ, ಅದನ್ನು ನಿಯಮ 242(ಸಿ) ನೀತಿ ನಿರೂಪಣಾ ಸಮಿತಿಗೆ ಈ ವಿಷಯವನ್ನು ರೆಫರ್ ಮಾಡಿದ್ದೇನೆಂದು ತಾವು ಹೇಳಿದರೆ, ನಾನು ಎಲ್ಲಾ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತೇನೆ. ಅವರೆಲ್ಲರೂ ತಮ್ಮ ಸ್ಥಾನಗಳಿಗೆ ವಾಪಸ್ಸು ಬರುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಒಂದು ವಿನಂತಿ ಏನೆಂದರೆ...

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮೂವ್ ಮಾಡಿದಂತಹ ನಿಯಮ 242(ಸಿ) ಗೆ ನಾವು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ...**(ಗೊಂದಲ)** ದಯಮಾಡಿ, ಎಲ್ಲಾ ಸದಸ್ಯರು ತಮ್ಮ ಸ್ಥಾನಗಳಿಗೆ ಬನ್ನಿ.

**(ಗೊಂದಲ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಎನ್. ರವಿಕುಮಾರ್‌ರವರ ವಿವರಣೆಯನ್ನು ಪೂರ್ತಿಯಾಗಿ ಕೇಳಲಿ.

**ಸಭಾಪತಿಯವರು:–** ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಬನ್ನಿ. ಅಲ್ಲಿ ಪ್ರೆಸೆಂಟ್ ಮಾಡುವುದಕ್ಕೆ ಆಗುತ್ತದೆಯೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮ 242(ಸಿ) ಕೆಳಗೆ ತಮಗೆ ಒಂದು ಅರ್ಜಿ ನೀಡಿದ್ದೇನೆ. ದಯಮಾಡಿ, ತಾವು ಅದನ್ನ ನೀತಿ ನಿರೂಪಣಾ ಸಮಿತಿಗೆ ವರ್ಗಾಯಿಸಿ, ನಾವು ಇದನ್ನು ಇಲ್ಲಿಗೆ ಮುಗಿಸುತ್ತೇವೆ. ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚಿಸುವುದು ನಮಗೆ ಮುಖ್ಯವಾದ ವಿಷಯವಾಗಿದೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ... (ಗೊಂದಲ) ಸರ್ಕಾರದ ಒಳ್ಳೆಯ ಆಡಳಿತ... **(ಗೊಂದಲ)** ಅವರಿಗೆ ಸಂಯಮ ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ರೀತಿಯಾದ ವರ್ತನೆ ಸರಿಯಲ್ಲ. Kindly refer it to the Committee on Ethics under Section 242(c) of Rules of Procedure and Conduct of Business.

**(ಗೊಂದಲ)**

**ಸಭಾಪತಿಯವರು:–** ಸದನ ನಡೆಸಬೇಕು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಾನು ನಿಯಮ 242(ಸಿ) ಅಡಿಯಲ್ಲಿ ಇಲ್ಲಿ ಏನು ವಿರೋಧ ನಡೆದಿದೆ... **(ಗೊಂದಲ)** ನಾವು ಕ್ಷಮೆ ಯಾಚನೆ ಮಾಡುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ತಮ್ಮ ಸಮಯ ಮುಗಿದಿದೆ. ಇನ್ನು ಅವರು ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

**(ಗೊಂದಲ)**

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಶ್ರೀ ಎನ್. ರವಿಕುಮಾರ್‌ರವರು ಮಾತನಾಡಿದ್ದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಯಾವುದು ರೆಕಾರ್ಡ್‌ಗೆ ಹೋಗಬಾರದು.

**ಸಭಾಪತಿಯವರು:–** ನಾನು ಹೇಳಿದ್ದು ಆಯಿತು. **(ಗೊಂದಲ)** ಮಾನ್ಯ ಎನ್. ರವಿಕುಮಾರ್ ಹೇಳಿದ್ದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ರೂಲಿಂಗ್ ಕೊಟ್ಟಾಯಿತು. ಮುಗಿದು ಹೋಯಿತು. There ends the matter. **(ಗೊಂದಲ)** ವಿಷಯವೇ ಮುಗಿದು ಹೋಯಿತು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಿಯಮ 242(ಸಿ) ರನ್ವಯ ನೀತಿ ನಿರೂಪಣಾ ಸಮಿತಿ:– ಸದನದಲ್ಲಿ ಶಿಸ್ತು ಮತ್ತು ಸಭ್ಯತೆಯನ್ನು ಕಾಪಾಡಿಕೊಂಡು ಬರಲು ಹಾಗೂ ಸದನದ ಒಳಗೆ ಹಾಗೂ ಹೊರಗೆ ... **(ಗೊಂದಲ)** ... ಮತ್ತು ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಪರಿಶೀಲನೆಗಾಗಿ ಒಂದು ನೀತಿ ನಿರೂಪಣಾ ಸಮಿತಿ ಇರತಕ್ಕದ್ದು. ಅದರಲ್ಲಿ ಸಭಾಪತಿಯವರನ್ನು ಹೊರತುಪಡಿಸಿ ಒಬ್ಬ ಸಚಿವರೂ ಸೇರಿದಂತೆ ಸದನದ ಒಳಗೆ ಅಥವಾ ಹೊರಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಒಬ್ಬ ಸದಸ್ಯರ ನೀತಿಬಾಹಿರ ನಡತೆಗೆ ಸಂಬಂಧಿಸಿದ ದೂರನ್ನು ಸಭಾಪತಿಯವರಿಗೆ ಸಲ್ಲಿಸಬಹುದು, ಅವರು ಅದನ್ನು ವಿಚಾರಣೆ ಮಾಡಿ ವರದಿ ಮಾಡುವುದಕ್ಕಾಗಿ ನೀತಿ ನಿರೂಪಣಾ ಸಮಿತಿಗೆ ಒಪ್ಪಿಸಬಹುದು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರು ಮಾತನಾಡಿದ್ದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ತಮಗೆ ಅವಕಾಶ ಕೊಟ್ಟಿದ್ದೇವೆ. ತಾವು ಅದನ್ನು ಉಪಯೋಗಿಸಿಕೊಳ್ಳಬೇಕು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಶ್ರೀ ಎನ್.ರವಿಕುಮಾರ್‌ರವರು ಮಾತನಾಡಿದ್ದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, Kindly refer it to Committee on Ethics under Section 242(c). Let them be punished there only.

**ಸಭಾಪತಿಯವರು:–** <u>ನಾನು ತಮ್ಮ ಅರ್ಜಿಯನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ.</u>

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇಲ್ಲಿ ಗೂಂಡಾಗಿರಿ ನಡೆಯುತ್ತಿದೆಯೇ, ಗೂಂಡಾ ವರ್ತನೆಯಾಗುತ್ತಿದೆಯೇ? ಈ ಸದನದಲ್ಲಿ ಯಾವ ನಿಯಮಗಳು ಇರುವುದಿಲ್ಲವೇ?

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ,...

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯಹರಣ ಮಾಡುತ್ತಿರುವವರು ಪ್ರತಿಪಕ್ಷದವರು...

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರು ತಮ್ಮ ಪೀಠದಿಂದ ನೀಡಿದಂತಹ ಸೂಚನೆಯನ್ನು ಪಾಲಿಸಬೇಕು.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಮ್ಮನ್ನು ತುಂಬಾ ತಪ್ಪಾಗಿ ಬಿಂಬಿಸುತ್ತಿರತಕ್ಕಂಥದ್ದು...

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇಷ್ಟು ಉದ್ಧಟತನದಿಂದ ಯಾರೂ ಹೇಳಿಕೆ ನೀಡುವುದಿಲ್ಲ. ಆಡಳಿತ ಪಕ್ಷದವರ ಈ ನಡವಳಿಕೆ ಬಹಳ ದಿನ...

**(ಗೊಂದಲ)**

**ಸಭಾಪತಿಯವರು:–** ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷದ ಚರ್ಚೆ ಏನಿದೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮೊದಲು ಇದಕ್ಕೆ ಒಂದು ನಿರ್ಣಯ ನೀಡಿ.

**ಸಭಾಪತಿಯವರು:–** ಯಾವುದಕ್ಕೆ ನಿರ್ಣಯ ನೀಡಬೇಕು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾವು ಈ ವಿಷಯವನ್ನು ಎಥಿಕ್ಸ್ ಕಮಿಟಿಯ ಪರಿಶೀಲನೆಗೆ ವಹಿಸಬೇಕೆಂದು ನೀಡಿದ ಅರ್ಜಿ ಬಗ್ಗೆ ತಾವು ದಯಮಾಡಿ ನಿರ್ಣಯ ನೀಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದಕ್ಕೆ ಸರ್ಕಾರದವರು ಉತ್ತರ ನೀಡಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿಯಮ 342 ರಡಿಯಲ್ಲಿ ಚರ್ಚೆಗೆ ಅವಕಾಶ ನೀಡಿದ್ದನ್ನು ಇಲ್ಲಿಗೆ ನಿಲ್ಲಿಸಬೇಕು ಹಾಗೂ ನೀತಿ ನಿರೂಪಣಾ ಸಮಿತಿಯ ಪರಿಶೀಲನೆಗೆ ವಹಿಸಬೇಕೆಂದು ಕೋರಿ ನೀಡಿದಂತಹ ವಿರೋಧ ಪಕ್ಷದವರ ಅರ್ಜಿಯನ್ನು reject ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಈ ಬಗ್ಗೆ ಒಂದು ರೂಲಿಂಗ್ ಕೊಡಿ. There ends the matter. ತಾವು ಅದನ್ನು Committee on Ethics ಗೆ refer ಮಾಡಿದರೆ ಮುಗಿದು ಹೋಗುತ್ತದೆ.

**(ಗೊಂದಲ)**

**ಸಭಾಪತಿಯವರು:–** ತಾವು ಒಂದು ಅರ್ಜಿಯನ್ನು ಕೊಟ್ಟಿದ್ದೀರಿ. ಅದನ್ನು ಪರಿಶೀಲನೆ ಮಾಡಿ...

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿಯಮ 242(ಸಿ) ನೀತಿ ನಿರೂಪಣಾ ಸಮಿತಿ ...

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ನಿಯಮ 242(ಸಿ) ಅನ್ವಯ ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ನಿಯಮ 242 (ಸಿ) ರಡಿಯಲ್ಲಿ ನೀತಿ ನಿರೂಪಣಾ ಸಮಿತಿ ಪರಿಶೀಲನೆಗೆ ವಹಿಸಬೇಕೆಂದು ಕೋರಿ ನೀಡಿದಂತಹ ಅರ್ಜಿಯನ್ನು reject ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ದಯವಿಟ್ಟು ಒಂದು ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ನಿಯಮ 242(ಸಿ) ರಡಿಯಲ್ಲಿ ನೀತಿ ನಿರೂಪಣಾ ಸಮಿತಿಗೆ ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ನೀತಿ ನಿರೂಪಣಾ ಸಮಿತಿಗೆ ಹೋಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಅದು ನೀತಿ ನಿರೂಪಣಾ ಸಮಿತಿಗೆ ಹೋಗುತ್ತದೆ, ಹೋಗುವುದಿಲ್ಲ; ಬೇಕು, ಬೇಡ ಎನ್ನುವುದರಲ್ಲಿ ಎಲ್ಲರಿಗೂ ಅವರದ್ದೇ ಆದಂತಹ ಹಕ್ಕು ಇರುತ್ತದೆ.

**(ಗೊಂದಲ)**

(ಮುಂದುವರೆದಿದೆ...)

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(136)04.03.2020/12.30/ವೈಎಲ್–ಎಂಡಿ(ವಿಕೆ)

**ಸಭಾಪತಿಯವರು:–** ನೀತಿ ನಿರೂಪಣಾ ಸಮಿತಿ ಬೇಕೇ, ಬೇಡವೇ ಎಂದು ನೀವು ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. (ಗೊಂದಲ) ಅದು fit ಇದ್ದರೆ ನೀತಿ ನಿರೂಪಣಾ ಸಮಿತಿಗೆ ಹೋಗುತ್ತದೆ. Fit ಇಲ್ಲದಿದ್ದರೆ ನೀತಿ ನಿರೂಪಣಾ ಸಮಿತಿಗೆ ಹೋಗುವುದಿಲ್ಲ. **ಅದನ್ನು ನಾವು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.**

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರ್ಕಾರದ ಪರವಾಗಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ 'ನೀತಿ ನಿರೂಪಣಾ ಸಮಿತಿ' ಅಗತ್ಯವಿಲ್ಲ. ದಯವಿಟ್ಟು...

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನೀತಿ ನಿರೂಪಣಾ ಸಮಿತಿಗೆ ವಹಿಸಬೇಕೆಂದು ನಾನು ಬಯಸುತ್ತೇನೆ. You take a judicious decision. I hope you will....

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿಯಮದ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ವಿರೋಧ ಪಕ್ಷದ ಸದಸ್ಯರು ಅವರ ಅಹವಾಲನ್ನು ಸಲ್ಲಿಸಿದ್ದಾರೆ. ಆದರೆ, ನಮ್ಮ ವಿನಂತಿಯೇನೆಂದರೆ, ಆ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿರುವುದರಿಂದ ಕೊಡಬೇಕೋ, ಕೊಡಬಾರದೇ ಎನ್ನುವುದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಸಹ ಕೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಆಚೆಗೆ ಬೇರೆ ಏನು ಇಲ್ಲ. ನಮ್ಮ ವಾದ ಏನೆಂಬುದನ್ನು ಸಹ ಕೇಳಿ.

**ಸಭಾಪತಿಯವರು:–** ನಿಯಮವನ್ನು ಒಂದು ಸಲ ಓದಿಕೊಳ್ಳಿ. ನೀತಿ ನಿರೂಪಣಾ ಸಮಿತಿಯನ್ನು...

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನಿಯಮವನ್ನು ನಂತರ...

**ಸಭಾಪತಿಯವರು:–** ನಿಯಮದಲ್ಲಿ ಏನಿದೆ ಎಂಬುದನ್ನು ಹೇಳಿ. ಆಗುವುದಿಲ್ಲ ಎಂದು ಹೇಳುತ್ತಿದ್ದೀರಿ. ಹಾಗಾಗಿ ನಿಯಮದಲ್ಲಿ ಏನಿದೆ ಎಂಬುದನ್ನು ಓದಿ ಹೇಳಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನಾನು ಆಗುವುದಿಲ್ಲ ಎಂದು ಹೇಳುತ್ತಿಲ್ಲ. ನಾನು ಹೇಳುತ್ತಿರುವುದೇನೆಂದರೆ, ನೈಸರ್ಗಿಕ ನ್ಯಾಯದ ದೃಷ್ಟಿಯಿಂದ... ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶಾಂತಿಯಿಂದ ಕೇಳಿಸಿಕೊಳ್ಳಿ. ವಿರೋಧ ಪಕ್ಷದವರಿಗೆ ತರಾತುರಿ ಇರಬಹುದು, ಅವರು ತರಾತುರಿ ಮಾಡಿಕೊಳ್ಳಲಿ. ನಿಮ್ಮಿಂದ ನಮ್ಮ ಅಪೇಕ್ಷೆಯೇನೆಂದರೆ, ಶಾಂತಿಯಿಂದ ನಾವು ಹೇಳುವುದನ್ನು ಕೇಳಿಸಿಕೊಳ್ಳಲಿ ಎಂಬುದಾಗಿದೆ.

**ಸಭಾಪತಿಯವರು:–** ಆಯಿತು. ನಾನು ಸಹ ಅದನ್ನೇ ಹೇಳುತ್ತಿರುವುದು. ನಾನು ನೋಡುತ್ತೇನೆ, ಪರಿಶೀಲಿಸುತ್ತೇನೆ ಎಂದು ಹೇಳುತ್ತಿರುವುದು.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ..

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, (ಗೊಂದಲ) ಆಡಳಿತ ಪಕ್ಷದವರಿಗೆ ಎಲ್ಲಷ್ಟು ರಾಜ್ಯದ ಜನತೆಯ ಹಿತದ ಬಗ್ಗೆ ಕಾಳಜಿ ಇಲ್ಲ.

**ಶ್ರೀ ಅರುಣ ಶಹಾಪುರ:–** ವಿರೋಧ ಪಕ್ಷದ ನಾಯಕರು ಬಹಳ ತರಾತುರಿಯಲ್ಲಿದ್ದಾರೆ. ಅವರಿಗೆ ನೀವಾದರೂ ಹೇಳಿ. ನಮಗೂ ರಾಜ್ಯದ ಜನತೆಯ ಬಗ್ಗೆ ಕರುಣೆ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಸ್ವಾತಂತ್ರ್ಯ ಹೋರಾಟಗಾರರನ್ನು ಕೊಲೆಗಡುಕರು ಎಂದು ಹೇಳಿದವರು. ಸ್ವಾತಂತ್ರ್ಯ ಹೋರಾಟಗಾರರನ್ನು (ಗೊಂದಲ) ಅವರಿಗೆ ನಾಚಿಕೆ, ಹೇಸಿಗೆ ಏನೂ ಇಲ್ಲ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಷ್ಟು ಸಲ ಉತ್ತರವನ್ನು ನೀಡುತ್ತಾರೆ. ಉತ್ತರವನ್ನು ನೀಡಿದು ಮುಗಿದಿಲ್ಲವೇ?

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಆಡಳಿತ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ನಾವು ಹೇಳುವುದನ್ನು ಕುಳಿತು ಕೇಳಿಸಿಕೊಳ್ಳುವ ಸಮಧಾನ ಇಲ್ಲ. ಸ್ವಾತಂತ್ರ್ಯ ಹೋರಾಟದ ಬಗ್ಗೆ 4 ಮಾತುಗಳನ್ನು ಕೇಳುವ ಔದಾರ್ಯ ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾತನಾಡುವುದಕ್ಕೆ ವಿಷಯ ಇದೆ ಅವರು ಮಾತನಾಡಲಿ. ಇರುವಷ್ಟು ಉತ್ತರವನ್ನು ಹೇಳಬೇಕಲ್ಲವೇ?

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರು 15 ನಿಮಿಷ ಸಮಯವನ್ನು ನೀಡಿದ್ದಾರೆ. ಯಾವ context ಮೇಲೆ ಮಾತನಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಆಯಿತು. ನಾನು ಹೇಳುವುದನ್ನು ಸ್ವಲ್ಪ ಕೇಳಿಸಿಕೊಳ್ಳಲಿ. ಹೇಳುವಷ್ಟು ಹೇಳಬೇಕಲ್ಲವೇ?

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** 5 ನಿಮಿಷವಲ್ಲ. 15 ನಿಮಿಷ ತೆಗೆದುಕೊಳ್ಳಿ.

**ಸಭಾಪತಿಯವರು:–** ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರೇ, ತಮಗೆ ಸಭೆ ನಡೆಸಬಾರದು ಎಂಬ ಉದ್ದೇಶ ಮನಸ್ಸಿನಲ್ಲಿರುವಂತೆ ಕಾಣಿಸುತ್ತದೆ. ಅವರು ಮಾತನ್ನು ಮುಗಿಸುವ ಹಂತದಲ್ಲಿದ್ದಾಗ ನೀವು ಕುಳಿತುಕೊಳ್ಳುವುದಿಲ್ಲ ಎಂದರೆ, ಇದರ ಅರ್ಥ ಏನೆಂಬುದನ್ನು ನೀವೇ ಹೇಳಿ. ಆ ವಿಷಯದ ಬಗ್ಗೆ (ಗೊಂದಲ) ಎಂಬುದು ತೀರ್ಮಾನಕ್ಕೆ ಬಂದಿದೆ.

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಅವರದು hidden agenda ಇದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರಿಗೆ ವಿಧೇಯಕ ಪಾಸ್ ಆಗಬೇಕು, ಮನಿ ಬಿಲ್ ಪಾಸ್ ಆಗಬೇಕೆಂಬುದಷ್ಟೇ ಅವರ ಕೆಲಸ.

**ಸಭಾಪತಿಯವರು:–** ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ ಮುಂದುವರೆಯುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಒಂದು ವಿನಂತಿಯೇನೆಂದರೆ, ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ...

(ಗೊಂದಲ)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**2. ಕೊರೋನಾ ವೈರಾಣು ಕಾಯಿಲೆ ಹರಡುತ್ತಿರುವ ಬಗ್ಗೆ**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಂತರ ಅವರು ಮಾತನಾಡಲಿ. ಚೈನಾದಲ್ಲಿ ಹರಡಿರುವ ಕೊರೋನಾ ವೈರಸ್ ಮಹಾವ್ಯಾಧಿ ಬೆಂಗಳೂರಿನಿಂದ ತೆಲಂಗಾಣಕ್ಕೆ ತೆರಳಿದ್ದ ಒಬ್ಬ ಟೆಕ್ಕಿಗೆ ಕೊರೋನಾ ವೈರಸ್ ತಗಲಿರುವುದು ದೃಡಪಟ್ಟಿದೆ. ಹಾಗಾಗಿ ಇವತ್ತಿನ ದಿವಸ ಪರಿಸ್ಥಿತಿ ಹೇಗೆ ನಿರ್ಮಾಣವಾಗಿದೆ ಎಂದರೆ, ಇವತ್ತು ಅನೇಕ ಅಧಿಕಾರಿಗಳು ನನ್ನ ಜೊತೆ ಫೋನ್ ಮೂಲಕ ಮಾತನಾಡಿದರು. ಸ್ಕೂಲ್‌ಗಳನ್ನು ನಡೆಸುವುದನ್ನು ಇಲ್ಲಿಗೆ ನಿಲ್ಲಿಸಿ ಎನ್ನುವ ವಿಚಾರವನ್ನು ಮಾತನಾಡಿದರು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರದಿಂದ statement ನೀಡಲಾಗಿದೆ.

**ಸಭಾಪತಿಯವರು:–** ಸರ್ಕಾರದಿಂದ ಉತ್ತರ ನೀಡುವುದಕ್ಕೆ ಸಚಿವರು ತಯಾರಿದ್ದಾರೆ.

**ಡಾ॥ ಕೆ.ಸುಧಾಕರ್(ವೈದ್ಯಕೀಯ ಸಚಿವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ statement ನೀಡಿದ್ದೇವೆ. ಮಾತನಾಡುವುದಕ್ಕೆ ಅವಕಾಶ ನೀಡಬೇಕು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದಕ್ಕಾಗಿ ದಯಮಾಡಿ ಸರ್ಕಾರ ಜಾಗೃತವಾಗಿ ಕ್ರಮ ಕೈಗೊಳ್ಳಬೇಕು. "Prevention is better than cure."

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ statement ನೀಡಲಾಗಿದೆ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ನಾನು ಮಾತನಾಡಿದ ಮೇಲೆ ಮಾತನಾಡಿ. ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುವುದೇನೆಂದರೆ, Prevention ಮಾಡಲಿಕ್ಕೆ ಮುಂಜಾಗ್ರತಾ ಕ್ರಮವಾಗಿ ಏನೇನು ಕ್ರಮಕೈಗೊಳ್ಳಬೇಕು, ಅದನ್ನು ಸರ್ಕಾರ ಕೈಗೊಳ್ಳಲಿ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ಮೊದಲು statement ನೀಡಲಿ.

**ಸಭಾಪತಿಯವರು:-** ಹೌದು, ಮಾನ್ಯ ಸಚಿವರು statement ನೀಡುವುದಕ್ಕೆ ಸದನಕ್ಕೆ ಬಂದಿರುವುದು. ಅವರು ಸ್ಟೇಟ್‌ಮೆಂಟ್ ಏನೆಂಬುದು ಹೇಳುತ್ತಾರೆ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸರ್ಕಾರದ ಉತ್ತರವನ್ನು...

**ಶ್ರೀ ಎಸ್.ಆರ್.ಪಾಟೀಲ್:-** ನೋಡಿ, ಈ ಸದನದ ಸತ್ಸಂಪ್ರದಾಯಕ್ಕೆ ವಿರುದ್ಧವಾಗಿ ವರ್ತನೆ ಮಾಡಬೇಡಿ. ನಮಗೆ ಅದರ ಪ್ರತಿಯನ್ನು ನೀಡಬೇಕಲ್ಲವೇ? ಮಾನ್ಯ ಸಭಾಪತಿಯವರೇ, ಎಂತಹ ಬೇಜವಾಬ್ದಾರಿ ಸರ್ಕಾರ ಎಂಬುದನ್ನು ನೋಡಿ. ಸದನದ ಸದಸ್ಯರಿಗೆ ಅದರ ಪ್ರತಿಯನ್ನು ನೀಡಲಿ.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಪ್ರತಿಯನ್ನು ಕಳುಹಿಸುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:-** ಪ್ರತಿಯನ್ನು ಕಳುಹಿಸಿ.

**ಶ್ರೀ ಗೋವಿಂದ ಎಂ. ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, ಸರ್ಕಾರ statement ನೀಡುವವರೆಗೂ ಸ್ವಲ್ಪ ಅವರು ತಾಳ್ಮೆಯಿಂದ ಇರಬೇಕಲ್ಲವೇ?

**ಶ್ರೀ ಎಸ್.ಆರ್.ಪಾಟೀಲ್:-** ಉಪ ಮುಖ್ಯಮಂತ್ರಿಗಳೇ, ತಾಳ್ಮೆ ಪ್ರಶ್ನೆ ಅಲ್ಲ.

**ಶ್ರೀ ಗೋವಿಂದ ಎಂ ಕಾರಜೋಳ:-** ಮಾನ್ಯ ಸಭಾಪತಿಯವರೇ, statement ನೀಡಿದರೂ ಬೇಜವಾಬ್ದಾರಿ ಸರ್ಕಾರ ಎಂದು ಹೇಳುತ್ತಾರೆ. ಆ ಪದವನ್ನು ಕಡತದಿಂದ ತೆಗೆಸಿ. ಬೇಜವಾಬ್ದಾರಿ ಎನ್ನುವ ಶಬ್ಧವನ್ನು ದಯವಿಟ್ಟು ಕಡತದಿಂದ ತೆಗೆದು ಹಾಕಿಸಿ. Statement ನೀಡುವುದಕ್ಕಾಗಿಯೇ ಜವಾಬ್ದಾರಿಯಿಂದಲೇ ಸಚಿವರು ಸದನಕ್ಕೆ ಬಂದು ಕುಳಿತಿದ್ದಾರೆ. ದಯವಿಟ್ಟು ಕೇಳಿಸಿಕೊಳ್ಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಉಪ ಮುಖ್ಯಮಂತ್ರಿಯವರೇ, ಒಂದು ನಿಮಿಷ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಸತ್ಸಂಪ್ರದಾಯ ಎನ್ನುವ ಯಾವುದೇ ವಿಷಯ ಬಂದರೂ ಸರ್ಕಾರಕ್ಕೆ suo moto statement ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ನಂತರ ವಿರೋಧ ಪಕ್ಷದವರು ಏನಾದರೂ ಸಲಹೆ–ಸೂಚನೆಗಳಿದ್ದರೆ ಹೇಳಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರತಿಯೊಬ್ಬ ಗೌರವಾನ್ವಿತ ಸದಸ್ಯರಿಗೂ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸರ್ಕಾರಕ್ಕೆ ಅಧಿಕಾರ ಇರುತ್ತದೆ. Suo moto statement ಮಾಡಲಿ. ಅದಕ್ಕೆ ನಮ್ಮ ತಕರಾರು ಏನೂ ಇಲ್ಲ. ಅವರೊಂದಿಗೆ ನಾವು ಸಹ ಧ್ವನಿಗೂಡಿಸಿ ಮಾಡಿಸುತ್ತೇವೆ.

**ಸಭಾಪತಿಯವರು:–** ಆಯಿತು.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಈಗಾಗಲೇ World Health Organisation, *Novel Corona Virus* ಅನ್ನು "*COVID-19*" ಎಂದು ಮರುನಾಮಕರಣವಾಗಿದೆ. ಈ ವಿಷಯದಲ್ಲಿ ಸರ್ಕಾರದ ಒಂದು statement ನ್ನು ಈಗಾಗಲೇ ತಮ್ಮ ಗಮನಕ್ಕೆ ನೀಡಲಾಗಿದೆ. ಅದೇ ರೀತಿ ಇಲ್ಲಿರತಕ್ಕಂಥ ಎಲ್ಲಾ ಗೌರವಾನ್ವಿತ ಸದಸ್ಯರಿಗೂ ಸಹ ಅದರ ಪ್ರತಿಯನ್ನು ಕಳುಹಿಸಿಕೊಡುವ ಕೆಲಸ ಮಾಡಲಾಗುತ್ತದೆ. 31ನೇ ಡಿಸೆಂಬರ್ 2019 ರಂದು ಮೊದಲು ಚೀನಾದ 'ವುಹಾನ್' ನಗರದಲ್ಲಿ ಅಪರಿಚಿತ ಮೂಲದ Pneumonia ಪ್ರಕರಣ ಪತ್ತೆಯಾಯಿತು. ಬಹಳ ವಿಶೇಷವಾಗಿರತಕ್ಕಂಥ ರೋಗದ ಲಕ್ಷಣಗಳು ಕಾಣಿಸುವುದಕ್ಕೆ ಪ್ರಾರಂಭವಾಯಿತು. ಆ ರೋಗದ ಲಕ್ಷಣಗಳು...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ನೀವು statement ಪ್ರತಿಯನ್ನು ಓದಿ ಹೇಳಿ.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಆಯಿತು. ಸ್ವಲ್ಪ ವಿವರವಾಗಿ ಹೇಳಬೇಕಲ್ಲವೇ? ಅವಶ್ಯಕತೆ ಇದ್ದರೆ statement ಓದಿ ಹೇಳುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಸ್ವತಃ ವೈದ್ಯರಾಗಿರುವುದರಿಂದ explain ಮಾಡಬಹುದು.

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಆಯಿತು. ನಾನು ಸರಳವಾಗಿ ಹೇಳಬೇಕೆಂದು ಭಾವಿಸಿದ್ದೆ. ಅವರಿಗೆ statement ಓದಿ ಹೇಳಬೇಕೆಂದರೆ, ಅದೇ ರೀತಿ ಹೇಳುತ್ತೇನೆ. ಚೀನಾದ ವುಹಾನ್ ನಗರದಿಂದ ವರದಿಯಾದ ಅಪರಿಚಿತ ಮೂಲಕ Pneumonia ಪ್ರಕರಣಗಳ ಬಗ್ಗೆ ಚೀನಾ ದೇಶದ ವಿಶ್ವ ಆರೋಗ್ಯ ಸಂಸ್ಥೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಛೇರಿಗೆ ಮಾಹಿತಿ ನೀಡಿರುತ್ತಾರೆ. ಅದರಂತೆ, 2020ರ ಜನವರಿ 5ರ ಹೊತ್ತಿಗೆ, ವಿವರಿಸಲಾಗದ ರೋಗ ನಿರ್ಣಯದೊಂದಿಗೆ 59 ಪ್ರಕರಣಗಳು ಪತ್ತೆಯಾಗಿವೆ ಮತ್ತು ಒಂದು ಸಾವು ವರದಿಯಾಗಿದೆ.

ವಿಶ್ವ ಆರೋಗ್ಯ ಸಮಸ್ಥೆ (WHO) 2020ರ ಜನವರಿ 30 ರಂದು ಕರೋನಾ ವೈರಸ್ ರೋಗವನ್ನು ಸಾರ್ವಜನಿಕ ತುರ್ತು ಪರಿಸ್ಥಿತಿ ಎಂದು ಘೋಷಿಸಿದೆ. ದಿನಾಂಕ: 03.03.2020 ರವರೆಗೆ 76 ದೇಶಗಳಲ್ಲಿ ಒಟ್ಟು 90,936 ಪ್ರಕರಣಗಳಲ್ಲಿ 3,118 ಸಾವು ಸಂಭವಿಸಿದೆ. ಇವರಲ್ಲಿ 48,122 ಪ್ರಕರಣಗಳು ಗುಣಮುಖರಾಗಿ ಮನೆಗೆ ಹಿಂದಿರುಗಿದ್ದಾರೆ. ಭಾರತದಲ್ಲಿ, 5 ಪ್ರಕರಣಗಳು ಖಚಿತ ಪಟ್ಟಿರುತ್ತವೆ ಹಾಗೂ ಯಾವುದೇ ಮರಣ ಸಂಭವಿಸಿರುವುದಿಲ್ಲ. ಕೇರಳ ರಾಜ್ಯದಲ್ಲಿ 3 ಪ್ರಕರಣಗಳು, ದೆಹಲಿ ಮತ್ತು ತೆಲಂಗಾಣದಲ್ಲಿ ತಲಾ ಒಂದೊಂದು ಪ್ರಕರಣಗಳು ವರದಿಯಾಗಿವೆ.

ಕರ್ನಾಟಕ ರಾಜ್ಯದಲ್ಲಿ ಯಾವುದೇ ಪ್ರಕರಣಗಳು ಕಂಡು ಬಂದಿಲ್ಲ. ಈಗಾಗಲೇ ಇಲ್ಲಿಯವರೆವಿಗೂ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಬೇರೆ ದೇಶಗಳಿಂದ ಆಗಮಿಸುತ್ತಿರುವ 39,391 ಪ್ರಯಾಣಿಕರನ್ನು ತಪಾಸಣೆಗೊಳಪಡಿಸಲಾಗಿದೆ. ಅದರಲ್ಲಿ ಭಾದಿತ 11 ದೇಶಗಳಲ್ಲಿ ಪ್ರವಾಸ ಕೈಗೊಂಡಿರುವ 468 ಪ್ರಯಾಣಿಕರನ್ನು ಗುರುತಿಸಿ, ಅವರ ಸರ್ವೇಕ್ಷಣೆ ನಡೆಸಿ, ಮನೆಗಳಲ್ಲಿ ಪ್ರತ್ಯೇಕವಾಗಿರಿಸಲಾಗಿದೆ.

(ಮುಂದು)

(137)/04.03.2020/12.40/ಎಸ್‌ಕೆ-ಎಕೆ

**ಡಾ॥ ಕೆ. ಸುಧಾಕರ್ (ಮುಂದು):**

ಅವರಲ್ಲಿ ಯಾವುದೇ ರೋಗ ಲಕ್ಷಣಗಳು ಕಂಡು ಬಂದಲ್ಲಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ನೀಡಲಾಗುತ್ತದೆ. ಕಡಲ ತೀರ ಪ್ರದೇಶಗಳಲ್ಲಿಯೂ ಕೂಡ ಪ್ರಯಾಣಿಕರ ಸರ್ವೇಕ್ಷಣೆ ನಡೆಸಲಾಗುತ್ತದೆ.

ಕಳೆದ ವಾರ ದಿನಾಂಕ 20.03.2020ರಂದು ಒಬ್ಬ ವ್ಯಕ್ತಿ ದುಬೈನಿಂದ ಬಂದು ಬೆಂಗಳೂರಿನಲ್ಲಿ ವಾಸ್ತವ್ಯ ಹೂಡಿ, ಹೈದರಾಬಾದ್‌ಗೆ ಪ್ರಯಾಣಿಸಿರುತ್ತಾರೆ. ನಂತರ ರೋಗ ಲಕ್ಷಣಗಳು ಗೋಚರಿಸಿ, ರೋಗ ಪ್ರಕರಣ ಖಚಿತಪಟ್ಟಿರುವುದು ತಿಳಿದು ಬಂದಿರುತ್ತದೆ. ವ್ಯಕ್ತಿಯ ಕಛೇರಿ, ವಾಸ್ತವ್ಯ ಹೂಡಿದ್ದ ಸ್ಥಳ, ಪ್ರಯಾಣಿಸಿದ ಕಾರ್ ಮತ್ತು ಬಸ್‌ಗಳನ್ನು ಗುರುತಿಸಿ, ಸದರಿ ವ್ಯಕ್ತಿಯ ಸಂಪರ್ಕಕ್ಕೆ ಬಂದಿರುವ ವ್ಯಕ್ತಿಗಳನ್ನು ತಪಾಸಣೆಗೊಳಪಡಿಸಲಾಗಿದ್ದು, ಅವರಿಗೆ ಅಗತ್ಯ ವೈದ್ಯಕೀಯ ಸಲಹೆಗಳನ್ನು ನೀಡಲಾಗಿರುತ್ತದೆ. ಇನ್ನು ರಾಜ್ಯದಲ್ಲಿ ಕರೋನಾ ವೈರಸ್ ರೋಗ ತಡೆಗಟ್ಟಲು ಕೈಗೊಳ್ಳಲಾಗಿರುವ ಕ್ರಮಗಳು ಯಾವುವೆಂದರೆ;

ಮೊದಲನೆಯದಾಗಿ ಪ್ರಯಾಣಿಕರ ತಪಾಸಣೆ ಇವತ್ತಿನಿಂದ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಮತ್ತು ಬಂದರುಗಳಲ್ಲಿ ಅಂತರಾಷ್ಟ್ರೀಯ ಪ್ರವಾಸಿಗರನ್ನು ತಪಾಸಣೆ ಮಾಡುವಂತಹ ಕ್ರಮ ಪ್ರಾರಂಭವಾಗುತ್ತಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಭಾದಿತ ದೇಶಗಳಿಂದ ಆಗಮಿಸುವ ಪ್ರಯಾಣಿಕರನ್ನು ಅವರ ಮನೆಗಳಲ್ಲಿ ಪ್ರತ್ಯೇಕವಾಗಿರಿಸಲಾಗಿದೆ. WHO ಹೇಳಿರತಕ್ಕಂತಹದ್ದು 14 ದಿವಸ incubation ಎಂದು ಹೇಳಿ, ಆದರೆ ನಾವು ಇನ್ನೂ ಮುನ್ನೆಚ್ಚರಿಕೆ ವಹಿಸಿ 14X2=28 ದಿವಸಗಳ ಕಾಲ ಅವರಿಗೆ ಪ್ರತ್ಯೇಕವಾಗಿರಿಸಿ, ಅವರನ್ನು isolate ಮತ್ತು quarantine ಮಾಡುವಂತಹ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯದಲ್ಲಿ ತೆಗೆದುಕೊಂಡಿದ್ದೇವೆ. ಅವರಿಗೆ ಎಲ್ಲಾ ರೀತಿಯ ವೈದ್ಯಕೀಯ ಸಲಹೆಗಳನ್ನು ಕೊಡುತ್ತಿದ್ದೇವೆ. ಯಾರಿಗಾದರೂ ರೋಗ ಲಕ್ಷಣಗಳು ಕಂಡು ಬಂದಲ್ಲಿ, ತಪಾಸಣೆಗೊಳಪಡಿಸಿ ಅಗತ್ಯವಿದ್ದಲ್ಲಿ ಅವರಿಗೆ ಹೆಚ್ಚಿನ ಚಿಕಿತ್ಸೆಗೆ ಒಳರೋಗಿಯಾಗಿ ದಾಖಲು ಮಾಡುವುದಕ್ಕೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿದ್ದೇವೆ. ರಾಜ್ಯದಲ್ಲಿ ವಿವಿಧ 50 ಸರ್ಕಾರಿ ಹಾಗೂ ಅನೇಕ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ, ಪ್ರತ್ಯೇಕ ಹಾಸಿಗೆಗಳನ್ನು ಚಿಕಿತ್ಸೆ ನೀಡಲು ಕಾಯ್ದಿರಿಸಲಾಗಿದೆ. ಆಸ್ಪತ್ರೆಗಳಿಗೆ ಅವಶ್ಯವಿರುವ ವೆಂಟಿಲೇಟರ್ಸ್, ಔಷಧಿಗಳು, ವೈಯಕ್ತಿಕ ರಕ್ಷಣಾ ಸಲಕರಣೆಗಳು ಮತ್ತು ಮಾಸ್ಕ್‌ಗಳ ವ್ಯವಸ್ಥೆ ಮಾಡಲಾಗಿದೆ. ರಾಜ್ಯದಲ್ಲಿ ರಾಜ್ಯ ನೋಡಲ್ ತಂಡ ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ತ್ವರಿತ ಪ್ರಕ್ರಿಯಾ ತಂಡ (Rapid Response Team) ಗಳನ್ನು ರಚಿಸಲಾಗಿದೆ ಮತ್ತು ಅವರಿಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ. ಖಾಸಗಿ ವೈದ್ಯರಿಗೂ ಈ ಬಗ್ಗೆ ಅರಿವು ಮೂಡಿಸುವ ತರಬೇತಿ ನೀಡಲಾಗಿದೆ. ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಪಶು ವೈದ್ಯ ಇಲಾಖೆ ಹಾಗೂ ಹೋಟೆಲ್ ಉದ್ದಿಮೆದಾರರಿಗೆ ಅನುಸರಿಸಬೇಕಾದ ಸಲಹಾ ಮಾರ್ಗಸೂಚಿ ಕೂಡ ನೀಡಲಾಗಿದೆ. ಪ್ರತಿ ದಿನ ಇಲಾಖೆಯ ಅಪರ ಮುಖ್ಯ ಕಾರ್ಯದಶಿಗಳು ಮತ್ತು ಆಯುಕ್ತರು *Novel Coronavirus* ಪರಿಶೀಲನಾ ಸಭೆ ನಡೆಸಿ ಅಗತ್ಯ ಮಾರ್ಗಸೂಚಿ ನೀಡುತ್ತಿದ್ದಾರೆ.

ಇಲಾಖೆಯ ಆರೋಗ್ಯ ಸಹಾಯವಾಣಿ–104, ರೆಡಿಯೋ, ಟಿವಿ ಮಾದ್ಯಮ, ಮುದ್ರಣಾ ಮಾಧ್ಯಮ, ಸಮೂಹ ಸಾರಿಗೆ ಮೆಟ್ರೋ, ರೈಲು, ಬಸ್‌ಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿದೆ.

ಸರ್ಕಾರದ ಮಟ್ಟದಲ್ಲಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಇತರೆ ಸಂಬಂಧಿಸಿದ ಇಲಾಖೆಗಳೊಂದಿಗೆ ಪ್ರತಿದಿನ ಪರಿಶೀಲನಾ ಸಭೆ ನಡೆಸಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಭಾರತ ಸರ್ಕಾರದ ಆರೋಗ್ಯ ಇಲಾಖೆಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅವರು ನಿರಂತರವಾಗಿ ನೀಡುತ್ತಿರುವ ಮಾರ್ಗಸೂಚಿ/ಮಾರ್ಗದರ್ಶನದನ್ವಯ ಕ್ರಮ ವಹಿಸಲಾಗುತ್ತಿದ್ದು, ಅವಶ್ಯವಿರುವ ಕಡೆ ಅವರ ಸಲಹೆ ಸೂಚನೆಗಳನ್ನು ಪಡೆಯಲಾಗುತ್ತಿದೆ. ನಾವು ಇದನ್ನು ಬಹಳ ಧೀರ್ಘವಾಗಿ ಹೇಳಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು *suo moto statement* ನ್ನು ಮಾಡಿದ್ದಾರೆ. ನಾವು ಅವರಿಗೆ ಸ್ವಾಗತವನ್ನು ಮಾಡುತ್ತೇವೆ. ಕರ್ನಾಟಕ ರಾಜ್ಯದಲ್ಲಿರುವ ಜನರು ಬಹಳ ಆತಂಕದಲ್ಲಿದ್ದಾರೆ. ಮಾನ್ಯ ಸಚಿವರು ಹೇಳಿದ ಹಾಗೆ ಭಾರತ ದೇಶದಲ್ಲಿ ಒಟ್ಟು ಐದು ಪ್ರಕರಣಗಳು *positive* ಇದೆ. ಕೇರಳದಲ್ಲಿ ಮೂರು ಪ್ರಕರಣಗಳು, ದೆಹಲಿಯಲ್ಲಿ ಒಂದು ಪ್ರಕರಣ, ತೆಲಾಂಗಣದಲ್ಲಿ ಒಂದು ಪ್ರಕರಣ ಇದೆ. ಕರ್ನಾಟಕದಲ್ಲಿ ದೂರದರ್ಶನವನ್ನು ನಿನ್ನೆಯಿಂದ ನೋಡುತ್ತಿದ್ದೇವೆ. ನನಗೆ ಬಹಳ ಆತಂಕವಾಗಿತ್ತು. ಒಬ್ಬ *techie*ಗೆ *positive* ಇದೆ. (ಗೊಂದಲ) ಇಲ್ಲಿ ಕೇಳಿ. ನೀವು ನೋಡಿದ್ದೀರಾ. ನಾನು ನೋಡಿದ್ದೇನೆ. ಇದು ನಿಮಗೂ ಆತಂಕವಾಗಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ನೀವು ಆಡಳಿತ ಪಕ್ಷದವರು. ನಿಮಗೆ ಆತಂಕ ಹೆಚ್ಚಾಗಬೇಕು. ನಿಮಗೆ ಜವಾಬ್ದಾರಿ ಹೆಚ್ಚು ಇರುತ್ತದೆ. ನಾವು ಹೇಳುತ್ತೇವೆ.

**ಶ್ರೀ ಗೋವಿಂದ ಎಂ ಕಾರಜೋಳ (ಉಪ ಮುಖ್ಯಮಂತ್ರಿಯವರು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು):–** ನಿಮಗೂ ಜವಾಬ್ದಾರಿ ಇದೆ.

**ಶ್ರೀ ಎಸ್.ಆರ್. ಪಾಟೀಲ್:–** ಹೌದು ನಮಗೂ ಜವಾಬ್ದಾರಿ ಇದೆ. ಆದರೆ ನೀವು ತ್ವರಿತವಾದ ಕ್ರಮವನ್ನು ಕೈಗೊಳ್ಳುವಂತಹ ಎಲ್ಲಾ *men and machinery* ನಿಮ್ಮ ಕೈಯಲ್ಲಿ ಇರುತ್ತದೆ. ನಾವು ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತೇವೆ. ಆದರೆ ಈ ರಾಜ್ಯದಲ್ಲಿ *positive* ಪ್ರಕರಣಗಳು ಇಲ್ಲವೆಂದರೆ ಬಹಳ ಸಂತೋಷದ ಸುದ್ದಿ. ಏಕೆಂದರೆ ಇಲ್ಲಿ ಒಬ್ಬ *techie*ಗೆ ಆಗಿದೆ. ಅವರು ಇರುವಂತಹ ಅಪಾರ್ಟ್‌ಮೆಂಟ್‌ನ್ನು *seize* ಮಾಡಿದ್ದಾರೆ. ಅವರು ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೋ, ಅವರ ಕಂಪನಿಯ ಕಾರ್ಯವನ್ನೇ ಸ್ಥಗಿತ ಮಾಡಿದ್ದಾರೆ. ಅಪಾರ್ಟ್‌ಮೆಂಟಿನಲ್ಲಿರುವಂತಹ ನಿವಾಸಿಗಳೆಲ್ಲರನ್ನು ಹೊರಗಡೆ ಬಿಡುತ್ತಿಲ್ಲ. ಈ ರೀತಿಯಾದಂತಹ ಆತಂಕದ ಸುದ್ದಿಗಳು ಮಾಧ್ಯಮಗಳ ಮುಖಾಂತರ ಬಂದಾಗ, ನಿಜವಾಗಲೂ ಬಹಳಷ್ಟು ಆತಂಕವಾಗಿದೆ. ನಮ್ಮ ದೇಶದಲ್ಲಿ ಕರೋನಾ ವೈರಸ್ ಬಂದಿದೆ. ಮಾನ್ಯ ಸಚಿವರು *preventive measures* ಎಲ್ಲವನ್ನೂ ಕೈಗೊಂಡಿದ್ದಾರೆ. ಇದರ ಬಗ್ಗೆ ನಿಗಾವಹಿಸಿದ್ದಾರೆ. ಪ್ರತಿ ದಿನ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಭೆ ನಡೆಸುತ್ತಿರುವುದು ಸ್ವಾಗತ. ನಮ್ಮ ರಾಜ್ಯದಲ್ಲಿರುವ ಆ *techie*ಗೆ *positive* ಇಲ್ಲವೆಂದು ಹೇಳಿದ್ದೀರಾ, ಇದು ಸಂತೋಷದ ವಿಷಯವಾಗಿದೆ. ನಮ್ಮ ರಾಜ್ಯದಲ್ಲಿ ಕರೋನಾ ವೈರಸ್ ಇಲ್ಲವೆಂದು ನಿಶ್ಚಿಂತೆಯಾಗಿ ಇರಬೇಡಿ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಗೋವಿಂದ ಎಂ. ಕಾರಜೋಳ (ಉಪ ಮುಖ್ಯಮುಂತ್ರಿಯವರು ಹಾಗೂ ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಸಚಿವರು):–** ನಾವು ನಿಶ್ಚಿಂತೆಯಾಗಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಗೋವಿಂದ ಎಂ ಕಾರಜೋಳರವರೇ ಒಂದು ನಿಮಿಷ. ತಾವು ಏತಕ್ಕೆ ಅವಸರ ಮಾಡುತ್ತೀರಾ. ನಾವು ನೀವು ಒಂದೇ ಜಿಲ್ಲೆಯವರು. ಇದು ಮುಗಿದ ನಂತರ ಒಂದೇ ಕಡೆ ಇರುತ್ತೇವೆ. ಇದರ ಬಗ್ಗೆ ಕಾಳಜಿ ವಹಿಸಬೇಕೆಂದು ನಾನು ಮಾನ್ಯ ಸಭಾಪತಿಯವರ ಮೂಲಕ ಮನವಿ ಮಾಡುತ್ತೇನೆ. ಇವತ್ತು ಬೆಳಿಗ್ಗೆ ಬಹಳಷ್ಟು ಜನ ಅಧಿಕಾರಿಗಳು ಈ ಸ್ಕೂಲ್‌ಗಳನ್ನು ಬಂದ್ ಮಾಡಿಸಿಬಿಡುತ್ತೀರಾ! ನೋಡಿ, ಈ ಸದನದಲ್ಲಿ ಮಾತನಾಡಿರಿ ಎಂದು ನನಗೆ ದೂರವಾಣಿ ಮೂಲಕ ಕರೆ ಮಾಡಿದ್ದರು. ನನಗೂ ಕೂಡ ಬಹಳ ಆತಂಕವಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಕರೋನಾ ವೈರಸ್ ಒಂದೂ ಪ್ರಕರಣವಿಲ್ಲವೆಂದರೆ ಬಹಳ ಸಂತೋಷದ ಸುದ್ದಿ ಎಂದು ನಾನು ಭಾವಿಸುತ್ತೇನೆ. ಆದರೆ ಕರ್ನಾಟಕ ರಾಜ್ಯದಲ್ಲಿ ಕರೋನಾ ವೈರಸ್ ಬರುವುದಿಲ್ಲವೆಂದು ತಿಳಿದುಕೊಳ್ಳಬೇಡಿ. ಮಾನ್ಯ ಆರೋಗ್ಯ ಸಚಿವರು ಮುಂಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಬೇಕು ಏಕೆಂದರೆ *prevention is better than cure.* ಈ ಕರೋನಾ ವೈರಸ್ ಬಂದ ಮೇಲೆ *treatment* ಕೊಡುವುದು ಬೇರೆ. ಒಟ್ಟು 90,936 ಪ್ರಕರಣಗಳು, 3,118 ಸಾವು ಹಾಗೂ 48,122 ಪ್ರಕರಣಗಳು ಗುಣಮುಖರಾಗಿರುತ್ತಾರೆಂದು ಹೇಳಿದ್ದಾರೆ. ಆದರೆ ಗುಣಮುಖವಾಗುತ್ತದೆ ಎನ್ನುವುದಾಯಿತು. ಬಹಳಷ್ಟು ಜನರಲ್ಲಿ ಹಾಗೂ ಪ್ರತಿನಿಧಿಗಳಲ್ಲಿಯೂ ಕೂಡ ತಪ್ಪು ಕಲ್ಪನೆ ಇರುತ್ತದೆ. ಆದ್ದರಿಂದ, ನಮ್ಮ ರಾಜ್ಯಕ್ಕೆ ಈ ಕರೋನಾ ವೈರಸ್ ಎಂಟ್ರಿಯಾಗದಂತೆ ಮಾನ್ಯ ಸಚಿವರು ಇನ್ನೂ ಮುಂಜಾಗ್ರತಾವಾಗಿ ಬಿಗಿಯಾದಂತಹ ಕ್ರಮವನ್ನು ಕೈಗೊಳ್ಳಿ ಎಂದು ನಾನು ಹೇಳುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇದು ಮಾರಣಾಂತಿಕ ವೈರಸ್ ಆಗಿದೆ. *WhatsApp message* ಗಳಲ್ಲಿ ಸಾಕಷ್ಟು ರೀತಿಯಾಗಿ ಗೊಂದಲ ಹಾಗೂ ಭಯ ಹುಟ್ಟಿಸುವಂತಹ ಸಂದೇಶಗಳು ಬರುತ್ತಿದೆ. ಇದರ ಬಗ್ಗೆ ಯಾವ ರೀತಿಯಾಗಿ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಅಂದರೆ ಸೋಪ್‌ನಲ್ಲಿ *hand wash* ಮಾಡಬೇಕು. ಬೇರೆ ಬೇರೆ ವಿದ್ಯಾರ್ಥಿಗಳಾಗಲೀ, ಜಾತ್ರೆಗಳಾಗಲೀ ಮತ್ತು *conference* ಗಳಲ್ಲಿಯೂ ಕೂಡ ಮುನ್ನೆಚ್ಚರಿಕೆ ಕ್ರಮ ವಹಿಸಿಬಿಟ್ಟು, ಜನರು ಅಲ್ಲಿ ಹೋಗದೇ ಇರುವ ರೀತಿಯಲ್ಲಿ ಹಾಗೂ ಯಾರಿಗಾದರೂ ಕೂಡ ಇಂತಹ ವೈರಸ್ *affect* ಆಗಿದ್ದರೆ, ಅಂತಹವರನ್ನು *isolate* ಮಾಡಿ, ಬೇರೆ ವಾರ್ಡ್‌ಗಳಲ್ಲಿಟ್ಟು ಅವರಿಗೆ *treatment* ಕೊಡುವಂತಹ ವ್ಯವಸ್ಥೆ ಕೊಡುವ ಸಲುವಾಗಿ ಮಾರ್ಗದರ್ಶನವನ್ನು ಇಲಾಖೆ ವತಿಯಿಂದ ಕೊಟ್ಟಿದ್ದೀರಾ ಎಂದು ನಾನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಪಿ.ಆರ್. ರಮೇಶ್‌ರವರೇ ಮಾತನಾಡಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪಿ.ಆರ್.ರಮೇಶ್ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇವತ್ತು ಮಾರಣಾಂತಿಕವಾದಂತಹ ಈ ವೈರಸ್ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಮಾತುಕತೆಗಳು ಪ್ರಾರಂಭವಾಗಿದೆ. ಕರ್ನಾಟಕದಲ್ಲಿ ಈ ರೀತಿಯ ವೈರಸ್ ಇರುವಂತಹದ್ದು, ನಮ್ಮ ಜನರಿಗೆ ಬರದೇ ಇರುವುದು ಅದೃಷ್ಟವೆಂದು ನಾವು ಭಾವಿಸೋಣ. ಆದರೆ ಈ ವೈರಸ್ ಮುಂದೆ ಬರುವುದಿಲ್ಲವೆಂದು ನಾವು ಅಂದುಕೊಳ್ಳೋಣ. ಆದರೆ ಈ ಸರ್ಕಾರ ಏನು *precautionary measures* ತೆಗೆದುಕೊಂಡಿದೆ. ಈ ರೋಗ ಲಕ್ಷಣ ಯಾವ ತರಹ ಬರುತ್ತದೆ ಎಂಬುದರ ಬಗ್ಗೆ ಜನರಿಗೆ *educate* ಮಾಡುವಂತಹದ್ದಾಗಬೇಕು. ಅವರಿಗೆ ಈ ವೈರಸ್ ಬಗ್ಗೆ ಸಾಕಷ್ಟು ಮಾಹಿತಿ ಏನಿದೆ? ಹಾಗೂ *preventive measures* ಏನು ತೆಗೆದುಕೊಂಡಿದ್ದಾರೆ? ಈ ವೈರಸ್ ಬರದೇ ಹಾಗೇ ಏನಾದರೂ *injections* ಇದೆಯಾ ಅಥವಾ ಸಂಪೂರ್ಣವಾಗಿ ಇದನ್ನು ತಡೆಗಟ್ಟುವುದಕ್ಕೆ ಏನಾದರೂ *resist* ಮಾಡುವಂತಹದ್ದು, ಯಾವುದಾದರೂ ಮೆಡಿಸಿನ್ ಇದೆಯಾ. ಈ ಲ್ಯಾಬೊರೇಟರಿಗಳಿಗೆ ಜನರು *access* ಆಗುವಂತಹ ರೀತಿಯಲ್ಲಿ ಅದಕ್ಕೇನಾದರೂ ಸರ್ಕಾರ ವಿಶೇಷವಾಗಿ ಏನಾದರೂ ವ್ಯವಸ್ಥೆ ಮಾಡಿದೆಯಾ. ಇವತ್ತು ಡಾಕ್ಟರ್ಸ್ ಈ ಒಂದು ವೈರಸ್ ಇದೆಯಾ ಎಂದು ಮಾಡುವುದಕ್ಕೆ ನಾವು ಲ್ಯಾಬೋರೆಟರಿ ಮೂಲಕ *analyze* ಮಾಡಿ ತೆಗೆದುಕೊಳ್ಳುವಂತಹ ವರದಿಯ ಮೇಲೆ ನಾವು *confirm* ಮಾಡುವುದು. ಆ ಒಂದು ರೀತಿಯಲ್ಲಿ *access* ಆಗುವಂತಹ ಜನರಿಗೆ ಲ್ಯಾಬೊರೇಟರಿಯಾಗಬೇಕು. ಆಸ್ಪತ್ರೆ ಮತ್ತು ಡಿಸ್ಪೆನ್ಸರಿಗಳು ಮುಕ್ತವಾಗಿರಬೇಕು.

(ಮುಂದು...)

(138) 04.03.2020 12.50 ಟಿಸಿಹೆಚ್–ಎಕೆ
**ಶ್ರೀ ಪಿ.ಆರ್.ರಮೇಶ್ (ಮುಂದು)**

ಸರ್ಕಾರದ ವ್ಯವಸ್ಥೆಯಲ್ಲಿ ಎಲ್ಲಾ ಮಾಡುವುದಕ್ಕೆ ಆಗುವುದಿಲ್ಲ. ಖಾಸಗಿ ಆಸ್ಪತ್ರೆಗಳನ್ನು ಕೂಡ ತುರ್ತು ಸಮಯದ ರೀತಿಯಲ್ಲಿ ಪರಿಗಣಿಸಬೇಕು. ಎಲ್ಲಿ ಅವಶ್ಯಕತೆ ಇರುತ್ತದೆ, ಅಂತಹ ಅವಶ್ಯಕತೆಗೆ ತಕ್ಕಂತೆ ತೆಗೆದುಕೊಳ್ಳುವುದು ಬಹಳ ಮುಖ್ಯವಾಗಿದೆ. ಮತ್ತೆ ಈ ವೈರಸ್‌ಗೆ ಚೈನಾ ಮತ್ತು ಜಪಾನ್‌ನಲ್ಲಿ ಹಾಗೂ ಪ್ರಪಂಚದ ಉತ್ತರ ಕಡೆ ಇರತಕ್ಕಂಥ ದೇಶಗಳಲ್ಲಿ ಕರೋನ ವೈರಸ್ ಹೆಚ್ಚಿಗೆ ಕಾಣಿಸಿಕೊಂಡಿದೆ. ಅಲ್ಲಿ ತಾಪಮಾನ *minus 20 degrees Celsius* ವರೆಗೂ ಇದೆ. ಆದರೆ ಬೆಂಗಳೂರಿನಲ್ಲಿ 25–28 ಡಿಗ್ರಿ ಸೆಂಟಿಗ್ರೇಡ್‌ವರೆಗೂ ತಾಪಮಾನ ಇದೆ. ಈ ತಾಪಮಾನದಲ್ಲಿ ಈ ಕರೋನ ವೈರಸ್ ಬದುಕುತ್ತದೆಯೇ? ಇದರ ಬಗ್ಗೆ ಕೂಡ ಮಾಹಿತಿಯನ್ನು ಮಾನ್ಯ ಸಚಿವರು ನೀಡಬೇಕು. ಇಂತಹ ಮಾಹಿತಿಗಳನ್ನೆಲ್ಲಾ ತೆಗೆದುಕೊಂಡು ಜನರನ್ನು *educate* ಮಾಡತಕ್ಕಂಥ ರೀತಿಯಲ್ಲಿ ಮಾಡಿದಾಗ, ಜನರೇ ಡಾಕ್ಟರ್‌ಗಳಾಗುತ್ತಾರೆ. ಪ್ರತಿಯೊಬ್ಬರು ಡಾಕ್ಟರ್‌ಗಳ ಬಳಿ ಹೋಗಿ ಪರಿಶೀಲಿಸಿಕೊಳ್ಳಲು ಆಗುವುದಿಲ್ಲ. ಮೆಡಿಕಲ್ ಸೈನ್ಸ್‌ನಲ್ಲಿ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರತಕ್ಕಂಥ ಮಾಹಿತಿಗಳನ್ನು ಜನಗಳಿಗೆ ಮುಟ್ಟಿಸತಕ್ಕಂಥ *educative* ಇರತಕ್ಕಂಥ ಒಂದು ಪದ್ಧತಿಯನ್ನು ತರುವುದು ಬಹಳ ಮುಖ್ಯವೆಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ತಮ್ಮೂಲಕ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ಎರಡು–ಮೂರು ಅವಶ್ಯಕತೆಗಳ ಬಗ್ಗೆ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಈಗ ಏನಾಗಿದೆಯೆಂದರೆ, ಎಲ್ಲರಲ್ಲೂ ಒಂದು ರೀತಿ ಆತಂಕ ಮೂಡಿದೆ. ಮಾನ್ಯ ಸಚಿವರು ಬಹಳ ಸಂದರ್ಭಗಳಲ್ಲಿ *WhatsApp* ಮತ್ತು ಫೇಸ್‌ಬುಕ್ ಮತ್ತು ಬೇರೆ ಬೇರೆ *social media* ಗಳಲ್ಲಿ ಹರಡುತ್ತಿರುವುದರ ಬಗ್ಗೆ ಹೇಳಿದರು. ನಮಗೆ ಯಾವುದೋ ಒಂದು ಮೆಸೇಜ್ ಫಾರ್ವರ್ಡ್ ಆಗಿ ಬಂದಿರುವುದನ್ನು ನಾವು ಮತ್ತೆ ಬೇರೆಯವರಿಗೆ ಫಾರ್ವರ್ಡ್ ಮಾಡಿಬಿಡುತ್ತೇವೆ. ಅದು ಪುಟಗಟ್ಟಲೆ ಇರುತ್ತದೆ. ನಾವು ಅದರಲ್ಲಿ ಏನಿದೆಯೆಂದು ತುಂಬಾ ಗಮನಿಸುವುದಿಲ್ಲ. ವೈರಲ್ ಆಗುವಂಥದ್ದು ಇರುತ್ತದೆ. ಅದಕ್ಕೆ ನಾನು ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ವೈದ್ಯಕೀಯ ಶಿಕ್ಷಣ ಸಚಿವರು ಒಂದಷ್ಟು ಮಾಹಿತಿಯನ್ನು ಪ್ರಚಾರಪಡಿಸಬೇಕಾಗುತ್ತದೆ. ಅಧಿಕೃತ ಪ್ರಚಾರ ಮಾತ್ರ ಓಡಾಡುವ ಹಾಗೆ ಆಗಬೇಕು ಎನ್ನುವುದಕ್ಕೆ ಒಂದು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಸಲಹೆಯನ್ನು ನಾನು ಕೊಡುವುದಕ್ಕೆ ಬಯಸುತ್ತೇನೆ. ಎರಡನೆಯದಾಗಿ, *alternative medicine* ನಲ್ಲಿ ಕರೋನ ವೈರಸ್‌ಗೆ *treatment* ಕೊಡಲು ಏನಾದರು ಅವಕಾಶ ಇದೆಯೆ? ಇವತ್ತಿನ ದಿವಸ ತಕ್ಷಣವೇ ಆಯುರ್ವೇದಿಕ್ ಚಿಕಿತ್ಸೆ ಇರಬಹುದು, ಯುನಾನಿ ಚಿಕಿತ್ಸೆ ಇರಬಹುದು ಮತ್ತು ನ್ಯಾಚುರೋಪತಿ ಚಿಕಿತ್ಸೆ ಇರಬಹುದು, ಈ ರೀತಿ ಬೇರೆ ಏನಾದರೂ ಚಿಕಿತ್ಸೆ ಕೊಡಲು ಭಾರತೀಯ ವೈದ್ಯ ಪದ್ಧತಿಯಲ್ಲಿ ಇದಕ್ಕೆ ಏನಾದರೂ ಪರಿಹಾರ ಇದೆಯೇ ಎನ್ನುವಂಥದ್ದರ ಬಗ್ಗೆ ತಕ್ಷಣವೇ ಇಲಾಖೆಗಳನ್ನು ಸನ್ನದ್ದು ಮಾಡುವಂತಹ ಕೆಲಸ ಮಾಡಬೇಕು. ವಿಶೇಷವಾಗಿ ಬಹಳ ದೊಡ್ಡ ಪಾತ್ರ ಇರತಕ್ಕಂಥದ್ದು ಮಾಧ್ಯಮದ್ದು. ನಿನ್ನೆ ದಿವಸ ಮಾಧ್ಯಮದಲ್ಲಿ ಈ ಸುದ್ದಿ ಬಂದ ನಂತರ, ನನ್ನ ಧರ್ಮಪತ್ನಿಯವರು ಫೋನ್ ಮಾಡಿದ್ದರು; ಬೆಂಗಳೂರಿನಲ್ಲಿ ಕರೋನ ವೈರಸ್ ಬಂದುಬಿಟ್ಟಿದೆ ಎಂದು ಆತಂಕ ವ್ಯಕ್ತಪಡಿಸಿದರು. ಅದಕ್ಕೆ ನಾನು ಮಾಧ್ಯಮ ಮಿತ್ರರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಜವಾಗಿಯು ಒಂದಷ್ಟು ಜನಜಾಗೃತಿ ಮೂಡಿಸುವಂಥ ನಿಟ್ಟಿನಲ್ಲಿ ಮಾಧ್ಯಮಗಳು ಸರ್ಕಾರದ ಜೊತೆ ಕೈಜೋಡಿಸಬೇಕು ಎನ್ನುವಂತಹ ವಿನಂತಿಯನ್ನು ಈ ಮೂಲಕ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ನಾನು ಅಭಿನಂಧನೆಗಳನ್ನು ಸಲ್ಲಿಸುತ್ತಿದ್ದೇನೆ. ಸರ್ಕಾರ ಸಾಕಷ್ಟು ಸಭೆಗಳನ್ನು ಮಾಡಿ, ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ಬೆಂಗಳೂರು ಇಡೀ ದೇಶಕ್ಕೆ ಮಾದರಿಯಾದಂತಹ ವೈದ್ಯಕೀಯ ರಂಗದಲ್ಲಿ ಮುಂದುವರೆದಿದೆ. ಹೊರ ದೇಶಗಳಿಂದ ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆದುಕೊಳ್ಳುತ್ತಾರೆ. ಈ ರೀತಿ ಇರುವಾಗ ನಾವು ಏನಾದರು ಒಂದು *vaccine* ಅನ್ನು

ತಯಾರು ಮಾಡಿ, ಇಡೀ ಪ್ರಪಂಚಕ್ಕೆ ಏಕೆ ನಾವು ಮಾದರಿಯಾಗಬಾರದು ಎನ್ನುವುದು ನನ್ನ ಒಂದು ಸಲಹೆ. ಸರ್ಕಾರಿ ಕಚೇರಿಗಳು, ರೈಲು ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಕ್ಲೀನಿಂಗ್‌ಗೆ ಸರ್ಕಾರ ಸಾಕಷ್ಟು ದುಡ್ಡು ಖರ್ಚು ಮಾಡುತ್ತದೆ. *Phenyl* ನಿಂದ ಶುಚಿಗೊಳಿಸಿ, ಸ್ವಚ್ಚತೆ ಕಾಪಾಡಬೇಕಾಗುತ್ತದೆ. ಆದರೆ ಕೆಲವರು ಕಾಗದದಲ್ಲಿ ಮಾತ್ರ ಹೇಳುತ್ತಾರೆ. ಈಗಲಾದರೂ ಕೊನೆಪಕ್ಷ *practical* ಆಗಿ ಮಾಡಬೇಕು. ಎಲ್ಲಾ ಕಚೇರಿಗಳನ್ನು ಸ್ವಚ್ಛವಾಗಿ ಇಡುವಂತೆ ಮಾಡಬೇಕು. ಆಮೇಲೆ ಈಗ ಮಾನ್ಯ ಸಚಿವರು ನಾವು ಕರಪತ್ರಗಳನ್ನು ಕಳುಹಿಸಿದ್ದೇವೆಂದು ಹೇಳಿದರು. ಮಾಧ್ಯಮಗಳಲ್ಲಿ *photo* ಹಾಕಿ ಸಾಕಷ್ಟು ಜಾಹೀರಾತು ಕೊಡುತ್ತೀರಿ. ಮುಂಜಾಗ್ರತಾ ಕ್ರಮ ವಹಿಸಲು ಏನು ಮಾಡಬೇಕೆಂದು ಎಲ್ಲಾ ಪತ್ರಿಕೆಗಳು ಜಾಹೀರಾತು ಕೊಟ್ಟು, ನೀವು ಈ ರೀತಿ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥದ್ದನ್ನು ಮಾಡಬೇಕು. ನಿನ್ನೆ ದಿವಸ ದುಬೈನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನವರು ಮತ್ತು ಬೇರೆ ಸಂಘದವರು ನಮಗೆ 13ನೇ ತಾರೀಖಿನಂದು ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನ ನೀಡಿದ್ದಾರೆ. ಅಲ್ಲಿಗೆ ನಾವು ಹೋಗಬೇಕೋ ಅಥವಾ ಬೇಡವೋ ಗೊತ್ತಾಗುತ್ತಿಲ್ಲ. ಹೊರ ದೇಶದಿಂದ ಕರೋನ ವೈರಸ್ ಇರತಕ್ಕಂಥ *techie*ಯೊಬ್ಬರು ಬಂದಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿತ್ತು. ಹಾಗಾಗಿ, ನಾವು ಅಲ್ಲಿಗೆ ಹೋಗಬೇಕೋ, ಬೇಡವೋ ಗೊತ್ತಾಗುತ್ತಿಲ್ಲ. ಅದಕ್ಕೆ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಬೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಒಂದು ದಿನ ಕೂಡ ನನಗೆ ಸದನದಲ್ಲಿ ಮಾತನಾಡಲು ಅವಕಾಶ ಕೊಟ್ಟಿಲ್ಲ.

**ಸಭಾಪತಿಯವರು:–** ನಿಮ್ಮನ್ನು ಮಾತನಾಡಲು ಕರೆದಾಗ ನೀವು ಎದ್ದು ನಿಂತು ಮಾತನಾಡಲಿಲ್ಲ. ನಾನು ಮೊದಲು ನಿಮ್ಮ ಹೆಸರನ್ನೇ ಕರೆದಿದ್ದೇನೆ.

**ಶ್ರೀ ಟಿ.ಎ.ಶರವಣ:–** ಅವರು ಗೌರವಾನ್ವಿತ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುತ್ತೇನೆ ಎಂದು ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡಿದರು.

**ಸಭಾಪತಿಯವರು:–** ಆಯಿತು, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಸರ್ಕಾರ *suomoto* ವಿಚಾರವನ್ನು ಮನಗಂಡು, ಬಹಳ ಗಂಭೀರವಾಗಿ ಪರಿಗಣಿಸಿ, ಈಗಾಗಲೇ ಸಂಪೂರ್ಣವಾದ ವರದಿಯನ್ನು ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಸವಿಸ್ತಾರವಾಗಿ ನಮ್ಮ ಮುಂದೆ ಓದಿದ್ದಾರೆ. ಇದರಲ್ಲಿ ಬಹಳ ಮುಖ್ಯವಾಗಿರತಕ್ಕಂಥ ಅಂಶವೆಂದರೆ, *public awareness* ಅನ್ನು *create* ಮಾಡತಕ್ಕಂಥದ್ದು. ಮತ್ತೆ ಇಂತಹ ಮುಂಜಾಗ್ರತಾ ಕ್ರಮಗಳನ್ನು ನಾವಾಗಿಯೇ ಇದನ್ನು ಯಾವ ರೀತಿ ಕರೋನ ವೈರಸ್‌ನಿಂದ ರಕ್ಷಣೆ ಪಡೆದುಕೊಳ್ಳಬಹುದು ಎನ್ನತಕ್ಕಂಥ ವಿಚಾರದಲ್ಲಿ, ಬಹಳ ಮುಖ್ಯವಾಗಿ ಸರ್ಕಾರ ಅಥವಾ ಸರ್ಕಾರದ *machinery* ಸಾರ್ವಜನಿಕರಿಗೆ ತಿಳಿಸಬೇಕಾಗುತ್ತದೆ. ಇವತ್ತು ನಮ್ಮ ಮಕ್ಕಳು ಪಿ.ಯು.ಸಿ ಪರೀಕ್ಷೆ ಬರೆಯುತ್ತಿದ್ದಾರೆ. ನಾನು ಯಾವುದೋ ಒಂದು ಪೇಪರ್‌ನಲ್ಲಿ ವರದಿಯಾಗಿರುವುದನ್ನು ಓದಿದೆನು. ಆ ಪರೀಕ್ಷಾ ಕೇಂದ್ರದ ಕೊಠಡಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕೂಡ ಇಲ್ಲ. ಅಂತಹ ಪರಿಸ್ಥಿತಿ ಇದೆ. ವಿದ್ಯಾರ್ಥಿಗಳಿಗೆ ಶೌಚಾಲಯದ ವ್ಯವಸ್ಥೆ ಇಲ್ಲದೇ ಕಷ್ಟಪಡುತ್ತಿದ್ದಾರೆ. ಹಾಗಾಗಿ, ನಾವು ಶುಚಿತ್ವಕ್ಕೆ ಬಹಳ ಮಹತ್ವವನ್ನು ಕೊಡಬೇಕಾಗಿದೆ. ವಿಶೇಷವಾಗಿ ನಮ್ಮ ಮಕ್ಕಳು ಪರೀಕ್ಷೆ ಬರೆಯುತ್ತಿದ್ದಾರಲ್ಲಾ, ಅವರ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕೆಂದು ಮಾನ್ಯ ಸಚಿವರಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಇನ್ನೊಂದು ವಿಚಾರದ ಬಗ್ಗೆ ಹೇಳುವುದಾದರೆ, 39000 ಜನರು ಈಗಾಗಲೇ ಹೊರದೇಶಗಳಿಂದ ಬಂದಿರತಕ್ಕಂಥವರನ್ನು ನಾವು ತಪಾಸಣೆ ಮಾಡಿದ್ದೇವೆ ಎನ್ನತಕ್ಕಂಥ ವಿಚಾರವನ್ನು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಮಾಹಿತಿ ಪಡೆದುಕೊಂಡು ಹೇಳಿದರು. ಆದರೆ ನಾನು ನಿನ್ನೆ ದಿವಸ ಕೂಡ ಮಂಗಳೂರಿನಿಂದ ಬೆಂಗಳೂರಿಗೆ ಬಂದಿದ್ದೇನೆ. ದಯಮಾಡಿ ಆ ರೀತಿಯ ವ್ಯವಸ್ಥೆ ನಮ್ಮ ಏರ್‌ಪೋರ್ಟ್‌ಗಳಲ್ಲಿ ತಪಾಸಣೆ ಮಾಡುವುದು ಕಾಣಲಿಲ್ಲ. ಹೊರಗಡೆಯಿಂದ ಬಂದಿರತಕ್ಕಂಥವನ್ನು ನೋಡಿದ್ದೇನೆ. 39000 ಜನಗಳನ್ನು ತಪಾಸಣೆ ಮಾಡತಕ್ಕಂಥ *machinery* ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೇ ಆಗಲಿ ಅಥವಾ ಬೆಂಗಳೂರಿನಲ್ಲಿಯೇ ಆಗಲಿ ಇಲ್ಲ. ಮಾನ್ಯ ಸಚಿವರ ಮೇಲೆ ನಾನು ಅನುಮಾನಪಡುತ್ತಿಲ್ಲ. ದಯಮಾಡಿ ತಮಗೆ ಮಾಹಿತಿ ಸಿಕ್ಕಿದೆ ಅದರ ಆಧಾರದ ಮೇಲೆ ಅವರು ಹೇಳಿದ್ದಾರೆ. ದಯಮಾಡಿ ಹೊರದೇಶಗಳಿಂದ ಬರತಕ್ಕಂಥವರನ್ನು ಕಂಡಿತವಾಗಿ ತಪಾಸಣೆ ಮಾಡುತ್ತಿದ್ದೇವೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದಾರೆ. ಇದರ ಜೊತೆಗೆ ಖಾಸಗಿ ವೈದ್ಯರುಗಳು ಇದ್ದಾರೆ, ಈಗಾಗಲೇ *post-graduation* ನಲ್ಲಿ ಇರತಕ್ಕಂಥ ವೈದ್ಯರುಗಳು ಹಾಗೂ ತಪಾಸಣಾ *machinery* ಗಳನ್ನೆಲ್ಲಾ ತಾವು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಕರೋನ ವೈರಸ್ ಬಗ್ಗೆ ವೈದ್ಯಕೀಯ ಶಿಕ್ಷಣ ಸಚಿವರು ವಿವರವಾಗಿರತಕ್ಕಂಥ ವಿವರಣೆಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಕರ್ನಾಟಕ ಅತಿ ಹೆಚ್ಚು ವೈದ್ಯಕೀಯ ಮಹಾವಿದ್ಯಾಲಯಗಳನ್ನು ಮತ್ತು ಆಸ್ಪತ್ರೆಗಳನ್ನು ಹೊಂದಿರತಕ್ಕಂಥ ರಾಜ್ಯವಾಗಿದೆ. ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳನ್ನು ಕೂಡ *the Government has to involve them.* ಅಂದರೆ ಖಾಸಗಿ ಎಲ್ಲಾ ವೈದ್ಯಕೀಯ ಮಹಾವಿದ್ಯಾಲಯಗಳನ್ನು *postgraduate and undergraduate* ನಲ್ಲಿ ಇರತಕ್ಕಂಥ ವೈದ್ಯರನ್ನು *involve* ಮಾಡತಕ್ಕಂಥ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಜವಾಬ್ದಾರಿ ಸರ್ಕಾರದ ಮೇಲಿದೆ ಎನ್ನತಕ್ಕಂಥ ಮಾತನ್ನು ಸಹಿತ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇವತ್ತಿನ ದಿವಸ ಕರೋನ ವೈರಸ್‌ನಿಂದ ನಮ್ಮ ರಾಜ್ಯದ ಜನತೆ ಏನು ಆತಂಕದಲ್ಲಿದ್ದಾರೆ, ಅದಕ್ಕಾಗಿ ಇಡೀ *team* ಕಾರ್ಯ ಪ್ರವೃತ್ತರಾಗಬೇಕಾಗುತ್ತದೆ. ಬರೀ ಸರ್ಕಾರದಿಂದ ಮಾತ್ರ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದಲ್ಲದೇ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳು ಮತ್ತು ವೈದ್ಯರನ್ನು *involve* ಮಾಡತಕ್ಕಂಥ ಅವಶ್ಯಕತೆ ಇದೆ. ಇದರ ಜೊತೆಗೆ ಎನ್.ಜಿ.ಓ..,ಗಳನ್ನು ಕೂಡ ಇದರಲ್ಲಿ *involve* ಮಾಡತಕ್ಕಂಥ ಅವಶ್ಯಕತೆ ಇದೆ. ಏಕೆಂದರೆ, *it is an epidemic.* ನಾಳೆ ದಿವಸ *burst* ಆದ ನಂತರ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ಈಗಲೇ ಅದಕ್ಕೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲು ಹೆಚ್ಚು ಆದ್ಯತೆಯನ್ನು ಕೊಡಬೇಕಾಗಿದೆ. *Indian Medical Association* ಇರಬಹುದು, *Medical Council of India* ಇರಬಹುದು ಇವರೆಲ್ಲರನ್ನು ಸಹ ಇದರಲ್ಲಿ *involve* ಮಾಡಬೇಕು ಎನ್ನತಕ್ಕಂಥ ವಿನಂತಿಯನ್ನು ಮಾಡುತ್ತಿದ್ದೇನೆ. ಮಾನ್ಯ ಎಸ್.ಎಲ್.ಬೋಜೇಗೌಡರವರು ಹೇಳಿದಂತೆ, *manpower* ಅನ್ನು ಬಳಸಿಕೊಳ್ಳಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ನಾಲ್ಕು ಜನ ಸರ್ಕಾರಿ ವೈದ್ಯರು ಮುಂಜಾಗ್ರತಾ ಕ್ರಮ ವಹಿಸಿದರೆ ಆಗುವುದಿಲ್ಲ. ದಯವಿಟ್ಟು ರಾಜ್ಯದ ವೈದ್ಯಕೀಯ ವ್ಯವಸ್ಥೆಯಲ್ಲಿ ಬರತಕ್ಕಂಥ ಎಲ್ಲರೂ ಮುಂಜಾಗ್ರತಾ ಕ್ರಮ ವಹಿಸಬೇಕು. ಅದು ಖಾಸಗಿ ಇರಬಹುದು ಅಥವಾ ಬೇರೆ ಯಾರೇ ಇರಬಹುದು. ಅವರೆಲ್ಲರನ್ನೂ ಇದರಲ್ಲಿ *involve* ಮಾಡತಕ್ಕಂಥ ಜವಾಬ್ದಾರಿ ಇದೆ. *As a government,* ಎಲ್ಲರನ್ನೂ ಇದರಲ್ಲಿ ಕೈಜೋಡಿಸತಕ್ಕಂಥ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕೆಂದು ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದೇನೆ. ವಿದೇಶಿ ಪ್ರವಾಸಿಗರ *screening* ಮಾಡಬೇಕು. ಇದು ಬಹಳ ಮುಖ್ಯವಾಗಿರತಕ್ಕಂಥ ಕೆಲಸ ಆಗಬೇಕಿದೆ. *Because we don't know how many people are coming to the State with a different modus operandi?* ಇವತ್ತಿನ ದಿವಸ ಗೋವಾದಿಂದ ಬಂದಿರತಕ್ಕಂಥ ಪ್ರವಾಸಿಗರು ಇರಬಹುದು. ಗೋವಾ ಸಮೀಪ ಇರತಕ್ಕಂಥ ರಾಜ್ಯವೆಂದರೆ ಕರ್ನಾಟಕ. ಇದರ ಜೊತೆಗೆ ಬೇರೆ ಬೇರೆ ಕಡೆಗಳಿಂದ ವಿಮಾನಗಳ ಮೂಲಕ ಅಥವಾ ಬೇರೆ ಬೇರೆ *transport mode* ಗಳಿಂದ ಅವರು ನಮ್ಮ ರಾಜ್ಯಕ್ಕೆ ಬರತಕ್ಕಂಥ ಸಂದರ್ಭದಲ್ಲಿ ಇದನ್ನು ಸಹಿತ *monitor* ಮಾಡಬೇಕು ಮತ್ತು *screening* ಮಾಡತಕ್ಕಂಥ ಕೆಲಸ ಆಗಬೇಕಾಗಿರುವುದು ಬಹಳ ಮುಖ್ಯವಾಗಿದೆ. ಇದಕ್ಕೆ ಆದ್ಯತೆಯನ್ನು ಕೊಡತಕ್ಕಂಥ ವಿನಂತಿಯನ್ನು ತಮ್ಮ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರವುದಕ್ಕೆ ಬಯಸುತ್ತಿದ್ದೇನೆ. ಧನ್ಯವಾದಗಳು.

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಏನು ಸರ್ಕಾರ ಹೇಳಿಕೆ ಕೊಟ್ಟಿದೆ. ಆದರೆ, ಈ ಕರೋನ ವೈರಸ್‌ನಿಂದ ಕಾಯಿಲೆ ಬಂದರೆ, ಬದುಕುವುದಿಲ್ಲ, ಎನ್ನುವುದು ಒಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರ. ಮತ್ತೆ ಇದಕ್ಕೆ ಔಷಧಿ ಕೂಡ ಇನ್ನೂ ಕಂಡುಹಿಡಿದಿಲ್ಲ. ಎನ್ನುವುದು ಮತ್ತೊಂದು ವಿಚಾರವಾಗಿದೆ. ಹಾಗಾಗಿ, ಈಗಾಗಲೇ ನಿನ್ನೆ ಕೂಡ ವಿಶ್ವಸಂಸ್ಥೆ ಈ ವೈರಸ್ ಅನ್ನು ಸಂಶೋಧನೆ ಮಾಡುವುದಕ್ಕೆ ಹಣವನ್ನು ಬಿಡುಗಡೆ ಮಾಡಿದೆ. ಹಾಗಾಗಿ, ಬರೀ ಹೇಳಿಕೆ ಕೊಡುವುದರಿಂದ ಏನೂ ಪ್ರಯೋಜನವಿಲ್ಲ. ದಯಮಾಡಿ ಇದಕ್ಕೆ ಸೂಕ್ತವಾದಂತಹ ಕ್ರಮ ತೆಗೆದುಕೊಳ್ಳಬೇಕು. ನನಗೆ ಪದೇ ಪದೇ ಸೀನು ಬರುತ್ತದೆ. ನಾನು ಸೀನುವುದಕ್ಕೆ ಭಯ ಆಗುತ್ತದೆ.

(ಮುಂದು..)

(139)4.3.2020/1.00/ಎಂ.ಎಂ–ಆರ್.ಎಸ್

**ಶ್ರೀ ಆರ್. ಧರ್ಮಸೇನ(ಮುಂದು)**

ಬಹಳ ಕಷ್ಟ ಪಡುವ; ಬಹಳ ಜನ allergic ಇರುತ್ತಾರೆ. 'ಕೊರೋನಾ' ಬಂದೇ ಸೀನಬೇಕೆಂತಲ್ಲ. ಹಾಗಾಗಿ ಸರ್ಕಾರ ಇದರ ಬಗ್ಗೆ ಕೇವಲ ಸ್ಟೇಟ್‌ಮೆಂಟ್ ಮಾಡಿದರೆ ಸಾಲುವುದಿಲ್ಲ, ಅತಿ ಹೆಚ್ಚಿನ ಜವಾಬ್ದಾರಿ ಹೊರಬೇಕೆಂದು ಹೇಳಬಯಸುತ್ತೇನೆ.

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕೋಸ್ಕರ ವಂದಿಸುತ್ತಾ, actually ನಿನ್ನೆ ದಿವಸ ನಾನು ಸರ್ಕಾರದ ಗಮನ ಸೆಳೆಯಬೇಕು ಎನ್ನುವುದಕ್ಕೋಸ್ಕರ ಮಾಸ್ಕ್ ಹಾಕಿಕೊಂಡು ಬಂದೆ. ಬಹಳ ಜನರು ನನ್ನನ್ನು 'ನಿಮಗೇನು ಕರೋನಾ ಬಂದಿದೆಯಾ', ಮಾಸ್ಕ್ ಹಾಕಿಕೊಂಡು ಬಂದಿದ್ದೀರಾ? ಎಂದು ಪ್ರಶ್ನೆ ಮಾಡಿದರು. ಕೆಲವರು ನನಗೆ ಫೋನ್ ಮಾಡಿ ಕೇಳಿದರು ಹಾಗೂ ಮಾನ್ಯ ಸದಸ್ಯರುಗಳು ಕೂಡ ನನಗೆ ರೇಗಿಸಿದರು. ಆದರೂ ಕೂಡ ನಿನ್ನೆ ಸರ್ಕಾರಕ್ಕೆ ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಯಾರಿಗೆ 'ಕರೋನಾ' ಬಂದರೂ ಇವರಿಗೆ ಬರುವುದಿಲ್ಲ.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರ ಆರೋಗ್ಯ ಪರೀಕ್ಷೆ ಆಗಲೇಬೇಕು. ಅನುಮಾನ ನಿವಾರಣೆ ಆಗಬೇಕಾದರೆ ಆರೋಗ್ಯ ಪರೀಕ್ಷೆ ಆಗಲೇಬೇಕು.

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ನಾವು ಆರೋಗ್ಯವಾಗಿದ್ದೇವೆ, ಅದೇನೂ ಸಮಸ್ಯೆ ಇಲ್ಲ. ಮಾನ್ಯ ಸದಸ್ಯರು ಕುಳಿತುಕೊಳ್ಳಲಿ. ಈಗ ನಾನು ಹೇಳುತ್ತಿರುವುದು ಇಷ್ಟೇ. ಮಾಸ್ಕ್ ಹಾಕಿಕೊಂಡು ಬಂದಿರುವ ಉದ್ದೇಶ ಸರ್ಕಾರದ ಗಮನ ಸೆಳೆಯಬೇಕು, 'ಕರೋನಾ' ವೈರಸ್ ಬಗ್ಗೆ ಜಾಗೃತಿ ಮೂಡಿಸಬೇಕು; ಇಡೀ ರಾಜ್ಯದ ಜನರು ಆತಂಕದಲ್ಲಿದ್ದಾರೆ, ಅದರ ಕಡೆ ಏನೇನು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ನಿಮ್ಮ ಗಮನ ಸೆಳೆಯಬೇಕೆನ್ನುವುದಕ್ಕೋಸ್ಕರ ನಾನು ಮಾಸ್ಕ್ ಹಾಕಿಕೊಂಡು ಬಂದಿದ್ದೇನೆ. ಆದರೆ ಯಾವುದಕ್ಕೂ ಕೂಡ ಆ ಟಾಪಿಕ್

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅನ್ನು raise ಮಾಡುವುದಕ್ಕೆ ನನಗೆ ಅವಕಾಶ ಸಿಕ್ಕಿಲ್ಲ. ನಮ್ಮನ್ನೆಲ್ಲಾ ಬಾವಿಗೆ ಕಳುಹಿಸಿಬಿಟ್ಟು ಕಲಾಪವನ್ನು ನುಂಗಿಬಿಟ್ಟರು. ಅದು ಒಂದು ಕಡೆ ಇರಲಿ. ನಾನು ಹೇಳುತ್ತಿರುವುದು ಇವತ್ತು ನಮ್ಮ ನೂತನ ಸಚಿವರು ತುಂಬಾ ಚೆನ್ನಾಗಿ ಹೇಳಿಕೆ ಕೊಟ್ಟಿದ್ದಾರೆ. ಆ ಹೇಳಿಕೆ ನೀಡುವುದಷ್ಟೇ ಅಲ್ಲದೇ, ಅದು ಕೇವಲ ಪೇಪರ್‌ನಲ್ಲಿದ್ದರಷ್ಟೇ ಸಾಲದು; ಆಗಲೇ ಮಾನ್ಯ ಸದಸ್ಯರಾದ ಭೋಜೇಗೌಡರು ಏರ್‌ಪೋರ್ಟ್‌ನಲ್ಲಿ ಯಾವ ರೀತಿಯ ಪರಿಸ್ಥಿತಿ ಇದೆ ಎಂಬ ಬಗ್ಗೆ ಹೇಳಿದರು. ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಬೇರೆ ದೇಶಗಳಿಂದ ಆಗಮಿಸುತ್ತಿರುವ ಸುಮಾರು 39,000 ಪ್ರಯಾಣಿಕರನ್ನು ತಪಾಸಣೆಗೊಳಪಡಿಸಲಾಗಿದೆ ಎಂದು ಹೇಳಿದಿರಿ. ಆದರೆ ತಪಾಸಣೆ ಮಾಡುವುದಕ್ಕೆ ಏನೇನು ವ್ಯವಸ್ಥೆಗಳು ಬೇಕೋ ಅದು ಸರಿಯಾದ ರೀತಿಯಲ್ಲಿ ಇಲ್ಲ. ಏಕೆಂದರೆ ನಿನ್ನೆ ನಾನು ಕೂಡ ನೋಡಿದ್ದೇನೆ. ಆದ್ದರಿಂದ ಇವತ್ತು ಶಾಲಾ ಕಾಲೇಜುಗಳಿರಬಹುದು, ವಿದೇಶದಿಂದ ಬರುವಂತಹ ವಿದೇಶೀಯರಿರಬಹುದು, ನಮ್ಮ ದೇಶದ ಬಹಳ ಜನರು ಪ್ರವಾಸ ಹೋಗಿದ್ದು, ಅವರೆಲ್ಲಾ ವಾಪಸ್ ಬರುತ್ತಿದ್ದಾರೆ. ರೈಲ್ವೆ ಸ್ಟೇಷನ್ ಇರಬಹುದು, ಎಲ್ಲೆಲ್ಲಿ ಜನಜಂಗುಳಿ ಇದೆಯೋ, ಬೇರೆ ಕಡೆಯಿಂದ ಯಾರ್ಯಾರು ಪ್ರಯಾಣ ಮಾಡಿ ಬರುತ್ತಿದ್ದಾರೋ ಅಥವಾ ಹೋಗುತ್ತಿದ್ದಾರೋ ಅವರನ್ನು ಸಮಗ್ರ ತಪಾಸಣೆಗೆ ಒಳಪಡಿಸಬೇಕು.

ಇವತ್ತು ಸೋಷಿಯಲ್ ಮೀಡಿಯಾ ಏನಿದೆ ಅದರಲ್ಲಿ ಬಹಳಷ್ಟು negative message ಬರುತ್ತಿವೆ. ಪೊಲೀಸ್ ಇಲಾಖೆಯಲ್ಲಿ ಕ್ರೈಂ ಬ್ರ್ಯಾಂಚ್ ಇದೆ. ಅದು ಕೂಡ ಗಮನ ಹರಿಸಬೇಕು, ಅದನ್ನು ತಡೆಗಟ್ಟಬೇಕು. ಸೋಷಿಯಲ್ ಮೀಡಿಯಾ ಬಹಳ ಬಲವಾಗಿದೆ. ಅಂಗೈಯಲ್ಲಿಯೇ ಪ್ರಪಂಚವನ್ನು ನೋಡುವ ವ್ಯವಸ್ಥೆ ನಮ್ಮ ಮೊಬೈಲ್ ಫೋನ್‌ನಲ್ಲಿದೆ. ಅದರಿಂದ ದೇಶದ ವಿಚಾರ ಎಲ್ಲಾ ಕೂಡ ಮೊಬೈಲ್ ಮೂಲಕ ಎಲ್ಲರ ಮನ ಮುಟ್ಟುವಂತಹ, ಅದನ್ನು ನೋಡುವಂತಹ ವ್ಯವಸ್ಥೆ ಇರುವುದರಿಂದ ಮಾಧ್ಯಮಗಳಲ್ಲಿ ಅದು ಪತ್ರಿಕೆ ಇರಬಹುದು, ಎಫ್.ಎಂ. ರೇಡಿಯೋ ಇರಬಹುದು ಮತ್ತು ದೂರದರ್ಶನ ಕಾರ್ಯಕ್ರಮಗಳ ಮೂಲಕ ಸಹ ಪ್ರಚುರಪಡಿಸಬಹುದು. ಕರಪತ್ರಗಳ ಹಂಚಿಕೆ ಮತ್ತು ಬಸ್ಸುಗಳ ಹಿಂದೆ ಜಾಗೃತಿ ಮೂಡಿಸುವಂತಹ ಬರಹಗಳನ್ನು ಬರೆಸುವುದಿರಬಹುದು, ಎಲ್ಲಾ ರೀತಿಯಲ್ಲಿ ಜನರಿಗೆ ಬಂದಿರುವಂತಹ ಆತಂಕವನ್ನು ಹೋಗಲಾಡಿಸಬೇಕು ಮತ್ತು ಸರ್ಕಾರದ ವತಿಯಿಂದ ಅದಕ್ಕೆ ಏನು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲಾಗುತ್ತಿದೆ ಅದನ್ನು ಕೂಡ ಆಸ್ಪತ್ರೆಗಳಿಗೆ ವಾರಕ್ಕೆ ಒಂದೆರಡು ಸಲ ತಾವು ಭೇಟಿ ನೀಡಬೇಕು, ಎಲ್ಲಾ ಜಿಲ್ಲೆಗಳಿಗೂ ಹೋಗಬೇಕು, ಅಲ್ಲಿ ಏನು ನಡೆಯುತ್ತಿದೆ, ಏನು ವ್ಯವಸ್ಥೆ ಮಾಡಿದ್ದಾರೆ ಎಂದು ಡಿ.ಹೆಚ್.ಓ. ರವರ ಜೊತೆ ಮಾತನಾಡಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿ ಜನರ ಆತಂಕವನ್ನು ಹೋಗಲಾಡಿಸುವಂತಹ ಕೆಲಸವನ್ನು ನೀವು ಮಾಡಬೇಕು.

ಮಾನ್ಯ ಧರ್ಮಸೇನರವರು 'ಕೆಮ್ಮಿದರೆ, ಸೀನಿದರೆ ತೊಂದರೆಯಾಗುತ್ತದೆ ಎಂಬ ಆತಂಕವಾಗುತ್ತದೆ' ಎಂದು ಹೇಳಿದರು. ಅವರಿಗೇ ಆತಂಕ ಇದೆ. ಆಗಲೇ ನಮ್ಮ ಮಾನ್ಯ ಸದಸ್ಯರಾದ ಅರುಣ್ ಶಹಾಪುರರವರು ಹೇಳಿದರು, ಅವರ ಹೆಂಡತಿ ಊರಿನಿಂದ ಫೋನ್ ಮಾಡಿದರು, 'ತಮಗೆ ಭಯವಾಗುತ್ತಿದೆ, ಏನು ಮಾಡುತ್ತಿದ್ದೀರ' ಎಂದು

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇಳಿದರಂತೆ. ಬೆಂಗಳೂರು ಬಿಟ್ಟು ಅವರ ಊರಿಗೆ ಬಂದುಬಿಡುವಂತೆ ಹೇಳಿದರು. ಆ ರೀತಿ ಆತಂಕ ಸಹಜವಾಗಿ ಎಲ್ಲರಿಗೂ ಬರುವುದಾಗಿದೆ. ಸರ್ಕಾರ ಆರ್ಥಿಕವಾಗಿ ಇದ್ದರೆ ಸಾಲದು, ಈ ರಾಜ್ಯದ ಜನರು ಆರೋಗ್ಯವಾಗಿ ಇರಬೇಕೆಂದರೆ, ನೀವು ಈ ಕ್ರಮಗಳನ್ನೆಲ್ಲಾ ತೆಗೆದುಕೊಳ್ಳಬೇಕೆಂದು ಮಾನ್ಯ ಸಭಾಪತಿಯವರ ಮೂಲಕ ಮನವಿ ಮಾಡುತ್ತೇನೆ.

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು 'Prevention is better than cure' ಎಂದು ಹೇಳುತ್ತಿದ್ದರು. ಅದು ಬಹಳ ಒಳ್ಳೆಯ proverb ಆಗಿದೆ. 'ಕರೋನಾ' ವೈರಸ್ ಎಲ್ಲರಲ್ಲಿಯೂ ಆತಂಕ ಮೂಡಿಸಿದೆ. ಆ ವಿಚಾರದಲ್ಲಿ ವಿರೋಧ ಪಕ್ಷ, ಆಡಳಿತ ಪಕ್ಷ ಎಂದು ಯಾರಿಗೂ ಭೇದಭಾವ ಇಲ್ಲ. ತಾವು ಈ ಕಡೆಯವರಿಗೆ ಆತಂಕ ಜಾಸ್ತಿ ಇದೆಯೆಂದು ಹೇಳಿದಿರಿ. 'ಕರೋನಾ' ಬಗ್ಗೆ ಎಲ್ಲರಿಗೂ ಆತಂಕ ಇದೆ. ನಮ್ಮ ವೈದ್ಯಕೀಯ ಶಿಕ್ಷಣ ಸಚಿವರು ಅದರ ಬಗ್ಗೆ ಸವಿಸ್ತಾರವಾಗಿ ಹೇಳುವ ಮೂಲಕ ದುಗುಡತೆಯನ್ನು ಮತ್ತು ಆತಂಕವನ್ನು ಸ್ವಲ್ಪಮಟ್ಟಿಗೆ ಕ್ಲಿಯರ್ ಮಾಡಿದ್ದಾರೆ. ಎಲ್ಲರೂ ಕೂಡ 'ಕರೋನಾ' ಬಗ್ಗೆ ಒಳ್ಳೊಳ್ಳೆ ಮಾತುಗಳನ್ನು ಕೂಡ ಹೇಳಿದ್ದಾರೆ. ಅದರಲ್ಲಿ ವಿಶೇಷವಾಗಿ ಮಾನ್ಯ ಸದಸ್ಯರಾದ ರಮೇಶ್‌ರವರು ಒಂದು ಮಾತನ್ನು ಹೇಳಿದರು. ಇದಕ್ಕೇನಾದರೂ precautionary measures ಇದೆಯೇ ಎಂದು ಕೇಳಿದರು. ಅದರ ಬಗ್ಗೆ ಬಹಳ ತೀಕ್ಷ್ಣವಾಗಿ ಗಮನಹರಿಸಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡರೆ ಈ ಆತಂಕ ದುಗುಡಕ್ಕೆಲ್ಲಾ ಒಂದು ಕೊನೆಯಾಗುತ್ತದೆ. ಮಾಧ್ಯಮ ಸ್ನೇಹಿತರು ಮಾಧ್ಯಮದಲ್ಲಿ ಇದರ ಲಕ್ಷಣಗಳೇನು, ಇದನ್ನು ತಡೆಯುವುದು ಹೇಗೆ ಎಂದು ಪ್ರಸಾರ ಮಾಡುತ್ತಿದ್ದಾರೆ. ಅದರಲ್ಲಿ ಒಬ್ಬರನ್ನೊಬ್ಬರು ಸ್ಪರ್ಶ ಮಾಡಬಾರದು ಮತ್ತು ಹಸ್ತಲಾಘವ ಮಾಡಬಾರದು ಎಂದು ಸೂಚನೆ ನೀಡಲಾಗುತ್ತಿದೆ. ಮೊನ್ನೆ ದಿವಸ ನಾನು ಊರಿಗೆ ಹೋದಾಗ;

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಚಿವರೇ, ಒಂದು ನಿಮಿಷ; ತಾವು ಸ್ಪರ್ಶ ಮಾಡಬಾರದು ಎಂದು ಹೇಳಿದಿರಿ. ನಿನ್ನೆ ಮಾನ್ಯ ಕವಟಗಿಮಠರವರು ಮತ್ತು ನಿಮ್ಮ ಛೇರ್ಮನ್ ಆದ ಮಾನ್ಯ ಪ್ರಭಾಕರ ಕೋರೆಯವರು ನಮ್ಮನ್ನು ಭೇಟಿಯಾದರು. ಅವರಿಗೆ ನಾನು ಕೇವಲ ಹಸ್ತಲಾಘವ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರು ನಿಮ್ಮ ಜೊತೆ ಹಸ್ತಲಾಘವ ಮಾಡುವುದಿಲ್ಲ ಎಂದರು. ಏಕೆಂದು ಕೇಳಿದರೆ, 'ಕರೋನಾ' ಬಂದರೆ ಏನು ಮಾಡಲಿ, ಹಸ್ತಲಾಘವ ಮಾಡುವುದು ಬೇಡ ಎಂದು ಹೇಳಿದರು. ಆಗ ಇನ್ನಷ್ಟು ಆತಂಕ ಹೆಚ್ಚಾಯಿತು.

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಈಗ ಅದನ್ನೇ ಹೇಳುವುದಕ್ಕೆ ಹೊರಟಿದ್ದೇನೆ. ಮೊನ್ನೆ ದಿನ ಭಾನುವಾರ ನಮ್ಮ ಕ್ಷೇತ್ರಕ್ಕೆ ಹೋಗಿದ್ದೆನು. ಈಗ ನಾನು ಮಂತ್ರಿಯಾಗಿರುವುದರಿಂದ ಕೈ ಕೊಡಬೇಕೆಂದು ಜನರೆಲ್ಲಾ ಹಸ್ತಲಾಘವ ಮಾಡುವುದಕ್ಕೆ ಬಂದಿದ್ದರು. ಆಗ ನಾನು ಹಸ್ತಲಾಘವ ಮಾಡುವುದು ಬೇಡವೆಂದು ಎಲ್ಲರಿಗೂ ಕೈ ಮುಗಿದೆ. ಆದರೆ 'ಮಂತ್ರಿಯಾಗಿರುವುದರಿಂದ ಇವರಿಗೆ ಬಹಳ ಸೊಕ್ಕು ಬಂದಿದೆ' ಎಂದು ಜನರು ತಿಳಿದುಕೊಳ್ಳುತ್ತಾರೆ. ಆದರೆ ನನ್ನ ಪರಿಸ್ಥಿತಿ ಏನೆಂದರೆ, 'ಕರೋನಾ' ವೈರಾಣುಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಬ್ಬರಿಂದ ಒಬ್ಬರಿಗೆ ಬಹಳ ಬೇಗ ಹರಡುತ್ತವೆಯಂತೆ ಎಂದು ಹೇಳುವ ಹಾಗಿಲ್ಲ. ಕೊನೆಗೆ ನಾನು 'ಇಲ್ಲಪ್ಪಾ ನಾನು ಈಗ ಕೈ ಪಕ್ಷವನ್ನು ಬಿಟ್ಟುಬಿಟ್ಟಿದ್ದೇನೆ, ಆದ್ದರಿಂದ ನಾನು ಯಾರಿಗೂ ಕೈ ಕೊಡುವುದಿಲ್ಲ' ಎಂದು ಹೇಳಿದೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಚಿವರೇ, 'ಕೈ ಪಕ್ಷಕ್ಕೆ ಕೈ ಕೊಟ್ಟು ಹೋದೆ' ಎಂದು ಹೇಳಿ.

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):–** ಮಾನ್ಯ ನಾರಾಯಣಸ್ವಾಮಿಯವರೇ, ನಾನು ಕೈ ಕೊಟ್ಟಿಲ್ಲ, ರಾಜೀನಾಮೆ ಕೊಟ್ಟು, ಜನಾದೇಶ ಪಡೆದು ಬಂದಿದ್ದೇನೆ. ಅದನ್ನು ಅರ್ಥ ಮಾಡಿಕೊಳ್ಳಿ. ಆ ಮಾತು ಬೇರೆ.

**ಡಾ: ತೇಜಸ್ವಿನಿ ಗೌಡ:–** ಕೈ ಬಿಟ್ಟವರು ಏಕೆ ಕೈ ಕೊಡುವುದರ ಬಗ್ಗೆ ಮಾತನಾಡಬೇಕು?

**ಶ್ರೀ ಎಂ.ನಾರಾಯಣಸ್ವಾಮಿ:–** ನಾವು ಕೈ ಬಿಡಲಿಲ್ಲ, ಆಪರೇಷನ್ ಕಮಲ!

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಮುನ್ನೆಚ್ಚರಿಕೆ ಏನಿದೆ; ನೀವು ಹೇಗೆ ಕೈ ಕೊಟ್ಟಿರಿ ಎಂಬುದನ್ನು ಅರ್ಥ ಮಾಡಿಕೊಳ್ಳಿ. ನೀವು ಯಾರ್‍ಯಾರಿಗೆ ಹೇಗೆ ಕೈ ಕೊಟ್ಟಿರಿ ಎಂಬುದನ್ನು ಅರ್ಥ ಮಾಡಿಕೊಳ್ಳಿ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಚಿವರು ಗಂಭೀರವಾದ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೇ, ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಶ್ರೀ ಪ್ರಭಾಕರ ಕೋರೆಯವರು ಬಂದಿದ್ದರು, ಈ ರೀತಿ ಆಯಿತು ಎಂದು ಹೇಳಿದರು. ಇದು ಬಹಳ ಸೂಕ್ಷ್ಮವಾದ ವಿಚಾರವಾಗಿದೆ. ಇಂದು ಬೆಳಗ್ಗೆ ಬರುವಾಗ ಕೂಡ ಬಹಳ ಜನರು ನನಗೆ ಕೈ ಕೊಡುವುದಕ್ಕೆ ಬಂದರು. ಅವರೆಲ್ಲರ ಭಾವನೆಗಳು ಹೇಗಿರುತ್ತವೆ ಎಂದರೆ, 'ಈಗ ಮಂತ್ರಿಯಾಗಿಬಿಟ್ಟ; ಹಿಂದೆ ಕೈ ಕೊಡುತ್ತಿದ್ದರು, ಈಗ ಏಕೋ ಕೊಡುತ್ತಿಲ್ಲವಲ್ಲಾ' ಎಂದು ತಿಳಿದುಕೊಳ್ಳುತ್ತಾರೆ. ಮೊದಲು 'ಕರೋನಾ' ಇರಲಿಲ್ಲ. ಈಗ ಕರೋನಾ ಬಂದಿದೆ. ಇದರ ಬಗ್ಗೆ ತಿಳುವಳಿಕೆ ಮೂಡಿಸುವ ಕೆಲಸವನ್ನು ಬಹಳ ಸವಿಸ್ತಾರವಾಗಿ ಮಾಡಿದರೆ; ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಚಿವರೇ, ಜನರು ನಿಮಗೆ ಎರಡು ರೀತಿಯಲ್ಲಿ ಹೆದರುತ್ತಾರೆ. ಮೊದಲನೆಯದಾಗಿ ತಾವು ಪೊಲೀಸ್ ಇಲಾಖೆಯಲ್ಲಿ ಇದ್ದವರು ಮತ್ತು ಎರಡನೆಯದಾಗಿ ಈಗ ಮಂತ್ರಿಯಾಗಿದ್ದೀರಿ, ದರ್ಪ ಜಾಸ್ತಿಯಾಗಿದೆ ಎಂದು ಹೆದರುತ್ತಾರೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):-** ಮಾನ್ಯ ಬಸವರಾಜ ಹೊರಟ್ಟಿಯವರೇ, ನಾನು ಪೊಲೀಸ್ ಇಲಾಖೆ ಬಿಟ್ಟು ಬಹಳ ವರ್ಷಗಳಾಯಿತು. ಹೆದರಿಕೆಯಲ್ಲ, ಅವರು ಪ್ರೀತಿಯಿಂದ ಕೈ ಹಿಡಿಯುವುದಕ್ಕೆ ಬರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನಮಸ್ಕಾರ ಮಾಡಬೇಡಿ, ಕೈ ಹಿಡಿಯಿರಿ. ಯಾರಿಗೂ ಏನೂ ಆಗುವುದಿಲ್ಲ, ಏನೂ ಬರುವುದಿಲ್ಲ.

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೇ, ಅವರಿಗೆ ನಾನು ರಾಜಕಾರಣಿ ಎನ್ನುವುದಕ್ಕಿಂತ ಹೆಚ್ಚಾಗಿ ಅಥವಾ ಸಚಿವರು ಎಂದು ಕೈ ಹಿಡಿಯುವುದಕ್ಕಿಂತ ಹೆಚ್ಚಾಗಿ ಒಬ್ಬ ಕಲಾವಿದ ಎಂದು ಜಾಸ್ತಿ ಜನರು ಕೈ ಹಿಡಿಯಲು ಬರುತ್ತಾರೆ. ಪಾಪ, ಒಳಗಿನ ಕಷ್ಟಗಳನ್ನು ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಒಂದು ಸವಿಸ್ತಾರವಾದಂತಹ advertise ಮಾಡುವುದರ ಮೂಲಕ ವಿಶೇಷವಾಗಿ ಮಾಧ್ಯಮ ಸ್ನೇಹಿತರು ಇದನ್ನೆಲ್ಲಾ ಮಾಡುತ್ತಾರೆ, ಅದನ್ನು ಇನ್ನೂ ಹೆಚ್ಚು ಹೆಚ್ಚಾಗಿ ಮಾಡಲಿ ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಮಗೇನೂ ಬೇಸರವಿಲ್ಲ. ಈಗ ತಾವು ಎಲ್ಲಿದ್ದರೆ ನಮಗೇನು? ಮುಂಚೆ ನಮ್ಮಲ್ಲಿದ್ದಿರಿ, ನಂತರ ಕಾಂಗ್ರೆಸ್‌ಗೆ ಹೋದಿರಿ. ನಮ್ಮ ಎತ್ತು ಎಲ್ಲಿ ಮೇಯ್ದರೂ ನಮಗೆ ಖುಷಿಯೇ ಆಗುತ್ತದೆ. ಅದಕ್ಕೆ ನೀವು ಅಲ್ಲಿದ್ದರೂ ನಮ್ಮ ತಕರಾರೇನೂ ಇಲ್ಲ.

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):-** ನಿಮ್ಮ ದೊಡ್ಡತನಕ್ಕೆ ನಾವು ಆಭಾರಿಯಾಗಿದ್ದೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನನ್ನದೊಂದು ವಿನಂತಿ ಇದೆ. ಮೊದಲನೆಯದಾಗಿ ಮಾಸ್ಕ್‌ಗಳ ಕೊರತೆ ಇದೆ. ಈಗ ಅದರ ದರವನ್ನು ದುಪ್ಪಟ್ಟು ಮಾಡಿದ್ದಾರೆ ಮತ್ತು ಬ್ಲಾಕ್‌ನಲ್ಲಿ ಮಾರಾಟವಾಗುತ್ತಿದೆ ಎಂದು ಕೇಳಲ್ಪಟ್ಟಿದ್ದೇನೆ. ಇದರ ಬಗ್ಗೆ ಒಂದು ಸ್ಪಷ್ಟನೆ ಏನೆಂದರೆ, ನಿನ್ನೆ ಮಾನ್ಯ ಸದಸ್ಯರಾದ ಶರವಣರವರು ಮಾಸ್ಕ್ ಹಾಕುವುದರ ಮೂಲಕ ಇಡೀ ರಾಜ್ಯಕ್ಕೆ ಶಾಸಕರು ಮಾಸ್ಕ್ ಧರಿಸಿ ಬಂದಿದ್ದಾರೆ ಎಂಬ ಒಂದು awareness create ಆಗಿದೆ. ಮಾನ್ಯ ಶರವಣರವರು ಏನು ಬಯಸಿದ್ದರೋ ಅದೆಲ್ಲಾ ಆಗಿದೆ. ಹಾಗಾಗಿ ಮಾಸ್ಕನ್ನು ತೆಗೆದಿಡಬಹುದಾಗಿದೆ.

**(ಸದನದಲ್ಲಿ ನಗುವಿನ ಅಲೆ ತೇಲಿ ಬಂತು)**

ನಿಮ್ಮ ಉದ್ದೇಶ ಇರುವುದು 'ಕೊರೋನಾ' ಬಗ್ಗೆ awareness create ಮಾಡುವುದಾಗಿದೆ. ಆ ಉದ್ದೇಶ ಈಡೇರಿದೆ ಎಂದು ಹೇಳಿದೆ. ಎರಡನೆಯದಾಗಿ ಈಗ ಮನೆಗಳಿಗೆ, ಯಾವುದಾದರೂ ಸಮಾರಂಭಗಳಿಗೆ ಅಥವಾ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮದುವೆಗಳಿಗೆ ಹೋದರೆ ಕೈ ಮುಗಿದು, 'ನಮಸ್ಕಾರ' ಎನ್ನುತ್ತಾರೆ. 'ನಮಸ್ತೆ ಟ್ರಂಪ್' ಎಂದು ಇತ್ತಲ್ಲಾ ಹಾಗೆ 'ನಮಸ್ತೇ ಕರೋನಾ' ಎಂದು ಹೇಳುವ ಮಟ್ಟಕ್ಕೆ ಬಂದಿದೆ.

**ಶ್ರೀ ಎಂ.ಕೆ. ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ...
**ಸಭಾಪತಿಯವರು:–** ಮಾನ್ಯ ಪ್ರಾಣೇಶ್‌ರವರೇ, ...
**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಬಸವನಗೌಡ ಚನ್ನಬಸವನಗೌಡ ಪಾಟೀಲ್(ಕೃಷಿ ಸಚಿವರು):–** 'ನಮಸ್ತೆ' ಎನ್ನುವುದು ಸ್ವಾಗತದ ಇಂಡಿಕೇಶನ್ ಆಗುತ್ತದೆ.

**(ಗೊಂದಲ)**

**ಶ್ರೀ ಎಂ.ಕೆ. ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತುಂಬಾ ಗಂಭೀರವಾದ ವಿಚಾರ ಚರ್ಚೆಯಾಗುತ್ತಿದೆ. ಇದನ್ನು ಇಡೀ ರಾಜ್ಯದ ಜನರು ನೋಡುತ್ತಿದ್ದಾರೆ. ಇದರ ಮಧ್ಯೆ ಗಂಭೀರವಾದ ವಿಚಾರಗಳನ್ನು ಚರ್ಚೆ ಮಾಡಬೇಕಾದರೆ, ಪರಿಹಾರಗಳನ್ನು ಏನು ಮಾಡಬಹುದು ಎಂದು ಮಂತ್ರಿಯವರು ಚರ್ಚೆ ಮಾಡಬೇಕಾದರೆ ಬೇರೆ ದಾರಿ ಹಿಡಿಯುವುದು ಸೂಕ್ತವಲ್ಲ ಎಂಬುದು ನನ್ನ ಭಾವನೆ. ಇದರ ಬಗ್ಗೆ ಮಾನ್ಯ ಸದಸ್ಯರುಗಳಾದ ಶರವಣರವರು ಮತ್ತು ಐವನ್ ಡಿ'ಸೋಜಾ ರವರು ಉಲ್ಲೇಖ ಮಾಡಿದರು. ಮಾನ್ಯ ಸಚಿವರಲ್ಲಿ ನನ್ನದೊಂದು ವಿನಂತಿ ಎಂದರೆ, ಮಾಸ್ಕ್ ಅನ್ನು ಧರಿಸುವುದರಿಂದ ಇದು ನಿಯಂತ್ರಣಕ್ಕೆ ಬರುವ ಸಾಧ್ಯತೆ ಇದೆಯೇ ಎನ್ನುವುದು ಒಂದು ಮುಖ್ಯವಾದ ಅಂಶವಾಗಿದೆ.

(ಮುಂದು)

(140) 04–03–2020/ 01–10/ ಕೆಹೆಚ್–ಆರ್‌ಎನ್
**ಶ್ರೀ ಪ್ರಾಣೇಶ್ ಎಂ.ಕೆ (ಮುಂದು):**

ಎರಡನೆಯದಾಗಿ, ಮಾಸ್ಕ್‌ಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವುದಕ್ಕೆ ಅವಕಾಶ ಕೊಡಲಾಗುತ್ತದೆಯೇ ಅಥವಾ ಮಾಸ್ಕ್‌ಗಳನ್ನು ಉಚಿತವಾಗಿ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಾರೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕು. ಏಕೆಂದರೆ, ಇದರಿಂದ ಕರೋನಾ ವೈರಸ್ ನಿಯಂತ್ರಣಕ್ಕೆ ಬರುತ್ತದೆ ಎಂದರೆ ಈ ಮಾಸ್ಕ್‌ಗಳನ್ನು ಉಚಿತವಾಗಿ ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆಯಾಗುವುದಿಲ್ಲ. ಆದ್ದರಿಂದ ಈ ಮಾಸ್ಕ್‌ಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇದು ಬಹಳ ಗಂಭೀರವಾದ ವಿಚಾರವಾಗಿದ್ದು, ಪ್ರತಿಯೊಬ್ಬರು ಆರೋಗ್ಯದ ವಿಚಾರವಾಗಿ ಬೇರೆ ಬೇರೆ ಕಡೆಗೆ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆಗಳ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ.

**ಶ್ರೀ ಎನ್.ಅಪ್ಪಾಜಿ ಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದಿಸುತ್ತಾ, ಒಂದು Papers' Editorial ನಲ್ಲಿ ಸುಮಾರು 15 ದಿವಸಗಳ ನಂತರ ವೈರಸ್ ಸೋಂಕು ಹರಡಿದೆ ಎಂಬ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವಿಷಯ ಗೊತ್ತಾಗುತ್ತದೆ ಎಂದು ಪೇಪರ್‌ನಲ್ಲಿ ಬಂದಿರುವ ವಿಷಯವನ್ನು ನಾನು ಓದಿದ್ದೇನೆ. ತಾವು ಕೂಡ ಪೇಪರ್‌ನಲ್ಲಿ ಬಂದಿರುವುದನ್ನು ಓದಿದ್ದೀರಿ ಎಂಬ ಭಾವನೆ ನಮಗೆ ಇದೆ. ಹಾಗಾಗಿ 15 ದಿವಸಗಳು ಆದ ನಂತರ ವೈರಸ್ ಸೋಂಕು ಹರಡಿದೆ ಎಂದು ಗೊತ್ತಾದರೆ 15 ದಿವಸಗಳ ಒಳಗೆ ಗೊತ್ತಾಗುವುದಕ್ಕೆ ಏನಾದರೂ advanced technology ಇದೆಯೇ, ಮೆಡಿಸಿನ್‌ಗಳು ಇದೆಯೇ, ಇದರ ಬಗ್ಗೆ ಸರ್ಕಾರ ಏನಾದರೂ ಯೋಚನೆ ಮಾಡಿದೆಯೇ ಅಥವಾ ಸ್ಪೆಷಲಿಸ್ಟ್ ಡಾಕ್ಟರ್‌ಗಳು ಇದರ ಬಗ್ಗೆ ಏನಾದರೂ ಚಿಂತನೆ ಮಾಡಿದ್ದಾರೆಯೇ ಎಂಬುದರ ಬಗ್ಗೆ ತಿಳಿಸಬೇಕು. ವೈರಸ್ ಸೋಂಕು ಹರಡಿರುವ ಬಗ್ಗೆ 15 ದಿವಸಗಳಾದರೂ ಕೂಡ ಗೊತ್ತಾಗುವುದಿಲ್ಲ. ವೈರಸ್ ಸೋಂಕು ಹರಡಿರುವ ವಿಷಯ ಗೊತ್ತಾದ ನಂತರ ಗುಣಪಡಿಸುವುದಕ್ಕೆ ಕಷ್ಟವಾಗುತ್ತದೆ. ಇದನ್ನು ಯಾವ ರೀತಿಯಲ್ಲಿ ಪರಿಹಾರ ಮಾಡಬಹುದು? ಇದನ್ನು ಹೊಗಲಾಡಿಸುವುದಕ್ಕೆ ಏನಾದರೂ ಅವಕಾಶ ಇದೆಯೇ, precautionary ಹೇಳುತ್ತೇವೆ. 15 ದಿವಸಗಳು ಆದ ಮೇಲೆ ಈ ವಿಷಯಕ್ಕೆ ಸಂಬಂಧ ಇಲ್ಲದೆ ಇದ್ದರೂ ಕೂಡ ಕ್ಯಾನ್ಸರ್ ಕಾಯಿಲೆ ಮೊದಲನೇ ಹಂತವಾದರೆ ಗುಣಪಡಿಸುವುದಕ್ಕೆ ಅವಕಾಶ ಇದೆ. ಈ ಕಾಯಿಲೆ ಎರಡನೇ ಹಂತ ಮತ್ತು ಮೂರನೇ ಹಂತದಲ್ಲಿದ್ದರೆ ಗುಣಪಡಿಸುವುದಕ್ಕೆ ಅವಕಾಶ ಇರುವುದಿಲ್ಲ. ನಮ್ಮ ರಾಜ್ಯದಲ್ಲಿ, ನಮ್ಮ ರಾಷ್ಟ್ರದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಬಹಳ ದೊಡ್ಡ ದೊಡ್ಡ ವೈದ್ಯರುಗಳು ಇದ್ದಾರೆ. ಹಾಗಾಗಿ ಸರ್ಕಾರದಲ್ಲಿ ಮತ್ತು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, 15 ದಿವಸ ಆದ ನಂತರ ವೈರಸ್ ಸೋಂಕು ಹರಡಿರುವುದು ಗೊತ್ತಾದರೆ ಏನು ಉಪಯೋಗವಾಗುವುದಿಲ್ಲ ಎಂಬುದನ್ನು ನಾನು ಕೇಳಿದ್ದೇನೆ ಮತ್ತು ಟೈಮ್ಸ್ ಆಫ್ ಇಂಡಿಯಾ ಪೇಪರ್‌ನಲ್ಲಿ Editorial ಓದಿದ್ದೇನೆ. ಇದರ ಬಗ್ಗೆ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳಬೇಕು.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಬಹಳ ಸೌಜನ್ಯತೆಯಿಂದ, ಕನಿಕರದಿಂದ ಉತ್ತರವನ್ನು ಕೊಟ್ಟಿದ್ದಾರೆ. He has shown his concern how it could be provisionally protected. ವಿಮಾನ ನಿಲ್ದಾಣಗಳಲ್ಲಿ ಈ ಕರೋನಾ ವೈರಸ್ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ವಿಮಾನ ನಿಲ್ದಾಣಗಳಲ್ಲಿ ಪರಿಶೀಲನೆ ಮಾಡುವುದು ಸರಿ. ಆದರೆ ನಮ್ಮ ಭಯವೇನೆಂದರೆ, ನಮ್ಮ ಬಗಲಿನಲ್ಲಿ ಇರುವಂತಹ ರಾಜ್ಯ ಗೋವಾ. ಇಟಲಿಯಿಂದ ನೇರವಾಗಿ ಜನರು ಗೋವಾಕ್ಕೆ ಬರುತ್ತಾರೆ. They don't go via Bengaluru ಅವರನ್ನು ತಪಾಸಣೆ ಮಾಡಿ, ಅಲ್ಲಿ ಏನೇನು ನಡೆದಿದೆ ಪರಿಶೀಲನೆ ಮಾಡಬೇಕು. ರಾಜ್ಯ ಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡಬೇಕು. with all the specialist doctors, especially Ph.D doctors. They should meet every morning and evening and they should also call the local Pharma manufacturers. What is the difference and how they come out? What is the dosage and medicine

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

giving for this in China, Korea and Italy? ಅಲ್ಲಿ ಏನು ಚಿಕಿತ್ಸೆಯನ್ನು ಕೊಡುತ್ತಿದ್ದಾರೆ. ನಮ್ಮಲ್ಲಿ ಏನು ಲಭ್ಯತೆ ಇದೆ, what is the medicine available in our State? ಹೋಲಿಕೆ ಮಾಡಿ, whether the new pharma can produce this new medicine? ಎಂದು ತಕ್ಷಣದಲ್ಲಿಯೇ ಮಾಡಿದರೆ you don't delay your action. ಇದು ಕೇವಲ ಬೆಂಗಳೂರಿನಲ್ಲಿ ಮಾತ್ರ Specialties, Team ಮತ್ತು ಲ್ಯಾಬೋರೇಟರಿ ಮಾಡುತ್ತೇವೆ ಎಂಬುದಲ್ಲ. ಪ್ರತಿ ಜಿಲ್ಲೆಯಲ್ಲಿಯೂ ಕೂಡ ಈ ರೀತಿಯಲ್ಲಿ ಮಾಡಬೇಕೆಂಬ ಸಂಸ್ಥೆ ಬರಬೇಕು. There may be a time where you have to start this laboratories and diagnostic centers at the district level. ನಮ್ಮಲ್ಲಿ epidemic disease ಆದಾಗ ಊರೂ ಊರೂರನ್ನೇ ಬಿಟ್ಟು ಹೋಗುತ್ತಿದ್ದರು ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀಮತಿ ಜಯಮ್ಮ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ಗಮನಕ್ಕೆ ತರುವುದೇನೆಂದರೆ, ಮೊಬೈಲ್ ಮುಖಾಂತರ ಏನಾದರೂ ಕರೋನಾ ವೈರಸ್ ಬರುತ್ತದೆಯೋ ಎಂಬ ಬಗ್ಗೆ ಸರ್ಕಾರವು ಸಂಶೋಧನೆ ಮಾಡಬೇಕು.

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಈಗಾಗಲೇ ಹಿರಿಯ ಸದಸ್ಯರೆಲ್ಲಾ ಈ ಒಂದು ಮಾರಕ ಕರೋನಾ ವೈರಸ್ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ ಮತ್ತು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಈಗಾಗಲೇ ಈ ಒಂದು ಕರೋನಾ ವೈರಸ್ ಬಗ್ಗೆ ವಿಶೇಷವಾಗಿ ಶಾಲೆಗಳಲ್ಲಿ, ಹೆಚ್ಚು ಜನರು ಇರುವಂತಹ ಜಾಗಗಳಲ್ಲಿ ಮತ್ತು ಮದುವೆ ಸಮಾರಂಭಗಳು ಇರಬಹುದು ಹಾಗೂ ಶಾಲಾ–ಕಾಲೇಜುಗಳು ಇರಬಹುದು. ವಿಶೇಷವಾಗಿ ಸರ್ಕಾರಿ ಶಾಲಾ–ಕಾಲೇಜುಗಳಿಗೆ ಮಾನ್ಯ ಸಚಿವರು ಒಮ್ಮೆ ಭೇಟಿ ಕೊಟ್ಟು ಇದರ ಬಗ್ಗೆ ಪರಿಶೀಲನೆ ಮಾಡಬಹುದು. ವಿಶೇಷವಾಗಿ ಸರ್ಕಾರಿ ಶಾಲೆಗಳಲ್ಲಿ ಯಾವುದೇ ಒಂದೇ ಒಂದು ಶೌಚಾಲಯವನ್ನು ತೆಗೆದುಕೊಂಡರೂ ಸಹ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುತ್ತಿಲ್ಲ. ಹಾಗಾಗಿ ಈ ವಿಚಾರವಷ್ಟೇ ಅಲ್ಲ. ವಿದೇಶಗಳಿಗೆ ಹೋದಾಗ ಅಲ್ಲಿನ ಶೌಚಾಲಯಗಳಲ್ಲಿ ನೀರಿನ ವ್ಯವಸ್ಥೆ ಇರುವುದಿಲ್ಲ. ಅಲ್ಲಿ water-jets ಇರುವುದಿಲ್ಲ. ಅದೇ ರೀತಿ ಇವತ್ತಿನ ದಿವಸ Five Star, Six Star and Seven Star ಹೋಟೆಲ್‌ಗಳು ಎಂದು ಹೇಳುತ್ತೇವೆ. ಬೆಂಗಳೂರಿನಲ್ಲಿಯೂ ಸಹ water-jets ಇಲ್ಲ. ಈ ಹೋಟೆಲ್‌ಗಳ ಬಗ್ಗೆಯೂ ಕೂಡ ಆರೋಗ್ಯ ಇಲಾಖೆಯು ಸರಿಯಾದ ನಿರ್ದೇಶನವನ್ನು ಕೊಟ್ಟು, ಆದೇಶವನ್ನು ಮಾಡಬೇಕು ಮತ್ತು ಈ ಹೋಟೆಲ್‌ಗಳನ್ನು ಸಹ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕೆಂದು ಹೇಳಿ, ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆರೋಗ್ಯದ ವಿಚಾರವಾಗಿ ಮಾತನಾಡುವಾಗ ಸ್ವಲ್ಪ ಹೆಚ್ಚು ಅವಕಾಶವನ್ನು ಕೊಡಬೇಕು. ಹೋಟೆಲ್‌ಗಳ ಒಳಗೆ ಅಡಿಗೆಯನ್ನು ಮಾಡುವವರ ಬಗ್ಗೆ ಮತ್ತು ಮನೆಯೊಳಗೆ ಅಡಿಗೆ ಮಾಡುವವರ ಬಗ್ಗೆಯೂ ಸಹ ಆರೋಗ್ಯ ಇಲಾಖೆ ಗಮನವನ್ನು ಕೊಡಬೇಕು. 'Health is Wealth' ಈ ವಿಷಯವನ್ನು ಕೂಡ ಒಂದು ತಮಾಷೆಯಾಗಿ ತೆಗೆದುಕೊಳ್ಳಬಾರದು. ಏಕೆಂದರೆ, ಇದರಲ್ಲಿ ಮಕ್ಕಳ ಭವಿಷ್ಯ ಮತ್ತು ಎಲ್ಲರ ಭವಿಷ್ಯ ಅಡಗಿರುತ್ತದೆ. ಎಲ್ಲಾ ವಿಷಯದಲ್ಲಿಯೂ ತಮಾಷೆ ಮಾಡಬಾರದು. ಈ ಸದನವು ಆಡೋ ಹುಡುಗರ ಸದನವಾಗಿದೆ. ಈ ಸದನವು ಚಿಂತಕರ ಭಾವಡಿಯಾಗಬೇಕು. ಯಾವ ಯಾವ ವಿಷಯಕ್ಕಾಗಿಯೇ ಸದನದ ಸಮಯವನ್ನು ಹಾಳು ಮಾಡುತ್ತಾರೆ. ಮಾನ್ಯ ಸದಸ್ಯರು ಒಳ್ಳೆಯ ವಿಷಯದ ಬಗ್ಗೆ ಮಾತನಾಡುವುದಕ್ಕೆ ಏಕೆ ಬಿಡುವುದಿಲ್ಲ?

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಜಯಮ್ಮನವರೇ ಬಹಳ ಚೆನ್ನಾಗಿ ಹೇಳಿದ್ದೀರಿ. ಬಾವಿಯೊಳಗೆ ಹೋಗಬಾರದೆಂಬುದಕ್ಕೆ ಒಳ್ಳೆಯ ಮಾತನ್ನು ಸದನದಲ್ಲಿ ಹೇಳಿದ್ದೀರಿ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ನನ್ನ ಮನವಿಯೇನೆಂದರೆ, ನಾನು ಮಾಸ್ಕ್ ಅನ್ನು ಹಾಕಿಕೊಂಡು ಸದನಕ್ಕೆ ಬಂದಿರುವ ವಿಚಾರವಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದ್ದಾರೆ. ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಏಕೆಂದರೆ, ಸ್ವಂತಃ ಮಾನ್ಯ ಸಚಿವರೇ ವೈದ್ಯರು ಆಗಿರುವುದರಿಂದ, ನಾವು ಏನು ಮಾಸ್ಕ್ ಅನ್ನು ಹಾಕಿಕೊಳ್ಳುತ್ತಿದ್ದೇವೆ. This is an ordinary mask. ಆಸ್ಪತ್ರೆಗಳಲ್ಲಿ ನರ್ಸ್‌ಗಳು ಸುಮ್ಮನೆ ಹಾಕಿಕೊಳ್ಳುವಂತಹ ಮಾಸ್ಕ್‌ಗಳಾಗಿವೆ. ಇದರಿಂದ ವೈರಸ್‌ನ್ನು ತಡೆಯುವಂತಹ ಶಕ್ತಿ ಈ ಮಾಸ್ಕ್‌ಗಳಿಗೆ ಇದೆಯೇ ಎಂದು ವೈದ್ಯರುಗಳು ಹೇಳಬೇಕಾಗುತ್ತದೆ. ನಾವು ಮಾಧ್ಯಮಗಳಲ್ಲಿ ನೋಡಿದಾಗ, ಚೈನಾದಲ್ಲಿ ಈ ವೈರಸ್ ಬಹಳಷ್ಟು ಜಾಸ್ತಿಯಾಗಿರುವುದರಿಂದ, ಅವರು precautionary measures ಗೆ ಎಷ್ಟು ದೊಡ್ಡ ಮಾಸ್ಕ್‌ಗಳನ್ನು ಯಾವ ರೀತಿಯಲ್ಲಿ ಹಾಕಿಕೊಳ್ಳುತ್ತಾರೆ ಎಂಬುದನ್ನು ನೋಡಬೇಕು. ಇವತ್ತಿನ ದಿವಸ ಕೇವಲ ಔಷಧಿ ಅಂಗಡಿಗಳಲ್ಲಿ ಇದು ಒಂದು ದಂಧೆಯಾಗಿದೆ. ಎಲ್ಲರೂ ಭಯಗೋಸ್ಕರ ಈ ಮಾಸ್ಕ್‌ಗಳನ್ನು ಖರೀದಿ ಮಾಡುವುದಕ್ಕೆ ಹೋಗುತ್ತಿದ್ದಾರೆ. ಇದರಿಂದ precaution ಮಾಡುವುದಕ್ಕೆ ಸಾಧ್ಯವೇ ಎಂಬುವುದು ಒಂದು ಪ್ರಶ್ನೆ. ಎರಡನೆಯದಾಗಿ, ವೈದ್ಯರೇ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಈ ಒಂದು ಸೋಷಿಯಲ್ ಮೀಡಿಯಾದಲ್ಲಿ ಒಂದು ಬಾಟಲ್‌ನ್ನು ತೋರಿಸುತ್ತಿದ್ದು, ಆಯುರ್ವೇದಿಕ್ ಅಂಗಡಿಗಳಲ್ಲಿ ಈ ವೈರಸ್‌ಗೆ ನಮ್ಮ ಹತ್ತಿರ ಔಷಧಿ ಇದೆ ಎಂದು ತೋರಿಸುತ್ತಿದ್ದಾರೆ. ಈ ಕಪಟ ಡಾಕ್ಟರ್‌ಗಳು ಮತ್ತು ಔಷಧಿಯನ್ನು ಮಾರುವಂತಹವರು ಇದನ್ನು ದಂಧೆ ಮಾಡಿಕೊಂಡು, ಜನರಿಗೆ ಮೋಸ ಮಾಡಿ, ವ್ಯಾಪಾರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡುವುದಕ್ಕೆ ತಯಾರಾಗುತ್ತಿದ್ದಾರೆ. ದಯಮಾಡಿ, ಇದಕ್ಕೆ ಕಡಿವಾಣ ಹಾಕುವುದಕ್ಕೆ ಮಾನ್ಯ ಸಚಿವರಾದ ಡಾಕ್ಟರ್‌ರವರು ಗಂಭೀರವಾಗಿ ಯೋಚನೆ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಕರೋನಾ ವೈರಸ್ ಬಹಳ ಆತಂಕವನ್ನು ಮೂಡಿಸಿದೆ. ಇವತ್ತಿನ ದಿವಸ ಸದನದಲ್ಲಿ ಎಲ್ಲಾ ಮಾನ್ಯ ಸದಸ್ಯರು ಮಾನ್ಯ ಸಚಿವರ ಹತ್ತಿರ ಈ ವಿಷಯವನ್ನು ಪ್ರಕಟಣೆ ಮಾಡಬೇಕೆಂಬ ಉದ್ದೇಶದಿಂದ ಹೇಳಿದ್ದಾರೆ. ಇತ್ತೀಚೆಗೆ ಆದಂತಹ ಮಂತ್ರಿಗಳಾದ ಡಾ॥ ಸುಧಾಕರ್‌ರವರು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಈ ಕರೋನಾ ವೈರಸ್ ಕೇವಲ 2 ತಿಂಗಳ ಹಿಂದೆ ಚೈನಾದಲ್ಲಿ ಡಿಸೆಂಬರ್ 31 ರಂದು ಹುಟ್ಟಿದೆ. ಇದರ ಪರಿಣಾಮ ಅವರೇ ಹೇಳಿದ ಹಾಗೆ ಕಳೆದ ವಾರ ಒಬ್ಬ ಟೆಕ್ಕಿ ದುಬೈನಿಂದ ಬೆಂಗಳೂರಿಗೆ ಬಂದು, ಬೆಂಗಳೂರಿನಿಂದ ತೆಲಂಗಾಣಗೆ ಹೋಗಿದ್ದಾನೆ ಎಂದು ಹೇಳಿದ್ದಾರೆ. ಆ ವ್ಯಕ್ತಿಯನ್ನು ಸರ್ಕಾರ ಏನಾದರೂ trace ಮಾಡಲಾಗಿದೆಯೇ, ಎರಡನೆಯದು, ಸರ್ಕಾರ ಸಾಕಷ್ಟು ಇದರ ಬಗ್ಗೆ ಕಾಳಜಿ ವಹಿಸಿದೆ. ಏಕೆಂದರೆ, ಮಂತ್ರಿಗಳ ಹತ್ತಿರ Press Statement ಅನ್ನು ನೋಡಿದ್ದೇವೆ ಮತ್ತು ಆಕಸ್ಮಿಕವಾಗಿ ನಾನು ಮುಖ್ಯ ಕಾರ್ಯದರ್ಶಿಯವರ ಕಛೇರಿಗೆ ಭೇಟಿ ಕೊಟ್ಟಾಗ, ಅಲ್ಲಿ ಇವರು ಮತ್ತು ಅಪರ ಮುಖ್ಯ ಕಾರ್ಯದರ್ಶಿಯವರಾದ ಜಾವೇದ್ ಅಕ್ತರ್ ರವರು ಡೆಲ್ಲಿಯ ಆರೋಗ್ಯ ಸಚಿವರ ಹತ್ತಿರ ವೀಡಿಯೋ ಕಾನ್ಫರೆನ್ಸ್‌ನಲ್ಲಿ ಇದ್ದರು. ಇದರ ಬಗ್ಗೆ ಕಾಳಜಿ ಇದೆ. ಆದರೆ, ಇದು ಮೂರು ತಿಂಗಳೊಳಗೆ ಹೇಗೆ ಹರಡುತ್ತಿದೆ? ಈ ವೈರಸ್ ಹರಡುವುದಕ್ಕೆ ಕಾರಣಗಳೇನು? ಚೈನಾದಲ್ಲಿ ಜನರು ತಿನ್ನುವ ಆಹಾರದಲ್ಲಿ ಏನಾದರೂ ಲೋಪ ಇದೆಯೇ ಮತ್ತು ಪರಿಸರದಿಂದ ಬಂದಿದೆಯೇ ಅಥವಾ mass contact ನಿಂದ ಬಂದಿದೆಯೇ ಎಂಬ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಇವತ್ತು ಡೆಂಗ್ಯೂ, ಏಡ್ಸ್ ಕಾಯಿಲೆಗಳು ಬಂದಾಗ ಬಹಳ ಆತಂಕದಲ್ಲಿ ಇದ್ದೇವೆ. ಈ ವೈರಸ್‌ನ್ನು ತಡೆಗಟ್ಟುವುದಕ್ಕೆ ನಮ್ಮ ಹತ್ತಿರ ಔಷಧಿಗಳು ಇದ್ದವು. ಆದರೆ, ಈ ವೈರಸ್‌ಗೆ ಯಾವ ಔಷಧ ಎಂಬುದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಮದುವೆ ಸಮಾರಂಭಗಳಲ್ಲಿ ಎರಡರಿಂದ ಐದು ಸಾವಿರ ಜನರು ಆಗಮಿಸುತ್ತಾರೆ. ಇದರಿಂದ ಏನಾದರೂ ಈ ವೈರಸ್ ಹರಡುತ್ತಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಕೆಲವು ದಿವಸಗಳ ಕಾಲ ಈ ಮದುವೆ ಸಮಾರಂಭಗಳಲ್ಲಿ ಹೆಚ್ಚು ಜನರು ಸೇರಬಾರದು ಎಂಬುದಕ್ಕೆ ಏನಾದರೂ ಅವಕಾಶ ಕೊಡಲಾಗುತ್ತದೆಯೇ, Wuhan City, ಊರೂರೇ ಖಾಲಿಯಾಗಿ ಬಿಟ್ಟಿದೆ. ಆ ಊರಿಗೆ ಯಾರನ್ನೂ ಸಹ ಬಿಡುತ್ತಿಲ್ಲ. ಅವರನ್ನು ಹೊರಗಡೆ ಬರುವುದಕ್ಕೂ ಅನುಕೂಲ ಮಾಡಿಕೊಡುತ್ತಿಲ್ಲ. ಇವತ್ತಿನ ದಿವಸ ಅವರನ್ನು study ಮಾಡಬೇಕು. ಇದರ ಬಗ್ಗೆ ಇಂಟರ್‌ನೆಟ್‌ನಲ್ಲಿ ಮಾಹಿತಿಗಳೂ ಸಿಗುತ್ತದೆ. ತಮ್ಮ ಇಲಾಖೆಯ ಅಧಿಕಾರಿಗಳಿಗೆ ಅಲ್ಲಿ ಏನಾದರೂ ಅವರನ್ನು identify ಮಾಡಿದ್ದಾರೆಯೇ ಎಂಬ ಬಗ್ಗೆ ಅಧ್ಯಯನ ಮಾಡಬೇಕೆಂದು ಹೇಳಿ. ಇದರ ಜೊತೆಗೆ ಮಾಸ್ಕ್‌ಗಳ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಮಾತನಾಡಿದರು. ಹಿಮಾಚಲ ಪ್ರದೇಶ ರಾಜ್ಯದಲ್ಲಿ ಈ ಮಾಸ್ಕ್‌ಗಳನ್ನು ತಯಾರಿಸಲಾಗುತ್ತದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಂದು ಮೊನ್ನೆಯ ದಿವಸ ಒಬ್ಬ ಡೀಲರ್ ಹೇಳುತ್ತಾನೆ. ಮಾಸ್ಕ್‌ವೊಂದಕ್ಕೆ 17 ಪೈಸೆ ವೆಚ್ಚವಾಗುತ್ತದೆ. ಮುಂದಿನ ಜೂನ್ ತಿಂಗಳವರೆಗೆ ಮಾಸ್ಕ್ ತಯಾರಿಸಲು ಆರ್ಡರ್ ಸಿಕ್ಕಿದೆ ಎಂಬುದಾಗಿ ಅಲ್ಲಿನ ಡೀಲರ್‌ವೊಬ್ಬರು ಹೇಳುತ್ತಿದ್ದರು. ಇವತ್ತಿನ ದಿವಸ ಒಂದು ಮಾಸ್ಕಿನ ದರ 12–13 ರೂಪಾಯಿಗಳಾಗಿವೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರವು ಪರ್ಯಾಯವನ್ನು ಯೋಚಿಸಬೇಕೆಂದು ನಾನು ಮನವಿ ಮಾಡುತ್ತೇನೆ.

(ಮುಂದು)

**(141) 04/03/2020/1:20/ಎಸ್‌ಪಿಆರ್/ವಿಕೆ**

**ಶ್ರೀ ಅರಬೈಲು ಹೆಬ್ಬಾರ ಶಿವರಾಮ್(ಕಾರ್ಮಿಕ ಮತ್ತು ಸಕ್ಕರೆ ಸಚಿವರು):–** ಮಾನ್ಯ ಸಭಾಪತಿಯವರೇ, ನಮ್ಮ ಉತ್ತರ ಕನ್ನಡ ಜಿಲ್ಲೆಯು ಗೋವಾ ರಾಜ್ಯದ ಗಡಿಯಲ್ಲಿರುವ ಜಿಲ್ಲೆಯಾಗಿದೆ. ಗೋವಾಕ್ಕೆ ಅತೀ ಹೆಚ್ಚು ಅಂತರಾಷ್ಟ್ರೀಯ ಪ್ರವಾಸಿಗರು ಬರುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಅತ್ಯಂತ ಹೆಚ್ಚು ಜನರು ಅಂದರೆ ಒಂದು ದಿವಸಕ್ಕೆ ಹತ್ತು ಸಾವಿರಕ್ಕಿಂತ ಹೆಚ್ಚು ಜನರು ಉದ್ಯೋಗಕ್ಕಾಗಿ ಗೋವಾಕ್ಕೆ ಹೋಗುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಶೇಕಡಾ 70 ರಷ್ಟು ಕಾರ್ಮಿಕರು ಗೋವಾದಲ್ಲಿ ಕೆಲಸ ಮಾಡುತ್ತಾರೆ. ಗೋವಾದಲ್ಲಿ ಎಲ್ಲಾ ರೀತಿಯ ಔಷಧಿಗಳು ಕಡಿಮೆ ದರದಲ್ಲಿ ದೊರೆಯುತ್ತವೆ. ಈ ಕಾರಣಕ್ಕಾಗಿ ಉತ್ತರ ಕನ್ನಡದ ಹೆಚ್ಚು ಜನರು ಗೋವಾಕ್ಕೆ ಹೋಗುತ್ತಾರೆ. ಗೋವಾದಲ್ಲಿ ಕ್ಯಾಸಿನೋ ಆಡುವುದಕ್ಕಾಗಿ ಹೆಚ್ಚು ಜನರು ಹೋಗುತ್ತಾರೆ. ರಾಜ್ಯದ ಶೇಕಡಾ 95 ರಷ್ಟು ಹಾಗೂ ದೇಶದ ಶೇಕಡಾ 25 ರಷ್ಟು ಜನ ಕ್ಯಾಸಿನೋ ಆಡುವುದಕ್ಕಾಗಿ ಗೋವಾಕ್ಕೆ ಹೋಗುತ್ತಾರೆ. ಈ ಕಾರಣಕ್ಕಾಗಿ ಗೋವಾದಲ್ಲಿ ರೋಗ ತಪಾಸಣಾ ಕೇಂದ್ರವನ್ನು ಮಾಡಬೇಕು. ಉತ್ತರ ಕನ್ನಡದ ಕಾರವಾರದಲ್ಲಿ ಇಲಾಖೆಯ ಬಹು ದೊಡ್ಡ ಆಸ್ಪತ್ರೆ ಇದೆ. ಕರ್ನಾಟಕ ರಾಜ್ಯದ ಗಡಿಯಲ್ಲಿ ಪ್ರವಾಸಿಗರನ್ನು ತಪಾಸಣೆ ಮಾಡುವಂತಹ ಕೇಂದ್ರವನ್ನು ಸ್ಥಾಪಿಸಿದರೆ, ಉತ್ತರ ಕನ್ನಡ ಜಿಲ್ಲೆ ಹಾಗೂ ಕರ್ನಾಟಕ ರಾಜ್ಯಕ್ಕೆ ಈ ರೋಗ ಬರುವುದನ್ನು ತಡೆಗಟ್ಟಬಹುದು. ಈ ವಿಚಾರದಲ್ಲಿ ಮಾನ್ಯ ಸಚಿವರು ವಿಶೇಷ ಗಮನ ಹರಿಸಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥಿಸುತ್ತೇನೆ.

**ಶ್ರೀ ಎಸ್.ರುದ್ರೇಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಸರ್ಕಾರದ ಪರವಾಗಿ ಮಾನ್ಯ ಸಚಿವರು ನೀಡಿರುವ ಹೇಳಿಕೆಯು ಸಾಕಷ್ಟು ನೆಮ್ಮದಿಯನ್ನು ನೀಡುತ್ತದೆ. ಇಂತಹ ಕೆಲಸವನ್ನು ಸರ್ಕಾರವು ಈಗಾಗಲೇ ಮಾಡಿದೆ. ಈ ವಿಷಯದಲ್ಲಿ ನಮ್ಮೆಲ್ಲಾ ಗೌರವಾನ್ವಿತ ಸದಸ್ಯರು ಸಾಕಷ್ಟು ಚರ್ಚೆಗಳನ್ನೂ ಸಹ ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಚೈನಾ ದೇಶದಲ್ಲಿ ಕರೋನಾ ವೈರಸ್ ರೋಗವು ಹೆಚ್ಚೆಚ್ಚು ವರದಿಯಾಗಿರುತ್ತದೆ. ಈ ಕಾರಣಕ್ಕಾಗಿ ಅದೇ ದೇಶದಲ್ಲಿರುವ ನನ್ನ ಸ್ನೇಹಿತನ ಮಗನನ್ನು ನಾನು ಸಂಪರ್ಕಿಸಿರುತ್ತೇನೆ. ನನ್ನ ಸ್ನೇಹಿತನ ಮಗನು ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ ಅಲ್ಲಿನ *Wuhan* ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನನ್ನು ಸಂಪರ್ಕಿಸಿದಾಗ ಆತನಿಂದ ಕೆಲವೊಂದು ಮಾಹಿತಿಗಳು ದೊರೆಯುತ್ತವೆ. ಬಹುಶಃ ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಹಿತಿಯಿಂದ ಸರ್ಕಾರಕ್ಕೆ ಉಪಯೋಗವಾಗಬಹುದು ಹಾಗೂ ಇದು ಪತ್ರಿಕೆಗಳಲ್ಲಿ ವರದಿಯಾದರೆ ಹೆಚ್ಚು ಅನುಕೂಲವಾಗುತ್ತದೆ.

ಈ ರೋಗವು temperature sensitive ಆಗಿದ್ದು, 27 degrees celsius ಗಿಂತ ಕಡಿಮೆ ವಾತಾವರಣದಲ್ಲಿ ಬಹಳ ವೇಗವಾಗಿ ಹರಡುತ್ತದೆ. ಹೀಗಾಗಿ ಅಲ್ಲಿನ ಎಲ್ಲಾ ಪ್ರದೇಶಗಳಲ್ಲಿ ಬಿಸಿ ನೀರನ್ನು ಕುಡಿಯುವಂತಹ ಮುಂಜಾಗ್ರತಾ ಕ್ರಮದ ವ್ಯವಸ್ಥೆಯನ್ನು ಮಾಡಿದ್ದಾರೆ ಎಂಬುದಾಗಿ ಅವರು ಹೇಳಿದ್ದಾರೆ. ಬಿಸಿ ನೀರು ಕುಡಿಯುವುದರಿಂದ ಈ ರೋಗವು ಸಾಕಷ್ಟು ಪ್ರಮಾಣದಲ್ಲಿ ಹತೋಟಿಗೆ ಬರುತ್ತದೆ ಎನ್ನುವ ಮಾಹಿತಿಯನ್ನು ಅವರು ನೀಡಿದ್ದಾರೆ. ಉಷ್ಣಾಂಶ ಕಡಿಮೆಯಿರುವ ಪ್ರದೇಶಗಳಲ್ಲಿ ಒಣ ಕೆಮ್ಮು ಅಂದರೆ ನೆಗಡಿ ಇಲ್ಲದಿರುವ ಕೆಮ್ಮು ಇರುವ ಸಂದರ್ಭಗಳಲ್ಲಿಯೂ ಸಹ ಕರೋನಾ ವೈರಸ್ ಬಹಳ ವೇಗವಾಗಿ ಹರಡುತ್ತದೆ ಎಂಬುದಾಗಿ ಹೇಳಿದ್ದಾರೆ. ಇಂತಹ ಹಲವಾರು ಮಾಹಿತಿಗಳನ್ನು ಮಾನ್ಯ ಸಚಿವರು ಈಗಾಗಲೇ ಪಡೆದುಕೊಂಡಿರಬಹುದು. Mask ಗಳ ಬಗ್ಗೆ ನಮ್ಮ ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಿದ್ದಾರೆ. ನಾವು ಈಗ ರೋಗ ನಿಯಂತ್ರಿತ ಸಭಾಂಗಣದಲ್ಲಿದ್ದೇವೆ. ವಾತಾವರಣದ ಉಷ್ಣಾಂಶವು ಕಡಿಮೆ ಇರುವ ಪ್ರದೇಶಗಳಲ್ಲಿ ರೋಗವು ಬಹಳ ವೇಗವಾಗಿ ಹರಡಲು ಅವಕಾಶವಾಗುತ್ತದೆ. ಹೀಗಾಗಿ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಉಷ್ಣಾಂಶವನ್ನು ಏರಿಸಬೇಕು. ಅಂತರಾಷ್ಟ್ರೀಯ ಮಟ್ಟದಲ್ಲಿ ಉಷ್ಣಾಂಶದ ಬಗ್ಗೆ ಮತ್ತೂ ಹಾಲಿಯಿರುವ ಉಷ್ಣಾಂಶವನ್ನು 24 degrees celsius ನಿಂದ 26 degrees celsius ಗೆ ಏರಿಸಬೇಕೆಂಬುದರ ಬಗ್ಗೆ ಸಾಕಷ್ಟು ಚರ್ಚೆಗಳಾಗುತ್ತಿವೆ. ಇಂತಹ ವ್ಯವಸ್ಥೆಯನ್ನು ಹೋಟೆಲ್‌ಗಳಲ್ಲಿಯೂ ಸಹ ಮಾಡಬೇಕು. ಇಂತಹ ಸಣ್ಣ ಸಣ್ಣ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಅನುಕೂಲವಾಗುತ್ತದೆಂದು ನಾನು ಹೇಳಲಿಚ್ಛಿಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ಭಾರತ ಮತ್ತು ಚೀನಾ ದೇಶಗಳು ನೆರೆಹೊರೆಯ ಬೃಹತ್ ರಾಷ್ಟ್ರಗಳು ಮಾತ್ರವಲ್ಲದೇ ಅತೀ ಹೆಚ್ಚು ಜನಸಂಖ್ಯೆಯನ್ನು ಹೊಂದಿವೆ. ಮಾನ್ಯ ಸನ್ಮಿತ್ರರು ಈಗಾಗಲೇ ಪ್ರಸ್ತಾಪಿಸಿದಂತೆ ಭೌಗೋಳಿಕವಾಗಿ ಹವಾಮಾನ ವೈಪರೀತ್ಯ, ಆಹಾರ ಪದ್ಧತಿ ಹಾಗೂ ಉಷ್ಣಾಂಶ ಇಂತಹ ಅಂಶಗಳು ಎಷ್ಟರಮಟ್ಟಿಗೆ ಈ ರೋಗವನ್ನು ಹರಡುವುದರಲ್ಲಿ ಪಾತ್ರ ವಹಿಸುತ್ತವೆ ಎನ್ನುವುದರ ಬಗ್ಗೆ ಅಧ್ಯಯನವನ್ನು ಮಾಡುವ ಅವಶ್ಯಕತೆಯು ಇವತ್ತಿನ ದಿವಸ ಇದೆ. ಮಕ್ಕಳಲ್ಲಿಯೂ ಸಹ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮಾಧ್ಯಮದ ಮೂಲಕ ವಿಷಯಗಳು ಬಹಳ ವೇಗವಾಗಿ ಜನರನ್ನು ತಲುಪುತ್ತವೆ. ಹೀಗಾಗಿ ಸರಿಯಾದ ಹಾಗೂ ಪರಿಷ್ಕರಣೆ ಮಾಡಲ್ಪಟ್ಟ ಸತ್ಯಾಂಶ ಸುದ್ದಿಗಳನ್ನೇ ರಾಜ್ಯದ ವಾರ್ತಾ ಮತ್ತು ಪ್ರಚಾರ ಹಾಗೂ ಆರೋಗ್ಯ ಇಲಾಖೆಗಳಿಂದ ಪ್ರಸಾರ ಮಾಡುವ ಬಗ್ಗೆ ಸರ್ಕಾರವು ಸೂಕ್ತ ಕ್ರಮಗಳನ್ನು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳುವುದರ ಮೂಲಕ ಈ ರೋಗವನ್ನು ತಹಬಂದಿಗೆ ತರುವ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕೆಂದು ನಾನು ಸರ್ಕಾರದಲ್ಲಿ ವಿನಂತಿಸುತ್ತೇನೆ.

**ಶ್ರೀ ತಿಪ್ಪಣ್ಣ ಕಮಕನೂರ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕರೋನಾ ವೈರಸ್ ರೋಗ ಎಂದರೇನು, ಅದು ಹರಡದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆಗಳ ಬಗ್ಗೆ ಈಗಾಗಲೇ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಸಮಗ್ರವಾದ ವರದಿಯನ್ನು ನೀಡಿದ್ದಾರೆ. ಹೈದ್ರಾಬಾದ್–ಕರ್ನಾಟಕ ಭಾಗದಿಂದ ನಾವು ಬಂದಿದ್ದೇವೆ. ಈ ರೋಗದ ಬಗ್ಗೆ ಪ್ರತಿನಿತ್ಯ ಟಿ.ವಿ.ಯಂತಹ ದೃಶ್ಯ ಮಾಧ್ಯಮಗಳಲ್ಲಿ ನೋಡುವುದರಿಂದ ನಾವುಗಳು ಯಾರೂ ಬದುಕಿ ಉಳಿಯುವುದಿಲ್ಲ ಎನ್ನುವಂತಹ ಅಂಜಿಕೆಯು ಆಗುತ್ತಿದೆ. ಟಿ.ವಿ. ಮಾಧ್ಯಮದವರು ಬೇರೆ ವಿಷಯಗಳನ್ನು ಹೊರತುಪಡಿಸಿ, ಪ್ರತಿನಿತ್ಯವೂ ಇದೇ ರೋಗದ ಬಗ್ಗೆ ಮಾತ್ರವೇ ಪ್ರಸಾರ ಮಾಡುತ್ತಿದ್ದಾರೆ. ನಮ್ಮ ಭಾಗವು ಕಲ್ಯಾಣ ಕರ್ನಾಟಕ ಎಂದು ಮರುನಾಮಕರಣಗೊಂಡರೂ ಸಹ ಹೆಚ್ಚು ಮುಂದುವರೆದ ಪ್ರದೇಶವಾಗಿರುವುದಿಲ್ಲ. ನಮ್ಮ ಭಾಗದಲ್ಲಿ ventilator and dialysis ಗಳ ವ್ಯವಸ್ಥೆಗಳು ಸರಿಯಾಗಿ ಲಭ್ಯವಿಲ್ಲದೇ ನೂರಾರು ಜನರು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಹೀಗಾಗಿ ಈ ರೋಗವು ಹರಡುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ನಮ್ಮ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣ ಹಾನಿಯಾಗುವ ಸಂಭವವಿರುವುದರಿಂದ ಮಾನ್ಯ ಮಂತ್ರಿಗಳು ಪ್ರಸ್ತಾವನೆ ಮಾಡಿದ ಸಂದರ್ಭದಲ್ಲಿ ಆ ಭಾಗದ ಎಲ್ಲಾ ಆಸ್ಪತ್ರೆಗಳಿಗೆ ಅವಶ್ಯವಿರುವ ventilators, ಔಷಧಿಗಳು, ವೈಯಕ್ತಿಕ ರಕ್ಷಣಾ ಸಲಕರಣೆಗಳು ಮತ್ತು ಮಾಸ್ಕ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂಬುದಾಗಿ ಸರ್ಕಾರವು ತಿಳಿಸಿದೆ. ಕಲ್ಯಾಣ ಕರ್ನಾಟಕ ಭಾಗದ ಕಲಬುರ್ಗಿ, ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಸಲಕರಣೆಗಳು ಇನ್ನೂ ಸಹ ಸರಬರಾಜಾಗಿಲ್ಲ. ಈ ಕಾರಣಕ್ಕಾಗಿ ಮಾನ್ಯ ಮಂತ್ರಿಗಳಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಕಲ್ಯಾಣ ಕರ್ನಾಟಕ ಭಾಗವು ಅತ್ಯಂತ ಹಿಂದುಳಿದಿರುವುದರಿಂದ ಹಾಗೂ ಸಾಕಷ್ಟು ಸಲಕರಣೆಗಳು ಲಭ್ಯವಿಲ್ಲದಿರುವುದರಿಂದ ಈ ಭಾಗಕ್ಕೆ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕು. ಆ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ventilator ಹಾಗೂ ಇನ್ನಿತರೆ ಸಲಕರಣೆಗಳನ್ನು ಒದಗಿಸಬೇಕೆಂದು ಹಾಗೂ ಪ್ರಾಣಹಾನಿಯಾಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಸರ್ಕಾರವು ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕರೋನಾ ವೈರಸ್ ಬಗ್ಗೆ ಸರ್ಕಾರವು ಸ್ವಯಂಪ್ರೇರಿತವಾಗಿ ಬಹಳಷ್ಟು ವಿಚಾರಗಳನ್ನು ಸದನದ ಮುಂದೆ ಇಟ್ಟಿದೆ. ನಿನ್ನೆಯ ದಿವಸ ನಾನು ರಾತ್ರಿ 9:00 ಗಂಟೆಯಿಂದ 12:00 ಗಂಟೆಯವರೆಗೆ ಟಿ.ವಿ.ಯನ್ನು ನೋಡಿದ್ದೇನೆ. ಟಿ.ವಿ. ಮಾಧ್ಯಮಗಳಲ್ಲಿ ಈ ರೋಗದ ಬಗ್ಗೆ ಯಾವ ರೀತಿಯಾಗಿ ಪ್ರಚಾರ ಮಾಡುತ್ತಿದ್ದಾರೆಂದರೆ, ರೋಗಗ್ರಸ್ತ ವ್ಯಕ್ತಿಯು ಬದುಕುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಮಟ್ಟದಲ್ಲಿ ಪ್ರಸಾರ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಕರೋನಾ ವೈರಸ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹರಡಿಕೊಂಡಿದೆ ಎನ್ನುವಂತೆ ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಗಳು ಹೇಳಿಕೆಯನ್ನು ನೀಡುತ್ತಾರೆ. ಅದೇ ರೀತಿಯಾಗಿ ಈ ರೋಗವು ರಾಜ್ಯದಲ್ಲಿ ತಾಂಡವವಾಡುತ್ತಿದೆ ಎನ್ನುವಂತೆ ಆರೋಗ್ಯ ಮಂತ್ರಿಗಳು ಹೇಳಿಕೆಯನ್ನು ನೀಡುತ್ತಾರೆ. ಇದರ ಪ್ರಸಾರವನ್ನು ನಾನು ನಿನ್ನೆಯ ದಿವಸ ಟಿ.ವಿ. ಮಾಧ್ಯಮಗಳಲ್ಲಿ ನೋಡಿದ್ದೇನೆ. ಈ ರೋಗವನ್ನು ಟಿ.ವಿ. ಮಾಧ್ಯಮದವರು ಯಾವ ರೀತಿಯಾಗಿ ಬಿಂಬಿಸುತ್ತಿದ್ದಾರೆಂದರೆ, ಕರೋನಾ ವೈರಸ್‌ನಿಂದ ಯಾರೂ ಸಹ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ ಎನ್ನುವಂತೆ ಪ್ರಸಾರ ಮಾಡುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ಕಾರಣಕ್ಕಾಗಿ ಮಾನ್ಯ ಸದಸ್ಯರು ಟಿ.ವಿ.ಯನ್ನು ನೋಡುವುದೇ ಬೇಡ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಬಹಳ serious ಆಗಿ ಹೇಳುತ್ತಿದ್ದೇನೆ. ಇದನ್ನು ನೋಡಿ, ವಿದೇಶದಲ್ಲಿರುವ ನಮ್ಮ ಮಕ್ಕಳು ನಮಗೆ ದೂರವಾಣಿ ಕರೆ ಮಾಡಿ 'What's happening in India' ಎಂಬುದಾಗಿ ಕೇಳುತ್ತಾರೆ. ಆದ್ದರಿಂದ ನಾನು ತಮ್ಮ ಮುಖಾಂತರ ಟಿ.ವಿ. ಮಾಧ್ಯಮದವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ positive ಆಗಿರುವ ಸುದ್ದಿಗಳನ್ನು ಮಾತ್ರವೇ ಪ್ರಸಾರ ಮಾಡಿ, ಭಯದ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಹೋಗಬೇಡಿ. ಒಳ್ಳೆಯ awarenessನ್ನು ಮಾಧ್ಯಮ ಮುಖಾಂತರ ತೋರಿಸಿ, ಸಾರ್ವಜನಿಕರಲ್ಲಿ ಧೈರ್ಯವನ್ನು ತುಂಬುವಂತಹ ಕೆಲಸಗಳಿಗೆ ಒತ್ತು ಕೊಡಬೇಕೆಂದು ನಾನು ಸಭಾಪತಿಯವರ ಮುಖಾಂತರ ಸರ್ಕಾರಕ್ಕೆ ಹೇಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಎಲ್ಲಾ ಸದಸ್ಯರುಗಳು ತಮ್ಮ ಸಲಹೆಗಳನ್ನು ನೀಡಿದ್ದಾರೆ. Source of information for infection of this disease ಎನ್ನುವ ವಿಷಯವನ್ನು ಮಾನ್ಯ ಮಂತ್ರಿಗಳು ಸದನಕ್ಕೆ ತಿಳಿಸಬೇಕೆಂದು ನಾನು ಸಲಹೆ ನೀಡುತ್ತೇನೆ. WHO (World Health Organization) or from China, what is the source that you have collected for this infection?

**ಡಾ॥ ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ 25 ಸದಸ್ಯರು ಅಂದರೆ ಈ ಸದನದ ಮೂರನೇಯ ಒಂದು ಭಾಗದ ಸದಸ್ಯರು ಭಯಾನಕವಾಗಿರುವ ಈ ಕೊರೋನಾ ವೈರಸ್‌ನ ವಿರುದ್ಧ ಹೋರಾಟ ಮಾಡುವುದಕ್ಕೆ ಸಮನ್ವಯತೆಯನ್ನು ಕಾಯ್ದುಕೊಂಡಿದ್ದಾರೆ. ಎಲ್ಲ ಪಕ್ಷಗಳ ಸದಸ್ಯರುಗಳು ಇವತ್ತಿನ ದಿವಸ ಸರ್ಕಾರದೊಂದಿಗೆ ಕೈ ಜೋಡಿಸುವಂತಹ ಕೆಲಸವನ್ನು ಮಾಡಿದ್ದಾರೆ. ಈ ವಿಷಯದಲ್ಲಿ ಮಾತನಾಡಿದ ಎಲ್ಲಾ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಗೌರವಾನ್ವಿತ ಸದಸ್ಯರಿಗೆ ಮೊದಲು ಸರ್ಕಾರದ ವತಿಯಿಂದ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಎಲ್ಲರಿಗೂ ಇಷ್ಟೇ ಕಾಳಜಿ ಇದೆ ಎಂದು ನಾನು ಭಾವಿಸುತ್ತೇನೆ. ಎಲ್ಲಾ ಸದಸ್ಯರು ಈ ವಿಷಯದ ಬಗ್ಗೆ ಮಾತನಾಡುತ್ತಿದ್ದರು. ಆದರೆ, ಎಲ್ಲರಿಗೂ ಅವಕಾಶ ದೊರೆತಿಲ್ಲ.

(ಮುಂದು)

(142)/4–3–2020/1–30/ಎಲ್ಎಂ/ವಿಕೆ
**ಡಾ: ಸುಧಾಕರ್**(ಮುಂದು):

ಹಿಂದಿನಿಂದಲೂ ಅನೇಕ ವೈರಸ್‌ಗಳ ಬಗ್ಗೆ ಮತ್ತು ರೋಗಗಳ ವಿರುದ್ಧ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಒಂದು ಹೊಸ ವೈರಸ್ ಬಂದರೆ ಅದನ್ನು ತಕ್ಷಣ ಪರೀಕ್ಷೆ ಮಾಡಿ ಚಿಕಿತ್ಸೆ ಕೊಡುವಲ್ಲಿ ಕೆಲವೊಂದು ಸಮಸ್ಯೆಗಳು ಇವೆ. ಹಾಗೆ *SARS* (Severe Acute Respiratory Syndrome) ಎನ್ನುವಂತಹ ವೈರಾಣು ಬಂದು, ಅದರಿಂದ ಆದ ಅವಾಂತರಗಳನ್ನು ಎಲ್ಲರೂ ಗಮನಿಸಿದ್ದೇವೆ. ಇದರ ಬಗ್ಗೆ ಒಂದೇ ಮಾತಿನಲ್ಲಿ ಹೇಳಬೇಕು ಎಂದರೆ, ವಿಶ್ವದಲ್ಲಿ 100 ಜನರಿಗೆ ಈ *SARS virus* ಬಂದರೆ 10% ಜನರ ಪ್ರಾಣವನ್ನು ತೆಗೆದುಕೊಳ್ಳುತ್ತಿತ್ತು. ಈ ಕರೊನಾ ವೈರಸ್‌ನ್ನು 31ನೇ ಡಿಸೆಂಬರ್ 2019ರಲ್ಲಿ ಪತ್ತೆ ಹಚ್ಚಲಾಗಿದೆ. ಇದಕ್ಕೆ ಈಗ ಕರೊನಾ ವೈರಸ್ ಎಂದು ಹೇಳುತ್ತಿಲ್ಲ. ಯಾವುದೆ ಒಂದು ದೇಶದ, ಒಂದು ಪ್ರಾಂತ್ಯದ ಹೆಸರನ್ನು ಕೆಡಸಬಾರದು ಎಂದು ಇದಕ್ಕೆ ವಿಶ್ವ ಆರೋಗ್ಯ ಸಂಸ್ಥೆಯವರು *COVID-19 virus* ಎಂದು ಮರು ನಾಮಕರಣ ಮಾಡಿದ್ದಾರೆ. ಹೀಗಾಗಿ ಈಗ ಎಲ್ಲರೂ *COVID-19 virus* ಎಂದು ಸಂಭೋದಿಸುವುದು ಉತ್ತಮ ಎಂದು ನಾನು ಹೇಳಬಯಸುತ್ತೇನೆ. ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಇದರ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲಿ ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರುಗಳಾದ ಶ್ರೀ ತಿಪ್ಪೇಸ್ವಾಮಿಯವರು, ಶ್ರೀ ಪಿ.ಆರ್.ರಮೇಶ್‌ರವರು ಮಾತನಾಡಿದ್ದಾರೆ. ಶ್ರೀ ಪಿ.ಆರ್.ರಮೇಶ್‌ರವರು ಇದರ ಔಷಧಿ, ಮಾರ್ಗಸೂಚಿ, ಲ್ಯಾಬ್‌ಗಳ ಬಗ್ಗೆ ಮತ್ತು ಈ ವೈರಾಣು ಯಾವ ತಾಪಮಾನದಲ್ಲಿರುತ್ತದೆ ಎಂದು ಕೇಳಿದ್ದಾರೆ. ಈ ರೋಗದ ಬಗ್ಗೆ ವಿಶ್ವ ಆರೋಗ್ಯ ಸಂಸ್ಥೆ ತೀವ್ರತರವಾದ ನಿಗಾವನ್ನು ವಹಿಸಿದೆ. ಇದರ ಬಗ್ಗೆ ಎಲ್ಲ ಮಾರ್ಗಸೂಚಿಗಳನ್ನು ವಿಶ್ವ ಆರೋಗ್ಯ ಸಂಸ್ಥೆ ಕೊಡುತ್ತಿದೆ. ಅದೇ ರೀತಿ ನಮ್ಮ ದೇಶದಲ್ಲಿಯು ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಈ ದೇಶದ 130 ಕೋಟಿ ಜನರಿಗೆ ಸರ್ಕಾರ ನಿಮ್ಮ ಜೊತೆಗಿದೆ, ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತದೆ. WHO (World Health Organisation) ಕೊಡುವ ಎಲ್ಲ ಮಾರ್ಗಸೂಚಿಗಳನ್ನು ಯಥಾವತ್ತಾಗಿ ನಮ್ಮ ದೇಶದಲ್ಲಿ ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದಾರೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಆರೋಗ್ಯ ಇಲಾಖೆಯ, ವೈದ್ಯಕೀಯ ಶಿಕ್ಷಣ ಇಲಾಖೆಯ ಮತ್ತು ಇತರೆ ಇಲಾಖೆಯ ಸಚಿವರನ್ನು ಮತ್ತು ಅಧಿಕಾರಿಗಳ ಸಭೆಯನ್ನು ಕರೆದು, ಈ ರೋಗದ ವಿರುದ್ಧ ಚಿಕಿತ್ಸೆ ಕೊಡಲು ಸರ್ಕಾರದಿಂದ ಎಲ್ಲ ರೀತಿಯ ಸಹಕಾರವನ್ನು, ಎಲ್ಲ ರೀತಿಯ ಸಲಕರಣೆಗಳನ್ನು ಕೊಡಲು ನಾವು ತಯಾರಿದ್ದೇವೆ. ಇದಕ್ಕೆ ಬಜೆಟ್ ಇಲ್ಲ

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಂದು *blanket permission* ನನ್ನು ಕೊಟ್ಟಿದ್ದಾರೆ. ಹೀಗಾಗಿ ಮಾನ್ಯ ಪ್ರಧಾನ ಮಂತ್ರಿಗಳಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ರಾಜ್ಯದ ಜನತೆಯ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ಇದರ ಲಕ್ಷಣಗಳ ಬಗ್ಗೆ ಕೇಳಿದ್ದಾರೆ. ಮತ್ತೆ ಒಬ್ಬ ಮಾನ್ಯ ಸದಸ್ಯರು ನನಗೆ ಸೀನು ಬಂದಿದೆ ನಾನು ಸದನಕ್ಕೆ ಬರಬಹುದೇ ಎಂದು ಕೇಳಿದರು. ಯಾರು ಮತ್ತು ಎಂತಹ mask ಗಳನ್ನು ಹಾಕಿಕೊಳ್ಳಬೇಕು? ಯಾವ ರೀತಿ ಇದಕ್ಕೆ ಮುನೆಚ್ಚರಿಕೆ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಮಾನ್ಯ ಸದಸ್ಯರುಗಳು ಕೇಳಿದ್ದಾರೆ. ಈ ರೋಗ ಮೊದಲು ಚೈನಾದ ಯುಹಾನ್ ಎನ್ನುವ ಸಣ್ಣ ನಗರದಲ್ಲಿ ಕಂಡುಬಂತು. ಇದು ಏಕೆ ಬಂತು ಎಂದು ಇದರ *etiology* ಯನ್ನು ಮಾನ್ಯ ಕೆ.ಸಿ.ಕೊಂಡಯ್ಯನವರು ಕೇಳಿದರು. ವೈರಾಣುಗಳು ಏಕೆ ಬರುತ್ತವೆ ಎಂದು ನಿರ್ಧಿಷ್ಟವಾಗಿ ಕಾರಣವನ್ನು ಹೇಳುವುದು ಕಷ್ಟವಾಗುತ್ತದೆ. ಎಬೋಲಾ ಎನ್ನುವ ವೈರಸ್ ಬಗ್ಗೆ ತಾವೆಲ್ಲರೂ ತಿಳಿದುಕೊಂಡಿದ್ದೀರಿ. ಇದು ಆಫ್ರಿಕಾ ಖಂಡದಲ್ಲಿ ಕಂಡು ಬಂದಿತ್ತು. ಮೊನ್ನೆ ಎರಡು ವಾರಗಳ ಹಿಂದೆ ವಿಶ್ವ ಆರೋಗ್ಯ ಸಂಸ್ಥೆಯವರು ಒಂದು ಬುಲೆಟಿನ ಹೊರಡಿಸಿದ್ದಾರೆ. ಅದರಲ್ಲಿ ಎಬೋಲಾ ವೈರಾಣುಗಳು ಇಡೀ ಆಫ್ರಿಕಾದಲ್ಲಿಯೇ ಕಾಣುತ್ತಿಲ್ಲ. ಹೀಗಾಗಿ ವೈರಾಣು ಏಕೆ ಬರುತ್ತದೆ ಎಂದು ನಿರ್ಧಿಷ್ಟವಾಗಿ ಹೇಳುವುದು ಕಷ್ಟವಾಗುತ್ತದೆ. ವೈರಾಣುಗಳಿಗೆ ನಿರ್ಧಿಷ್ಟವಾಗಿ ಚಿಕಿತ್ಸೆ ಇಲ್ಲ ಎನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕು. There is no definite treatment for virus induced diseases. ಇದು symptomatic. ರೋಗದ ಲಕ್ಷಣಗಳನ್ನು ನೋಡಿಕೊಂಡು ಚಿಕಿತ್ಸೆಯ ವಿಧಾನವನ್ನು ಬದಲಿಸಿಕೊಂಡು ಹೋಗಬೇಕಾಗುತ್ತದೆ. ಎಚ್1 ಎನ್1, Common Influenza, ಎಬೋಲಾ ವೈರಸ್ ನೋಡಿದ್ದೇವೆ. ಹಿಂದೆ ಕಾಲರಾ, ಪ್ಲೇಗ್ ಬಂದಾಗ ಮನೆಗಳನ್ನು ಬಿಟ್ಟು, ಊರಗಳನ್ನು ಬಿಟ್ಟು ಹೋಗುತ್ತಿದ್ದನ್ನು ನೋಡಿದ್ದೆವೆ. ಇಂದು ಇಡೀ ವಿಶ್ವದಲ್ಲಿ  ಹೊಸ–ಹೊಸ ವೈರಾಣುಗಳು ಮನುಷ್ಯನನ್ನು ಕಾಡುತ್ತಿವೆ. ಆದರೆ ಇವೆಲ್ಲವುಗಳ ವಿರುದ್ಧ ನಿರ್ಧಿಷ್ಟವಾದ ಕ್ರಮಗಳನ್ನು ತೆಗೆದುಕೊಳ್ಳುವುದರ ಮುಖಾಂತರ ಅಂತಹ ರೋಗಗಳನ್ನು ನಿಗ್ರಹ ಮಾಡುವಲ್ಲಿ ಹಲವಾರು ಸಂದರ್ಭಗಳಲ್ಲಿ ನಾವು ಯಶಸ್ಸನ್ನು ಕಂಡಿದ್ದೇವೆ. *SARS* ಎನ್ನುವ ಭಯಾನಕ ವೈರಾಣುಗಳಿಂದ 10% ಜನರು ಸಾವಿಗಿಡಾಗುತ್ತಿದ್ದರು. ಅಂತಹ ರೋಗವನ್ನು ಕಡಿಮೆ ಮಾಡುವಲ್ಲಿ ಯಶಸ್ಸನ್ನು ಕಾಣುತ್ತಿದ್ದೇವೆ. ಹೀಗಾಗಿ ಈಗ ಬಂದಿರುವ *COVID-19 virus* ಇದು ಪತ್ತೆಯಾದ ಮೇಲೆ ಅನೇಕರು ಗುಣಮುಖರಾಗಿದ್ದಾರೆ. ಈ ರೋಗ ಬಂದರೆ ನಾವು ಸಾಯುತ್ತೇವೆ ಎನ್ನುವ ಭಯ ಮೊದಲು ಜನರಿಂದ ದೂರವಾಗಬೇಕು. ಸರ್ಕಾರದ ಪರವಾಗಿ ರಾಜ್ಯದ ಜನರಿಗೆ ಬಹಳ ಜವಾಬ್ದಾರಿಯಿಂದ ಈ ಹೇಳಿಕೆಯನ್ನು ಮಾಡುತ್ತಿದ್ದೇನೆ. ದಯಮಾಡಿ ಯಾರು ವದಂತಿಗಳಿಗೆ ಕಿವಿ ಕೊಡಬಾರದು. ಈ ರೋಗದಿಂದ ಈ ವೈರಾಣುಗಳಿಂದ ಜನರ ಸಾವಾಗುತ್ತಿಲ್ಲ ಈ ವದಂತಿಗಳಿಂದ ಉದ್ವೇಗಕ್ಕೆ ಒಳಗಾಗಿ ಅನೇಕ ಜನರ ಸಾವಾಗುತ್ತಿದೆ. ಇದರಲ್ಲಿ ಮಾಧ್ಯಮದವರ ಪಾತ್ರ ಕೂಡಾ ಬಹಳ ಮುಖ್ಯವಾಗುತ್ತದೆ. ಡಾ: ವೈ.ಎನ್.ನಾರಾಯಣಸ್ವಾಮಿಯವರು ಇದರ ಬಗ್ಗೆ ಮುಖ್ಯವಾದ ಅಂಶವನ್ನು ಹೇಳಿದ್ದಾರೆ. ಸರ್ಕಾರದ ಪರವಾಗಿ ನಾನು ಮಾಧ್ಯಮದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಕೇರಳಾ ರಾಜ್ಯದಲ್ಲಿ  ಇಂತಹ ಮೂರು ಪ್ರಕರಣಗಳು ದಾಖಲಾಗಿವೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಈ ಮೂರು ಜನರು ಹೆಚ್ಚು–ಕಡಿಮೆ ಗುಣಮುಖರಾಗುತ್ತಿದ್ದಾರೆ. ಆದರೆ ಈ ಪ್ರಕರಣ ಎಲ್ಲಿಯು ಪ್ರಸಾರವಾಗದ ರೀತಿಯಲ್ಲಿ ಆ ರಾಜ್ಯದವರು ಕಡಿವಾಣ ಹಾಕಿದ್ದಾರೆ. ಅದರಲ್ಲಿ ಅವರು ಯಶಸ್ವಿಯಾಗಿದ್ದಾರೆ.

**ಶ್ರೀ ಅಲ್ಲಂ ವೀರಭದ್ರಪ್ಪ:–** ಮಾನ್ಯ ಸಭಾಪತಿಗಳೆ, ಕೇರಳ ರಾಜ್ಯದಲ್ಲಿ ಮೂರು ಪ್ರಕರಣಗಳು ಕಂಡುಬಂದಿವೆ ಎಂದು ಮಂತ್ರಿಗಳು ಹೇಳಿದ್ದಾರೆ. But how it comes, what is the significance, what are the features ಎಂದು ಹೇಳಬೇಕು.

**ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು):–** ಮಾನ್ಯ ಸಭಾಪತಿಗಳೆ, *COVID-19 virus* ಎಂದು ಹೇಳಿದರು. ಇದು season wise ಆಗುತ್ತದೆಯೇ ಹೇಗೆ? ಏಕೆಂದರೆ ಚಿಕೂನ್‌ಗುನ್ಯಾ ಕಾಯಿಲೆ ಬಂದಿತ್ತು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಂತ್ರಿಗಳು ಪದೇ–ಪದೇ ಪ್ರಶ್ನೆಯನ್ನು ಕೇಳಬಾರದು.

**ಶ್ರೀ ಬಿ.ಸಿ.ಪಾಟೀಲ್:–** ಮಂತ್ರಿಗಳ ಹತ್ತಿರವೇ ಮಾತನಾಡಬೇಕು ಎಂದು ಅಲ್ಲ. ಇದು ಸಾರ್ವಜನಿಕ ಸಮಸ್ಯೆಯಾಗಿರುವುದರಿಂದ ನನಗೆ ಒಂದು doubt ಇದೆ.

**ಸಭಾಪತಿಯವರು:–** ತಾವು ಮಂತ್ರಿಗಳು ಮಾತ್ರವಲ್ಲ ಸರ್ಕಾರ ಕೂಡಾ.

**(ಮುಂದು)**

(143)/04.03.2020/1.40/ಹೆಚ್‌ವಿ–ಬಿಎನ್‌ಎಸ್

**ಶ್ರೀ ಬಿ.ಸಿ.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಹಿಂದೆ ಚಿಕುನ್ ಗುನ್ಯಾ ರೋಗದಿಂದಾಗಿ ರಾಜ್ಯದಲ್ಲಿ ಭಯಾನಕ ವಾತಾವರಣ ನಿರ್ಮಾಣವಾಗಿತ್ತು. ಈಗ ಎಲ್ಲಿಯೂ ಚಿಕುನ್ ಗುನ್ಯಾ ರೋಗ ಕಂಡು ಬರುತ್ತಿಲ್ಲ. ಪ್ರಸ್ತುತ ಕೊರೊನಾ ವೈರಸ್ ಹಾವಳಿ ಪ್ರಾರಂಭವಾಗಿದೆ. ಈ ಸೋಂಕು ಋತುಮಾನಕ್ಕೆ ಅನುಗುಣವಾಗಿ ಬರುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಚಿಕುನ್ ಗುನ್ಯಾ ರೋಗ ಹರಡದಂತೆ ಸರ್ಕಾರ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿತ್ತು, ಜನಸಾಮಾನ್ಯರು ಯಾವ ಯಾವ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡ ಹಿನ್ನೆಲೆಯಲ್ಲಿ ಆ ರೋಗದಿಂದ ಮುಕ್ತರಾಗಿದ್ದೇವೆ ಅದೇ ಕ್ರಮಗಳನ್ನು ಕೊರೊನಾ ವೈರೆಸ್ ಹರಡುವಿಕೆಯನ್ನು ತಡೆಗಟ್ಟುವಲ್ಲಿಯೂ ತೆಗೆದುಕೊಳ್ಳಲಾಗುತ್ತದೆಯೇ ಎನ್ನುವುದರ ಬಗ್ಗೆ ಬೆಳಕು ಚೆಲ್ಲಬೇಕಾಗಿದೆ.

**ಶ್ರೀ ಟಿ.ಎ.ಶರವಣ:–** ಸನ್ಮಾನ್ಯ ಸಭಾಪತಿಯವರೇ, ಚಿಕುನ್ ಗುನ್ಯಾ ರೋಗದಿಂದ ರಾಜ್ಯ ಮುಕ್ತವಾಗಿಲ್ಲ. ಈಗಲೂ ಆ ರೋಗ ಕಂಡು ಬರುತ್ತಿದೆ. ಆದರೆ, ಪರಿಸ್ಥಿತಿ ಸ್ವಲ್ಪ ಸುಧಾರಣೆಯಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ಕೆ.ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಈ ರಾಷ್ಟ್ರವನ್ನುದ್ದೇಶಿಸಿ ನಮ್ಮ ದೇಶದ ಪ್ರಧಾನ ಮಂತ್ರಿಗಳು ಮತ್ತು ಗೃಹ ಸಚಿವರು ಒಂದು ಘೋಷಣೆಯನ್ನು ಮಾಡಿದ್ದಾರೆ. "Experts across the world have advised to reduce mass gatherings to avoid the spread of COVID-19 Novel Coronavirus. Hence, this year I have decided not to participate in any Holi Milan programme" ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಅದೇ ರೀತಿಯಲ್ಲಿ ದೇಶದ ಗೃಹ ಸಚಿವರು, "I also appeal everyone to avoid public gatherings and take a good care of yourself and your family" ಎಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರುಗಳ ಅನುಮಾನಗಳಿಗೆ ಉತ್ತರ ದೊರಕಿದೆಯೆಂದು ನಾನು ಭಾವಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಈ ರೋಗ ಹರಡದಂತೆ ಯಾವ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದರೆ, ದೊಡ್ಡ ದೊಡ್ಡ ಸಭೆ ಮತ್ತು ಸಮಾರಂಭಗಳಲ್ಲಿ ಭಾಗವಹಿಸುವುದನ್ನು ಮತ್ತು ಜನರು ಗುಂಪುಗುಂಪಾಗಿ ಸೇರುವುದನ್ನು ಕಡಿಮೆ ಮಾಡಬೇಕಾಗುತ್ತದೆ. ಇದು ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ, ಜನರಲ್ಲಿ ಇದರ ಬಗ್ಗೆ ಅರಿವನ್ನುಂಟು ಮಾಡುವ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಹೆಚ್ಚು ಜನರು ಒಟ್ಟಿಗೆ ಸೇರುವಂತಹ ಸನ್ನಿವೇಶಗಳನ್ನು ಕಡಿಮೆ ಮಾಡುವುದು ಅತ್ಯಂತ ಅವಶ್ಯಕವಾಗಿದೆ. ಯಾರಿಗಾದರೂ ರೋಗದ ಲಕ್ಷಣಗಳಾದ ಜ್ವರ ಅಂದರೆ, ಸಾಮಾನ್ಯ ಜ್ವರ, ಕೆಮ್ಮು, ನೆಗಡಿ ಮತ್ತು ಸೀನುವ ಲಕ್ಷಣಗಳಲ್ಲಿ ಯಾವುದಾದರೊಂದು ಲಕ್ಷಣಗಳಿದ್ದರೂ ಕೂಡ ಅಂತಹವರು ಬೇರೆಯವರ ಜೊತೆಗೆ ಸೇರುವುದನ್ನು ಕಡಿಮೆ ಮಾಡಿಕೊಳ್ಳಬೇಕು. ಅವರು ಪ್ರತ್ಯೇಕವಾಗಿದ್ದು, ನೇರವಾಗಿ ವೈದ್ಯರನ್ನು ಸಂಪರ್ಕಿಸಿ ಪರೀಕ್ಷೆಗೆ ಒಳಪಡಬೇಕಾಗುತ್ತದೆ, ಇದು ಬಹಳ ಮುಖ್ಯವಾದ ಅಂಶವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈ ರೋಗ ಪರೀಕ್ಷೆಗಾಗಿ ಎಲ್ಲೆಲ್ಲಿ ಲ್ಯಾಬ್‌ಗಳನ್ನು ಸ್ಥಾಪನೆ ಮಾಡಲಾಗಿದೆ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದರು. ಈ ವೈರಸ್ ಪತ್ತೆಗಾಗಿ ರಕ್ತ ಪರೀಕ್ಷೆ ಮಾಡಲು ಆಸ್ಪತ್ರೆಗಳು ಮತ್ತು ಆರೋಗ್ಯ ಸೇವೆ ಪೂರೈಕೆದಾರರ ರಾಷ್ಟ್ರೀಯ ಮಾನ್ಯತಾ ಸಂಸ್ಥೆ(ಎನ್.ಎ.ಬಿ.ಹೆಚ್.) ವತಿಯಿಂದ ಮಾನ್ಯತೆಯನ್ನು ಪಡೆದ ಪ್ರಯೋಗಾಲಯಗಳನ್ನು ಪ್ರಾರಂಭ ಮಾಡಿದ್ದೇವೆ. ಸಣ್ಣ–ಮಟ್ಟ ಪ್ರಯೋಗಾಲಯಗಳಲ್ಲಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಈ ವೈರಸ್ ಸಂಶೋಧನಾ ಪ್ರಯೋಗಾಲಯವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಆಸ್ಪತ್ರೆಗಳು ಮತ್ತು ಆರೋಗ್ಯ ಸೇವೆ ಪೂರೈಕೆದಾರರ ರಾಷ್ಟ್ರೀಯ ಮಾನ್ಯತಾ ಸಂಸ್ಥೆ(ಎನ್.ಎ.ಬಿ.ಹೆಚ್.) ವತಿಯಿಂದ ಮಾನ್ಯತೆಯನ್ನು ಪಡೆದಿರಬೇಕಾಗುತ್ತದೆ. ನಾನು ವೈದ್ಯಕೀಯ ಶಿಕ್ಷಣ ಸಚಿವನಾದ ಮೇಲೆ ಕಳೆದ 15 ದಿನಗಳ ಹಿಂದೆ ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆ ಹಾಗೂ ಬಿ.ಎಂ.ಸಿ. ಕೇಂದ್ರದಲ್ಲಿ ಈ ವೈರಸ್ ಅನ್ನು ಪರೀಕ್ಷೆ ಮಾಡುವುದಕ್ಕೆ ಒಂದು Virology

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Lab ಅನ್ನು ಉದ್ಘಾಟನೆ ಮಾಡಿದ್ದೇನೆ. ಇವತ್ತು ಬೆಳಿಗ್ಗೆ ನಿಮ್ಹಾನ್ಸ್ ಆಸ್ಪತ್ರೆಯ ನಿರ್ದೇಶಕರಾಗಿರುವ ಡಾ॥ಗಂಗಾಧರ್ ಅವರ ಜೊತೆಗೆ ಮಾತನಾಡಿ, 'ಆಸ್ಪತ್ರೆಗಳು ಮತ್ತು ಆರೋಗ್ಯ ಸೇವೆ ಪೂರೈಕೆದಾರರ ರಾಷ್ಟ್ರೀಯ ಮಾನ್ಯತಾ ಸಂಸ್ಥೆ(ಎನ್.ಎ.ಬಿ.ಹೆಚ್.) ವತಿಯಿಂದ ಮಾನ್ಯತೆಯನ್ನು ಪಡೆದಿರುವ ಪ್ರಯೋಗಾಲಯ ಇರುವುದರಿಂದ ಇಲ್ಲಿಯೂ ಕೂಡ ವ್ಯವಸ್ಥೆ ಮಾಡಬೇಕು' ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರುಗಳು ಮಾತನಾಡುತ್ತಾ, ಬೆಂಗಳೂರು ಹೊರತು ಪಡಿಸಿ ಬೇರೆ ಜಿಲ್ಲೆಗಳಲ್ಲಿಯೂ ಸಹ ವಲಯವಾರು ಇಂತಹ ವ್ಯವಸ್ಥೆಗಳನ್ನು ಮಾಡಬೇಕೆಂದು ಹೇಳಿದ್ದರು.

**Sri K.GOVINDARAJ**:- In all the District Head Quarters arrangement has to be made.

**ಡಾ॥ಕೆ.ಸುಧಾಕರ್:–** ಸನ್ಮಾನ್ಯ ಸಭಾಪತಿಯವರೇ, ಅದನ್ನು ಮಾಡಬೇಕೆನ್ನುವ ಹಂಬಲ ನಮ್ಮ ಸರ್ಕಾರಕ್ಕಿದೆ. ಆದರೆ, ಇದರಲ್ಲಿ ಕೆಲವೊಂದು ತಾಂತ್ರಿಕ ಸಮಸ್ಯೆಗಳಿವೆ. ಈ ವೈರಸ್ ಸಂಶೋಧನಾ ಪ್ರಯೋಗಾಲಯವನ್ನು ತೆರೆಯಬೇಕಾದರೆ, ಆಸ್ಪತ್ರೆಗಳು ಮತ್ತು ಆರೋಗ್ಯ ಸೇವೆ ಪೂರೈಕೆದಾರರ ರಾಷ್ಟ್ರೀಯ ಮಾನ್ಯತಾ ಸಂಸ್ಥೆ(ಎನ್.ಎ.ಬಿ.ಹೆಚ್.) ವತಿಯಿಂದ ಮಾನ್ಯತೆಯನ್ನು ಪಡೆಯಬೇಕಾಗುತ್ತದೆ. ಅವರು ಮಾನ್ಯತೆಯನ್ನು ಕೊಡುವುದು ಕಷ್ಟ.

**ಶ್ರೀ ಕೆ.ಗೋವಿಂದರಾಜ್:–** ಸನ್ಮಾನ್ಯ ಸಭಾಪತಿಯವರೇ, ಜಿಲ್ಲಾ ಮುಖ್ಯ ಕೇಂದ್ರಗಳಲ್ಲಿ ಈ ಪ್ರಯೋಗಾಲಯವನ್ನು ತೆರೆಯುವುದಕ್ಕೆ ಏನು ತೊಂದರೆ ಇಲ್ಲ.

**ಡಾ॥ಕೆ.ಸುಧಾಕರ್:–** ಸನ್ಮಾನ್ಯ ಸಭಾಪತಿಯವರೇ, ಆ ನಿಟ್ಟಿನಲ್ಲಿ ಪ್ರಯತ್ನ ಪಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮೈಸೂರು, ಹೆಚ್.ಡಿ.ಕೋಟೆ, ಚಾಮರಾಜನಗರ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ಇಂತಹ ಕೇಂದ್ರಗಳನ್ನು ತೆರೆಯಲೇಬೇಕಾಗುತ್ತದೆ. ಸೋಂಕಿತ ರಾಜ್ಯಗಳಲ್ಲಿ ಇವುಗಳನ್ನು ಈಗಾಗಲೇ ತೆರೆಯಲಾಗಿದೆ. ಬೆಂಗಳೂರು ನಗರದ ಜನರು ಕೊರೊನಾ ಸೋಂಕಿನ ಬಗ್ಗೆ ಆತಂಕಕ್ಕೊಳಗಾಗಿದ್ದಾರೆ. ಏಕೆಂದರೆ, ಬೆಂಗಳೂರಿಗೆ ಆಗಮಿಸಿದ ಹೈದ್ರಾಬಾದ್ ಮೂಲದ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರಲ್ಲಿ ಈ ಸೋಂಕು ಕಂಡು ಬಂದಿದೆ. ಆತ ವಾಸಿಸುತ್ತಿದ್ದ ಅಪಾರ್ಟ್‌ಮೆಂಟ್, ಆತ ಪ್ರಯಾಣಿಸಿದ ಬಸ್ ಮತ್ತು ಕಾರ್‌ಗಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಇದಕ್ಕಾಗಿ ಒಂದು ವಿಶೇಷ ಘಟಕವನ್ನು ಪ್ರಾರಂಭಿಸಲಾಗಿದೆ. ಆ ಮೂಲಕ ಜನರಲ್ಲಿನ ಆತಂಕವನ್ನು ನಿವಾರಣೆ ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಅದೇ ರೀತಿಯಲ್ಲಿ ಕೊರೊನಾ ವೈರಸ್ ಸೋಂಕು ಇರುವಂತಹ ರಾಜ್ಯಗಳ ಗಡಿ ಭಾಗಗಳಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇರುವಂತಹ ಜಿಲ್ಲೆಗಳಲ್ಲಿ ಸಹ ಇಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಕೇವಲ ವಿಮಾನ ನಿಲ್ದಾಣಗಳಲ್ಲಿ ಮಾತ್ರವಲ್ಲ, ಬಸ್ ಮತ್ತು ರೈಲು ನಿಲ್ದಾಣಗಳಲ್ಲಿಯೂ ಸಹ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ರೈಲ್ವೆ ನಿಲ್ದಾಣಗಳಲ್ಲಿ ಮೂಗು ಮುಚ್ಚಿಕೊಂಡು ಓಡಾಡಬೇಕಾಗಿರುವ ಪರಿಸ್ಥಿತಿ ಇದೆ. ಆದ್ದರಿಂದ ಅಂತರ್‌ರಾಜ್ಯಗಳಿಂದ ಬರುವಂತಹ ರೈಲ್ವೆ ನಿಲ್ದಾಣಗಳು ಮತ್ತು ಬಸ್ ನಿಲ್ದಾಣಗಳಲ್ಲಿ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ವ್ಯವಸ್ಥೆಯಲ್ಲಿ ಒಂದು ಮದುವೆಗೆ ಅಥವಾ ಬೀಗರೂಟಕ್ಕೆ 2 ರಿಂದ 5 ಸಾವಿರ ಜನರು ಸೇರುತ್ತಾರೆ. ಅಂತಹ ಕಡೆಗಳಲ್ಲಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಹೇಳಿದಂತೆ ತೆಲಂಗಾಣ ರಾಜ್ಯ ಕಲ್ಯಾಣ ಕರ್ನಾಟಕದ ರಾಯಚೂರು, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳ ಗಡಿ ಭಾಗವಾಗಿದೆ. ಇಲ್ಲಿಗೆ ಪ್ರತಿನಿತ್ಯ ನೂರಾರು ಜನರು ಬಂದು ಹೋಗುತ್ತಿರುತ್ತಾರೆ. ಆದ್ದರಿಂದ ಈ ಭಾಗದಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಇಂತಹ ಪ್ರಯೋಗಾಲಯಗಳನ್ನು ಸ್ಥಾಪಿಸುವಂತಹ ಪ್ರಯತ್ನವನ್ನು ಸರ್ಕಾರ ಮಾಡಬೇಕಾಗಿದೆ. ತೆಲಂಗಾಣದಲ್ಲಿ ಕೊರೊನಾ ಸೋಂಕು ಪೀಡಿತ ಪ್ರಕರಣ ಪತ್ತೆಯಾಗಿದೆಯೆಂದು ನನ್ನ ಸ್ನೇಹಿತರು ಹೇಳಿದರು. ರಾಯಚೂರು, ಗುಲ್ಬರ್ಗಾ ಹಾಗೂ ಬೀದರ್ ಜಿಲ್ಲೆಗಳಲ್ಲಿ ಈ ಸೋಂಕು ಹರಡುವಂತಹ ಶಂಕೆ ಇರುವುದರಿಂದ ತಕ್ಷಣ ಸರ್ಕಾರ ಬೆಂಗಳೂರಿನಲ್ಲಿ ಸ್ಥಾಪಿಸಿರುವಂತಹ ಪ್ರಯೋಗಾಲಯವನ್ನು ಈ ಭಾಗಗಳಲ್ಲಿ ಸ್ಥಾಪಿಸಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಈ ರೋಗವನ್ನು 'epidemic' ಎಂದು ಹೇಳಿದ್ದಾರೆ. ಇದು epidemic ಅಲ್ಲ. 'Epidemic' ಅಂದರೆ, ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಆದ್ದರಿಂದ ಇದು epidemic ಅಲ್ಲ, 'pandemic' ಎಂದು ವಿಶ್ವ ಆರೋಗ್ಯ ಸಂಸ್ಥೆಯವರೇ ಘೋಷಣೆ ಮಾಡಿದ್ದಾರೆ. ಈ ರೋಗ ಇಡೀ ವಿಶ್ವವನ್ನು ವ್ಯಾಪಿಸಿದೆ.

**ಡಾ||ಕೆ.ಸುಧಾಕರ್:–** ಸನ್ಮಾನ್ಯ ಸಭಾಪತಿಯವರೇ, ಇದನ್ನು 'Global Pandemic' ಎಂದು ಇಲ್ಲಿಯವರೆಗೆ ಘೋಷಣೆ ಮಾಡಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, I have gone through the reports. World Health Organization has stated that it is pandemic. Epidemic means it is confined to one region. But, it is like Global Pandemic.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ||ಕೆ.ಸುಧಾಕರ್:–** ಸನ್ಮಾನ್ಯ ಸಭಾಪತಿಯವರೇ, let me correct the statement made by the Hon'ble Opposition Leader. ಇದನ್ನು globally pandemic ಎಂದರೆ ತಪ್ಪಾಗುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯವರು ಇದನ್ನು 'Global Pandemic' ಎಂದು ಘೋಷಣೆ ಮಾಡಬೇಕಾಗುತ್ತದೆ. Pandemic ಎಂದರೆ, ಒಬ್ಬರಿಗೆ ಬಂದರೆ, ಇಡೀ ಆ ಸಮುದಾಯಕ್ಕೆ, ಆ ರಾಜ್ಯಕ್ಕೆ ಮತ್ತು ಇಡೀ ರಾಷ್ಟ್ರಕ್ಕೆ ಹರಡುವಂತಹ ರೋಗವಾಗಿದೆ. 'Pandemic' ಎನ್ನುವುದು ಬಹಳ ವಿಸ್ತಾರವಾಗಿರುವ terminology ಆಗಿದೆ. Let us not sensationalise. ನಾನು ಪ್ರತಿದಿನ ವಿಶ್ವ ಆರೋಗ್ಯ ಸಂಸ್ಥೆಯಿಂದ ಹೊರಡಿಸುವಂತಹ ಬುಲೆಟಿನ್‌ಗಳನ್ನು ತಂದು ಬಹಳ ಜವಾಬ್ದಾರಿಯಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ.

**Sri S.R.PATIL**:- I am not a Medical Graduate. Let the Hon'ble Minister have some patience and listen to me. The Government will have ample of time to give its reply.

**ಡಾ||ಕೆ.ಸುಧಾಕರ್:–** ಸನ್ಮಾನ್ಯ ಸಭಾಪತಿಯವರೇ, ಅವರ ಮಾತಿಗೆ ಅಡಚಣೆಯುಂಟು ಮಾಡಬೇಕೆನ್ನುವ ಉದ್ದೇಶ ನನಗಿಲ್ಲ. ಆದರೆ, ರಾಜ್ಯದ ಜನತೆಗೆ ಇಲ್ಲಿಂದ ತಪ್ಪು ಮಾಹಿತಿ ಹೋಗಬಾರದೆನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, he has to rectify it. ನಾನು ವೈದ್ಯಕೀಯ ಪದವೀಧರನಲ್ಲ, ನಾನು ಕಾನೂನು ತಜ್ಞನಾಗಿದ್ದೇನೆ. Whatever I have heard through some media that, ವಿಶ್ವ ಆರೋಗ್ಯ ಸಂಸ್ಥೆಯವರು ಇದನ್ನು pandemic ಎಂದು ಹೇಳಿರುವುದರಿಂದ ನಮ್ಮಲ್ಲಿ ಭಯ ಪ್ರಾರಂಭವಾಗಿದೆ. Pandemic ಎಂದರೆ, global phenomenon ಆಗಿದೆ. ಇಡೀ ವಿಶ್ವವನ್ನು ವ್ಯಾಪಿಸುವಂತಹ ರೋಗವಾಗಿದೆ. ಅವರೇ ನೀಡಿರುವ ಉತ್ತರದಲ್ಲಿ 'ಸುಮಾರು 76 ದೇಶಗಳಿಗೆ ವಿಸ್ತರಿಸಿದೆ' ಎಂದು ತಿಳಿಸಲಾಗಿದೆ. ಪ್ರಪಂಚದ 76 ದೇಶಗಳಿಗೆ ಈ ಸೋಂಕು ಹರಡಿದೆ. ಸುಮಾರು 90 ಸಾವಿರಕ್ಕೂ ಹೆಚ್ಚು ಜನರು ಸೋಂಕಿತರಾಗಿದ್ದಾರೆ. ಸುಮಾರು 30 ಸಾವಿರಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ನನ್ನ ಆತಂಕವೇನೆಂದರೆ, ಚೈನಾ ದೇಶದಲ್ಲಿ ಏನಾಗಿದೆ ಅದೆಲ್ಲ ಸೆನ್ಸಾರ್ ಆಗಿದೆ. It is not a democratic Country. ಚೈನಾದ ವುಹಾನ್ ನಗರವನ್ನು ಪೂರ್ತಿಯಾಗಿ ಸೀಲ್ ಮಾಡಲಾಗಿದೆ. ಅಲ್ಲಿ ಹೊರಗಿನವರು ಒಳಗೆ ಬರುವಂತಿಲ್ಲ. ಒಳಗಿನವರು ಹೊರಗೆ ಹೋಗುವಂತಿಲ್ಲ ಅಂತಹ ಪರಿಸ್ಥಿತಿ ಇದೆ. ಚೈನಾದರಲ್ಲಿ ಈ ಸೋಂಕಿನ ಭೀಕರತೆ ಎಷ್ಟಿದೆ ಎನ್ನುವುದರ ಅರಿವು ನಮಗಿಲ್ಲ. ಅದೊಂದು ಕಮ್ಯುನಿಸ್ಟ್ ರಾಷ್ಟ್ರವಾಗಿರುವುದರ ಜೊತೆಗೆ ಸೆನ್ಸಾರ್ ಇರುವುದರಿಂದ ಮಾಧ್ಯಮದವರು ಅಲ್ಲಿ ಏನು ಮಾಡುವುದಕ್ಕೂ ಆಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಚೀನಾ ದೇಶದಲ್ಲಿ ಸುಮಾರು 150 ಕೋಟಿ ಜನಸಂಖ್ಯೆ ಇದ್ದು, ಪ್ರಪಂಚದಲ್ಲಿಯೇ ಅತೀ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ಅದರ ನಂತರದ ಸ್ಥಾನವನ್ನು ಭಾರತ ದೇಶ ಪಡೆದುಕೊಂಡಿದೆ. ವಿಶ್ವ ಆರೋಗ್ಯ ಸಂಸ್ಥೆಯಿಂದ ಆ ರೀತಿಯ ವರದಿ ಬಂದಿದೆ ಎಂದು ನಾನು ಹೇಳುತ್ತಿದ್ದೇನೆ. ಅವರು ಸಂಬಂಧಪಟ್ಟ ಖಾತೆಯನ್ನು ಹೊಂದಿದ್ದಾರೆ. ಅವರಿಗೆ ಅನುಭವ ಕೂಡ ಇದೆ. ನನಗಿರುವ ಆತಂಕವನ್ನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಬೆಂಗಳೂರಿನಲ್ಲಿ ವೈರಸ್ ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡಲಾಗಿದೆಯೆಂದು ಅವರು ಹೇಳಿದರು. Bengaluru is the biggest Metropolitan City.

(ಮುಂದುವರಿದಿದೆ)

(144) 4.3.2020 1.50 ಪಿಕೆ:ಬಿಎನ್ಎಸ್

**ಶ್ರೀ ಎಸ್.ಆರ್.ಪಾಟೀಲ್(ಮುಂದುವರೆದಿದೆ)**

ಇಲ್ಲಿನ ಜನಸಂಖ್ಯೆ ಕೋಟಿಗೂ ಮೀರಿದೆ. ಹಾಗಾಗಿ, ಒಂದು ಆಸ್ಪತ್ರೆ ಸಾಕಾಗುವುದಿಲ್ಲ. ಹೆಚ್ಚು ಆಸ್ಪತ್ರೆಗಳಲ್ಲಿ ವ್ಯವಸ್ಥೆ ಮಾಡುವುದು ಒಳ್ಳೆಯದು. ಮತ್ತೆ, ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಆಸ್ಪತ್ರೆಗಳಲ್ಲಿಯೂ ವ್ಯವಸ್ಥೆ ಮಾಡಬೇಕು.

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಮಾತನಾಡಿದ ನಂತರ ಮಾನ್ಯ ಸಭಾನಾಯಕರು ಮಾತನಾಡಿದರೆ ಒಳ್ಳೆಯದು.

**ಶ್ರೀ ಎಸ್.ಆರ್.ಪಾಟೀಲ್:–** ನಾನು ಕೇಳಲು ಬಯಸಿರುವ ಅಂಶಗಳಿಗೂ ಉತ್ತರ ಕೊಡುವಾಗ ಕ್ಲ್ಯಾರಿಫಿಕೇಷನ್ ಕೊಡಲಿ ಎಂದು ಮಾತನಾಡುತ್ತಿದ್ದೇನೆ. Pandemic ಎಂದು ಕೇಳಿದ ಮೇಲೆ ನನಗೆ ಭಯ ಪ್ರಾರಂಭವಾಗಿದೆ. ನಾನು ಪ್ರತಿಪಕ್ಷದ ನಾಯಕನಾಗಿ ರಾಜ್ಯವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. ಪ್ರತಿ ಜಿಲ್ಲಾ ಕೇಂದ್ರಗಳಲ್ಲಿರುವ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಆಗಬೇಕು ಎನ್ನುವುದು ನನ್ನ ಸಲಹೆಯಾಗಿದೆ. ಬೆಂಗಳೂರು ಸಿಟಿಗೆ ಕೇವಲ ರಾಜೀವ್‌ಗಾಂಧೀ ಆಸ್ಪತ್ರೆಯೊಂದೇ ಸೀಮಿತವಾಗಬಾರದು. Bengaluru is a Metropolitan City and also World City. ಇವತ್ತು ವಿದೇಶದಲ್ಲಿ ಕುಳಿತು, ಇಂಡಿಯಾ ಎಂದರೆ ದೆಹಲಿ ಎಂದು ಹೇಳುವುದಿಲ್ಲ; ಬೆಂಗಳೂರು ಎಂದು ಹೇಳುತ್ತಾರೆ. ಇಂಡಿಯಾ ಎಂದರೆ ಬೆಂಗಳೂರು ಎನ್ನುವಷ್ಟರ ಮಟ್ಟಿಗೆ ಪ್ರಖ್ಯಾತಿ ಪಡೆದಿರುವಂತಹ, ಹೆಚ್ಚು ಜನ ವಸತಿ ಹೊಂದಿರುವ ಪ್ರದೇಶ ಇದಾಗಿದೆ. ಬೆಂಗಳೂರು Metropolitan City ಗೆ ಒಂದೇ ಆಸ್ಪತ್ರೆ ಸೀಮಿತವಾಗಬಾರದು. ಇನ್ನೂ ಹೆಚ್ಚು ಆಸ್ಪತ್ರೆಗಳಿಗೆ ಆ ವ್ಯವಸ್ಥೆ ಮಾಡಿ. ಬೆಂಗಳೂರು ಹೊರತುಪಡಿಸಿದರೆ ರಾಜ್ಯದ ೩೦ ಜಿಲ್ಲೆಗಳ ಜಿಲ್ಲಾ ಕೇಂದ್ರಗಳ ಆಸ್ಪತ್ರೆಗಳಲ್ಲಿ ಇದರ ವ್ಯವಸ್ಥೆ ಮಾಡಬೇಕು.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಗಳೇ, ಈಗಾಗಲೇ ನಾನು ಹೇಳಿದ ಹಾಗೆ, ವಿಶ್ವ ಆರೋಗ್ಯ ಸಂಸ್ಥೆಯವರು ಈ ರೋಗವನ್ನು 'Global Pandemic' ಎಂದು ಘೋಷಣೆ ಮಾಡಿಲ್ಲ. ಇದು 'Epidemic' ಆಗಿದೆ. 'Epidemic' ಗೂ 'Pandemic' ಗೂ ವ್ಯತ್ಯಾಸ ಇದೆ. Pandemic ಎಂದರೆ, ಇಡೀ ವಿಶ್ವದಲ್ಲಿ ಅನೇಕ ದೇಶಗಳಲ್ಲಿ ಇದು ಪ್ರಸಾರ ಆಗಿ, ಅಲ್ಲೂ ಕೂಡ ಅನೇಕರಿಗೆ ಮಾರಣಾಂತಿಕವಾಗಿ ಹರಡುವಂಥದ್ದು. It is a very contagious phenomenon. ಅಂತಹ contagious phenomenon ಇನ್ನೂ ಕೂಡ ಆಗಿಲ್ಲ. 130 ಕೋಟಿ ಜನರಲ್ಲಿ ಅನೇಕರು ವಿದೇಶ ಪ್ರಯಾಣ ಮಾಡುತ್ತಿದ್ದಾರೆ. ಎರಡು ತಿಂಗಳಾದರೂ ಕೂಡ ೫ ಪ್ರಕರಣಗಳಲ್ಲಿ ಮಾತ್ರ ನಮಗೆ ಆ ರೋಗದ ಲಕ್ಷಣಗಳು ಕಾಣಿಸಿಕೊಂಡಿವೆ, ಈ ರೋಗದ ವೈರಾಣುಗಳು ಅವರಲ್ಲಿದೆ ಎನ್ನುವುದು ಗೊತ್ತಾಗಿದೆ ಎಂದರೆ, ಇದರ ಪ್ರಸಾರದ ವೇಗ ಏನಿದೆ, ಹರಡುವ ರೀತಿ ಏನಿದೆ ಅದನ್ನು ನೋಡಿದರೆ pandemic ಎಂದು ಹೇಳುವುದಕ್ಕಾಗುವುದಿಲ್ಲ. ಹಾಗಾಗಿ ಇದು epidemic ಆಗಿದೆ. ಅದಕ್ಕೋಸ್ಕರವೇ ಇವತ್ತು World Health Organization ನವರು 3 'ಸಿ' ಗಳನ್ನು ಹೇಳಿದ್ದಾರೆ. ಈ 3 'ಸಿ' ಗಳು ಏನೆಂದರೆ, 'First Case', ಯಾರಿಗೆ ಆ ರೋಗದ ಲಕ್ಷಣ ಇದೆಯೋ ಅಂತಹವರ ಬಗ್ಗೆ ಬಹಳ ಕೂಲಂಕಷವಾಗಿ ಅವರನ್ನು ಪ್ರತ್ಯೇಕ ಮಾಡಬೇಕು, quarantine ಮಾಡಿ ಅವರ ಮೇಲೆ ೧೪ ದಿವಸಗಳು ನಿಗಾ ಇಡುವಂಥದ್ದು. ಆದರೆ ನಮ್ಮ ರಾಜ್ಯದಲ್ಲಿ ನಾವು 28 ದಿವಸಗಳ ಕಾಲ ನಿಗಾ ಇಡುತ್ತಿದ್ದೇವೆ. First Case ಅವರ ಜೊತೆಯಲ್ಲಿ ಇರುವಂಥದ್ದು First Cluster. 2ನೇ ಸಿ ಎಂದರೆ 'Cluster'. ಅವರ ಜೊತೆ ಸಂಪರ್ಕಕ್ಕೆ ಬಂದಿರುವಂತಹ ಜನರು. ಅವರ ಬಗ್ಗೆ ಕೂಡ ನಾವು ಈಗಾಗಲೇ quarantine ಮಾಡುತ್ತಿದ್ದೇವೆ. ಯಾರು ದುಬೈ ಮೂಲದಿಂದ ಬಂದು ತೆಲಂಗಾಣಕ್ಕೆ ಹೋದರೋ, ಆ ಒಂದು ದಿವಸದ ಸಮಯದಲ್ಲಿ, ಅವರು ಕೆಲಸ ಮಾಡುತ್ತಿದ್ದ ಕಚೇರಿ ಇರಬಹುದು, ಅಲ್ಲಿ ಅವರ ಸಹೋದ್ಯೋಗಿಗಳು ಇರಬಹುದು, ಅವರ ಜೊತೆ ಮಾತನಾಡಿದಂತಹ ಎಲ್ಲರೂ ಕೂಡ ಮತ್ತು ಅವರು ವಿಮಾನದಲ್ಲಿ ಬಂದಂಥ ಸಹಪ್ರಯಾಣಿಕರು, ಸದರಿಯವರು ಬಳಸಿದ ಕಾರು ಹಾಗೂ ಅಲ್ಲಿಂದ ಹೈದರಾಬಾದ್‌ಗೆ ಹೋದ ಬಸ್ಸು, ಆ ಬಸ್ಸಿನಲ್ಲಿದ್ದಂತಹ ಸಹ ಪ್ರಯಾಣಿಕರು, ಈ ಇಷ್ಟೂ ಜನರನ್ನು ನಮ್ಮ ಇಲಾಖೆ ಸಂಪರ್ಕ ಮಾಡಿ, ಅವರನ್ನೂ quarantine ಮಾಡಿ, ಪ್ರತ್ಯೇಕ ಮಾಡಿದೆ. ತೆಲಂಗಾಣದಲ್ಲಿ ಇವರ ಜೊತೆ ಬಸ್‌ನಲ್ಲಿ ಯಾರು ೨೫ ಜನ ಪ್ರಯಾಣ ಮಾಡಿದ್ದರೋ ಆ ಕುರಿತು, ತೆಲಂಗಾಣ ರಾಜ್ಯಕ್ಕೆ ಮಾಹಿತಿ ಕೊಟ್ಟು, ನಮ್ಮ ರಾಜ್ಯ ಸರ್ಕಾರದ ಮಾದರಿಯಲ್ಲಿ ಅವರ ಸರ್ಕಾರ ಅವರನ್ನು quarantine ಮಾಡಿ ನೋಡಿಕೊಳ್ಳುತ್ತಿದೆ. ಮಾನ್ಯ ಸಭಾಪತಿಗಳೇ, ಎಲ್ಲಾ ರಾಜ್ಯಗಳು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿವೆ. ವಿಶ್ವ ಆರೋಗ್ಯ ಸಂಸ್ಥೆಯವರು ನಿನ್ನೆ ಏನು ಘೋಷಣೆ ಮಾಡಿದರೋ ಅದರಿಂದ ನಮಗೆ ಸ್ವಲ್ಪ ಆತಂಕ ಹುಟ್ಟಿಸಿದೆ. ಪ್ರಾರಂಭದಲ್ಲಿ ಇದರ mortality rate depending upon age, ಕೇವಲ 1.8 ರಿಂದ 2.2 ಪರ್ಸೆಂಟ್ ಇತ್ತು. ಮೊದಲು ಸಿಂಗಾಪೂರ್‌ನಲ್ಲಿ ಬಂದಾಗ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಅವರು mortality rate ಕೇವಲ 0.2 ಪರ್ಸೆಂಟ್ ಎಂದು ಹೇಳಿದರು. ಆದರೆ ನಿನ್ನೆ ವಿಶ್ವ ಆರೋಗ್ಯ ಸಂಸ್ಥೆಯವರು '3.4% is the mortality rate', ಎಂದು ಘೋಷಣೆ ಮಾಡಿದ್ದಾರೆ.

**Sri S.R.PATIL** :- Is it irrespective of age?

**ಡಾ॥ ಕೆ.ಸುಧಾಕರ್:–** They have not given any clarification on the age. It is just a bulletin. ಅವರು ಆ ಕುರಿತು ಏನೂ ಹೇಳಿಲ್ಲ. ಬಹಳ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಆ ಬಗ್ಗೆಯೂ ಹೇಳಬಹುದು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ವಯಸ್ಸಿನ ಆಧಾರದ ಮೇಲೆ ಇದು ಹರಡುತ್ತದೆ ಎನ್ನುವುದಕ್ಕಿಂತ ಯಾರಿಗೆ immunity ಇರುವುದಿಲ್ಲವೋ ಅವರಿಗೆ ತಕ್ಷಣ ಇದು ಪರಿಣಾಮ ಬೀರುತ್ತದೆ.

**Sri S.R.PATIL** :- Is there any classification as to the age group? Because, in the above 70 years age group, it is more than 30%.

**ಡಾ॥ ಕೆ.ಸುಧಾಕರ್:–** ಇಲ್ಲ, 60 ವರ್ಷಕ್ಕಿಂತ ಮೇಲಿರುವವರಿಗೆ ಇದರ ಪರಿಣಾಮ ಬೀರಬಹುದು. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಹೇಳಿದ ಹಾಗೆ, ಯಾರಿಗೆ ರೋಗ ನಿರೋಧಕ ಶಕ್ತಿ ಕಡಿಮೆ ಇರುತ್ತದೆಯೋ ಅಂತಹವರಿಗೆ ಇದು ಬೇಗ ಹರಡುತ್ತದೆ. Easy target ಎಂದರೆ ವಯಸ್ಸಾದವರು. ಇದುವರೆಗಿನ global scenario ಏನಿದೆ ಎಂದರೆ, ಇದು ಮಕ್ಕಳಲ್ಲಿ ಹೆಚ್ಚಾಗಿ ಕಾಣುತ್ತಿಲ್ಲ. ಇದು ಒಂದು ಒಳ್ಳೆಯ ಬೆಳವಣಿಗೆ. The positive aspect of this virus is that it is not seen much in children. ವಯಸ್ಕರಲ್ಲೂ ಇದು ಹೆಚ್ಚು ಕಾಣಿಸುತ್ತಿಲ್ಲ. ಆದರೆ ವಯಸ್ಸಾದವರಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಆಗುವುದರಿಂದ ಅವರಲ್ಲಿ ಬೇಗ ಹರಡುತ್ತಿದೆ ಮತ್ತು ಅದರ ದುಷ್ಪರಿಣಾಮದಿಂದ ಸಾವು ಕೂಡ ಆಗುತ್ತಿದೆ. ನಾವಂತೂ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಇಲ್ಲಿ ಒಂದೇ ಒಂದು ಪ್ರಕರಣ ಇಲ್ಲದೇ ಹೋದರೂ ನಮ್ಮ ಸರ್ಕಾರ ಕಳೆದ ೧೫ ದಿವಸಗಳಿಂದ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ, ಎಲ್ಲಾ ಬಂದರುಗಳಲ್ಲಿ ಈಗಾಗಲೇ ಪರೀಕ್ಷೆಗೆ ಒಳಪಡಿಸುತ್ತಿದ್ದೇವೆ. ಕೇವಲ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಮಾತ್ರ ೪೦ ಸಾವಿರ ಪ್ರಯಾಣಿಕರನ್ನು ಪರೀಕ್ಷೆ ಮಾಡಿದ್ದೇವೆ. ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ನಾನೇ ಭೇಟಿ ಕೊಟ್ಟು, ಅಲ್ಲಿನ ಎಲ್ಲಾ ವ್ಯವಸ್ಥೆಗಳ ಬಗ್ಗೆ ನಿಗಾ ವಹಿಸಿದ್ದೇನೆ. ಮಂಗಳೂರಿನ ಏರ್‌ಪೋರ್ಟ್‌ನಲ್ಲಿ ಸುಮಾರು ೨೦ ಸಾವಿರ ಪ್ರಯಾಣಿಕರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಕರ್ನಾಟಕ ರಾಜ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಈ ಒಂದು COVID-19 virus ಅನ್ನು ಬಹಳ ಗಂಭೀರವಾಗಿ ಪರಿಗಣಿಸಿದೆ. ಜನರಿಗೆ ಯಾವುದೇ ಆತಂಕ ಇಲ್ಲ. ಪರೀಕ್ಷೆ ಮಾತ್ರವಲ್ಲ, ಯಾರಿಗಾದರೂ ಸೋಂಕು ತಗುಲಿದರೆ ಅಂಥವರಿಗೆ ನಾವು ಯಾವರೀತಿ ಚಿಕಿತ್ಸೆ ಕೊಡಬೇಕು, ಯಾವರೀತಿ ಪ್ರೋಟೋಕಾಲ್ ಅನುಸರಿಸಬೇಕು ಎಂದು ಈಗಾಗಲೇ ವಿಶ್ವ ಆರೋಗ್ಯ ಸಂಸ್ಥೆಯವರು ತಿಳಿಸಿದ್ದಾರೆ. ಆ ಚಿಕಿತ್ಸೆಯನ್ನು ಇಡೀ ದೇಶದಲ್ಲಿ ಫಾಲೋ ಮಾಡಲಾಗುತ್ತಿದೆ. ಪ್ರತಿ ದಿವಸ ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯವರ ಜೊತೆ ನಾವು ವಿಚಾರ–ವಿನಿಮಯ ಮಾಡಿಕೊಂಡು, ಮಾರ್ಗಸೂಚಿಗಳನ್ನು ಪ್ರತಿದಿವಸ ನಮ್ಮ ಇಲಾಖೆಯಿಂದ ಜನರಿಗೆ ಮುಟ್ಟಿಸುವ ಕೆಲಸ ಮಾಡುತ್ತಿದ್ದೇವೆ. ಇವತ್ತು ವಿಶೇಷವಾಗಿ ನಾನು ಎಲ್ಲಾ ಮಾಧ್ಯಮ ಸ್ನೇಹಿತರಲ್ಲಿ ಒಂದು ಮನವಿ ಮಾಡಬಯಸುತ್ತೇನೆ. It is like any other virus and we have to fight against it. ತಾವು ಇಂಥದ್ದನ್ನು ಅತಿಯಾಗಿ ವೈಭವೀಕರಿಸಿದರೆ ಜನ ಹೆಚ್ಚು ಆತಂಕಿತರಾಗುತ್ತಾರೆ. ಬಹಳ ಜನ, ಈ ರೋಗ ಬಂದರೆ ಉಳಿದುಕೊಳ್ಳುವುದಕ್ಕೆ ಆಗುವುದೇ ಇಲ್ಲ; ನಾವು ಸತ್ತೇ ಹೋಗುತ್ತೇವೆ ಎಂದು ತಿಳಿದುಕೊಂಡಿದ್ದಾರೆ.

(ಮುಂದು ...)

145/04–03–2020/2–00/ಬಿಕೆಪಿ–ಎಸ್‌ಕೆ
**ಡಾ|| ಕೆ. ಸುಧಾಕರ್(ಮುಂದು. . .)**

ಮತ್ತೆ, ಇದು ಭಾರತ ದೇಶದಲ್ಲಿ ಎಲ್ಲಿಯು ಉದ್ಭವವಾಗಿಲ್ಲ. ಇದು ಭಾರತ ದೇಶದಿಂದ ಬಂದಿರತಕ್ಕಂತಹ ಮೂಲ ಅಲ್ಲ. ಇದು ಚೈನಾದ ಯುಹಾನ್ ನಗರದಿಂದ ಬಂದಿರುವುದಾಗಿದೆ. ಅಲ್ಲಿಗೆ ಯಾರು ಭೇಟಿ ಕೊಟ್ಟಿದ್ದಾರೆ, ಅಲ್ಲಿನವರು ಬೇರೆ ಮೂಲಗಳಿಗೆ ಹೋದಂತಹ ಸಂದರ್ಭದಲ್ಲಿ ಹರಡಿರತಕ್ಕಂತಹ ರೋಗದ ಲಕ್ಷಣ ಇದಾಗಿದೆ. ಹೀಗಾಗಿ, ನಾನು ಗುಲ್ಬರ್ಗದಲ್ಲಿ ಇದ್ದೇನೆ, ಇಲ್ಲಿಯೂ ಬರಬಹುದಾ! ಬರುವುದಿಲ್ಲ. Unless and until if one travels to those virus affected areas and ಅವರು ಗುಲ್ಬರ್ಗ, ಬೀದರ್, ಬೆಳಗಾಂ ಗೆ ಬಂದರೆ ಅಂತಹ ಕಡೆಗಳಲ್ಲಿ ಈ ರೋಗ ಹರಡಲಿಕ್ಕೆ ಸಾಧ್ಯವಿದೆ. ಅದರೂ ಕೂಡ ತಮ್ಮೆಲ್ಲರ ಸಲಹೆಯಂತೆ ಕೆಲವು Regional centres ಕೂಡ ಮಾಡುವಂತಹ ಕೆಲಸವನ್ನು ಸರ್ಕಾರದ ವತಿಯಿಂದ ಮಾಡುತ್ತೇವೆ. NABH (National Accreditation Board for Hospitals & Healthcare providers) ರವರಿಗೆ ನಾವು ವಿಶೇಷವಾಗಿ ಮನವಿ ಮಾಡುತ್ತೇವೆ. ಅವರು accredit ಮಾಡುವಂತಹ ಅಂತಹ ಗುಣಮಟ್ಟ ಇರತಕ್ಕಂತಹ ಲ್ಯಾಬ್‌ಗಳನ್ನು ಮಾಡಬೇಕು. ಏಕೆಂದರೆ, ಬಹಳಷ್ಟು ಕಡೆ ನೆಗೆಟೀವ್ ಎಂದು ಹೇಳಿ ತಪ್ಪು ವರದಿಗಳನ್ನು ಕೊಡುತ್ತಾರೆ. ಬೇರೆ ವಿಷಯಗಳಲ್ಲಿ ಆ ಒಂದು ವೈರಸ್ ಇದ್ದರೂ ಕೂಡ ನೆಗೆಟೀವ್ ಕೊಟ್ಟಿರುವಂತಹ ಪ್ರಕರಣಗಳೂ ಕೂಡ ನಮ್ಮ ಮುಂದೆ ಇವೆ. ಹೀಗಾಗಿ, ನಾವು ಅತ್ಯಂತ ಗುಣಮಟ್ಟದ ಲ್ಯಾಬ್‌ಗಳನ್ನು ಈ ರಾಜ್ಯದಲ್ಲಿ ಮಾಡಬೇಕು. ನಮ್ಮ ಲ್ಯಾಬ್‌ನಿಂದ ಬರುವಂತಹ ವರದಿ 100ಕ್ಕೆ 100 ಸ್ಪಷ್ಟನೆಯಿಂದ ಸತ್ಯವಾಗಿರಬೇಕು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಲ್.ಭೋಜೇಗೌಡ:-** ಗುಣಮಟ್ಟದ ಮಾಸ್ಕ್ ಒದಗಿಸಬೇಕು.

**ಡಾ॥ ಕೆ. ಸುಧಾಕರ್:-** ನಾನು ನಂತರ ಆ ವಿಚಾರಕ್ಕೆ ಬರುತ್ತೇನೆ. I have started with quality labs and precautions. ಇನ್ನು ಮುನ್ನೆಚ್ಚರಿಕೆಯ ಕ್ರಮಗಳ ಬಗ್ಗೆ ನಮ್ಮ ವಿಧಾನ ಪರಿಷತ್ತಿನ ಬಹಳಷ್ಟು ಗೌರವಾನ್ವಿತ ಸದಸ್ಯರುಗಳು ಬಹಳ ಹೇಳಿದ್ದಾರೆ. ಮಾನ್ಯ ಸದಸ್ಯರುಗಳಾದ ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ, ಶ್ರೀ ಆರ್.ಧರ್ಮಸೇನ ರವರು, ಶ್ರೀ ಟಿ.ಎ.ಶರವಣ ರವರೆಲ್ಲರೂ ಸಹ ಮುಂಜಾಗ್ರತಾ ಕ್ರಮಗಳ ಬಗ್ಗೆ ಹೇಳಿದ್ದಾರೆ. ಅದಕ್ಕೆ ನಾವು ಮಾರ್ಗಸೂಚಿಗಳನ್ನು ಈಗಾಗಲೇ ಪ್ರತಿದಿವಸ ನೀಡುತ್ತಿದ್ದೇವೆ.

**ಶ್ರೀಮತಿ ಜಯಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಮೊಬೈಲ್ ಉಪಯೋಗದ ಬಗ್ಗೆ ಹೇಳಬೇಕು. ಹೆಲ್ತ್ ಇಸ್ ವೆಲ್ತ್ ಆಗಬೇಕು.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಅದರ ಬಗ್ಗೆಯೂ ಹೇಳುತ್ತೇನೆ, ಮೊಬೈಲ್ ಬಗ್ಗೆ, ಈ ಸೋಷಿಯಲ್ ಮಿಡಿಯಾ ಬಗ್ಗೆ 'Health is Wealth' ಎಂದು ಮಾನ್ಯ ಸದಸ್ಯರು ಹೇಳಿದರು, ಅವರು ಹೇಳಿದ್ದು ಸರಿ ಇದೆ. ಇವತ್ತು ಏನು ಕೋವಿಡ್ ವೈರಸ್ ಒಂದು ಅಂಕಿ-ಅಂಶದ ಪ್ರಕಾರ 15 ದಿವಸಗಳಲ್ಲಿ ಸುಮಾರು more than 25 lakh US dollars ಗಳಷ್ಟು global economy ಕಡಿಮೆಯಾಗಿದೆ.

**ಶ್ರೀಮತಿ ಜಯಮ್ಮ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಗಮನಕ್ಕೆ ಒಂದೇ ಒಂದು ವಿಚಾರವನ್ನು ತರಲಿಕ್ಕೆ ಬಯಸುತ್ತೇನೆ. ನನಗೆ ಒಂದು ವಿಚಾರದಲ್ಲಿ ಅನುಮಾನ ಇದೆ. ಬಿ.ಪಿ. ಚೆಕ್ ಮಾಡಲು ಏನು ಕಪ್ ಇಟ್ಟು ಚೆಕ್ ಮಾಡುತ್ತೀರಿ, ಅದರಿಂದ ಏನಾದರೂ ವೈರಸ್, ಮತ್ತೆ, stethoscope ನಿಂದ ಏನಾದರೂ ವೈರಸ್ ಬರುವುದರ ಬಗ್ಗೆ ಬೆಳಕನ್ನು ಚೆಲ್ಲಬೇಕು.

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಹೀಗಾಗಿ, this virus has affected the global economy. This virus has not only affected the health of the people but also the global economy. It has a widespread ramification, ಎಂದು ಹೇಳಲಿಕ್ಕೆ ಹೊರಟೆ. ಹೀಗಾಗಿ, ಇದರ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಂಡು, ಅಷ್ಟೇ ಗಾಂಭೀರ್ಯತೆಯಿಂದ, ಗಂಭೀರದಿಂದ ವೈರಸ್ ವಿರುದ್ಧ ಹೋರಾಟ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗ ಕರ್ನಾಟಕ ಸರ್ಕಾರದಿಂದ ನಮ್ಮ ಆರೋಗ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಮಾರ್ಗಸೂಚಿಗಳನ್ನು ಕೈಗೊಳ್ಳುತ್ತಿದ್ದೇವೆ. ಮೊದಲನೆಯದಾಗಿ ಹೇಳುವುದೇನೆಂದರೆ, ನಾವು ಸಾಮಾಜಿಕವಾಗಿ ಒಗ್ಗಟ್ಟನ್ನು ಪ್ರದರ್ಶನ ಮಾಡಬೇಕು. ಸಾಮಾಜಿಕವಾಗಿ ನಾವು ಐಕ್ಯತೆಯಿಂದ ಇರಬೇಕಾಗುತ್ತದೆ. ಮಾನಸಿಕವಾಗಿ ಧೈರ್ಯ ಮತ್ತ ಸ್ಥೈರ್ಯಗಳು ನಮಗೆ ಬೇಕಾಗಿರತಕ್ಕಂತಹ ಮೊದಲನೆಯ ಆಯುಧಗಳು. ಹೀಗಾಗಿ, ಬಹಳ ಜನರು ಇವತ್ತು ಆತಂಕಕ್ಕೆ ಒಳಗಾಗುತ್ತಿದ್ದಾರೆ. ಹೀಗಾಗಿ, ಇವತ್ತು ವದಂತಿಗಳಿಗೆ ಕಿವಿ ಕೊಡಬಾರದು. ಇದರ ಜೊತೆಗೆ ನಮ್ಮ ಮಾಧ್ಯಮದವರು ಸರ್ಕಾರದ ಜೊತೆ ಕೆಲಸ ಮಾಡಿ ಇದರ ನಿಯಂತ್ರಣ ಹೇಗೆ ಮಾಡಬೇಕು, ಇದರ ಬಗ್ಗೆ ಮುನ್ನೆಚ್ಚರಿಕೆಯನ್ನು ಹೇಗೆ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಮಾತ್ರ ಅವರು ಹೆಚ್ಚು ಪ್ರಚಾರ ಮಾಡಿದರೆ ಇವರು ಈ ರಾಜ್ಯಕ್ಕೆ ಮಾಡಿದಂತಹ ಒಳ್ಳೆಯ ಕೆಲಸವೆಂದು ನಾನು ಅಭಿಪ್ರಾಯ ಪಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ಜಾಹೀರಾತು ನೀಡಿದರೆ ಎಲ್ಲರಿಗೂ ವಿವರ ಲಭ್ಯವಾಗುತ್ತದೆ. ಇದು ರಾಜ್ಯದ ಎಲ್ಲಾ ಭಾಗಗಳಿಗೂ ತಲುಪುತ್ತದೆ. ಮಾಧ್ಯಮದವರು ಈ ಬಗ್ಗೆ ನೀಡಿದ ಮಾಹಿತಿ ಒಂದು ಕಡೆ ಸಿಗುತ್ತದೆ, ಮತ್ತೊಂದು ಕಡೆ ಸಿಗುವುದಿಲ್ಲ. ಎಲ್ಲದಕ್ಕೂ ನಾವು ಜಾಹೀರಾತು ಕೊಡುತ್ತೇವೆ. ಅದೇ ರೀತಿಯಲ್ಲಿ ಇದಕ್ಕೂ ಜಾಹೀರಾತು ಕೊಟ್ಟರೆ ಎಲ್ಲಾ ಕಡೆ ಹೋಗುತ್ತದೆ.

**ಡಾ॥ ಕೆ.ಸುಧಾಕರ್:–** ಖಂಡಿತವಾಗಿಯೂ ಈ ದಿಸೆಯಲ್ಲಿ ಹೆಚ್ಚು ಪ್ರಚಾರ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಈಗಾಗಲೇ ಮಾನ್ಯ ಸದಸ್ಯರೊಬ್ಬರು ವಿಮಾನದಲ್ಲಿ ಪ್ರಯಾಣ ಮಾಡುವವರನ್ನು ಮಾತ್ರ ನೋಡುತ್ತಿದ್ದೀರಿ, ಏತಕ್ಕೆ ರೈಲು, ಬಸ್ಸುಗಳಲ್ಲಿ ಪ್ರಯಾಣ ಮಾಡುವವರನ್ನು ನೋಡುತ್ತಿಲ್ಲವೆಂದು ಹೇಳಿದರು. ಅದಕ್ಕೆ ನಾನು ಸಾರಿಗೆ ಸಮೂಹ ಎಂದು ಹೇಳಿದೆ. ಬಸ್ಸುಗಳು, ರೈಲುಗಳು, ವಿಮಾನಗಳು ಮತ್ತು ವಿಮಾನ ನಿಲ್ದಾಣಗಳು, ಬಂದರುಗಳಲ್ಲಿ ಪ್ರಯಾಣ ಮಾಡುವಂತಹ ಎಲ್ಲರ ತಪಾಸಣೆಯನ್ನು ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ. *'Prevention is better than cure',* ಎಂದು ಹೇಳಿ ಎಲ್ಲರೂ ಸಹ ಹೇಳಿದ್ದಾರೆ. ಅದನ್ನು ಅಪಾಯ ಬರುವ ಮುಂಚೆಯೇ ತಡೆಗಟ್ಟಬೇಕಾಗಿದೆ. ಹೀಗಾಗಿ, ಇವತ್ತು ನಾವು ಬಹಳ ಜನ ಸೇರುವುದನ್ನು ಕಡಿಮೆ ಮಾಡಬೇಕು. ಮದುವೆ ಸಮಾರಂಭ, ಇತ್ಯಾದಿ ಸಮಾರಂಭಗಳಲ್ಲಿ ನಾವು ಸೇರುತ್ತೇವೆ. ಅಂತಹ ಸಂದರ್ಭದಲ್ಲಿ ಯಾರಿಗೆ ಕೆಮ್ಮು ಇದೆ, ಕೆಮ್ಮಿನ ಲಕ್ಷಣ ಇದೆ, ಅವರು ಕಡ್ಡಾಯವಾಗಿ ಮಾಸ್ಕ್ ಅನ್ನು ಬಳಸಬೇಕು. ಏನೂ ನಮ್ಮಲ್ಲಿ ಲಕ್ಷಣಗಳು ಇಲ್ಲವೆಂದ ಮೇಲೆ ಮಾಸ್ಕ್ ಹಾಕುವಂತಹ ಅಗತ್ಯ ಇಲ್ಲ.

**ಶ್ರೀ ಕೆ.ಗೋವಿಂದರಾಜ್:–** ಅದರೂ ಸಹ ಮುಂಜಾಗ್ರತಾ ಕ್ರಮಕ್ಕಾಗಿ ಎಲ್ಲರಿಗೂ ಕೊಡಿಸಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ||ಕೆ. ಸುಧಾಕರ್:–** ಆ ರೀತಿ ಮಾಡಿದರೆ ಇನ್ನೂ ಭಯ ಹೆಚ್ಚಾಗುತ್ತದೆ. ಯಾರಿಗೆ ಆ ರೋಗದ ಲಕ್ಷಣ ಇರುತ್ತದೆ, ಅವರು ಉಪಯೋಗ ಮಾಡಬೇಕಾಗುತ್ತದೆ. ಇದು ಯಾವ ರೀತಿಯಲ್ಲಿ ಬೇರೆ ಕಡೆ ಹೋಗುತ್ತಿದೆ, contagious ಹೇಗೆ ಆಗುತ್ತಿದೆ, ಇವರಿಗೆ ಅನುಮಾನ ಇದೆಯೇ?

**ಶ್ರೀ ಕೆ.ಗೋವಿಂದರಾಜ್:–** ಮಾನ್ಯ ಸದಸ್ಯರು (ಶ್ರೀ ಟಿ.ಎ. ಶರವಣ ರವರನ್ನು ಉದ್ದೇಶಿಸಿ) ಕೆಮ್ಮುತ್ತಿದ್ದರು, ಅದಕ್ಕೋಸ್ಕರ ನಾನು ಹೇಳಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾರಿಗೆ ಆ ಒಂದು ಲಕ್ಷಣ ಇದೆ, ಅವರು ಮಾತ್ರ ಮಾಸ್ಕ್ ಹಾಕಬೇಕೆಂದು ಏನು ಹೇಳಿದರು, ಆ ರೀತಿಯಲ್ಲಿ ಇಲ್ಲಿಗೆ ಅವರು ಬಂದರೆ ನಾವು ಹೊರಗಡೆ ಹೋಗುತ್ತೇವೆ.

**ಡಾ|| ಕೆ. ಸುಧಾಕರ್:–** ಮಾನ್ಯ ಸದಸ್ಯರು ರಾಜ್ಯದ ಗಮನಸೆಳೆಯಬೇಕೆಂದು ಮಾಡಿದ್ದಾರೆ. ಅವರಿಗೆ ಅಭಿನಂದಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ, precautions and preventive measures ಎಂದು ಹೇಳಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಒಂದು ಪ್ರಕರಣವೂ ಇಲ್ಲ. ಆದರೆ, ಕೇರಳ ರಾಜ್ಯದಲ್ಲಿ 3 ಪ್ರಕರಣಗಳಿವೆ. ಈಗ ಯುದ್ಧಕಾಲೇ ಶಸ್ತ್ರಾಭ್ಯಾಸ ಆಗುವುದು ಬೇಡ. ಈಗ ಕೇರಳ ರಾಜ್ಯದಲ್ಲಿ ಆಗಿರುವಂತಹ ಕೇಸ್‌ಗಳ ಮೇಲೆ ಈಗಾಗಲೇ ಗುಣಮುಖವಾಗಿವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಗುಣಮುಖವಾಗುವಂತಹ ಈ ಪ್ರೋಟೋಕಾಲ್ ಅನ್ನು ಅಲ್ಲಿ ಏನು ಮಾಡಿದ್ದಾರೆ, ಅದರ ಬಗ್ಗೆ ನಮ್ಮಲ್ಲಿ ಇರತಕ್ಕಂತಹ ವೈದ್ಯರುಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟು, ಮೊದಲು medicine protocol ಅನ್ನು ತೆಗೆದುಕೊಳ್ಳಬೇಕು. In case, if any such affected cases are found, ನಾವು ಅದಕ್ಕೆ ಸಿದ್ಧರಿರೋಣ. ನಮ್ಮಲ್ಲಿ ಇಲ್ಲ. ಹೀಗೆಯೇ ಇರಲಿ. ಆದರೆ, ನಾವು ಯುದ್ಧಕಾಲೇ ಶಸ್ತ್ರಾಭ್ಯಾಸ ಮಾಡುವುದು ಬೇಡ. ಮೊದಲೇ ಆ ಔಷಧಿಯನ್ನು ಹೇಗೆ ಕೊಟ್ಟಿದ್ದಾರೆ, ಹೇಗೆ ಗುಣಮುಖವಾಗಿದೆ, what is the environment created for it ಎನ್ನುವುದರ ಬಗ್ಗೆ ಸ್ವಲ್ಪ ನೋಡಿ. ಇದು cure ಬಗೆಗಿನ ಅಂಶ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಕೊಟ್ಟಂತಹ ಸಲಹೆಗಳ ಪ್ರಕಾರವೇ ನಮ್ಮ ಸರ್ಕಾರ ಇವತ್ತು ಈ ದಿಸೆಯಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆನ್ನುವ ವಿಚಾರವನ್ನು ಅರ್ಥ ಮಾಡಿಕೊಂಡೇ ಬಹಳ ಬೇಗ ಕ್ರಮ ಕೈಗೊಳ್ಳುತ್ತಿದ್ದೇವೆ. ಯಾರೂ ಕೂಡ ಇದರ ಬಗ್ಗೆ ಇನ್ನೂ ವಿಚಾರ ಮಾಡುತ್ತಿರಲಿಲ್ಲ. ಅಷ್ಟು ಬೇಗ ಇದೆಲ್ಲವನ್ನೂ ಮಾಡಿ ಬಹಳ ಎಚ್ಚರಿಕೆಯಿಂದ ನಾವು ನೋಡುತ್ತಿದ್ದೇವೆ. ಆ ಕಾರಣಕ್ಕೋಸ್ಕರವೇ ಎರಡು ತಿಂಗಳ ಮೊದಲೇ ಬೇರೆ ರಾಜ್ಯಗಳಲ್ಲಿ ಈ ರೋಗ ಬಂದಿದ್ದರೂ ಕೂಡ ಒಂದೇ ಒಂದು ಪ್ರಕರಣ ನಮ್ಮ ರಾಜ್ಯದಲ್ಲಿ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಬೆಂಗಳೂರನ್ನು ಗ್ಲೋಬಲ್ ಸಿಟಿ ಎಂದು ಹೇಳಿದರು. I agree with him. It is most the robust, growing and dynamic city in the World. ಅದರೂ ಕೂಡ ಪ್ರತಿನಿತ್ಯ ವಿದೇಶದಿಂದ ಬರತಕ್ಕಂತಹ ಜನರಲ್ಲಿ ಇವತ್ತು ಸಹ ಒಂದೂ ಪ್ರಕರಣವೂ ಸಹ ದಾಖಲಾಗಿಲ್ಲವೆನ್ನುವುದಕ್ಕೆ ನಾವು ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮಗಳು ಸಹ ಇದಕ್ಕೆ ಕಾರಣವೆಂದು ನಾವು ಹೇಳಬೇಕಾಗುತ್ತದೆ. ಹೀಗಾಗಿ, ನಾವು ಜನರಿಗೆ ಕೊಡುವಂತಹ ಮಾಹಿತಿಯಲ್ಲಿ ಇದು ಹೇಗೆ ಹರಡುತ್ತದೆನ್ನುವುದನ್ನು ಮೊದಲನೆಯದಾಗಿ ಅರ್ಥ ಮಾಡಿಕೊಳ್ಳಬೇಕು. ಇವತ್ತು ಇದು ಗಾಳಿಯಲ್ಲಿ ಹರಡುವುದಿಲ್ಲ. ಇಲ್ಲಿ ಇವತ್ತು ನಾವು ಸದನದಲ್ಲಿ ಕುಳಿತುಕೊಂಡಿದ್ದೇವೆ, ಯಾರಿಗೋ ಒಬ್ಬರಿಗೆ ಬಂದಿದ್ದರೆ ಅದು ನಮ್ಮೆಲ್ಲರಿಗೂ ಬರುವುದಿಲ್ಲ. ಶಾಲೆಗಳಿಗೆ ಹೋದಂತಹ ಮಕ್ಕಳಿಗೆ ಶಾಲೆಯಲ್ಲಿ ಕುಳಿತುಕೊಂಡಾಗ ಒಂದು ಮಗುವಿನಿಂದ ಮತ್ತೊಂದು ಮಗುವಿಗೆ ಈ ರೋಗ ಹರಡುವುದಿಲ್ಲ. ಇವತ್ತು ಎಂಜಲು ಅಂಶ ಏನಿರುತ್ತದೆ, ಅಂತಹ ಒಂದು droplets ನಿಂದ ಬರುವಂತಹದ್ದಾಗಿದೆ. ಮತ್ತೆ, ಅದು ನಮ್ಮ ಕೈಗಳಿಗೆ, ಕೈಗಳಿಂದ ಪದೇ ಪದೇ ಮೂಗನ್ನು, ಬಾಯಿಯನ್ನು ನಾವು ಮುಟ್ಟಿಕೊಳ್ಳುವುದನ್ನು ಕಡಿಮೆ ಮಾಡಬೇಕು. ಇದು ಬಹಳ ಮುಖ್ಯವಾದ ವಿಚಾರ. ಮತ್ತೆ, ನಾವು ಪದೇ ಪದೇ ಕೈಗಳನ್ನು ಸೋಪ್‌ನಿಂದ ತೊಳೆದುಕೊಳ್ಳುವುದು.

**(ಮುಂದು. .**

**(146) 04.03.2020 02.10 ಎಸ್‌ವಿ–ಕೆಎಸ್**
**ಡಾ:ಕೆ.ಸುಧಾಕರ್ (ಮುಂದು):**

ಪದೇ ಪದೇ ನಾವು ಸೋಪನ್ನು ಬಳಸಿ ಕೈಗಳನ್ನು ತೊಳೆದುಕೊಳ್ಳಬೇಕು. Alcohol ಅಥವಾ Ethanol based ಆದರೆ...

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಚಿವರೆ, World Health Organisation (WHO) ನವರು Alcohol-based handrub ಎಂಬುದನ್ನು ತಂದಿರುವ ಬಗ್ಗೆ ಟಿ.ವಿ.ಯಲ್ಲಿ ಪ್ರಸಾರ ಮಾಡಲಾಗುತ್ತಿದೆ. ಅದರ ಬಗ್ಗೆ ಸ್ವಲ್ಪ ಹೇಳಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ:ಕೆ.ಸುಧಾಕರ್:-** ಅದನ್ನೇ ಹೇಳುತ್ತಿದ್ದೇನೆ. Ethanol based handrub. Ethyl Alcohol ಇದ್ದರೆ ಇನ್ನೂ ಹೆಚ್ಚು ಸುರಕ್ಷಿತ. ಆ ರೀತಿಯಾದವು sanitizers ಗಳಲ್ಲಿ, ಸೋಪುಗಳಲ್ಲಿ ಬರುತ್ತಿವೆ. ಅವುಗಳನ್ನು ಬಳಸಿ 20 ಸೆಕೆಂಡ್‌ಗಳವರೆಗೆ ಚೆನ್ನಾಗಿ ಎರಡೂ ಕೈಗಳನ್ನು ಉಜ್ಜಿತೊಳೆದುಕೊಳ್ಳಬೇಕು. ಕಣ್ಣು, ಮೂಗು ಮತ್ತು ಬಾಯಿಗಳನ್ನು ಮುಟ್ಟಿಕೊಳ್ಳುವುದನ್ನು ಕಡಿಮೆ ಮಾಡಬೇಕು. ಎಲ್ಲರಿಗೂ ಹಸ್ತಲಾಘವ ಮಾಡುವುದನ್ನು ಆದಷ್ಟು ಕಡಿಮೆ ಮಾಡಬೇಕು. ಅದಕ್ಕೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ನಮ್ಮ ಹಿರಿಯರು ಎರಡೂ ಕೈಗಳನ್ನು ಜೋಡಿಸಿ ಕೈಮುಗಿದು ನಮಸ್ಕಾರ ಮಾಡುತ್ತಿದ್ದರು. ಇದರಿಂದ ಯಾರಿಗೂ ತೊಂದರೆಯಾಗುತ್ತಿರಲಿಲ್ಲ. ಪಾಶ್ಚಿಮಾತ್ಯದ ಸೊಬಗನ್ನು ಪ್ರೀತಿ ಮಾಡಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಚಿವರೆ, ಒಬ್ಬರಿಗೊಬ್ಬರು ಕಾಲುಗಳನ್ನು ಟಚ್ ಮಾಡಿಕೊಂಡು ವಿಷ್ ಮಾಡಿಕೊಳ್ಳುವುದನ್ನು ರಾತ್ರಿ ಟಿ.ವಿ.ಯಲ್ಲಿ ತೋರಿಸುತ್ತಿದ್ದರು. ಅದು ಏನು?

**ಡಾ:ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಡಾ:ವೈ.ಎ.ನಾರಾಯಣಸ್ವಾಮಿಯವರು ಯಾವಾಗಲೂ ಒಂದು ಹೆಜ್ಜೆ ಮುಂದೆ ಹೋಗಿರುತ್ತಾರೆ.

**ಶ್ರೀ ಕೆ.ಗೋವಿಂದರಾಜ್:-** ಮಾನ್ಯ ಸಚಿವರೇ, ಅವರು ಹೇಳಿದುದನ್ನು ಹೊಸದಾಗಿ ಪರಿಚಯ ಮಾಡಿ.

**ಡಾ:ಕೆ.ಸುಧಾಕರ್:-** ಆದ್ದರಿಂದ ನಾವು ಭಾರತೀಯ ಸಂಸ್ಕೃತಿಯನ್ನು ಅನುಸರಿಸಬೇಕು. ಅದರ ಮೂಲವನ್ನು ಹುಡುಕಿಕೊಂಡು ಹೋಗಬೇಕು. ನಮಸ್ಕಾರ ಮಾಡುವುದಕ್ಕಿಂತಲೂ ಒಳ್ಳೆಯ ರೀತಿಯಲ್ಲಿ greet ಮಾಡುವುದು ಅಥವಾ ಸಂಬೋಧಿಸುವುದು ಬೇರೆ ಯಾವುದೂ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ಯಾರಿಗೆ ವೈರಸ್ ಲಕ್ಷಣಗಳಿದೆಯೋ ಅಂತಹವರ ಬೆವರಿನಿಂದ ಇನ್ನೊಬ್ಬರಿಗೆ ರೋಗ ಹರಡುವ ಸಾಧ್ಯತೆ ಇರುತ್ತದೆ. ಬೆವರಿನ ಕೈಗಳಿಂದ ಬಾಯಿಯನ್ನು, ಮೂಗನ್ನು ಒರೆಸಿಕೊಳ್ಳುವುದರಿಂದ ಅದು ಹರಡುತ್ತದೆ. ಆದ್ದರಿಂದ ನಾವು ಮುನ್ನೆಚ್ಚರಿಕೆ ಕ್ರಮವನ್ನು ವಹಿಸಬೇಕು. ರೋಗಾಣು ಕಂಡು ಬಂದಿರುವಂತಹವರಿಗೆ ಜ್ವರ ಇರಬಹುದು, ಕೆಮ್ಮು ಇರಬಹುದು, ಶೀತ ಇರಬಹುದು ಅಥವಾ ನೆಗಡಿ ಇರಬಹುದು. ಇವರು ಮಾಸ್ಕ್ ಅನ್ನು ಅಳವಡಿಸಿಕೊಳ್ಳಲೇಬೇಕು. ನಿನ್ನೆ ವಿಶ್ವ ಆರೋಗ್ಯ ಸಂಸ್ಥೆಯವರು ನೀಡಿರುವ ಮಾರ್ಗಸೂಚಿಯಲ್ಲಿ ಆರು ಪದರಗಳುಳ್ಳ ಮಾಸ್ಕ್ ಅನ್ನು ಧರಿಸಬೇಕೆಂದು ಹೇಳಿದ್ದಾರೆ. ಸಾಮಾನ್ಯವಾಗಿ ಬರುವ ಶಸ್ತ್ರಚಿಕಿತ್ಸೆಯ ಮಾಸ್ಕ್‌ಗಳಲ್ಲಿ ಮೂರು ಪದರವಿರುತ್ತದೆ. ಮಾನ್ಯ ಸದಸ್ಯರಾದ ಶ್ರೀ ಅಲ್ಲಂ ವೀರಭದ್ರಪ್ಪನವರು, ಶ್ರೀ ಐವನ್ ಡಿ'ಸೋಜಾರವರು, ಶ್ರೀ ಎಂ.ಕೆ.ಪ್ರಾಣೇಶ್‌ರವರು ಮಾಸ್ಕ್‌ಗಳ ಬಗ್ಗೆ ಮಾತನಾಡಿದರು. ಮಾಸ್ಕ್‌ಗಳಿಗೆ ಕೊರತೆಯೇನಿಲ್ಲ. ಆದರೆ ಬಹಳ ಡಿಮ್ಯಾಂಡ್ ಇದೆ. ಇಡೀ ವಿಶ್ವದಲ್ಲಿಯೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇದಕ್ಕಾಗಿ ಬಹಳ ಡಿಮ್ಯಾಂಡ್ ಇದೆ. ಇದರ ತಯಾರಕರು ದರಗಳನ್ನೂ ಸಹ ಮೂರು ಪಟ್ಟು ಹೆಚ್ಚು ಮಾಡಿದ್ದಾರೆ. ಆದರೂ ಕೂಡ ನಮ್ಮ ಇಲಾಖೆಯವರು ಆರು ತಿಂಗಳಿಗಾಗುವಷ್ಟು ಮಾಸ್ಕ್‌ಗಳನ್ನು ಸಂಗ್ರಹಿಸಿದ್ದಾರೆ.

**ಶ್ರೀ ಕೆ.ಗೋವಿಂದರಾಜು:–** ಇದರಲ್ಲಿ medicine lobby ಏನಾದರೂ ಇದೆಯೇ?

**ಡಾ: ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಚಿವರೆ, ನಿಮ್ಮ ಸಹಾಯಕ್ಕಾಗಿ ಒಂದು ವಿಷಯವನ್ನು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರ ಫೆಬ್ರವರಿ 1ನೇ ತಾರೀಖಿನಿಂದ ಮಾಸ್ಕ್‌ಗಳನ್ನು ರಫ್ತು ಮಾಡುವ ಎಲ್ಲಾ ಕಂಪನಿಗಳನ್ನು ban ಮಾಡಿದೆ. ಭಾರತದೇಶದಲ್ಲಿ ಮುನ್ನೆಚ್ಚರಿಕೆಯಾಗಿ ಮಾಸ್ಕ್‌ಗಳ ಲಭ್ಯತೆ ಇರಬೇಕೆಂದು ಈ ಕ್ರಮವನ್ನು ಕೈಗೊಳ್ಳಲಾಗಿದೆ.

**ಡಾ: ಕೆ.ಸುಧಾಕರ್:–** ಹೌದು.

**ಶ್ರೀ ಕೆ.ಗೋವಿಂದರಾಜು:–** ಮಾನ್ಯ ನಾರಾಯಣಸ್ವಾಮಿಯವರೇ, ನೀವು ಮಂತ್ರಿಗಳ ಪರವಾಗಿ ಹೇಳುತ್ತಿದ್ದೀರಾ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಚಿವರೇ, ಮಾಸ್ಕ್‌ಗಳ ವಿಷಯದಲ್ಲಿ ಹೆಲ್ಮೆಟ್‌ಗಳಂತಾಗಬಾರದು.

**ಡಾ:ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಮಾಸ್ಕ್‌ಗಳ ಕೊರತೆಯಿಲ್ಲ. ಆದರೆ ನಾವು ಈಗಾಗಲೇ ಆರು ತಿಂಗಳಿಗಾಗುವಷ್ಟು ಆರ್ಡರ್‌ಗಳನ್ನು ಮಾಡಿದ್ದೇವೆ. ಅದನ್ನು ತರಿಸಿಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ. ಆರು ತಿಂಗಳಿಗಾಗುವಷ್ಟು ಔಷಧಿಗಳನ್ನು ಕೂಡ ತರಿಸಿಕೊಳ್ಳಲು ಈಗಾಗಲೇ ನಾವು ಎಲ್ಲಾ ವ್ಯವಸ್ಥೆ ಮಾಡಿದ್ದೇವೆ. ಎಲ್ಲಾ ಔಷಧಗಳು antiviral medicines. H1N1 and Influenza ಗೆ ಕೊಡುವ Tamiflu ನ ಮಾದರಿಯಲ್ಲಿಯೇ ಇರುತ್ತದೆ.

**ಶ್ರೀ ಕೆ.ಗೋವಿಂದರಾಜ್:–** Common man ಗೆ reach ಆಗುತ್ತದೆಯೇ?

**ಡಾ:ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಖಂಡಿತ. ನೂರಕ್ಕೆ ನೂರು ಪ್ರತಿಶತ ಸಿಗುತ್ತದೆ. ಯಾರಿಗೇ ಆಗಲಿ, ಈ ರೋಗಲಕ್ಷಣ ಕಂಡು ಬಂದರೆ ಅವರಿಗೆ ಚಿಕಿತ್ಸೆಯನ್ನು ನೀಡಲಾಗುತ್ತದೆ. It is a symptomatic treatment. ಯಾರಿಗೂ ಆತಂಕ ಬೇಡ. ಸರ್ಕಾರ ಏನು ವ್ಯವಸ್ಥೆ ಮಾಡಿಕೊಂಡಿದೆ, ಸಿದ್ಧವಿದೆಯೇ ಇಲ್ಲವೇ ಎಂಬುದಕ್ಕೆ ಎಲ್ಲಾ ಮಾನ್ಯ ಸದಸ್ಯರಲ್ಲಿ ಒಂದು ವಿಷಯವನ್ನು ಹೆಮ್ಮೆಯಿಂದ ಹೇಳಬಯಸುತ್ತೇನೆ. ನಮ್ಮ ಬೆನ್ನನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾವೇ ತಟ್ಟಿಕೊಳ್ಳಬಾರದು. ಆದರೆ ನಮ್ಮ ಸರ್ಕಾರ ಈ ವಿಷಯದಲ್ಲಿ ತಳೆದಿರುವ ನಿಲುವು, ಗಂಭೀರವಾದ ಚಿಂತನೆಯನ್ನು ಮಾಡಿ ತೆಗೆದುಕೊಂಡಿರುವ ಮುನ್ನೆಚ್ಚರಿಕೆ, ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿರುವುದು ಇಡೀ ದೇಶದಲ್ಲಿಯೇ, our State is one of the best States ಎಂದು ಹೇಳಲಿಚ್ಛಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಚಿವರೇ, ಇದಕ್ಕಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ನೀವು ಇಂಧನ ಸಚಿವರಾಗುವುದಕ್ಕೆ ಹೊರಟಿದ್ದಿರಿ. ಕೊರೊನಾ ವೈರಾಣು ಬಂದಿದ್ದಕ್ಕೂ, ನೀವು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದಕ್ಕೂ ಸರಿ ಹೋಯಿತು.

**ಶ್ರೀ ಎಸ್.ಎಲ್.ಭೋಜೇಗೌಡ:–** ಅವರು ಇಂಧನ ಮಂತ್ರಿಯಾಗಿದ್ದಿದ್ದರೆ ಎಲ್ಲಾ ಕಡೆಗಳಿಗೂ heater ಗಳನ್ನು ಕೊಡುತ್ತಿದ್ದರು.

**ಡಾ:ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಇನ್ನು, ಯಾರಿಗಾದರೂ ರೋಗ ಬಂದರೆ ಚಿಕಿತ್ಸೆಗೆ ಏನು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆಯೆಂದು ಕೇಳಿದರು. ಕೆಲವರು ಖಾಸಗಿ ಆಸ್ಪತ್ರೆಯವರೊಂದಿಗೆ ಮತ್ತು ಖಾಸಗಿ ವೈದ್ಯರೊಂದಿಗೆ ಮಾತನಾಡಿ ಎಂದು ಹೇಳಿದರು. ಈಗಾಗಲೇ ಆ ಕೆಲಸವನ್ನು ನಾವು ಮಾಡಿದ್ದೇವೆ. ನಮ್ಮ ಆಸ್ಪತ್ರೆಗಳಲ್ಲಿ ಸುಮಾರು 650 ಹಾಸಿಗೆಗಳನ್ನು...

**ಶ್ರೀ ಕೆ.ಗೋವಿಂದರಾಜ್:–** Examination Centres ಹತ್ತಿರ ಸ್ವಲ್ಪ concentrate ಮಾಡಬೇಕು.

**ಡಾ:ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಮಾಡುತ್ತೇವೆ. ಇಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸೈನ್ಯ, ಅರೆಸೈನ್ಯ, ಬಿ.ಎಸ್.ಎಫ್., ನೇವಿ, ಆರ್ಮಿ ಇವರೆಲ್ಲರ ಜೊತೆ ಮಾತನಾಡಿದ್ದಾರೆ. ಕಮಾಂಡೊ ಆಸ್ಪತ್ರೆಗಳಿವೆ. ಯಲಹಂಕದ ಬಳಿಯಲ್ಲಿಯೂ ಸಹ ಕಮಾಂಡೊ ಆಸ್ಪತ್ರೆಯಿದೆ. ಇಂದು ಬೆಳಿಗ್ಗೆ ವಿಮಾನ ನಿಲ್ದಾಣದ ಬಳಿಯಿರುವ ಆಕಾಶ್ ಮೆಡಿಕಲ್ ಕಾಲೇಜಿನವರ ಬಳಿಯೂ ನಾನು ಮಾತನಾಡಿದ್ದೇನೆ. ಅಲ್ಲಿ 100 ಹಾಸಿಗೆಗಳ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಮ್ಮ ವೈದ್ಯಕೀಯ ಕಾಲೇಜುಗಳಿರಬಹುದು ಅಥವಾ ಖಾಸಗಿ ವೈದ್ಯಕೀಯ ಕಾಲೇಜುಗಳಿರಬಹುದು ಅಥವಾ ಅವರ ವ್ಯವಸ್ಥೆಗಳಿರಬಹುದು. ಅಲ್ಲಿ ಕೂಡ ನಾನು ಹಾಗೂ ಆರೋಗ್ಯ ಸಚಿವರಾದ ಮಾನ್ಯ ಶ್ರೀರಾಮುಲು ಅವರು ಸೇರಿಕೊಂಡು ಎಲ್ಲಾ ವ್ಯವಸ್ಥೆಗಳನ್ನು ಮಾಡಿ ಕರ್ನಾಟಕ ರಾಜ್ಯದ ಜನತೆಯನ್ನು ಈ ಒಂದು ಭೀಕರ ವೈರಾಣುವಿನಿಂದ ತಪ್ಪಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಚಿವರೇ, ನಾಳೆ ಮಾನ್ಯ ಶ್ರೀರಾಮುಲು ಮಗಳ ಮದುವೆಯಿದೆ. ಅಲ್ಲಿನ ಪರಿಸ್ಥಿತಿ ಏನು?

**ಡಾ:ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀರಾಮುಲು ಅವರ ಮಗಳ ಮದುವೆಯ ಬಗ್ಗೆ ನನಗೆ ಹೆಚ್ಚು ಆತಂಕವಿಲ್ಲ. ಏಕೆಂದರೆ ಅದು ನಡೆಯುವುದು ಅರಮನೆ ಮೈದಾನದಲ್ಲಿ. ಅಲ್ಲಿ ಬಹಳ ಜನ ಸೇರುವುದಕ್ಕೆ ಸಾಧ್ಯವಿಲ್ಲ. ಅವರ ನಾಯಕರು 50 ಎಕರೆಯಲ್ಲಿ ಮಾಡುತ್ತಿದ್ದಾರೆ. ಅಲ್ಲಿ ಎಷ್ಟು ಜನ ಸೇರುತ್ತಾರೆ ಎನ್ನುವುದರ ಬಗ್ಗೆ ನನಗೆ ಆತಂಕವಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ಈ ರೋಗ ಈಗ ಪ್ರಾರಂಭವಾಗಿದೆ. ಮದುವೆ ಇರುವುದು ಏಪ್ರಿಲ್ 17. ಅಷ್ಟು ಹೊತ್ತಿಗೆ ಕೊರೊನಾ ದೇಶ ಬಿಟ್ಟು ಹೋಗಿರುತ್ತದೆ.

**ಶ್ರೀ ಲಹರ್‌ಸಿಂಗ್ ಸಿರೋಯಾ:-** ಮಾನ್ಯ ಸಚಿವರೇ, ದಾಖಲೆಗೆ ತಪ್ಪು ಮಾಹಿತಿ ಹೋಗಬಾರದು. ಅದು 50 ಎಕರೆಯಲ್ಲ, 100 ಎಕರೆ.

**ಡಾ:ಕೆ.ಸುಧಾಕರ್:-** ನನಗೆ ತಿಳಿದಿರಲಿಲ್ಲ. I am sorry.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಚಿವರೇ, ಲಸಿಕೆ ಅಥವಾ vaccination ಇದೆಯೇ ಎಂಬುದನ್ನು ತಿಳಿಸಬೇಕು.

**(ಮುಂದು)**

(147) 4.3.2020, 2.20 KG GR

**ಡಾ॥ಕೆ.ಸುಧಾಕರ್:-** ಪ್ರತಿನಿತ್ಯ ಸಂಬಂಧಪಟ್ಟಂತಹ ಎಲ್ಲಾ ಅಧಿಕಾರಿಗಳು ಹಾಗೂ ಎಲ್ಲಾ ವ್ಯವಸ್ಥೆಗಳ ಮಾಲೀಕರನ್ನು ನಾವು ಸಂಪರ್ಕದಲ್ಲಿಟ್ಟುಕೊಂಡು ಇದರ ಬಗ್ಗೆ ಬಹಳ ಗಂಭೀರವಾಗಿ ಕ್ರಮವನ್ನು ವಹಿಸುತ್ತೇವೆ. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರು ಹೇಳಿದಂತೆ, ಇವತ್ತು ವಿಶ್ವದಲ್ಲಿ ಎಲ್ಲಾ ಕಡೆ research ಮಾಡುತ್ತಿದ್ದಾರೆ. ನಮಗೆ ನಿನ್ನೆ ದಿವಸ ಬಂದಿರುವ ಒಂದು ಮಾಹಿತಿಯ ಪ್ರಕಾರ, ಆಸ್ಟ್ರೇಲಿಯಾದಲ್ಲಿ ಭಾರತೀಯ ಮೂಲದ ಶ್ರೀ ವಾಸನ್ ಎಂಬ ಒಬ್ಬ ವಿಜ್ಞಾನಿ, he is almost close to finding a vaccine. ಅವರು ಆಸ್ಟೇಲಿಯಾದಲ್ಲಿ research ನಲ್ಲಿದ್ದಾರೆ. ಅವರು ಈಗಾಗಲೇ ಕೆಲವು ಮಾಹಿತಿಗಳನ್ನು ಕೊಟ್ಟಿದ್ದಾರೆ. ಆದರೆ, ಅದು ಅಂತಿಮವಾಗಿಲ್ಲ. ಆದರೆ, ಖಂಡಿತವಾಗಿ vaccination ಕಂಡುಹಿಡಿಯುತ್ತಾರೆ. ಅದನ್ನು ಕಂಡುಹಿಡಿಯಲಿ ಎಂದು ನಾವೆಲ್ಲರೂ ಪ್ರಾರ್ಥನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡೋಣ. ಹಾಗಾಗಿ, ಕರ್ನಾಟಕ ರಾಜ್ಯದ ಜನತೆ ನೆಮ್ಮದಿ ಮತ್ತು ಸಂತೋಷದಿಂದ ಇರಿ, ನಿಮ್ಮ ಜೊತೆಗೆ ಸರ್ಕಾರ ಹಾಗೂ ನಾವೆಲ್ಲರೂ ಇರುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಆರ್ಯುರ್ವೇದಿಕ್‌ನಲ್ಲಿ ಔಷಧಿ ಬಂದಿದೆ ಎಂದು ಎಲ್ಲಾ ಕಡೆ ಪ್ರಚಾರ ಆಗಿದೆ. ಅದಕ್ಕೆ ಸ್ವಲ್ಪ ಕಡಿವಾಣ ಹಾಕಬೇಕಾಗುತ್ತದೆ.

**ಡಾ||ಕೆ.ಸುಧಾಕರ್:–** ಮಾನ್ಯ ಸಭಾಪತಿಯವರೇ, ಇದುವರೆವಿಗೂ ಸಹ ಆ ರೀತಿಯ ಮಾಹಿತಿ ಇಲ್ಲ. ಅದನ್ನು ಜನರು ನಂಬುವುದು ಬೇಡ. ಏಕೆಂದರೆ, ಯಾವುದೇ ಒಂದು ಔಷಧಿ ಅಧಿಕೃತ ಎಂಬುದನ್ನು ವಿಶ್ವ ಆರೋಗ್ಯ ಸಂಸ್ಥೆಯವರು ಹೇಳುತ್ತಾರೆ. ಅದಕ್ಕೆ ಯಾವುದೇ ರೀತಿಯ ಚಿಕಿತ್ಸೆ ಇದುವರೆವಿಗೂ ಕೂಡ ಇಲ್ಲ. ಹಾಗಾಗಿ, ಯಾರು ಸಹ ಅದನ್ನು ನಂಬಬಾರದು. ಇದನ್ನು ಮಾಧ್ಯಮಗಳಿಗೂ ಸಹ ಹೇಳಿದ್ದೇನೆ. ಇಲ್ಲಿಯವರೆಗೆ ಸಮಾಧಾನದಿಂದ ಕೇಳಿರುವಂತಹ ಎಲ್ಲಾ ಶಾಸಕ ಮಿತ್ರರಿಗೆ ಅದರಲ್ಲೂ ವಿಶೇಷವಾಗಿ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3 ಗಂಟೆ 15 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

(148) 04.03.2020 03.30 LL-MD(VK)

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಪ್ರಾರಂಭವಾಯಿತು)**
**(ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**3. ಸದನದಲ್ಲಿ ಮಂತ್ರಿಗಳು ಮತ್ತು ಅಧಿಕಾರಿಗಳು ಸಾಕಷ್ಟು ಸಂಖ್ಯೆಯಲ್ಲಿ ಹಾಜರಿಲ್ಲದಿರುವ ಬಗ್ಗೆ.**

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಂತ್ರಿಗಳು ಇಲ್ಲ, ಅಧಿಕಾರಿಗಳು ಇಲ್ಲ. ಮಂತ್ರಿಗಳು ಇಲ್ಲದೇ ಇದ್ದರೂ ಸಹ ಕನಿಷ್ಠ ಪಕ್ಷ ಸಭಾ ನಾಯಕರಾದರೂ ಇದ್ದಾರೆ. ಅಧಿಕಾರಿಗಳಂತೂ ಇಲ್ಲವೇ ಇಲ್ಲ. ಒಬ್ಬರೇ ಒಬ್ಬ ಅಧಿಕಾರಿಗಳು ಸದನಕ್ಕೆ ಬಂದಿರುವುದಿಲ್ಲ. ಮಂತ್ರಿಗಳೂ ಇರುವುದಿಲ್ಲ ಮತ್ತು ಅವರ ಸದಸ್ಯರೂ ಇರುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕನಿಷ್ಠ 3 ಜನ ಮಂತ್ರಿಗಳಾದರೂ ಸದನದಲ್ಲಿ ಇರಬೇಕೆಂದು ಇದೆ. ಅವರು ಸಭಾನಾಯಕರು ಅಂದರೆ, ನಾನು ವಿರೋಧ ಪಕ್ಷದ ನಾಯಕ. This is not the way of running the Government. You should have lot of respect for this House and Session.

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಒಬ್ಬರೇ ಒಬ್ಬ ಅಧಿಕಾರಿಗಳು ಸದನದಲ್ಲಿ ಹಾಜರಿರುವುದಿಲ್ಲವೆಂದರೆ ಹೇಗೆ? ಮಂತ್ರಿಗಳು ಇರುವುದಿಲ್ಲ. ಅವರ ಸದಸ್ಯರುಗಳು ಇರುವುದಿಲ್ಲ. ಅಲ್ಲದೇ ಸರ್ಕಾರಿ ಮುಖ್ಯ ಸಚೇತಕರು ಇರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇನ್ನು ಐದು ನಿಮಿಷಗಳಲ್ಲಿ ಮಂತ್ರಿಗಳು ಬರುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, You can see that the entire gallery is empty. In my opinion they have not taken it very seriously.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಸದನದಲ್ಲಿ ಒಟ್ಟಾರೆಯಾಗಿ ಮಂತ್ರಿಗಳು ಈ ಸದನದಲ್ಲಿ ಹಾಜರಿದ್ದರು. ಆ ಸಂದರ್ಭದಲ್ಲಿ ಪ್ರತಿಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಇದ್ದರು ಎಂದರೆ ಅವರು ಪುಣ್ಯಕ್ಕೆ ಇದ್ದಾರೆಯೇ? It is their duty; they must be present here.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದು ಸಭಾ ನಾಯಕರ ಲೋಪ ಅಲ್ಲ. ಸರ್ಕಾರದ ಮುಖ್ಯ ಸಚೇತಕರು ಬೆಲ್ ಆದ ತಕ್ಷಣ ಎಲ್ಲರೂ ಬರುವಂತೆ co-ordinate ಮಾಡಬೇಕು. ಇದು ಸಭಾ ನಾಯಕರ ಕೆಲಸ ಅಲ್ಲ.

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ವಿಷಯದಲ್ಲಿಯೂ ಸಹ ಇದು ಎಂತಹ ನಿರ್ಲಕ್ಷ್ಯ?

**(ಗೊಂದಲ)**

**ಶ್ರೀ ಐವನ್ ಡಿ’ ಸೋಜಾ:–** ಮಾನ್ಯ ಸಭಾಪತಿಯವರೇ, ಒಬ್ಬರೇ ಅಧಿಕಾರಿಗಳು ಇರುವುದಿಲ್ಲ. ಸರ್ಕಾರದ ಮುಖ್ಯ ಸಚೇತಕರು ಇರುವುದಿಲ್ಲ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸದನವನ್ನು ಸ್ವಲ್ಪ ಸಮಯ ಮುಂದೂಡಿ, ಸಚಿವರುಗಳು ಸದನಕ್ಕೆ ಬರಲಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಹೌದು, ಸದನವನ್ನು ಮುಂದೂಡಿ. ತಾವು ಇವರಿಗೆ ಸ್ವಲ್ಪ ಬಿಸಿ ಮುಟ್ಟಿಸಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸದನಕ್ಕೆ ಮಂತ್ರಿಗಳನ್ನು, ಅಧಿಕಾರಿಗಳನ್ನು ಹಾಜರಿರುವಂತೆ ನೋಡಿಕೊಳ್ಳಬೇಕಾದ ಸರ್ಕಾರದ ಮುಖ್ಯ ಸಚೇತಕರೇ ಸದನದಲ್ಲಿ ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಸರ್ಕಾರದ ಮುಖ್ಯ ಸಚೇತಕರು ಇಲ್ಲ, ಮಂತ್ರಿಗಳು ಇಲ್ಲ, ಅಧಿಕಾರಿಗಳು ಇಲ್ಲ. ಹೀಗಿದ್ದರೂ ಯಾವ ಪುರಷಾರ್ಥಕ್ಕಾಗಿ ಇವರು ಅಧಿವೇಶನ ನಡೆಸುತ್ತಾರೆ? **(ಗೊಂದಲ)** ಈ ದಿನ ಬೆಳಿಗ್ಗೆ ನಾವು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದೆವು. ಯಾವುದೇ ಪ್ರತಿಷ್ಠೆ ಮಾಡಿಕೊಳ್ಳದೇ ಸದನದ ಬಾವಿಯಿಂದ ಹೊರಬಂದೆವು.

**(ಗೊಂದಲ)**

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ನಾವು ಕೂಡ ಸರ್ಕಾರ ನಡೆಸಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಅರುಣ ಶಹಾಪುರರವರು ಮಂತ್ರಿಗಳಾಗಲಿ.

**(ಗೊಂದಲ)**

**ಶ್ರೀ ಐವನ್ ಡಿ’ಸೋಜಾ:–** ಮಾನ್ಯ ಸಭಾಪತಿಯವರೇ, ಸದನಕ್ಕೆ ಒಬ್ಬರೇ ಒಬ್ಬ ಅಧಿಕಾರಿಗಳು ಬರುವುದಿಲ್ಲವೆಂದರೆ ಹೇಗೆ?

**(ಗೊಂದಲ)**

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, 5 ನಿಮಿಷದಲ್ಲಿ ಮಂತ್ರಿಗಳು ಬರುತ್ತಾರೆ. ಅಲ್ಲಿಯವರೆಗೆ ಪ್ರತಿಪಕ್ಷದವರು ಮಾತನಾಡಲಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಆದುದರಿಂದ ಸದನವನ್ನು 10 ನಿಮಿಷ ಮುಂದೂಡಿ.

**(ಗೊಂದಲ)**

**ಸಭಾಪತಿಯವರು:-** ಸದನವನ್ನು ಮುಂದೂಡಿ ನನಗೆ ಸಾಕಾಗಿದೆ.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಅವರು ಮಾತನಾಡಲಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಮಾತನಾಡುವುದು ಅವಶ್ಯಕತೆ ಇಲ್ಲ. ಏಕೆಂದರೆ, ನಾವು ಮಾತನಾಡಿದರೆ ನಮ್ಮ ಮಾತನ್ನು ಯಾರು ಕೇಳುತ್ತಾರೆ? ನಾವು ಗೋಡೆಗಳಿಗೆ ನಮ್ಮ ಮಾತನ್ನು ಹೇಳಬೇಕೇ? This Government has no seriousness at all.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಈ ಸದನದಲ್ಲಿ ಒಟ್ಟು 6 ಜನ ಮಂತ್ರಿಗಳು ಹಾಜರಿದ್ದರು. ಇನ್ನು 5 ನಿಮಿಷದಲ್ಲಿ ಮಂತ್ರಿಗಳು ಬರುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಹೋದ ಅಧಿವೇಶನದ ಬಗ್ಗೆ ಹೇಳುತ್ತಿದ್ದಾರೆ. **(ಗೊಂದಲ)** ಕೆಲವು ಬಾರಿ ಈ ರೀತಿ ಆಗುತ್ತದೆ. ಈ ಹಿಂದೆ ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ...**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಸಭಾ ನಾಯಕರ ಬೆಂಬಲಕ್ಕೆ, ಅವರ ಸಹಾಯಕ್ಕಾಗಿ ನಾವು ಈ ಮಾತುಗಳುನ್ನು ಆಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕರಾಗಿದ್ದಾಗ...

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:-** ಮಾನ್ಯ ಸಭಾ ನಾಯಕರೇ, ತಾವು ವಿರೋಧ ಪಕ್ಷದ ನಾಯಕರನ್ನು ಸ್ವಲ್ಪ ಸಮಾಧಾನ ಮಾಡಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಬೆಳಿಗ್ಗೆ ಸದನದಲ್ಲಿ 6 ಜನ ಮಂತ್ರಿಗಳು ಹಾಜರಿದ್ದರೆಂದು ಮಾನ್ಯ ಸಭಾ ನಾಯಕರು ಹೇಳುತ್ತಿದ್ದಾರೆ. ಆದರೆ, ಈ ಹಿಂದೆ ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಯಾವ ರೀತಿ ಮಾತನಾಡುತ್ತಿದ್ದರು..?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ಕೆ. ಪ್ರಾಣೇಶ್‌ರವರು ಮಂತ್ರಿಗಳಾಗಿ ಮುಂದಿನ ಸಾಲಿಗೆ ಬರಲಿ. We will be very happy. ಅವರ ಜೊತೆಗೆ, ಮಹಿಳೆಯವರು ಸಹ ಬರಲಿ. **(ಗೊಂದಲ)** ನಾವು ಈಗ ಪ್ರಶ್ನೋತ್ತರ ಅವಧಿ ತೆಗೆದುಕೊಂಡರೆ ನಮ್ಮ ಪ್ರಶ್ನೆಗಳಿಗೆ ಉತ್ತರ ನೀಡುವುದಕ್ಕೆ ಈ ಸದನದಲ್ಲಿ ಯಾರಿದ್ದಾರೆ?

**(ಗೊಂದಲ)**

**ಸಭಾಪತಿಯವರು:-** ಈಗ ಪ್ರಶ್ನೋತ್ತರ ಅವಧಿ ಅಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಪ್ರಶ್ನೋತ್ತರ ಅವಧಿ ತೆಗೆದುಕೊಳ್ಳಬಾರದೆಂದು ಏನು ಇಲ್ಲ.

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ(ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾವು ತಯಾರಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು ಸಭಾ ನಾಯಕರ ಸಹಾಯಕ್ಕಾಗಿ ಈ ಮಾತುಗಳನ್ನಾಡುತ್ತಿದ್ದೇವೆ. ಏಕೆಂದರೆ, ಇವರುಗಳು ಸಭಾ ನಾಯಕರನ್ನು ಹಗುರವಾಗಿ ತೆಗೆದುಕೊಂಡಿದ್ದಾರೆ. ನಿಜವಾಗಿಯೂ ಸಹ you understand that I have come to your help.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ಹಿಂದೆ ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಶ್ರೀ ಎಸ್.ಆರ್.ಪಾಟೀಲ್‌ರವರ ಮೇಲಿನ ಗೌರವದಿಂದ, "ಸದನದಲ್ಲಿ ತಾವು ಒಬ್ಬರೇ ಮಂತ್ರಿಗಳಿದ್ದೀರಿ, ಆದರೂ ಸದನ ನಡೆಸೋಣವೆಂದು" ಹೇಳಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಆ ರೀತಿ ನಾನು ಎಂದಿಗೂ ಮಾಡಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆದರೆ ಈಗ ಅವರು ಈ ರೀತಿ ಗಲಾಟೆ ಮಾಡಿದರೆ, ಇದು ಯಾವ ನ್ಯಾಯ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ಹಿಂದೆ ನಾನು ಸಭಾ ನಾಯಕನಾಗಿದ್ದಾಗ ಏನು ಮಾಡಿದ್ದೇನೋ, ಅದನ್ನೇ ಇವರು ಈಗ ಮಾಡುತ್ತಾರೆಯೇ?

**(ಗೊಂದಲ)**

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಅದು ನಡೆವಳಿಯಲ್ಲಿ ದಾಖಲಾಗಿರುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರ defence ಏನು? Suppose ಈ ಹಿಂದೆ ನಾನು ಸಭಾ ನಾಯಕನಾಗಿದ್ದಾಗ ಏನಾದರೂ ತಪ್ಪಾಗಿದ್ದರೆ ಅದೇ ತಪ್ಪನ್ನು ಇವರು ಪುನರಾವರ್ತಿಸುತ್ತಾರೆ ಎಂದು ಅರ್ಥವೇ? Is it a defence?

**(ಗೊಂದಲ)**

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, 3 ಜನ ಮಂತ್ರಿಗಳು ಬಂದಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಮಾತನಾಡುವುದು ಸರ್ಕಾರದ ಸಹಾಯಕ್ಕಾಗಿ. ಸರ್ಕಾರದವರು ಇದನ್ನು ಗಂಭೀರವಾಗಿ ವಿಚಾರ ಮಾಡುತ್ತಾರೆ, ಚಿಂತನೆ ಮಾಡುತ್ತಾರೆ, ಮಂತ್ರಿಗಳು ಯಾರು ಇದ್ದಾರೆ, ಅವರು ಸದನದಲ್ಲಿ ಬಂದು ಕೂರುತ್ತಾರೆ. ಮಂತ್ರಿಗಳಿಗೆ ಬೇರೆ ಏನು ಕೆಲಸ ಇದೆ? ಅಥವಾ ಕೆಳಮನೆಯಲ್ಲಿ ಹಾಜರಿದ್ದಾರೆಯೇ? ಅವರು ಈ ದಿನ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕೆಂದು ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರ ಆಗ್ರಹ ಗಮನಿಸಿ 3 ಜನ ಮಂತ್ರಿಗಳು ಸದನದಲ್ಲಿ ಹಾಜರಿದ್ದೇವೆ. ದಯಮಾಡಿ, ಕಾರ್ಯಕಲಾಪ ಮಾಡುವುದಕ್ಕೆ ಅವಕಾಶ ನೀಡಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಆ ರೀತಿ ಆಗುವುದಿಲ್ಲ. ಈಗ ಪ್ರಶ್ನೋತ್ತರ ಅವಧಿ ತೆಗೆದುಕೊಳ್ಳಿ. **(ಗೊಂದಲ)** ಹಿರಿಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು... ಸಂವಿಧಾನ ಇಲ್ಲವೆಂದರೂ ನಾವು ಅವರನ್ನು ಉಪ ಮುಖ್ಯಮಂತ್ರಿಗಳು ಎಂದು ಹೇಳುತ್ತೇವೆ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಷ್ಟೆಲ್ಲಾ ಗುದ್ದಾಡಿ ಮಂತ್ರಿಗಳಾಗಿದ್ದಾರೆ. ಕನಿಷ್ಠ ಪಕ್ಷ ಈಗಲಾದರೂ ಅವರು ಆಸಕ್ತಿ ತೋರಿಸಬೇಕು.

**(ಗೊಂದಲ)**

**ಶ್ರೀ ಆನಂದ್ ಸಿಂಗ್(ಅರಣ್ಯ ಸಚಿವರು):–** ಮಾನ್ಯ ಸಭಾಪತಿಯವರೇ, 15 ನಿಮಿಷ ತಡವಾಗಿದೆ. ಅದಕ್ಕೋಸ್ಕರ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅದಕೋಸ್ಕರ ಸದನವನ್ನು 15 ನಿಮಿಷ ಮುಂದೂಡಬೇಕೇ?

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, 15 ನಿಮಿಷ ತಡವಾಗಿ ಬಂದಿದ್ದೇನೆ. ಅದಕ್ಕಾಗಿ ಕ್ಷಮೆ ಯಾಚಿಸುತ್ತೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ನಮಗೆ ಕೈ ಕೊಟ್ಟು, ಮುಂಬಯಿಗೆ ಹೋಗಿ, ಅಲ್ಲಿಂದ ಎಲೆಕ್ಷನ್ ಮಾಡಿಸಿ, ಹಾರಿಸಿ ಬಂದಿರುತ್ತಾರೆ.

**(ಗೊಂದಲ)**

**ಶ್ರೀ ಆನಂದ್ ಸಿಂಗ್:–** ಮಾನ್ಯ ಸಭಾಪತಿಯವರೇ, ನಾನು ಯಾವ ಮುಂಬಯಿಗೂ ಹೋಗಿರುವುದಿಲ್ಲ. ಬೇರೆ ಬೇರೆ ಕಾರಣಗಳಿಂದ ನಾವು ಇಲ್ಲಿಗೆ ಬಂದಿರುತ್ತೇವೆ. ಈಗ ಆ ವಿಚಾರಗಳನ್ನು ಚರ್ಚೆ ಮಾಡುವುದರಿಂದ ಸಮಸ್ಯೆಗಳೇನು ಬಗೆಹರಿಯುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಶ್ರೀ ಆನಂದ್ ಸಿಂಗ್ ರವರು ಇಲ್ಲಿಯೇ ಬಟನ್ ಒತ್ತಿರುತ್ತಾರೆ. ಉಳಿದ ಶಾಸಕರು ಮುಂಬಯಿಗೆ ಹೋಗಿರುತ್ತಾರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಶ್ರೀ ಆನಂದ್ ಸಿಂಗ್‌ರವರ ಮನೆ ವಸಂತ ನಗರದಲ್ಲಿದೆ. ಮುಂಬಯಿಯಲ್ಲಿ ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಸರಿಯಾಗಿ instructions ಕೊಡಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈಗ ಪ್ರಶ್ನೋತ್ತರ ಅವಧಿ ಪ್ರಾರಂಭ ಮಾಡಿ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯನ್ನು ಸಂಜೆ 4.30 ಗಂಟೆಯ ನಂತರ ತೆಗೆದುಕೊಳ್ಳೋಣ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರನ್ನು ಒಂದು ವಿಷಯದಲ್ಲಿ ನಾವು ಪ್ರಶಂಸೆ ಮಾಡಲೇಬೇಕು. ಏಕೆಂದರೆ, 3 ಉಪ ಮುಖ್ಯಮಂತ್ರಿಗಳು ಇದ್ದಂತಹ ಸಂದರ್ಭದಲ್ಲಿಯೂ ಸಹ 6 ಜನ ಮಂತ್ರಿಗಳನ್ನು ಚೆನ್ನಾಗಿ ಸಮರ್ಥನೆ ಮಾಡಿಕೊಂಡಿರುತ್ತಾರೆ.

**4. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ**

**ಶ್ರೀ ಎನ್.ಎಸ್.ಭೋಸ್‌ರಾಜು(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸುವುದಕ್ಕಾಗಿ ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸಿ, ರಾಜ್ಯಪಾಲರ ಭಾಷಣದಲ್ಲಿ ಅತಿಮುಖ್ಯವಾಗಿ 2019 ರ ಆಗಸ್ಟ್ ತಿಂಗಳಿನಿಂದ 2019ರ ಅಕ್ಟೋಬರ್ ತಿಂಗಳವರೆಗೆ ರಾಜ್ಯದಲ್ಲಿ ಭಾರೀ ಮಳೆ ಹಾಗೂ ಪ್ರವಾಹಗಳಿಂದಾದ ನಷ್ಟಗಳ ಬಗ್ಗೆ ಮಾತನಾಡಿರುವುದನ್ನು ನೋಡಿದಾಗ, ಇವೊತ್ತಿನ ದಿವಸ ಈ ನೆರೆ ಹಾವಳಿ ಸಂಭವಿಸಿ 6 ತಿಂಗಳು ಕಳೆದಿದೆ. ಈ 6 ತಿಂಗಳಿನಿಂದ ನೆರೆ ಸಂತ್ರಸ್ತರಿಗೆ ಸರ್ಕಾರದಿಂದ ಸಿಕ್ಕಿರತಕ್ಕಂತಹ ಪರಿಹಾರ ಎಷ್ಟರಮಟ್ಟಿಗೆ ಜನರಿಗೆ ಮುಟ್ಟಿದೆ ಮತ್ತು ಇವೊತ್ತಿನ ದಿವಸ ಅಲ್ಲಿರತಕ್ಕಂತಹ ಪರಿಸ್ಥಿತಿಯನ್ನು ನಾವು ನೋಡಿದಾಗ, ಆ ಭಾಗದಲ್ಲಿ ಇನ್ನೂ ರೈತರು ನಷ್ಟ ಪರಿಹಾರ ಸಿಕ್ಕಿಲ್ಲವೆಂಬ ಮಾತನ್ನು ಎಲ್ಲಾ ಪತ್ರಿಕೆಗಳ ಮುಖಾಂತರ ಹಾಗೂ ಸರ್ಕಾರ ಘೋಷಣೆ ಮಾಡಿರತಕ್ಕಂತಹ ಪರಿಹಾರ ಇನ್ನೂ ಅವರಿಗೆ ತಲುಪದೇ ಇರುವುದನ್ನು ಸಹ ಮಾಧ್ಯಮಗಳು ಸಾಕಷ್ಟು ಪ್ರಚಾರ ಮಾಡಿರುವುದನ್ನು ನಾವು ನೋಡಿದ್ದೇವೆ. ಈಗಾಗಲೇ ಮಾನ್ಯ ಸ್ನೇಹಿತರು ಮಾತನಾಡತಕ್ಕಂತಹ ಸಂದರ್ಭದಲ್ಲಿ, ಪ್ರಜಾವಾಣಿ ದಿನಪತ್ರಿಕೆ ಮತ್ತು ಇತರ ದಿನ ಪತ್ರಿಕೆಗಳ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಖಪುಟಗಳಲ್ಲಿ ಬಂದಿರುವುದನ್ನು... ಇದನ್ನು ಯಾವ ರೀತಿಯಾಗಿ ಸರ್ಕಾರ ಘೋಷಣೆ ಮಾಡಿರುವಂಥದ್ದು, ಅಂದರೆ, 5 ಲಕ್ಷ, 3 ಲಕ್ಷ, 1 ಲಕ್ಷ ರೂಪಾಯಿ ಪರಿಹಾರ ಹಣ ಮತ್ತು ಮನೆಗಳನ್ನು ನಿರ್ಮಾಣ ಮಾಡುವಂಥದ್ದು, ಗ್ರಾಮ ಪ್ರದೇಶಗಳನ್ನು ಸ್ಥಳಾಂತರ ಮಾಡುವಂಥದ್ದು, ಈ ರೀತಿಯಾದ ಅನೇಕ ಆಶ್ವಾಸನೆಗಳನ್ನು ಸರ್ಕಾರ ನೀಡಿದೆ. ಪ್ರವಾಹ ಬಂದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಪ್ರವಾಸ ಮಾಡಿ ಅನೇಕ ಆಶ್ವಾಸನೆಗಳನ್ನು ನೀಡಿದ್ದಾರೆ. ಆ ಆಶ್ವಾಸನೆಗಳನ್ನು ಜಾರಿಗೆ ತರಬೇಕಾದರೆ 1 ಲಕ್ಷ ಕೋಟಿ ರೂಪಾಯಿ ಸಿಕ್ಕಿದರೂ ಸಹ ಅದು ಕಡಿಮೆ ಆಗುತ್ತದೆ ಎನ್ನುವುದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದಂತಹ ಸಹಕಾರ ಸಹ ನಮಗೆ ಸಿಕ್ಕಿರುವುದಿಲ್ಲ. ರಾಜ್ಯ ಸರ್ಕಾರ ನಷ್ಟದ ಬಗ್ಗೆ ಅಂದಾಜು 35 ಸಾವಿರದಿಂದ 38 ಸಾವಿರ ಕೋಟಿ ರೂಪಾಯಿ ಆಗುತ್ತದೆಯೆಂದು ಕೇಂದ್ರ ಸರ್ಕಾರಕ್ಕೆ ಹೇಳಿದ್ದರೂ ಸಹ ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಕೇವಲ 1800 ಕೋಟಿ ರೂಪಾಯಿ ಪರಿಹಾರ ನೀಡಿರುತ್ತದೆ.

(ಮುಂದುವರೆದಿದೆ...)

(149)04.03.2020/3.40/ವೈಎಲ್–ಎಂಡಿ(ವಿಕೆ)
**ಶ್ರೀ ಎನ್.ಎಸ್.ಭೋಸ್‌ರಾಜು(ಮುಂದು)**

ಆ ಭಾಗದ ಎಲ್ಲಾ ಜನರಿಗೂ ನೀಡಿರುವುದಾಗಿದೆ. ಅತಿ ಮುಖ್ಯವಾಗಿ ಉತ್ತರ ಕರ್ನಾಟಕಕ್ಕೆ ನೀಡಲಾಗಿದೆ. ಆದರೆ, ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ಪ್ರತಿ ಕುಟುಂಬಕ್ಕೂ ರೂ.10,000/– ಗಳು ಮಾತ್ರ ಮುಟ್ಟಿದೆ. ನಂತರ ರಾಯಚೂರು ಭಾಗದಲ್ಲಿ ಯಾರಿಗೂ ಸಹ ರೂ.5.00 ಲಕ್ಷಗಳು ಮುಟ್ಟಿಲ್ಲ. ಕೆಲವು ಮನೆಗಳಿಗೆ ಮಾತ್ರ ಕೇವಲ ರೂ. 1.00 ಲಕ್ಷಗಳು ಮುಟ್ಟಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ವಿಚಾರವಾಗಿ ಮಾನ್ಯ ಸಚಿವರು ಸಭೆಗೆ ಬಂದಂತಹ ಸಂದರ್ಭದಲ್ಲಿಯು ಮಾತನಾಡಿದ್ದೇವೆ. 6 ತಿಂಗಳು ಗತಿಸಿದ್ದರೂ, ಇವತ್ತಿನವರೆಗೂ ಉತ್ತರ ಕರ್ನಾಟಕದ ಭಾಗದ ಜನರು ಖಾಯಂ ಆಗಿ ನೆಲೆಸುವುದಕ್ಕೆ ವಸತಿ ಸೌಕರ್ಯವಾಗಲಿ, ಅವರಿಗೆ ಆಗಿರುವ ನಷ್ಟಕ್ಕೆ ಪರಿಹಾರವಾಗಲಿ, crop compensation ಆಗಲಿ ನೀಡುವುದಕ್ಕೆ ಸಾಧ್ಯವಾಗಿಲ್ಲ. ಯಾವ ರೀತಿ ಸರ್ಕಾರಕ್ಕೆ ಆ ಭಾಗದ ಜನರ ಬಗ್ಗೆ ಕಳಕಳಿ ಇದೆ ಎಂಬುದು ಇದರ ಮುಖಾಂತರ ಗೊತ್ತಾಗುತ್ತಿದೆ. ಸರ್ಕಾರದ ಹತ್ತಿರ ಹಣ ಇಲ್ಲದ ಪರಿಸ್ಥಿತಿಯಾಗಿದೆ. ಏಕೆಂದರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಸಹ ಕಲ್ಯಾಣ ಕರ್ನಾಟಕಕ್ಕೆ ಗುಲ್ಬರ್ಗಾ Headquarters ನಲ್ಲಿ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮೊನ್ನೆ ರಾಯಚೂರು ಜಿಲ್ಲೆಗೂ ಸಹ ಬಂದಿದ್ದರು. ಸಚಿವರು ರಾಯಚೂರು ಜಿಲ್ಲೆಗೆ ಬರುವ ಸಂದರ್ಭದಲ್ಲಿ ರಸ್ತೆಗಳನ್ನು ಸಹ ನೋಡಿರಬೇಕು.

**ಶ್ರೀ ಗೋವಿಂದ ಎಂ ಕಾರಜೋಳ:–** ಮಾನ್ಯ ಸದಸ್ಯರೆ ನಾನು ಉತ್ತರವನ್ನು ಹೇಳಬಹುದೇ? ಒಬ್ಬರಿಗೂ ರೂ.5.00 ಲಕ್ಷವನ್ನು ನೀಡಿಲ್ಲವೆಂದು ಹೇಳಿದ್ದೀರಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ಎಸ್.ಬೋಸ್‌ರಾಜು:–** ಹೇಳಿ.

**ಶ್ರೀ ಗೋವಿಂದ ಎಂ ಕಾರಜೋಳ:–** 2019–20ನೇ ಸಾಲಿನಲ್ಲಿ ಬಹುಶಃ ನೂರು ವರ್ಷಗಳ ಇತಿಹಾಸದಲ್ಲಿ...

**ಸಭಾಪತಿಯವರು:–** ತಾವು ಉತ್ತರವನ್ನು ನೀಡುತ್ತಿರುವುದರಿಂದ ಮಾನ್ಯ ಸದಸ್ಯರ ಮಾತು ಪೂರ್ಣಗೊಳಿಸಿದ ಮೇಲೆ ಉತ್ತರವನ್ನು ನೀಡಿ.

**ಶ್ರೀ ಎನ್.ಎಸ್.ಭೋಸ್‌ರಾಜು(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರದ ಲೆಕ್ಕ ಏನಿದೆ ಅದು ಇದ್ದೇ ಇರುತ್ತದೆ. ಆದರೆ, ಆ ಲೆಕ್ಕಕ್ಕೆ ಸೇರಿಸಿಕೊಂಡಿಲ್ಲವೆಂದು ರೈತರು ಇವತ್ತಿಗೂ ಜಿಲ್ಲಾಧಿಕಾರಿಗಳನ್ನು ಕೇಳುತ್ತಿದ್ದಾರೆ. ಪರಿಹಾರ ನೀಡಬೇಕಾದರೆ ಯಾರಿಗೆ ನಷ್ಟವಾಗಿದೆ ಎಂಬುದನ್ನು assessment ಮಾಡುವುದರಲ್ಲೇ ತಪ್ಪು ಲೆಕ್ಕವಾಗಿದೆ ಎಂದು ಸಾಕಷ್ಟು ಜನರು ಜಿಲ್ಲಾಧಿಕಾರಿಯವರ ಕಛೇರಿಗೆ ಹಾಗೂ ಜನ ಪ್ರತಿನಿಧಿಗಳ ಹತ್ತಿರ ಹೋಗುತ್ತಿದ್ದಾರೆ. ಅದರ ಬಗ್ಗೆಯು ಉಪ ಮುಖ್ಯಮಂತ್ರಿಯವರು ಉತ್ತರ ನೀಡಬೇಕಾಗುತ್ತದೆ. ಇನ್ನೂ ಎಷ್ಟು ಮಂದಿಯನ್ನು ಗುರುತಿಸಬೇಕಾಗಿದೆ, ಎಷ್ಟು ಮಂದಿಗೆ ನಷ್ಟವಾಗಿದೆ, ಅವರಿಗೆ ಏನು ಮಾಡಬೇಕೆಂಬುದನ್ನು ಸಹ ಉಪ ಮುಖ್ಯಮಂತ್ರಿಗಳು ಹೇಳಬೇಕಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಆಯಿತು. ಎಲ್ಲದರ ಉತ್ತರವನ್ನು ನೀಡುತ್ತೇವೆ.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮನೆಗಳು ನೆಲಸಮವಾಗಿರುವುದು, crop loss ಆಗಿರುವುದು, ಇವೆಲ್ಲದಕ್ಕೂ ಸಂಬಂಧಿಸಿದಂತೆ ಸಾಕಷ್ಟು ದೂರುಗಳು ಎಲ್ಲಾ ಜಿಲ್ಲೆಗಳಿಂದ ಬರುತ್ತಿದೆ. ಅದರ ಬಗ್ಗೆ ಗಂಭೀರವಾಗಿ ಗಮನಹರಿಸಬೇಕು. ಯಾವ ಬಡವನಿಗೆ ತೊಂದರೆಯಾಗಿದೆ, ಅನ್ಯಾಯವಾಗಿದೆ, ಯಾವ ರೀತಿಯಲ್ಲಿ ರೆವಿನ್ಯೂ ಇಲಾಖೆಯಿಂದ assessment ಆಗಿದೆ ಎಂಬುದೆಲ್ಲಾ ವಿಷಯವನ್ನು ಗಮನಿಸಿದರೆ, ಮಾನ್ಯ ಉಪ ಮುಖ್ಯಮಂತ್ರಿಯವರು ನೀಡಿರತಕ್ಕಂಥ ಉತ್ತರ ಬಹಳ ಕಡಿಮೆ ಪ್ರಮಾಣದಲ್ಲಿದೆ ಎಂಬುದನ್ನು ಹೇಳುವುದಕ್ಕೆ ಬಯಸುತ್ತೇನೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಸಿಗಬೇಕಾಗಿರುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಅನೇಕ ಬಾರಿ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರನ್ನು ಭೇಟಿ ಮಾಡುವುದಕ್ಕೆ ಪ್ರಯತ್ನಿಸಿದ್ದರು. ಆದರೆ, ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಅವಕಾಶ ಸಿಗಲಿಲ್ಲ. ಇಲ್ಲಿಯೇ ISRO (Indian Space Research Organisation) ಗೆ ಬಂದಿದ್ದರು. ಗೆಸ್ಟ್ ಹೌಸ್‌ನಲ್ಲಿ ಕ್ಯಾಂಪ್ ಮಾಡಿದ್ದ ಸಂದರ್ಭದಲ್ಲಿಯೂ ಸಹ ಮಾನ್ಯ ಮುಖ್ಯಮಂತ್ರಿಗಳು ಪರಿಹಾರಕ್ಕೆ ಸಂಬಂಧಿಸಿದಂತೆ ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಲು ಹೋದಾಗ ಮುಖ್ಯಮಂತ್ರಿಗಳಿಗೆ ಅವಕಾಶ ನೀಡಲಿಲ್ಲ. ಒಟ್ಟಾರೆಯಾಗಿ ಪರೋಕ್ಷವಾಗಿ ಕರ್ನಾಟಕಕ್ಕೆ ತೊಂದರೆ ನೀಡುವ ರೀತಿ ಪ್ರಧಾನ ಮಂತ್ರಿಗಳು ನಡೆದುಕೊಂಡಿದ್ದಾರೆ, ಯಾವ ಕಾರಣಕ್ಕಾಗಿ ಪ್ರಧಾನ ಮಂತ್ರಿಗಳಾಗಿದ್ದಾರೆ ಎಂದು ಕರ್ನಾಟಕದ ಜನತೆ ಮಾತನಾಡುತ್ತಿದ್ದಾರೆ. ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಗಳು 100 ವರ್ಷಗಳಲ್ಲಿ ಈ ರೀತಿಯ ಪ್ರವಾಹ ಸಂಭವಿಸಿಲ್ಲ ಎನ್ನುವ ಮಾತನ್ನು ಆಡಲು ಶುರು ಮಾಡಿದ್ದರು. ಅಂತಹ ಅತೀ ದೊಡ್ಡ ಪ್ರವಾಹ ಕರ್ನಾಟಕದಲ್ಲಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಭವಿಸಿದಾಗ ಅದೆಲ್ಲವನ್ನು Ariel Survey ಮಾಡಿ, ಜನಪ್ರತಿನಿಧಿಗಳ ಹತ್ತಿರ, ಮುಖ್ಯಮಂತ್ರಿಗಳ ಹತ್ತಿರ, ಅಧಿಕಾರಿಗಳ ಹತ್ತಿರ ಚರ್ಚೆ ಮಾಡುವುದು ಈ ದೇಶದ ಪ್ರಧಾನ ಮಂತ್ರಿಗಳ ಜವಾಬ್ದಾರಿಯಾಗಿರುತ್ತದೆ. ಹೌದೇ, ಅಲ್ಲವೇ? ಈ ರಾಜ್ಯದಿಂದ 22 ಮಂದಿ ಸದಸ್ಯರನ್ನು ಬಿಜೆಪಿ ಸರ್ಕಾರಕ್ಕೆ ಆಯ್ಕೆ ಮಾಡಿ ಕಳುಹಿಸಿದ್ದಾರೆ. ಎಲ್ಲರಿಗೂ ಜವಾಬ್ದಾರಿ ಇರುತ್ತದೆ. ಈ ರಾಜ್ಯದ ಯಾವುದೇ ಮುಖ್ಯ ಮಂತ್ರಿಗಳಾಗಲಿ, ಸಚಿವರಾಗಲಿ, 22 ಮಂದಿ ಸದಸ್ಯರಾಗಲಿ ಯಾರೂ ಸಹ ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಲು ಅವಕಾಶ ನೀಡಲಿಲ್ಲ. ಇದರಿಂದಾಗಿ ಮಾನ್ಯ ಪ್ರಧಾನಮಂತ್ರಿಗಳು ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿರುವುದು ಗೊತ್ತಾಗುತ್ತಿದೆ.

2005–06ನೇ ಸಾಲಿನಲ್ಲಿ ಕೃಷ್ಣಾ ನದಿಗೆ ಪ್ರವಾಹ ಬಂದಿತ್ತು. ಪ್ರವಾಹ ಬಂದಂತಹ ಸಂದರ್ಭದಲ್ಲಿ ಅಂದಿನ ಯು.ಪಿ.ಎ. ಸರ್ಕಾರದ ಮಾಜಿ ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್‌ರವರ ಕಾಲದಲ್ಲಿ ಅಂದಿನ ಕೃಷಿ ಇಲಾಖೆಯ ಸಚಿವರಾದ ಡಾ॥ ಬಿ. ಶರತ್ ಬಾಬುರವರು ಆ ಭಾಗಕ್ಕೆ ರೂ.500.00 ಕೋಟಿಗಳನ್ನು ಕೇಳಿದಾಗ ತಕ್ಷಣವೇ ಬಿಡುಗಡೆ ಮಾಡಿದ್ದಾರೆ. ಅದೇ ರೀತಿ 2008–09ನೇ ಸಾಲಿನಲ್ಲಿ ತುಂಗಭದ್ರಾ ನದಿಗೆ ಹೆಚ್ಚಿನ ಪ್ರವಾಹವಾದ ಸಂದರ್ಭದಲ್ಲಿ ಅಂದಿನ ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್‌ರವರು ತಕ್ಷಣ Ariel Survey ಮಾಡಿ, ಕೊನೆಯದಾಗಿ ರಾಯಚೂರಿಗೆ ಬಂದರು. ಅಂದೂ ಸಹ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದು ಅವರ ಜೊತೆ ಹಾಗೂ ಅಧಿಕಾರಿಗಳ ಜೊತೆ ಒಂದು ಗಂಟೆಗಳ ಕಾಲ ಚರ್ಚೆ ಮಾಡಿ, ರೂ.1,600 ಕೋಟಿಗಳನ್ನು ಘೋಷಣೆ ಮಾಡಿರುವ ಉದಾಹರಣೆಗಳಿವೆ. ಅಂದಿನ ಪ್ರಧಾನ ಮಂತ್ರಿಗಳು ಕರ್ನಾಟಕಕ್ಕೆ ಪರಿಹಾರ ನೀಡುವುದಕ್ಕೆ ತೋರಿಸಿರುವ ಸಹಾನುಭೂತಿ ಇಂದಿನ ಪ್ರಧಾನ ಮಂತ್ರಿಗಳಿಗೆ ಏಕಿಲ್ಲ? ಇಂದಿನ ಪ್ರಧಾನ ಮಂತ್ರಿಗಳು ಕರ್ನಾಟಕದ ಬಗ್ಗೆ ವ್ಯತಿರಿಕ್ತ ಧೋರಣೆ ಅನುಸರಿಸುತ್ತಿರುವುದನ್ನು ನಾವೆಲ್ಲರೂ ಗಮನಿಸಬೇಕಾಗಿದೆ. ಈ ದಿಸೆಯಲ್ಲಿ ಇನ್ನೂ ಬರಬೇಕಾಗಿರುವ 3,500 ಕೋಟಿ ರೂಪಾಯಿಗಳನ್ನು ಕನಿಷ್ಠವಾಗಿ ನೀಡಬೇಕಾಗಿತ್ತು. ಆದರೆ, ಬಂದಿರತಕ್ಕಂಥ ಅನುದಾನ ರೂ.1,800 ಕೋಟಿಗಳು ಮಾತ್ರ. ಉಳಿದಂಥ ಹಣ ಬರುತ್ತದೆಯೇ, ಬರುವುದಿಲ್ಲವೇ, ಯಾವ ರೀತಿ ಜನರಿಗೆ ಪರಿಹಾರ ನೀಡಲಾಗುತ್ತದೆ ಎಂಬುದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಕೇಂದ್ರ ಸರ್ಕಾರ ಪುಕ್ಕಟೆಯಾಗಿ ಪರಿಹಾರ ನೀಡುತ್ತಿಲ್ಲ. ನಮ್ಮಿಂದ ವಸೂಲಿ ಮಾಡಿರತಕ್ಕಂಥ ಹಣವನ್ನು ಈ ರೀತಿ ತೊಂದರೆ ಉದ್ಭವಿಸಿದಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರ ನಮ್ಮ ಸಹಕಾರಕ್ಕೆ ಬಂದು ಪರಿಹಾರವನ್ನು ನೀಡಬೇಕಾಗುತ್ತದೆ.

ಈ ದಿಸೆಯಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಡ ಮಾಡಿ, ನಮಗೆ ಬರಬೇಕಾಗಿರುವ ಪೂರ್ತಿ ಸಹಕಾರವನ್ನು ಪಡೆಯಬೇಕಾಗಿದ್ದು, ರಾಜ್ಯ ಸರ್ಕಾರ ಜವಾಬ್ದಾರಿಯುತವಾಗಿ ಪ್ರಯತ್ನ ಮಾಡಬೇಕಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ. ಅದರಲ್ಲಿಯೂ ಕಲ್ಯಾಣ ಕರ್ನಾಟಕದ ಪ್ರದೇಶಕ್ಕೆ ಸಂಬಂಧಿಸಿದಂತೆ, ಸರ್ಕಾರ ಆ ಜನರಿಗೆ ಸಾಕಷ್ಟು ಒಳ್ಳೆಯ ಕೆಲಸವನ್ನು ಮಾಡಬೇಕಾಗಿದೆ. ಹೈದ್ರಾಬಾದ್–ಕರ್ನಾಟಕ ಎಂಬುದನ್ನು ಕಲ್ಯಾಣ–ಕರ್ನಾಟಕ ಎಂದು ಬದಲಾಯಿಸಿ, ಈಗಾಗಲೇ 6 ತಿಂಗಳಾಗಿವೆ. ಹಾಗಾಗಿ ಬಿಜೆಪಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರ ಈ ಕಲ್ಯಾಣ–ಕರ್ನಾಟಕಕ್ಕೆ ಮಾಡಿರತಕ್ಕಂಥ ಕೆಲಸಗಳೇನು? ಬಿಜೆಪಿ ಸರ್ಕಾರ ಕಲ್ಯಾಣ–ಕರ್ನಾಟಕ ಎಂದು ಬದಲಾವಣೆ ಮಾಡಿದ್ದು, ಅದನ್ನು ನಾವು ಸ್ವಾಗತಿಸುತ್ತೇವೆ. ಈ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಯಾವ ರೀತಿ ಪರಿಸ್ಥಿತಿ ಇದೆ ಎಂಬುದು ತಮಗೂ ಗೊತ್ತಿದೆ. ಶಿಕ್ಷಣಕ್ಕೆ ಸಂಬಂಧಿಸಿದ್ದಾಗಿರಬಹುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಕಲ್ಯಾಣ–ಕರ್ನಾಟಕ ಎಂದು ಹೆಸರು ಬದಲಾಯಿಸಿದ ಮೇಲೆ ಏನಾದರೂ ಕಲ್ಯಾಣವಾಗಿರಬಹುದೇನೋ ಕೇಳಿ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಹೌದು, ಆ ವಿಚಾರವಾಗಿಯೇ ಕೇಳುತ್ತಿದ್ದೇನೆ. ಶಿಕ್ಷಣ, ಆರೋಗ್ಯ, ಅಭಿವೃದ್ಧಿಗೆ ಸಂಬಂಧಿಸಿರುವುದಾಗಿರಬಹುದು. 6 ತಿಂಗಳಿಂದ ತಾವು ತೆಗೆದುಕೊಂಡಿರುವ ಕ್ರಮಗಳೇನು? ಕಲ್ಯಾಣ–ಕರ್ನಾಟಕ ಮಾಡುವುದಕ್ಕೆ ಯಾವ ರೀತಿ ಪ್ರಯತ್ನ ಮಾಡಲಾಗಿದೆ ಎಂಬುದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕಾಗಿದೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕದಡಿಯಲ್ಲಿ ನಾವು ಕೆಲವು ಶಾಲೆಗಳನ್ನು ನಡೆಸುವುದಕ್ಕೆ 3 ವರ್ಷಗಳ ಕಾಲ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇತ್ತೋ, ಆ ಶಾಲೆಗಳನ್ನು ನಡೆಸುವುದಕ್ಕೆ ಶಿಕ್ಷಕರನ್ನು ನೇಮಿಸಲಾಗಿದೆ. ವರ್ಗಾವಣೆಗೆ ಸಂಬಂಧಿಸಿದ ಕೌನ್ಸಿಲ್‌ನಲ್ಲಿಯೂ ಸಹ ಜಾಗವನ್ನು ತೋರಿಸಿ ಶಿಕ್ಷಕರನ್ನು ನೀಡಲಾಗಿದೆ. 9 ತಿಂಗಳಿನಿಂದ ಇಲ್ಲಿಯವರೆಗೂ ಆ ಶಿಕ್ಷಕರಿಗೆ ಸಂಬಳವನ್ನು ನೀಡಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಇವತ್ತೇ ಪರಿಶೀಲನೆ ಮಾಡಬಹುದು. 14 ತಿಂಗಳಿಂದ ಪಿ.ಯು.ಸಿ. ಶಿಕ್ಷಕರಿಗೂ ಸಂಬಳವನ್ನು ನೀಡಿರಲಿಲ್ಲ, ಹಿಂದಿನ ವರ್ಷ ಪಿ.ಯು.ಸಿ. ಶಿಕ್ಷಕರಿಗೆ ಸಂಬಳವನ್ನು ನೀಡಲಾಗಿದೆ. ಮಾನ್ಯ ಸದಸ್ಯರು ಕಲ್ಯಾಣ–ಕರ್ನಾಟಕ ವಿಷಯವನ್ನು ಎತ್ತಿ ಹಿಡಿದಿದ್ದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಈ ವಿಚಾರವಾಗಿ ತಮ್ಮ ಮೂಲಕ ಪೂರಕವಾಗಿ ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ 9 ತಿಂಗಳಿನಿಂದ ಯಾವ ಯಾವ ಶಾಲೆಗಳಲ್ಲಿ ಯಾವ್ಯಾವ ಶಿಕ್ಷಕರಿಗೆ ಸಂಬಳವನ್ನು ನೀಡಿಲ್ಲವೋ, ದಯಮಾಡಿ ಆ ಶಿಕ್ಷಕರಿಗೆ ಸಂಬಳವನ್ನು ನೀಡಬೇಕೆಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ. ಅವರಿಗೆ ಊಟಕ್ಕೂ ಗತಿಯಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಉಪ ಮುಖ್ಯಮಂತ್ರಿಯವರೇ, ಶಾಸಕರಿಗೆ ಅನುದಾನ ನೀಡಿಲ್ಲ. ನನಗೆ ಕಾರವಾರದಿಂದ ಫೋನ್ ಬಂದಿತ್ತು, ಯಲ್ಲಾಪುರದಲ್ಲಿರುವ ಒಬ್ಬ ಅಧಿಕಾರಿಗೆ ಪತ್ರವನ್ನು ನೀಡಿ ಎರಡು ತಿಂಗಳುಗಳಾಗಿದೆ. ಇದುವರೆಗೂ ಸಂಬಳ ನೀಡಿಲ್ಲ. ಸರ್ಕಾರದಿಂದ ಹಣ ಬಂದಿಲ್ಲವೆಂದು ಹೇಳುತ್ತಾರೆ. ಅದಕ್ಕೂ ತಾವು ಉತ್ತರವನ್ನು ನೀಡಬೇಕು.

**ಶ್ರೀ ಗೋವಿಂದ ಎಂ ಕಾರಜೋಳ:–** ಉತ್ತರವನ್ನು ತರಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಉತ್ತರವನ್ನು ತರಿಸಿ ಹೇಳಿ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ ಕಾರಜೋಳ:–** ಆಯಿತು, ತರಿಸೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಉಪ ಮುಖ್ಯಮಂತ್ರಿಗಳೇ ಮಠದ ಸ್ವಾಮೀಜಿಗಳು ಆಶೀರ್ವಾದ ಮಾಡುವ ರೀತಿ ಮಾತನಾಡುತ್ತೀರಲ್ಲಾ!

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಈ ಪರಿಹಾರದ ಬಗ್ಗೆ ಮಾತನಾಡಿದ್ದೇವೆ. ಈಗಾಗಲೇ ಅದೇ ವಿಚಾರವಾಗಿ ಮಾನ್ಯ ಶರಣಪ್ಪ ಮಟ್ಟೂರುರವರು ಮಾತನಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಬಡವರು ತಮಗೆ ಸಿಗಬೇಕಾಗಿರುವುದು ಸಿಕ್ಕಿಲ್ಲ ಎನ್ನುವಂಥ ಸಂದರ್ಭದಲ್ಲಿ ದಿನಾಂಕ: 06.11.2019 ರಂದು ಕರ್ನಾಟಕ ಸರ್ಕಾರ ಸಚಿವಾಲಯದ ಬಹುಮಹಡಿ ಕಟ್ಟಡದಿಂದ ಜಿಲ್ಲಾ ಪಂಚಾಯಿತಿಗೆ ರೂ.223.00 ಕೋಟಿ ರೂಪಾಯಿಗಳನ್ನು ನೀಡಲಾಗಿದೆ.

(ಮುಂದು)

(150)/04.03.2020/3.50/ಎಸ್‌ಕೆ-ಎಕೆ
**ಶ್ರೀ ಎನ್.ಎಸ್. ಭೋಸ್‌ರಾಜು(ಮುಂದು)**

ಎಲ್ಲೆಲ್ಲಿ ಪ್ರವಾಹವಾಗಿದೆ. ಅಂತಹ ಪ್ರದೇಶಗಳಿಗೆ ಜಿಲ್ಲಾ ಪಂಚಾಯಿತಿಯಿಂದ ಪರಿಹಾರವನ್ನು ಕೊಟ್ಟಿದ್ದಾರೆ. ಘೋಷಣೆ ಮಾಡಿದಂತಹ ಅನೇಕ ಪ್ರದೇಶಗಳಿಗೆ ಸುಮಾರು 228 ಕೋಟಿ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ಎಲ್ಲಾ ಬಿ.ಜೆ.ಪಿಯ ಜಿಲ್ಲಾ ಅಧ್ಯಕ್ಷರಿಗೆ, ಸಲಹಾ ಸಮಿತಿಯ ಅಧ್ಯಕ್ಷರಿಗೆ ಹಾಗೂ ಯಾರ್‍ಯಾರಿಗೆ ಕೊಟ್ಟಿದ್ದಾರೆಂಬುದರ ಬಗ್ಗೆ ಹೆಸರುಗಳಿವೆ. ಇದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರ ಗಮನಕ್ಕೆ ತಂದಾಗ, ಅವರು ದಿನಾಂಕ 08.01.2020ರಂದು ಮುಖ್ಯಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದಿದ್ದರು. ಮುಖ್ಯ ಕಾರ್ಯದರ್ಶಿಯವರು ತಕ್ಷಣವೇ ಆ ಪಂಚಾಯತ್‌ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದರು. ಅದು ಮುಂದೆ ಏನಾಯಿತು ಎಂಬುದು ನಮಗೆ ಗೊತ್ತಿಲ್ಲ. ಯಾವ ರೀತಿ by name ಕೊಡುತ್ತಾರೆ ಎಂಬುದು ನಮಗೆ ಗೊತ್ತಿಲ್ಲ. ನಾನೂ ಸಹ ಐವತ್ತು ವರ್ಷಗಳಿಂದಲೂ ರಾಜಕೀಯದಲ್ಲಿದ್ದೇನೆ. ಎಲ್ಲಾ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳ ಸಂಪರ್ಕದಲ್ಲಿದ್ದೇನೆ. ಯಾವ ಕಾಲಕ್ಕೂ ಈ ರೀತಿಯಾದಂತಹ by name; ಕುಷ್ಟಗಿ ಜಿಲ್ಲೆಯಲ್ಲಿ ನೋಡಿರಿ. ಇದು official document ಅಲ್ಲ. Principal Secretary ಯಿಂದ issue ಆಗಿದೆ. ಅಲ್ಲಿ ಏನು ಮಾಡಿದ್ದಾರೆಂದರೆ, ಶ್ರೀಮಾನ್ ದೊಡ್ಡನಗೌಡ ಹನುಮನಗೌಡ ಪಾಟೀಲ್, ಮಾನ್ಯ ಶಾಸಕರು, ಕುಷ್ಟಗಿ ಸುಮಾರು 250 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿರುವ ಅಂಬರೇಗೌಡ ಬಯಾಪುರ ಶಾಸಕರು ಇದ್ದಾರೆ. ಇದು official document. ಇದನ್ನು ಸಹಿ ಮಾಡಿ ಸರ್ಕಾರದಿಂದಲೇ ಕಳುಹಿಸಿಕೊಟ್ಟಿದ್ದಾರೆ. Official letter ನನ್ನ ಬಳಿ ಇದೆ. ಈ ರೀತಿಯಾಗಿ ಆಡಳಿತ ನಡೆಸುವ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಮತ್ತು ಮಂತ್ರಿಗಳು ಏನು

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾಡುತ್ತಿದ್ದಾರೆ? ಇದು ಯಾವ ರೀತಿಯಾಗಿ ಜಾರಿಯಾಗಿದೆ? ಇದರಲ್ಲಿ ಏನಾದರೂ ಅರ್ಥವಿದೆಯೇ? ಅದು ಯಾವ ರೀತಿಯಾಗಿ ಆಡಳಿತ ನಡೆಯುತ್ತಿದೆ ಎಂಬುದು ಇದರಿಂದಾಗಿ ಗೊತ್ತಾಗುತ್ತಿದೆ. ಯಾವ ಆಧಾರದ ಮೇಲೆ ಆಡಳಿತವನ್ನು ನಡೆಸುತ್ತಿದ್ದಾರೆ? ಜಿಲ್ಲಾ ಪಂಚಾಯಿತಿಯ ಸದಸ್ಯರ ಹೆಸರುಗಳ ಮೇಲೆ ಮತ್ತು ಕ್ಷೇತ್ರಕ್ಕೆ ಈ ರೀತಿಯಾಗಿ ಯಾರಿಗಾದರೂ ಅನುದಾನವನ್ನು ಕೊಡಲಿ. ಈ ರೀತಿ ನಾವು ಯಾವ ಕಾಲಕ್ಕೂ ನೋಡಿರಲಿಲ್ಲ. 1969-70ರಲ್ಲಿ ಮಾನ್ಯ ವೀರೇಂದ್ರ ಪಾಟೀಲ್‌ರವರು ಮೊದಲು ಬಾರಿ ಮುಖ್ಯಮಂತ್ರಿಯಾಗಿದ್ದ ಕಾಲದಿಂದಲೂ ನಾನು ನೋಡುತ್ತಿದ್ದೇನೆ. ಇದರ ಬಗ್ಗೆ ಉತ್ತರ ಕೊಡುವುದಾದರೆ ನಾನು ಸ್ವಲ್ಪ ಸಮಯ ಕುಳಿತುಕೊಳ್ಳುತ್ತೇನೆ. ದಯವಿಟ್ಟು, ಇದರ ಬಗ್ಗೆ ಬೆಳಕು ಚೆಲ್ಲಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಈ ಹಿಂದೆ ಒಂದಿಷ್ಟು ಜನ ಶಾಸಕರು ನಮ್ಮ ಕ್ಷೇತ್ರಕ್ಕೆ ಹೆಚ್ಚು ಅನುದಾನ ಕೊಟ್ಟಿಲ್ಲ. ನಮ್ಮ ಕ್ಷೇತ್ರವನ್ನು ಕಡೆಗಣಿಸುವುದು ಏಕೆ? ಆಳುವ ಪಕ್ಷಗಳ ಅಭಿಪ್ರಾಯಗಳಿತ್ತು. ಆ ಸಂದರ್ಭದಲ್ಲಿ ಸರ್ಕಾರ ಬದಲಾದಾಗ, ಎಲ್ಲರನ್ನು ಮರು ಹೊಂದಾಣಿಕೆ ಮಾಡುವ ದೃಷ್ಟಿಯಿಂದ ಕೆಲವು ಕಡೆ ಹೆಚ್ಚು ಅನುದಾನ ಕೊಟ್ಟಾಗ, ಅದನ್ನು ಮರುಹೊಂದಾಣಿಕೆ ಮಾಡಿದಂತೆ ನಿರ್ದೇಶನ ಕೇಳಿದ್ದೇವೆ. ತಮಗೆ ಉತ್ತರ ಕೊಡುವಾಗ ನಿಖರವಾದ ಅಂಕಿ-ಅಂಶಗಳನ್ನು ಕೊಡುತ್ತೇನೆ.

**ಶ್ರೀ ಎನ್.ಎಸ್.ಬೋಸ್‌ರಾಜು:-** ಮಾನ್ಯ ಸಭಾನಾಯಕರೇ, ನಾನು ಹೇಳಿದ್ದು, ತಾವು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ನಾನು individual ಆಗಿ by name ಕೊಟ್ಟಿರುವುದರ ಬಗ್ಗೆ ಕೇಳುತ್ತಿದ್ದೇನೆ. ನನ್ನ ಬಳಿಯಿರುವ ಪ್ರತಿಯನ್ನು ಓದಬೇಕೇ ಅಥವಾ ತಮಗೆ ಕಳುಹಿಸಿಕೊಡಬೇಕೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಬಳಿಯಿರುವ ಪ್ರತಿಯನ್ನು ಕಳುಹಿಸಿಕೊಡಲಿ. ಯಾವುದೇ ತೊಂದರೆಯಿಲ್ಲ.

**ಶ್ರೀ ಎನ್.ಎಸ್. ಬೋಸ್‌ರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸ್ವಲ್ಪ ಕೇಳಬೇಕು. ಶ್ರೀ ನಾಗೇಂದ್ರ ರೂಪೇಶ್, ಭದ್ರಾವತಿ, ಬಿ.ಜೆ.ಪಿಯ ಅಧ್ಯಕ್ಷರು ಇವರಿಗೆ ಸುಮಾರು 3 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಹೇಗೆ? ಇವೆಲ್ಲಾ ಹೆಸರುಗಳನ್ನು ನೋಡಿದರೆ, ಬಿ.ಜೆ.ಪಿಯ ಜಿಲ್ಲಾ ಅಧ್ಯಕ್ಷರು, ತಾಲ್ಲೂಕು ಅಧ್ಯಕ್ಷರು ಹಾಗೂ ಛಲವಾದಿ ಸಂಘದ ಅಧ್ಯಕ್ಷರು ಹಾಗೂ ಮಾನ್ಯ ಬೋಸ್‌ರಾಜು ಮತ್ತು ಮಾನ್ಯ ಪೂಜಾರಿ ಎಂದು ಕೊಟ್ಟಿದ್ದೀರಿ. ತಾವು ಎಂದಾದರೂ ಈ ಇತಿಹಾಸವಿರುವುದನ್ನು ನೋಡಿದ್ದೀರಾ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಮುಖ್ಯಮಂತ್ರಿಗಳಿಗೆ ಸಾರ್ವಜನಿಕ ಕ್ಷೇತ್ರದಲ್ಲಿರುವಂತಹ ವ್ಯಕ್ತಿಗಳು, ಛಲವಾದಿ ಸಂಘದವರು, ಬೇರೆ ಬೇರೆ ದಲಿತ ಸಂಘಟನೆಗಳು ನಮಗೆ ಮನವಿಗಳನ್ನು ಕೊಟ್ಟು, ನಮ್ಮ ಕಡೆ ಅನುದಾನ ಕೊಟ್ಟಿಲ್ಲವೆಂದು ಹೇಳುತ್ತಾರೆ. ಅವರಿಗೆ ಕೊಟ್ಟಿರುವಂತಹ ಉದಾಹರಣೆಗಳಿರುತ್ತದೆ. ಮಾನ್ಯ ಸದಸ್ಯರು ನಿಖರವಾಗಿ ಏನು ಹೇಳಿದ್ದಾರೆ. ಅದಕ್ಕೆ ನಿಖರವಾದ ಉತ್ತರವನ್ನು ಕೊಡುತ್ತೇವೆ.

**ಶ್ರೀ ಎಸ್.ಎಸ್. ಬೋಸ್‌ರಾಜು:-** ಮಾನ್ಯ ಸಭಾನಾಯಕರೇ, ಎಂ.ಎಲ್.ಎ ಅವರಿಗೆ ಅನುದಾನ ಬಿಡುಗಡೆ ಮಾಡಿದರೆ, ಎಂ.ಎಲ್.ಸಿ.ಗಳ ಮಾತನ್ನು ತೆಗೆದುಹಾಕುತ್ತೀರಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆ ರೀತಿ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ಸದಸ್ಯರಾದ ಬೋಸ್‌ರಾಜುರವರು ಏನು ಹೇಳಿದ್ದಾರೆಂದರೆ ಶ್ರೀ ಆರ್. ಶಂಕರ್ ಕ್ಷೇತ್ರವಾಗಿದ್ದ ರಾಣೆಬೆನ್ನೂರಿಗೆ ಸುಮಾರು ಎರಡು ಕೋಟಿ ರೂಪಾಯಿಗಳು, ಶ್ರೀ ಹೆಚ್. ವಿಶ್ವನಾಥ್‌ರವರ ಕ್ಷೇತ್ರವಾಗಿದ್ದ ಹುಣಸೂರು ಕ್ಷೇತ್ರಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳ ಅನುದಾನ ಕೊಟ್ಟಿದ್ದೀರಾ.

**ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಅವರು ಎಂ.ಎಲ್.ಎ. ಇದ್ದರೂ ಪರವಾಗಿಲ್ಲ.
**ಶ್ರೀ ಎಸ್.ಆರ್. ಪಾಟೀಲ್:-** ಇಲ್ಲ. ಅವರು ಇದ್ದರು
**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಬೋಸ್‌ರಾಜುರವರೇ ಕೇಳಿ.
**ಶ್ರೀ ಎಸ್.ಆರ್. ಪಾಟೀಲ್:-** ಅವರು ಹೋಗಲಿ. Ex-MLA ಅವರನ್ನಾ ಬಿಡಿರಿ.
**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸದಸ್ಯರೇ ಕೇಳಿ.
**ಶ್ರೀ ಎಸ್.ಆರ್. ಪಾಟೀಲ್:-** ಇಡೀ ಜಿಲ್ಲಾ ಪಂಚಾಯಿತಿಯ ಸದಸ್ಯರು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-**ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು ಬೇರೆ ಬೇರೆ ಮಾಜಿ ಶಾಸಕರು, ಹಾಲಿ ಶಾಸಕರು ಮನವಿಗಳನ್ನು ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸ್ವಲ್ಪ ನಾನು ಹೇಳುವುದನ್ನು ಸ್ವಲ್ಪ ಕೇಳಬೇಕು. ರಾಯಚೂರು ಶಿವರಾಜ ಮರ್ಚಟಹಾಳ ಬಿ.ಜೆ.ಪಿಯ ಜಿಲ್ಲಾಧ್ಯಕ್ಷರು ಕೇಳಿದ್ದಕ್ಕೆ ಸುಮಾರು ಅರವತ್ನಾಲ್ಕು ಲಕ್ಷ ರೂಪಾಯಿಗಳ ಅನುದಾನ ಕೊಟ್ಟಿದ್ದಾರೆ. ಬೆಳಗಾವಿ ಗೋವಿಂದ್ ಬಿ. ಕೊಪ್ಪದ್ ಮಾನ್ಯ ಸಭಾನಾಯಕರೇ ಒಂದೆರಡು ನಿಮಿಷ ಕೇಳಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾವು ಮತ್ತು ನೀವು ಇರುವಾಗ ಸಮಾಧಾನವಾಗಿರುವುದಕ್ಕೆ ಆಗುವುದಿಲ್ಲ. ನಿಮ್ಮ ಕಡೆ ಯಾರೋ ಬಂದು ಕೊಟ್ಟಂತಹ ಉದಾಹರಣೆಗಳಿವೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ವಿಧಾನಸಭಾ ಕ್ಷೇತ್ರ ಮತ್ತು ವಿಧಾನ ಪರಿಷತ್ ಕ್ಷೇತ್ರವನ್ನು point out ಮಾಡಿ ಅನುದಾನವನ್ನು ಕೊಡಿ. I have no objection. ಈಗ ಮಾನ್ಯ ಗೋವಿಂದ ಎಂ.ಕಾರಜೋಳ ಮುಧೋಳ ವಿಧಾನಸಭಾ ಕ್ಷೇತ್ರಕ್ಕೆ ನಾನೂರು ಲಕ್ಷ ರೂಪಾಯಿಗಳು ಅಥವಾ ಐದುನೂರ ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ಶ್ರೀ ಗೋವಿಂದ ಕೊಪ್ಪದ್ ರಾಜ್ಯ ಸದಸ್ಯರು, ರೈತ ಮೋರ್ಚಾ ಅದೊಂದು ಇದೆಯಾ ನಿಮ್ಮದು. ಬೆಳಗಾವಿ ಗೋವಿಂದ ಕೊಪ್ಪದ್, ಬಿ.ಜೆ.ಪಿ. ರಾಜ್ಯ ಸದಸ್ಯರು ಮತ್ತೆ ಬೇರೆ ಬೇರೆ ಕಡೆ ಇವರು ಕೇಳಿದ್ದಕ್ಕೆ ಅನುದಾನವನ್ನು ಕೊಟ್ಟಿದ್ದಾರೆ. ಯಾದಗಿರಿ ಮಲ್ಲೇಶ್ ಪೊಲೀಸ್ ಪಾಟೀಲ್, ಜಿಲ್ಲಾ ಕಾರ್ಯದರ್ಶಿ, ಬಿ.ಜೆ.ಪಿ. ಜಿಲ್ಲಾ ಪಂಚಾಯಿತಿಯ ಸದಸ್ಯರಿಗೆ ಲೆಕ್ಕ ತಪ್ಪಿ ಎಲ್ಲೆಲ್ಲೋ ಅನುದಾನವನ್ನು ಕೊಟ್ಟಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಾವೇ ಇದನ್ನು ಹೇಳುತ್ತಿದ್ದೀರಿ. ದಯವಿಟ್ಟು, ಮಾನ್ಯ ವಿರೋದಪಕ್ಷದ ನಾಯಕರೇ ಕೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾನಾಯಕರೇ ಸ್ವಲ್ಪ ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ಹೇಳಿ. ಜಿಲ್ಲಾ ಪಂಚಾಯಿತಿಯಿಂದ ಸದಸ್ಯರು ಬಂದು ಅವರೇ ಹೇಳುತ್ತಿದ್ದಾರೆ. ಹೇಳುತ್ತಿದ್ದೀರಿ. ಜಿಲ್ಲಾ ಪಂಚಾಯಿತಿಯ ಯಾರೊಬ್ಬರು ಸದಸ್ಯರು ಬಂದು ಮನವಿಯನ್ನು ಕೊಡುತ್ತಾರೆ. ಮುಖ್ಯಮಂತ್ರಿಗಳು ಜನಪ್ರತಿನಿಧಿಗಳು ಕೇಳಿದ್ದಕ್ಕೆ ಅನುದಾನವನ್ನು ಕೊಟ್ಟಿರುತ್ತಾರೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಆರ್.ಟಿ.ಜಿ.ಎಸ್ ಮುಖಾಂತರ ಬಿ.ಜೆ.ಪಿ. ಕಾರ್ಯಕರ್ತರಿಗೆ ನೇರವಾಗಿ ಕೊಟ್ಟುಬಿಡಿ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಪಾಟೀಲ್‌ರವರೇ, ...

**ಶ್ರೀ ಎಸ್.ಆರ್. ಪಾಟೀಲ್:–** ನಮ್ಮ ಪಕ್ಷದ ಕಾರ್ಯಕರ್ತರು ಅಖಂಡ ಬೆಂಬಲವನ್ನು ಕೊಟ್ಟಿದ್ದಾರೆ. ಬಹಳ ವರ್ಷಗಳಿಂದ ನಮ್ಮ ಪಕ್ಷದಲ್ಲಿದ್ದಾರೆ. ಅವರಿಗೆ ಇಂತಿಷ್ಟು ಅನುದಾನ ಹಣವನ್ನು ಕೊಡುತ್ತೇವೆಂದು ಆಶ್ವಾಸನೆ ಮಾಡಿ, ಅವರ ಮನೆಗೆ ಕಳುಹಿಸಿಕೊಡಿ ಬಿಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆಂದರೆ, ಈ ಹಿಂದೆ ಮಾನ್ಯ ಸಿದ್ದರಾಮಯ್ಯನವರು ಹಾಗೂ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದರು. ಆಗ ನಡೆಯುತ್ತಿತ್ತು. ಆದರೆ ನಾವು ...

**(ಗೊಂದಲ)**

**ಶ್ರೀ ಆರ್.ಧರ್ಮಸೇನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾನಾಯಕರೇ ಈ ರಾಜ್ಯದಲ್ಲಿ ಆ ಪರಿಸ್ಥಿತಿ ಇರಲಿಲ್ಲ.

**(ಗೊಂದಲ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರಿ ಮುಖ್ಯ ಸಚೇತರು):-** ಮಾನ್ಯ ಸಭಾಪತಿಯವರೇ, ಒಂದೇ ನಿಮಿಷ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ ನೋಡಿ, ಪ್ರತಿ ಪಕ್ಷದ ನಾಯಕರು ಮಾತನಾಡುವಾಗ, ತಾವು ಸ್ವಲ್ಪ ಕೇಳಿ. ನನ್ನ ಮಾತನ್ನು ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ತಾವು ಬೇಕಾದಂತೆ ಮಾತನಾಡಿ. ಮಾನ್ಯ ಸಭಾನಾಯಕರು ಇದ್ದಾಗ ಒಂದು ಘಟನೆಯಾಗಿತ್ತು. ನೋಡಿ ನಾನು ತಪ್ಪು ಮಾಡಿದ್ದೇನೆಂದು ತಿಳಿದುಕೊಳ್ಳಿರಿ. I do admit. ನನಗೆ ಗೊತ್ತಿಲ್ಲದೇ ತಪ್ಪಾಗಿದೆ. ತಾವು ಏನೋ ಹೇಳುತ್ತೀರಿ ಆಗ defense ತೆಗೆದುಕೊಳ್ಳುತ್ತೀರಿ. ಆದರೆ ನಿಮ್ಮ ಮೇಲೆ ನನಗೆ ನಂಬಿಕೆಯಿದೆ ಎಂದುಕೊಳ್ಳಿರಿ. ನಾನು ತಪ್ಪು ಮಾಡಿದರೆ, ತಾವು ತಪ್ಪು ಮಾಡುತ್ತೀರಾ. ಹಿಂದಿನ ಸರ್ಕಾರವಿದ್ದಾಗ ಯಾರಿಗೋ ಅದನುದಾನವನ್ನು ಕೊಟ್ಟಿದ್ದರು. ನಾನು ಕೊಡುತ್ತೇನೆ ಎನ್ನುವುದು is it a defense for the government? ನೋಡಿರಿ, ನಾವೇನಾದರೂ ತಪ್ಪು ಮಾಡಿದರೆ, ಆಗ ತಾವು ವಿರೋಧಪಕ್ಷದಲ್ಲಿದ್ದೀರಿ. ಈಗ ಆಡಳಿತ ಪಕ್ಷದಲ್ಲಿದ್ದೀರಿ. ನಾವು ಆ ಆಡಳಿತ ಪಕ್ಷದಿಂದ ವಿರೋಧ ಪಕ್ಷಕ್ಕೆ ಏತಕ್ಕೆ ಬಂದದ್ದೇವೆಂಬುದನ್ನು ಕೇಳಿರಿ ಇಲ್ಲಿ ಸ್ವಾಮಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ತಾವು ಹೇಳಿ. ತಾವು ತಪ್ಪು ಎಂಬ ವ್ಯಾಖ್ಯಾನ ಮಾಡುವಾಗ ಕೆಲವು ಹೆಸರುಗಳನ್ನು ಹೇಳಿದ್ದೀರಿ. ಜಿಲ್ಲಾ ಪಂಚಾಯಿತಿಯ ಸದಸ್ಯರು, ಮಾಜಿ ಶಾಸಕರು ಹಾಲಿ ಶಾಸಕರು ಎಂದು ...

**ಶ್ರೀ ಎಸ್.ಆರ್. ಪಾಟೀಲ್:-** ಮಾಜಿ ಶಾಸಕರು ಹೆಸರನ್ನು ನಾವು ಹೇಳುವುದಕ್ಕೆ ಹೋಗಿಲ್ಲ. ನಮ್ಮ ಬಳಿಯಿರುವ ಪ್ರತಿಯಲ್ಲಿ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ತಾವು ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:-** ಒಂದೇ ನಿಮಿಷ ನನ್ನ ಮಾತನ್ನು ಮುಗಿಸುತ್ತೇನೆ. ಇಲ್ಲಿ ಸ್ವಲ್ಪ ಕೇಳಿ. ಗದಗ ಜಿಲ್ಲೆಯ ಶ್ರೀಮತಿ ವಿಜಯಲಕ್ಷ್ಮಿ ಅಣ್ಣಿಗೇರಿ, ಸದಸ್ಯರು ಕೃಷಿ ಮಾರುಕಟ್ಟೆ, ಜಿಲ್ಲಾ ಪಂಚಾಯಿತಿಯ ಸದಸ್ಯರು. ಇದನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಈ ಪಟ್ಟಿಯಲ್ಲಿ ಐವತ್ತು ಜನಗಳ ಸದಸ್ಯರುಗಳ ಹೆಸರಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಜಿಲ್ಲಾ ಪಂಚಾಯಿತಿಯ ಸದಸ್ಯರಿಗೆ ಕೊಡಿ ಎಂದು ವಿರೋಧ ಪಕ್ಷದ ನಾಯಕರೆ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಯಾರು? ನಾನಾ ಹೇಳಿದ್ದೀನಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಜಿಲ್ಲಾ ಪಂಚಾಯಿತಿಯ ಸದಸ್ಯರು, ಸ್ಥಳೀಯ ಸಂಸ್ಥೆಗಳಿಂದ ಬಂದಿರುವ ಜನ ಪ್ರತಿನಿಧಿಗಳು ಕೇಳಿದ್ದಕ್ಕೆ ಅನುದಾನ ಕೊಡಿ ಎಂದು ಹೇಳಿದವರೇ ತಾವೇ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಅನುದಾನವನ್ನು ಕೊಡುತ್ತೀರಲ್ಲಾ. ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾದಂತಹ ಶಾಸಕರು ನಾವಿದ್ದೇವೆ. ಕೆಲವು ಅನುದಾನ ನಮಗೆ ಬರುವುದೇ ಇಲ್ಲ. ಆದರೆ ನಮ್ಮ ಮುಖಾಂತರ ಕೊಟ್ಟರೆ ತಾನೇ ಒಳ್ಳೆಯದಾಗುವುದು. ನಿಮ್ಮ ಪಕ್ಷದ ಶಾಸಕರುಗಳಿದ್ದಾರೆ. ನಮ್ಮ ಪಕ್ಷದ ಶಾಸಕರುಗಳಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಯ ಸದಸ್ಯರಿಗೆ ನೇರವಾಗಿ ಅನುದಾನವನ್ನು ಕೊಟ್ಟರೆ, ನಾವು ಆ ಕ್ಷೇತ್ರದಿಂದ ಏತಕ್ಕೆ ಆಯ್ಕೆಯಾಗಿ ಬರಬೇಕು? ನಾವು ಕೊಡುವ ಪತ್ರಕ್ಕೆ ಮೂರು ಕಾಸಿನ ಬೆಲೆಯಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಸ್ವಾಯತ್ತತೆಯನ್ನು ಕೊಡಬೇಕೆನ್ನುವುದು ಬಹು ದಿನಗಳ ಹೋರಾಟವನ್ನು ನಾವೆಲ್ಲರೂ ನೋಡುತ್ತಾ ಬಂದಿದ್ದೇವೆ. ನಮ್ಮ ಜೊತೆಗೆ ಮಾನ್ಯ ಸದಸ್ಯರುಗಳಾದ ಶ್ರೀ ಕೊಂಡಯ್ಯ, ಶ್ರೀ ಎಸ್.ಆರ್. ಪಾಟೀಲ್‌ರವರು ಮತ್ತು ಬಿ.ಜೆ.ಪಿ., ಜೆ.ಡಿ.ಎಸ್., ಕಾಂಗ್ರೆಸ್, ಪಕ್ಷದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾಗಿರುವಂತಹ ಪ್ರತಿನಿಧಿಗಳು. ನಾವು ಅನೇಕ ಬಾರಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳಿಗೆ ನೇರವಾಗಿ ಅನುದಾನವನ್ನು ಕೊಡುವುದಿಲ್ಲ ಎನ್ನುವುದರ ಬಗ್ಗೆ ಮತ್ತು ಆ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂತಹ ಪ್ರತಿನಿಧಿಗೆ ಅನುದಾನ ಸಿಗುವುದಿಲ್ಲವೆಂಬುದರ ಬಗ್ಗೆ ಹಲವಾರು ಬಾರಿ ಪಕ್ಷಾತೀತವಾಗಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ, ಅಂತಹವರ ಬಗ್ಗೆ ಯಾರು ನೇರವಾಗಿ ಜನರಿಂದ ಆಯ್ಕೆಯಾಗಿರುವಂತಹ ಪ್ರತಿನಿಧಿಗಳಿಗೆ ಅನುದಾನವನ್ನು ಕೊಟ್ಟು, ಆ ಭಾಗದ ಜನರಿಗೆ  ಮತ್ತು ಜನರ ಅಭಿವೃದ್ಧಿಗಾಗಿ ಅನುದಾನವನ್ನು ಕೊಟ್ಟಿದ್ದಾರೆಯೇ ಹೊರತು ರಾಜಕೀಯವಾಗಿ ಮಾನ್ಯ ಸದಸ್ಯರು ಒಂದೆರಡು ಹೆಸರುಗಳನ್ನು ಹೇಳಿದರು. ಆದರೆ ನನಗೆ ಗೊತ್ತಿಲ್ಲ. **(ಗೊಂದಲ)** ಅದು ಆಗಿರಬಹುದು. ಮಾನ್ಯ ಬೋಸುರಾಜುರವರೇ ತಮಗೆ ಹೇಳಲೇನು. ಅವರ ಪಕ್ಷದ ಸರ್ಕಾರವಿದ್ದಾಗ ಅನುದಾನವನ್ನು ಕೊಟ್ಟಿದ್ದನ್ನು ಕೇಳಿದರೆ, ನಿಮಗೆ ಆಶ್ಚರ್ಯವಾಗುತ್ತದೆ. ಇಂತಹ ಉದಾಹರಣೆಗಳ ಬಗ್ಗೆ ನಿಮಗೆ ಗೊತ್ತಿಲ್ಲ. ...

**ಶ್ರೀ ಎಂ. ನಾರಾಯಣಸ್ವಾಮಿ:–** ನಾವು ಯಾರು ಕಾಂಗ್ರೆಸ್ ಕಾರ್ಯಕರ್ತರಿಗೆ ಅನುದಾನವನ್ನು ಕೊಟ್ಟಿಲ್ಲ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ನಿಜವಾಗಿ ಗುರುತು ಹಿಡಿಯುವಂತಹ ಕೆಲಸವನ್ನು ಮಾಡಿದ್ದೀರಾ?

**(ಗೊಂದಲ)**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಕಾಂಗ್ರೆಸ್ ಪಕ್ಷದವರಿಗೆ ಅನುದಾನವನ್ನು ಕೊಟ್ಟಿಲ್ಲ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ನಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ಕಾರ್ಯಕರ್ತರುಗಳಿಗೆ ಅನುದಾನವನ್ನು ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ಎಂ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಪಾಟೀಲ್‌ರವರೇ ಒಂದು ನಿಮಿಷ. ತಾವು ಮಾತನಾಡುವಾಗ ಹೇಳಿದ್ದೀರಿ. ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಯಾರ‍್ಯಾರು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ...

**ಶ್ರೀ ಗೋವಿಂದ ಎಂ.ಕಾರಜೋಳ (ಉಪ ಮುಖ್ಯ ಮಂತ್ರಿ, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ):–** ಉತ್ತರ ಕೊಡುವಾಗ ಕೊಡಿರಿ ಎಂದು ತಾವು ಹೇಳಿದಿರಿ.

(ಮುಂದು...)

(151) 04.03.2020 4.00 ಟಿಸಿಹೆಚ್–ಎಕೆ
**ಶ್ರೀ ಗೋವಿಂದ ಎಂ.ಕಾರಜೋಳ** (ಮುಂದು)

ಮಾತನಾಡತಕ್ಕಂಥವರಿಗೆ disturb ಮಾಡಬಾರದೆಂದು ಸುಮ್ಮನೆ ಕುಳಿತುಕೊಂಡಿದ್ದೇವೆ. ಪ್ರತಿಯೊಂದು ಶಬ್ದಕ್ಕೂ ಉತ್ತರ ಹೇಳಬೇಕು ಎಂದರೆ ಹೇಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಕೂಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿರತಕ್ಕಂಥವರು. ನಾವೆಲ್ಲರೂ ಕೂಡ ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾಗಿದ್ದೇವೆ. ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಸದಸ್ಯರಿಗೆ ಅನುದಾನ ಕೊಡುತ್ತಿಲ್ಲವೆಂದು ನಾವೆಲ್ಲರೂ ಗಲಾಟೆ ಮಾಡಿದ್ದೇವೆಂದು ಸರ್ಕಾರದ ಮುಖ್ಯ ಸಚೇತಕರು ಮಾತನಾಡುತ್ತಾ ಹೇಳಿದರು. ಇದು ತಮ್ಮ ಗಮನಕ್ಕೆ ಇದೆ. ಒಂದು ಗ್ರಾಮ ಪಂಚಾಯಿತಿಗೆ ಎಷ್ಟು ಹಣ ಬೇಕಾಗುತ್ತದೆ. ಅದು 14ನೇ ಹಣಕಾಸು ಆಯೋಗದಿಂದ ಅಥವಾ ಮತ್ತೊಂದರಿಂದ ಬಂದಿರುವುದು ಇರಬಹುದು ಅದು ಸರ್ಕಾರದಿಂದ ಬಂದಿರತಕ್ಕಂಥದ್ದು. ಅದೇ ರೀತಿಯಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗೆ ಕೂಡ ಅದರದೇ ಆದಂತಹ ಬಜೆಟ್ ಇದೆ. ಅದರಲ್ಲಿ ಅವರು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗೆ ಇಂತಿಷ್ಟು ಅನುದಾನವನ್ನು ಕೊಡುತ್ತಾರೆ. ಆದರೆ ಸರ್ಕಾರದ ವತಿಯಿಂದ, ನಾವು ನೇರವಾಗಿ ಸ್ಥಳೀಯ ಸಂಸ್ಥೆಗಳ ಶಾಸಕರು ಆಗಿದ್ದರೂ ಕೂಡ, ನಮ್ಮ ಮುಖಾಂತರ ಅನುದಾನ ಕೊಡುತ್ತಿಲ್ಲ. ರಾಜ್ಯದ ಬಜೆಟ್‌ನಿಂದ ನೇರವಾಗಿ ಕಳುಹಿಸಲಾಗುತ್ತಿದೆ ಎನ್ನುವುದಾದರೆ, ...

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾವು ಕೂಡ ಹಳ್ಳಿಯಿಂದ ಬಂದಿರತಕ್ಕಂಥ ಜನ. ಪ್ರವಾಹ ಬಂದ ನಂತರ ಹಳ್ಳಿಯಲ್ಲಿರತಕ್ಕಂಥ ರಸ್ತೆಗಳು ಏನಾಗಿವೆಯೆಂದು ನಿಮಗೆ ಗೊತ್ತಿಲ್ಲ. ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಕೂಡ ಹಳ್ಳಿಯಿಂದ ಬಂದಿರತಕ್ಕಂಥ ಜನ. ಅಲ್ಲಿನ ಪರಿಸ್ಥಿತಿ ಏನಿದೆಯೆಂದು ನಮಗೆ ಅರ್ಥವಾಗುತ್ತದೆ. ಸರ್ಕಾರ ರಾಜ್ಯದ ಬಜೆಟ್‌ನಿಂದ ಅವರಿಗೆ ನೇರವಾಗಿ ಅನುದಾನ ಕೊಡುತ್ತದೆ ಎನ್ನುವುದಾದರೆ, ಇದೆಲ್ಲಾ ಚರ್ಚೆ ಏಕೆ ಮಾಡಬೇಕು. ಅನುದಾನವನ್ನೆಲ್ಲಾ ಗ್ರಾಮ ಪಂಚಾಯಿತಿಗೆ ಅಥವಾ ಜಿಲ್ಲಾ ಪಂಚಾಯಿತಿಗೆ ಕೊಟ್ಟುಬಿಡಿ. ನೀವು ಬಿ.ಜೆ.ಪಿ., ಕಾರ್ಯದರ್ಶಿಗೆ ಮತ್ತು ಬಿ.ಜೆ.ಪಿ., ರಾಜ್ಯ ಸದಸ್ಯರಿಗೆ ಹಣ ಬಿಡುಗಡೆ ಮಾಡಿದ್ದೀರಿ.

**ಸಭಾಪತಿಯವರು:–** ಶ್ರೀ ಎನ್.ಎಸ್.ಭೋಸ್‌ರಾಜು ರವರೇ, ತಾವು ಮಾತನಾಡಿದ್ದೀರಾ?

**ಶ್ರೀ ಎನ್.ಎಸ್.ಬೋಸ್‌ರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಪ್ರಾರಂಭ ಮಾಡಿಲ್ಲ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶ್ರೀ ಎನ್.ಎಸ್.ಭೋಸ್‌ರಾಜು ರವರು ನಮ್ಮ ಹೈದರಾಬಾದ್–ಕರ್ನಾಟಕ ಭಾಗದ ಹಿರಿಯ ನಾಯಕರು. ಮಾನ್ಯ ಎಸ್.ಆರ್.ಪಾಟೀಲ್ ರವರು ಕೂಡ ಉತ್ತರ ಕರ್ನಾಟಕ ಭಾಗದ ಹಿರಿಯ ನಾಯಕರು. ಇತ್ತೀಚೆಗೆ ಯಾವ್ಯಾವ ಜಿಲ್ಲೆ ಮತ್ತು ಯಾವ್ಯಾವ ತಾಲ್ಲೂಕಿನಲ್ಲಿ ಅತಿವೃಷ್ಟಿಯಾಗಿದೆಯೆಂದು ಎಲ್ಲರಿಗೂ ಗೊತ್ತಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಮಾನ್ಯ ಕೆ.ಎಸ್.ಈಶ್ವರಪ್ಪನವರು ಸರ್ಕಾರದಿಂದ ಬಂದಂತಹ ಪ್ರಸ್ತಾವಗಳು ಮತ್ತು ಮಾನ್ಯ ಶಾಸಕರುಗಳು, ಮಾಜಿ ಶಾಸಕರುಗಳು, ಸಂಸತ್ ಸದಸ್ಯರುಗಳು, ವಿಧಾನ ಪರಿಷತ್ತಿನ ಸದಸ್ಯರುಗಳು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳು ಅವರವರ ಏರಿಯಾಗಳಲ್ಲಿ ಪ್ರವಾಸ ಮಾಡಿದ ಸಂದರ್ಭದಲ್ಲಿ ಅವರಿಗೆ ಕಂಡಂತಹ ಕಾಮಗಾರಿಗಳು ತುಂಬಾ ಹಾಳಾಗಿವೆ. ದಯವಿಟ್ಟು ಸರ್ಕಾರದಿಂದ ಅನುದಾನ ಕೊಡಬೇಕೆಂದು ಯಾರಾದರು representation ಕೊಟ್ಟಿದ್ದಾರೆ, ಅವರಿಗೆ ಅನುದಾನವನ್ನು ಕೊಡುವಂತಹ ಒಂದು ಪ್ರಾಮಾಣಿಕವಾದಂತಹ ಕೆಲಸ ಮಾಡಿದ್ದಾರೆ. ಆದ್ದರಿಂದ ನಾನು ನಿಮ್ಮೆಲ್ಲಾ ಸದಸ್ಯರಿಗೂ ವಿನಂತಿ ಮಾಡುತ್ತೇನೆ, ನಿಮ್ಮ ನಿಮ್ಮ ಭಾಗದಲ್ಲಿ ಅತಿವೃಷ್ಟಿಯಿಂದ ಏನಾದರು ಹಾನಿಯಾಗಿದ್ದರೆ ಆ ಕಾಮಗಾರಿಯನ್ನು ಕೈಗೊಳ್ಳಲೇಬೇಕಾಗುತ್ತದೆ. ನಿಮ್ಮಲ್ಲೂ ಕೂಡ ಏನಾದರೂ ಪ್ರಸ್ತಾವಗಳು ಇದ್ದರೆ ಅವುಗಳನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಜ್ ಸಚಿವರಿಗೆ ಕೊಟ್ಟರೆ, ಬಜೆಟ್ ಲಭ್ಯತೆಯನ್ನು ತಮ್ಮೂಲಕ ಕೊಡಲಾಗುವುದು. ಆದ್ದರಿಂದ ದಯವಿಟ್ಟು ಅದಕ್ಕೆ ಬೇರೆ ಅಪಾರ್ಥ ಮಾಡುವಂತಹ ಅವಶ್ಯಕತೆ ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಚಾರವೆಂದರೆ, ಶ್ರೀ ಹೆಚ್.ಪಿ.ಕುಮಾರ್, ರಾಜ್ಯಾಧ್ಯಕ್ಷರು, ಛಲವಾದಿ ಮಹಾಸಭಾ ರವರಿಗೆ ಅನುದಾನ ಕೊಟ್ಟಿದ್ದಾರೆ. ಜಿಲ್ಲಾ ಪಂಚಾಯಿತಿ ಸದಸ್ಯರು ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳ ಲಿಸ್ಟ್ ನನ್ನ ಬಳಿ ಇದೆ. ಅದನ್ನು ನಾನು ಸುದೀರ್ಘವಾದಂತಹ ಚರ್ಚೆ ಮಾಡುವುದಿಲ್ಲ. ನಾನು ಕೂಡ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುತ್ತೇನೆ. ಅವರು ಕೂಡ ಜನಪ್ರತಿನಿಧಿಗಳು ಇದ್ದಾರೆ. ಜಿಲ್ಲಾ ಪಂಚಾಯಿತಿಗೆ ಅನುದಾನ ಬಿಡುಗಡೆ ಆಗಿರಬಹುದು, ತಾಲ್ಲೂಕು ಪಂಚಾಯಿತಿಗೆ ಅನುದಾನ ಬಿಡುಗಡೆ ಆಗಿರಬಹುದು. ಅವರು ಕೂಡ ನಮ್ಮ ತರಹ ಜನಪ್ರತಿನಿಧಿಗಳು. ಇವತ್ತು ನಾನು ವಿಧಾನ ಪರಿಷತ್ತಿನ ಸದಸ್ಯನಾಗಿದ್ದೇನೆ. ಮಾನ್ಯ ಶ್ರೀ ಗೋವಿಂದ ಎಂ.ಕಾರಜೋಳರವರು ಅಲ್ಲಿಗೆ ಉಸ್ತುವಾರಿ ಸಚಿವರಾಗಿದ್ದಾರೆ. ನಾನು ಅನುದಾನ ಕೇಳಿದರೆ, ಅವರು ಅನುದಾನ ಕೊಡುವುದು ಬೇರೆ. ನಾನು ಸಚಿವನಾಗಿದ್ದಾಗ ಅವರಿಗೆ ಅನುದಾನ ಕೊಡುವುದು ಬೇರೆ. ಯುವ ಮೋರ್ಚಾದವರಿಗೆ, ಬಿ.ಜೆ.ಪಿ., ಕಾರ್ಯದರ್ಶಿ ಮತ್ತು ಬಿ.ಜೆ.ಪಿ., ಕಾರ್ಯಕರ್ತರಿಗೆ ಅನುದಾನ ಕೊಟ್ಟಿರುವುದರ ಬಗ್ಗೆ ಹೇಳಿ. ಅದಕ್ಕೆ ನಾನು ಹೇಳುವುದೇನೆಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕೂಡ ನಮ್ಮ ಸ್ನೇಹಿತರು. ಅವರಿಗೆ ನಾನು ನೇರವಾಗಿ ಹೇಳಿದ್ದೇನೆ. ಇದನ್ನು ನಾನು ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಎಲ್ಲೆಲ್ಲಿ flood ನಿಂದ affect ಆಗಿದೆ, ಆ ಏರಿಯಾದಲ್ಲಿ ಕೆಲಸ ತೆಗೆದುಕೊಂಡರೆ it's well and good. ಅವರು ಯಾರ‍್ಯಾರ ಹೆಸರು ಹೇಳಿದ್ದಾರಲ್ಲ, flood ನಿಂದ affect ಆಗಿರುವ ಏರಿಯಾ ಬೇರೆ ಇದೆ. ಒಂದಕ್ಕೊಂದು ಯಾವುದೇ ಸಂಬಂಧವಿಲ್ಲ.

ಶ್ರೀ ಗೋವಿಂದ ಕಾರಜೋಳರವರೇ, ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ನೀವು ಜಿಲ್ಲಾ ಪಂಚಾಯಿತಿ ಹಾಗೂ ಸದಸ್ಯರ ಹೆಸರಿನಲ್ಲಿ ಹಣ ಕೊಟ್ಟಿದ್ದೀರಿ. ಆಯಿತು, I welcome it. I don't want to object to it. ನಾವು ಗ್ರಾಮ ಪಂಚಾಯಿತಿ ಸದಸ್ಯರಿಗೆ ಹಣ ಬಿಡುಗಡೆ ಮಾಡಿದ್ದರೂ ಕೂಡ object ಮಾಡುವುದಿಲ್ಲ. ಪ್ರವಾಹ ಬಂದಂತಹ ಏರಿಯಾಗಳಲ್ಲಿ ಅವರು ಕೆಲಸವೇ ಮಾಡಿಲ್ಲ. ಇದು ಏನಾಗುತ್ತದೆಂದರೆ, ಇವತ್ತಿನ ದಿವಸ ಒಂದು ಕೋಟಿ ರೂಪಾಯಿಗಳ ಕೆಲಸ ಕೊಟ್ಟರೆ, ಏನಾಗುತ್ತದೆಂದು ತಮಗೆಲ್ಲರಿಗೂ ಗೊತ್ತಿದೆ. ಅಡ್ವಾನ್ಸ್ ಕೊಟ್ಟು ಕೆಲಸ ಮಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಏಕೆಂದರೆ, ನನ್ನ ಬಾಯಿಯಿಂದ ಅಂತಹ ಶಬ್ದ ಬರುವುದಿಲ್ಲ. ನಾನು ಕೂಡ 45 ವರ್ಷಗಳ ಕಾಲ ಸಾರ್ವಜನಿಕ ಬದುಕಿನಲ್ಲಿ ಇದ್ದಂತಹವನು. ಮೇಲ್ಮನೆ ಸದಸ್ಯನಾಗಿ 22 ವರ್ಷಗಳು ಕಳೆದಿದೆ. ಸರ್ಕಾರದ ಹಣ ಏನಿದೆ, ಇದು ಜನರ ತೆರಿಗೆ ಹಣ. ಸರ್ಕಾರದ ಬೊಕ್ಕಸದಲ್ಲಿರತಕ್ಕಂಥ ಹಣ ನನ್ನ ಹಣವೂ ಅಲ್ಲ, ಅವರ ಹಣವೂ ಅಲ್ಲ ಮತ್ತು ಮಾನ್ಯ ಯಡಿಯೂರಪ್ಪನವರ ಹಣವೂ ಅಲ್ಲ. ಈ ರಾಜ್ಯದ ತೆರಿಗೆದಾರರು ಕೊಟ್ಟಿರತಕ್ಕಂಥ ಹಣ. ಅವರು ತೆರಿಗೆ

ಕಟ್ಟಿರುತ್ತಾರೆ. ಅದು ಸದ್ಪಾತ್ರರಿಗೆ ಸಲ್ಲಲಿ. ಅದು ಸದ್ವಿನಿಯೋಗವಾಗಲಿ. ಅದರಲ್ಲಿ ಭ್ರಷ್ಟಾಚಾರ ನಡೆದಿದೆ. ಎಂದೂ ಕಂಡರಿಯದಂತಹ ಮತ್ತು ಕೇಳರಿಯದಂತಹ ಶತಮಾನದಲ್ಲಿಯೇ ಆಗದೇ ಇರುವಂತಹ ದೊಡ್ಡ ಮಹಾಪೂರಕ್ಕೆ ಸಿಲುಕಿ 12 ಜಿಲ್ಲೆಗಳು, 103 ತಾಲ್ಲೂಕುಗಳು ಹಾನಿಗೊಳಗಾಗಿವೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ದಿನಾಂಕ 08.01.2020ರಲ್ಲಿ ಈ ರಾಜ್ಯದ ಮುಖ್ಯ ಕಾರ್ಯದರ್ಶಿಗಳಾದಂತಹ ಶ್ರೀ ವಿಜಯಭಾಸ್ಕರ್‌ರವರಿಗೆ ಈ ಸಂಬಂಧ ಪಟ್ಟಿ ಲಗತ್ತಿಸಿ ಪತ್ರ ಬರೆದೆನು. ಅವರು 24 ಗಂಟೆಯಲ್ಲೇ ನನಗೆ ಉತ್ತರ ಬರೆದರು. 'ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ, ಶ್ರೀ ಎಲ್.ಕೆ.ಅಥಿಕ್, ಭಾರತೀಯ ಆಡಳಿತ ಸೇವೆ, ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ' ಇವರಿಗೆ ತನಿಖೆ ನಡೆಸಲು ಪತ್ರ ಬರೆದಿದ್ದೇನೆ ಎಂದು ನನಗೆ ಪತ್ರ ಬರೆದರು. ಅದರಲ್ಲಿ 223 ಕೋಟಿ ಹಣ ಬಿಡುಗಡೆಯಾಗಿದೆ. ಅದಕ್ಕೆ ನನ್ನ ಕಳಕಳಿ ಇರುವುದು ಇಷ್ಟೆ, ಅವರು ಜಿಲ್ಲಾ ಪಂಚಾಯಿತಿ ಸದಸ್ಯರು ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರಿಗೆ ಹಣ ಕೊಟ್ಟಿದ್ದಾರೆ. ಕೊಟ್ಟಿರತಕ್ಕಂಥ ಹಣ ಸದ್ವಿನಿಯೋಗ ಆಗಬೇಕಲ್ಲವೇ? ಯಾವ ಭಾಗದಲ್ಲಿ ಪ್ರವಾಹ ಬಂದು ಹಾನಿಯಾಗಿದೆ, ಎಲ್ಲಿ ಪ್ರವಾಹ ಮಹಾಪೂರದಿಂದ ಜನ ನೋವು ಅನುಭವಿಸಿದ್ದಾರೆ. ಸಾವಿರಾರು ಕಟ್ಟಡಗಳು ನೆಲಸಮ ಆಗಿವೆ, ಸಾಕಷ್ಟು ಜನರ ಆಸ್ತಿ-ಪಾಸ್ತಿ ಹಾಳಾಗಿದೆ. ಆ ರೀತಿ ಹಾನಿಗೊಳಗಾದವರಿಗೆ ಹಣ ಸದ್ಬಳಕೆ ಆಗಬೇಕು. ಅದನ್ನು ಬಿಟ್ಟು ನಮ್ಮ ರಾಜ್ಯದಲ್ಲಿ ಬೇಕಾದವರಿಗೆ ಹಣವನ್ನು ಹಂಚಿದ್ದಾರೆ, ಪ್ರವಾಹಕ್ಕೆ ಹಾನಿಯಾಗದಿರುವ ಪ್ರದೇಶಗಳಿಗೆಲ್ಲಾ ಹಣ ಬಿಡುಗಡೆ ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, it's a serious matter. You don't take it lightly. ನಾನು ತಕ್ಷಣವೇ ಈ ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಫಲಾನುಭವಿಗಳು ಅಲ್ಲದೇ ಇರತಕ್ಕಂಥವರಿಗೆ ಹಣ ಬಿಡುಗಡೆ ಮಾಡಿರುವ ಬಗ್ಗೆ ಪಟ್ಟಿ ಲಗತ್ತಿಸಿ ಪತ್ರ ಬರೆದೆನು. ಅವರು 24 ಗಂಟೆಯಲ್ಲೇ ನನಗೆ reply ಕೊಟ್ಟಿದ್ದಾರೆ. ತನಿಖೆ ಮಾಡಲು ಪತ್ರ ಬರೆದಿದ್ದರೂ ತನಿಖಾಧಿಕಾರಿಯವರು ಇನ್ನೂ ಏನೂ ತನಿಖೆ ಕೈಗೊಂಡಿಲ್ಲ. ಒಂದು ರಾಜ್ಯದ ವಿರೋಧ ಪಕ್ಷದ ನಾಯಕನಾಗಿ ನಾನು ಒಂದು ಪತ್ರ ಬರೆದ್ದೇನೆ. ಅದರ ಮೇಲೆ ರಾಜ್ಯದ ಮುಖ್ಯ ಕಾರ್ಯದರ್ಶಿಗಳು, ತನಿಖಾಧಿಕಾರಿಗಳು ತನಿಖೆ ನಡೆಸಿ ವರದಿ ಕೊಡುವಂತೆ ಆದೇಶಿಸಿರುತ್ತಾರೆ. At least he should have minimum courtesy to call me. ಕೊನೆಪಕ್ಷ ಅದನ್ನೂ ಕೂಡ ಮಾಡಿಲ್ಲ. ಆ ತನಿಖೆ ನಡೆಸುವುದು ಏನಾಯಿತು ಎಂದು ಕೂಡ reply ಬಂದಿಲ್ಲ. ಅದು ತನಿಖೆ ನಡೆದು, ಆ ಹಣ ಸದ್ವಿನಿಯೋಗ ಆಗಿದೆಯೆಂದು ಹೇಳತಕ್ಕಂಥ ಸೌಜನ್ಯವೂ ಕೂಡ ಅವರಿಗೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ರಸ್ತೆ ಅಭಿವೃದ್ಧಿ ಎಂದಾಗ ಮಾನ್ಯ ಶಾಸಕರು ಹಾಗೂ ಜನಪ್ರತಿನಿಧಿಗಳು ಪತ್ರ ಕೊಟ್ಟವರಿಗೆ ಕೊಡಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ಈ ಸದನದಲ್ಲಿ ನನಗೆ ಮಾತನಾಡಲು ಹೇಗೆ ಹಕ್ಕಿದೆಯೋ ನಿಮಗೂ ಕೂಡ ಮಾತನಾಡಲು ಹಕ್ಕಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿವಯರೇ, ಒಂದು ನಿಮಿಷ, ...

**ಶ್ರೀ ಎಸ್.ಆರ್.ಪಾಟೀಲ್:–** ಸಭಾನಾಯಕರೇ, ನೀವು ಮಧ್ಯದಲ್ಲಿ interrupt ಮಾಡಬೇಡಿ. ನೀವು Leader of the House. ಅರ್ಧ ಗಂಟೆಗೊಮ್ಮೆ ಎದ್ದು ನಿಲ್ಲಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಸರ್ಕಾರದ ಪರವಾಗಿ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ. ನಾನು ಅದಕ್ಕೋಸ್ಕರವೇ ಎದ್ದು ನಿಂತೆನು. ತಾವು ಏನು ಹೇಳುತ್ತಿದ್ದೀರೆಂದರೆ ತಾವು. . .

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಇದರಲ್ಲಿ ಏಕೆ intervene ಆಗಿದ್ದೇನೆಂದರೆ, ಈ ಪ್ರಕರಣವನ್ನು ನಾನು ಪರಿಶೀಲನೆ ಮಾಡಿದ್ದೇನೆ. ಸ್ವತಃ ನನ್ನ ಬಳಿ ಮಾಹಿತಿ ಇದೆ. ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೂ ಕೂಡ ಈ ಸಂಬಂಧ ಪತ್ರ ಬರೆದಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಒಂದು ನಿಮಿಷ.

**ಶ್ರೀ ಎಸ್.ಆರ್.ಪಾಟೀಲ್:–** ಅದರ ಮೇಲೆ ತನಿಖೆ ನಡೆಸಬೇಕಿದೆ. ಆ ತನಿಖಾಧಿಕಾರಿ ಇನ್ನೂ ತನಿಖೆ ನಡೆಸಿ ವರದಿ ನೀಡಬೇಕಿದೆ. ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್ ಭೋಜೇಗೌಡರಿಗೆ ನಾನು ಮಾತನಾಡಿದ ನಂತರ ಮಾತನಾಡಲು ಹೇಳಿ.

**ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಭಾನಾಯಕರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಇವರಿಬ್ಬರೇ ಮಾತನಾಡಿದರೆ ಹೇಗೆ?

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ತಮ್ಮ ಮಾತನ್ನು ಮುಗಿಸುವುದೇ ಇಲ್ಲ; back to square one ಅಷ್ಟೆ ಮತ್ತೆ ಮೊದಲನೆಯ ಪಾಯಿಂಟ್‌ಗೆ ಬಂದುಬಿಡುತ್ತಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಈ ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದೇನೆ. ಅವರು ತನಿಖೆ ನಡೆಸಲು ಆದೇಶಿಸಿದ್ದಾರೆ. ಆ ತನಿಖಾಧಿಕಾರಿಯವರಿಗೆ ತನಿಖೆ ನಡೆಸಿ ವರದಿ ನೀಡಲು ಸರ್ಕಾರ ಅವರಿಗೆ instruction ಕೊಡಬೇಕು. ಈ ಸದನದಿಂದ ಅವರಿಗೆ ಒಂದು ಸಂದೇಶ ಹೋಗಬೇಕು. ಒಬ್ಬರು ಪ್ರತಿಪಕ್ಷದ ನಾಯಕರು ತನಿಖೆ ನಡೆಸಲು ಪತ್ರ ಬರೆದರೆ, the Enquiry Officer should have minimum courtesy at least to call me. ಕೊನೆಪಕ್ಷ ಅದರ ಹಣೆ ಬರಹ ಏನಾಯಿತು ಎಂದು ಹೇಳಬೇಕಲ್ಲವೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(ಮುಂದು...)

**(152)4.3.2020/4.10/ಎಂ.ಎಂ–ಆರ್.ಎನ್**
**ಶ್ರೀ ಎಸ್.ಆರ್. ಪಾಟೀಲ್(ಮುಂದು):**

ಅಷ್ಟು ಬೇಜವಾಬ್ದಾರಿಯನ್ನು ವಿರೋಧ ಪಕ್ಷದ ನಾಯಕನಾಗಿ I will never tolerate. ಈ ಪವಿತ್ರವಾದ ಸದನದಿಂದ ಪ್ರತಿಪಕ್ಷದ ನಾಯಕನ ಸ್ಥಾನದಿಂದ ನಾನು ಹೇಳುತ್ತೇನೆ ಇದು ಉದ್ಧಟತನದ ವರ್ತನೆ ಎಂದು ಹೇಳಬೇಕಾಗುತ್ತದೆ. ಇವರು ಮಾಡಿದ್ದಾರೆ ಆ ಮಾತು ಬೇರೆ. ಆಮೇಲೆ ಅದೇನಾಯಿತು ಎಂಬ ಬಗ್ಗೆ ನನಗೆ ಇವತ್ತಿನವರೆಗೂ ಮಾಹಿತಿ ಇಲ್ಲ. ಹಣ ಅವರಿಗೆ ಹೋಯಿತೇ, ಬಟವಾಡೆಯಾಯಿತೇ ಎಂಬುದನ್ನು ಹೇಳಬೇಕಲ್ಲವೇ? He should have minimum common sense and he should have minimum courtesy. ಏನೂ ಇಲ್ಲವೆಂದರೆ, has he taken me so lightly?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ನಾನು ಹೇಳುತ್ತೇನೆ, ಒಂದು ನಿಮಿಷ ಕೇಳಿ. ಹಣವನ್ನು ಮುಖ್ಯಮಂತ್ರಿಗಳು ಜನಪ್ರತಿನಿಧಿಗಳಿಗೆ ಸಾರ್ವಜನಿಕರಿಗೆ; ವಿರೋಧಪಕ್ಷದವರು ಪ್ರಾಮಾಣಿಕವಾಗಿ ಯೋಚನೆ ಮಾಡಲಿ. ಅವರ ಸರ್ಕಾರ ಅಧಿಕಾರದಲ್ಲಿದ್ದಾಗ ಎಷ್ಟೆಷ್ಟು ಜನರಿಗೆ ಯಾರ್‍ಯಾರಿಗೆ ....

**ಶ್ರೀ ಎಸ್.ಆರ್. ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿಮ್ಮ ಸರ್ಕಾರ ಇದ್ದಾಗ ಮಾಡಿದ್ದನ್ನು ನಾವು ಮಾಡಿದ್ದು ಎಂದು ಹೇಳುತ್ತೀರಾ? This is not the way of defending.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ನೀವು ಹೇಳಿದ್ದನ್ನೆಲ್ಲಾ ಕೇಳುವುದಕ್ಕೆ ಆಗುವುದಿಲ್ಲ. ಯಾರಿಗೆ ಹಣ ಕೊಟ್ಟಿದ್ದೇವೆ ಎನ್ನುವುದು ಮುಖ್ಯವಲ್ಲ, ಹಣ ಜನರಿಗೆ ತಲುಪಿದೆಯೇ, ರಸ್ತೆ ಆಗಿದೆಯೇ ಎಂಬ ಬಗ್ಗೆ ಮಾತನಾಡಿ. ನೂರಾರು ಕೋಟಿ ರೂಪಾಯಿ;

**ಶ್ರೀ ಎಸ್.ಆರ್. ಪಾಟೀಲ್:–** ಜನಪ್ರತಿನಿಧಿಗಳಿಗೆ ಕೊಟ್ಟಂತಹ ಹಣದ ಬಗ್ಗೆ ನನಗೆ ಚಿಂತನೆ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಯಾರಿಗೆ ಕೊಟ್ಟರೂ ಕೂಡ ಸರ್ಕಾರದ ಇಲಾಖೆಯ ಮುಖ್ಯಸ್ಥರಿಗೆ...

**ಶ್ರೀ ಎಸ್.ಆರ್. ಪಾಟೀಲ್:–** ಹಣ ಸದ್ವಿನಿಯೋಗವಾಗಿಲ್ಲ, ...

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸದ್ವಿನಿಯೋಗ ಏಕೆ ಆಗಿಲ್ಲ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ಹಣ ಅನವಶ್ಯಕವಾಗಿ ಬೇರೆ ಬೇರೆ ಜಾಗಗಳಿಗೆ ಹೋಗಿದೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾತಿನ ಸ್ವೇಚ್ಛಾಚಾರ ... ಮಾತನಾಡುವ ಅಧಿಕಾರ ನಿಮಗಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ರಾಜ್ಯದ ಬೊಕ್ಕಸದ ಹಣ ದುರುಪಯೋಗವಾಗಿದೆ ಎಂದು ನಾನು ಗಹನವಾದಂತಹ ಮತ್ತು ನೇರವಾದಂತಹ ಆಪಾದನೆ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರ ಏನು ಹಣ ಕೊಟ್ಟಿದೆ ಅದರ plan and estimate ಸಂಬಂಧಪಟ್ಟ ಇಲಾಖೆಯವರು ಮಾಡುತ್ತಾರೆ. ಅನುಷ್ಠಾನವಾದ ನಂತರ ಹಣ ಬಿಡುಗಡೆಯಾಗುತ್ತದೆ. ಇಲ್ಲಿ ಇವರ ಆಕ್ಷೇಪಣೆ ಇರುವುದೇನೆಂದರೆ, ಶಾಸಕರು, ಮಾಜಿ ಶಾಸಕರು, ಯಾವುದೋ ರಾಜಕೀಯ ಪಕ್ಷದ ಪ್ರತಿನಿಧಿಗಳು ಸಾಮಾನ್ಯವಾಗಿ ಪೌರರೊಬ್ಬರು ತಮ್ಮ ಮನೆಯ ರಸ್ತೆ ಹಾಳಾಗಿದೆ ಎಂದು ಹೇಳಲು ಬಂದಿರುತ್ತಾರೆ. ಆಗ ಸರ್ಕಾರ ಅವರಿಗೆ ಹಣ ಬಿಡುಗಡೆ ಮಾಡಬೇಕಲ್ಲವೇ? ಈ ಕ್ರಮ ಇದೆ. ಹಣ ದುರುಪಯೋಗವಾಗಿದೆ ಎಂದು ಹೇಳುತ್ತೀರಿ. ನಿರ್ದಿಷ್ಟ ವಿಚಾರಗಳಲ್ಲಿ ಸುಮಾರು 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಇದು ದುರುಪಯೋಗವಾಗಿದ್ದರೆ ತನಿಖೆ ಮಾಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಇವರೆಲ್ಲಾ ಬಿ.ಜೆ.ಪಿ ಕಾರ್ಯಕರ್ತರಿಗೆ ಹಣವನ್ನು ಹಂಚಿದ್ದಾರೆ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಕಾರ್ಯಕರ್ತರ ಹೆಸರಿನಲ್ಲಿ ಕೊಡುವುದಕ್ಕೆ ಇದು ಸ್ವಂತ ಹಣವಲ್ಲ, ಇದು ಸಾರ್ವಜನಿಕರ ಹಣ.

**ಡಾ: ತೇಜಸ್ವಿನಿ ಗೌಡ:–** ನೀವು ಒಂದು ರಾಜಕೀಯ ಪಕ್ಷದವರು, . . . .

**ಶ್ರೀ ಎಸ್.ಎಲ್. ಭೋಜೇಗೌಡ:–** ಅದನ್ನು ಪ್ರಶ್ನೆ ಮಾಡುವುದು ತಪ್ಪಾ?

(ಗೊಂದಲ)

**ಡಾ: ತೇಜಸ್ವಿನಿ ಗೌಡ:–** ಕಾರ್ಯಕರ್ತರಿಂದಲೇ ಇವೆಲ್ಲಾ ನಡೆಯುವಂತಹದ್ದು ಆಗಿದೆ. ನಾವೆಲ್ಲರೂ ರಾಜಕೀಯ ಪಕ್ಷ . . . .

**ಶ್ರೀ ಆರ್. ಧರ್ಮಸೇನ:–** ಈ ರಾಜ್ಯದಲ್ಲಿ ಎಷ್ಟು ರಾಜಕೀಯ ಪಕ್ಷಗಳಿವೆ, ಆ ಎಲ್ಲಾ ರಾಜಕೀಯ ಪಕ್ಷಗಳಿಗೂ ಮಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಇದು ಸರಿಯೇ?

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ...

(ಗೊಂದಲ)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನೀವು ನನ್ನನ್ನು ಮಾತನಾಡಲು ಕರೆದಂತಹ ಸಂದರ್ಭದಲ್ಲಿ ಇವರೆಲ್ಲಾ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಇಷ್ಟು ತಪ್ಪು ಮಾಡಿದರೂ ಅದನ್ನು ಡಿಫೆಂಡ್ ಮಾಡಿಕೊಳ್ಳುವುದಾದರೆ ಅದು ಯಾವ ರೀತಿ ಸರಿ? ಇದು ಸಾರ್ವಜನಿಕರ ತೆರಿಗೆ ಹಣವಲ್ಲವೇ? ಅಲ್ಲಿ ಜಿಲ್ಲಾಧಿಕಾರಿಗಳಿಲ್ಲವೇ? ತಾಲ್ಲೂಕು ಕಛೇರಿ ಇಲ್ಲವೇ?

**ಸಭಾಪತಿಯವರು:–** ಏನಾದರೂ unparliamentary ಇದ್ದರೆ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ರೀತಿ;

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬೋಸರಾಜುರವರು ಹೈದರಾಬಾದ್–ಕರ್ನಾಟಕ ಭಾಗದ ನಾಯಕರು. ಅಲ್ಲಿನ ಸಮಸ್ಯೆಗಳ ಬಗ್ಗೆ ಅವರು ಮಾತನಾಡಬೇಕು. ದಯವಿಟ್ಟು ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಅದನ್ನು ಅವರು ನೋಡಿಕೊಳ್ಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್:–** 38,000 ಕೋಟಿಯಷ್ಟು ಹಾನಿಯಾಗಿತ್ತು. ಕೇಂದ್ರ ಸರ್ಕಾರಕ್ಕೆ ಬರೆದರೆ ಅಂದಾಜು 1700 ಕೋಟಿಯಷ್ಟು ಹಣ ಬಂದಿದೆ, ರಾಜ್ಯದ ಬೊಕ್ಕಸದಿಂದ ಹಣ ಹೋಗಿದೆ. ನಾನು ಎಲ್ಲಿ ಹಾನಿಯಾಗಿದೆ, ಎಲ್ಲಿ ಜನರು ದುಃಖಕ್ಕೆ ಭಾಜನರಾಗಿದ್ದಾರೆ, ಎಲ್ಲೆಲ್ಲಿ ಆಸ್ತಿ ಪಾಸ್ತಿಗಳು ಹೋಗಿವೆ;

**ಸಭಾಪತಿಯವರು:–** ಒಂದು ಸ್ಪಷ್ಟೀಕರಣ ಬೇಕಾಗಿದೆ. ಮಾನ್ಯ ಬೋಸರಾಜುರವರ ಬದಲಿಗೆ ನೀವು ಮಾತನಾಡುತ್ತಿದ್ದೀರಾ ಅಥವಾ ನೀವು;

**ಶ್ರೀ ಎಸ್.ಆರ್. ಪಾಟೀಲ್:–** ಇಲ್ಲ, ನಾನು ನನ್ನ ಪತ್ರದ ಬಗ್ಗೆ ಮಾತನಾಡುತ್ತಿದ್ದೇನೆ. ಇದು ಅದಕ್ಕೆ ಸಂಬಂಧಿಸಿದ್ದೇ ಆಗಿದೆ.

**ಸಭಾಪತಿಯವರು:–** ಹಾಗಲ್ಲ. ನಾನು ಬೋಸರಾಜುರವರನ್ನು ಕರೆದಿದ್ದೆ. ಈಗ ತಾವು ಭಾಷಣವನ್ನು ಪ್ರಾರಂಭ ಮಾಡಿದ್ದೀರಿ. ಪರವಾಗಿಲ್ಲ, ತಾವು ಮಾತನಾಡುವ ಹಕ್ಕು ಇದೆ, ತಾವು ಎಷ್ಟು ಬೇಕಾದರೂ ಮಾತನಾಡಬಹುದು. ಆದರೆ ಶ್ರೀ ಬೋಸರಾಜುರವರು ಅವರ ಮಾತನ್ನು ಮುಗಿಸಿದ್ದಾರೆಯೇ?

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಬೋಸರಾಜುರವರು ಮಾತನ್ನು ಮುಗಿಸಿಲ್ಲ. Just he has begun to speech.

**ಸಭಾಪತಿಯವರು:–** ನಿಮಗೆ ಮಾತನಾಡುವ ಹಕ್ಕಿದೆ. ಅವರು ಮಾತನಾಡುತ್ತಿದ್ದಾರೋ ಅಥವಾ ನೀವು ಮಾತನಾಡುತ್ತಿದ್ದೀರೋ ಎಂದು ನನಗೆ ಗೊಂದಲವಾಗುತ್ತಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರಿಗೇ ಗೊಂದಲವಾದರೆ ನಾನೇನು ಮಾಡಲಿ? ಪೀಠಾಧಿಪತಿಗಳು ತಾವು.

**ಸಭಾಪತಿಯವರು:–** ಹೌದು, ನಾನು ಅವರನ್ನು ಕರೆಯುತ್ತೇನೆ; ನೀವು ಮಾತನಾಡುತ್ತೀರಿ!

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಪೀಠಾಧಿಪತಿಗಳು ತಾವು.

(ಗೊಂದಲ)

ಅವರೇ ಮಾತನಾಡಲಿ ನಾನು ಕೇಳುತ್ತೇನೆ. ಆದರೆ ನನ್ನದೊಂದೇ ಆತಂಕವೆಂದರೆ ಹಣ ದುರ್ಬಳಕೆಯಾಗಬಾರದು. ಎಲ್ಲಿ ಹಾನಿಯಾಗಿದೆ ಅಲ್ಲಿಗೆ ಬಳಕೆಯಾಗಬೇಕು.

**ಸಭಾಪತಿಯವರು:–** ನಿಮಗೆ ಮಾತನಾಡಲು ಅವಕಾಶವಿದೆ, ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ಜಿಲ್ಲಾ ಪಂಚಾಯತ್ ಸದಸ್ಯರು, ತಾಲ್ಲೂಕು ಪಂಚಾಯತ್ ಸದಸ್ಯರಲ್ಲ, ಪಂಚಾಯಿತಿ ಸದಸ್ಯರಿಗೆ ಕೊಟ್ಟರೂ I have no objection. But money should be utilized properly. ಬೊಕ್ಕಸದಲ್ಲಿರುವ ಹಣ ರಾಜ್ಯದ ತೆರಿಗೆ ಹಣವಾಗಿದೆ. ಆ ಹಣ ದುರ್ಬಳಕೆಯಾಗಬಾರದು, ಭ್ರಷ್ಟಾಚಾರಕ್ಕೆ ಎಡೆಯಾಗಬಾರದು. ಆ ಹಣದ ಪ್ರತಿ ಪೈಸೆ ಕೂಡ ಆ ಕಾಮಗಾರಿಗೆ ವಿನಿಯೋಗವಾಗಬೇಕು, ಆದರೆ ಇದು ಆ ರೀತಿ ಆಗಿಲ್ಲ ಎನ್ನುವಂತಹ ಗುರುತರವಾದ ಆಪಾದನೆಯನ್ನು ನಾನು ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ಪೈಸೆ ಕೂಡ ದುರ್ಬಳಕೆಯಾಗಿಲ್ಲ, ಒಂದೊಂದು ಪೈಸೆಯೂ ಸದ್ವಿನಿಯೋಗವಾಗಿದೆ.

**ಸಭಾಪತಿಯವರು:–** ಮಾನ್ಯ ಬೋಸರಾಜುರವರೇ, ನೀವು yield ಆಗಬೇಡಿ, yield ಆದರೆ ಆಗುವುದಿಲ್ಲ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಇವತ್ತು ಕಲ್ಯಾಣ ಕರ್ನಾಟಕದ ಬಗ್ಗೆ ಹಿರಿಯ ಉಪ ಮುಖ್ಯಮಂತ್ರಿಯವರು ಇಲ್ಲಿದ್ದಾರೆ. ಆ ಭಾಗಕ್ಕೆ ಅವರು ಬಹಳ ಹಿರಿಯರಾಗಿದ್ದಾರೆ, ಅವರಿಗೆ ಆ ಭಾಗದ ಪರಿಸ್ಥಿತಿ ಎಲ್ಲಾ ಗೊತ್ತಿದೆ. ಸಂವಿಧಾನದ ಅನುಚ್ಛೇದ 371ರಲ್ಲಿ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳೂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸೇರಬೇಕೆಂದು ಮೊದಲು ಒತ್ತಾಯವಿತ್ತು. ಈ ಸರ್ಕಾರ ಆ ಭಾಗಕ್ಕೆ 'ಕಲ್ಯಾಣ ಕರ್ನಾಟಕ' ಎಂದು ಹೆಸರು ನೀಡಿದ ನಂತರ ಕಲ್ಯಾಣ ಕರ್ನಾಟಕಕ್ಕೆ ಒಳ್ಳೆಯದಾಗುವುದಕ್ಕೆ ಏನು ಮಾಡಿದಿರಿ ಎಂಬುದನ್ನು ಹೇಳಬೇಕು. ವೇತನ ಬರುತ್ತಿಲ್ಲವೆಂದು ಈಗಾಗಲೇ ಮಾನ್ಯ ಸದಸ್ಯರು ಹೇಳಿದರು. ಕಳೆದ ವಾರ ಮಾತನಾಡುವಂತಹ ಸಂದರ್ಭದಲ್ಲಿ ಸಚಿವರು ಆಶ್ವಾಸನೆ ನೀಡಿದರು. ತಕ್ಷಣವೇ 15 ದಿವಸಗಳಲ್ಲಿ ಅವರಿಗೆ ವೇತನ ಕೊಡುತ್ತೇವೆ ಎಂದು ಕಂದಾಯ ಇಲಾಖೆಗೆ ಹೇಳಿದರು. ಆದರೆ ಇಲ್ಲಿಯವರೆಗೂ ಏನೂ ಆಗಿಲ್ಲ. ಆ ಭಾಗದಲ್ಲಿ ಶಿಕ್ಷಣದ ಪರಿಸ್ಥಿತಿ ಹೇಗಿದೆ? ಇಡೀ 31 ಜಿಲ್ಲೆಗಳಲ್ಲಿ ಕೊನೆಯ ಭಾಗದಲ್ಲಿ ರಾಯಚೂರು, ಬೀದರ್, ಗುಲ್ಬರ್ಗಾ, ಯಾದಗಿರಿ ಈ ರೀತಿ ಇದೆ. ಕೇಂದ್ರ ಸರ್ಕಾರವು ಕೊನೆಯ ಭಾಗದಲ್ಲಿ ರಾಯಚೂರು ಮತ್ತು ಯಾದಗಿರಿಯನ್ನು ಒಂದೊಂದಾಗಿ ತೆಗೆದುಕೊಂಡರು. ಶಿಕ್ಷಣದಲ್ಲಿ ಆರೋಗ್ಯದಲ್ಲಿ ಅಭಿವೃದ್ಧಿ ಮಾಡುವುದಕ್ಕೆ 'ಕಲ್ಯಾಣ ಕರ್ನಾಟಕ' ಎಂದು ಹೆಸರಿಟ್ಟು ಎಲ್ಲವನ್ನೂ ಕಲ್ಯಾಣ ಮಾಡಿದೆ ಎಂದು ಅದರ ಬಗ್ಗೆ ಮಂತ್ರಿಗಳ ಮೇಲೆ ಮಂತ್ರಿಗಳು ಮಾತನಾಡಿದರು. ಆದರೆ ಅದರ ಬಗ್ಗೆ ತೆಗೆದುಕೊಂಡಿರುವಂತಹ ಕ್ರಮಗಳೇನು? ಶಿಕ್ಷಣ ಇಲಾಖೆಯಲ್ಲಿ ಏನು ಕ್ರಮ ತೆಗೆದುಕೊಂಡರು? ಇವತ್ತು ಅಲ್ಲಿನ ಪರಿಸ್ಥಿತಿ ಏನಾಗಿದೆ? ನನ್ನ ಬಳಿ ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂತೆ ಹಾಸ್ಟೆಲ್‌ಗಳ ಬಗ್ಗೆ ಮಾಹಿತಿ ಇದೆ. ರಾಯಚೂರು ಜಿಲ್ಲೆಯಲ್ಲಿ ಸುಮಾರು 80 ಹಾಸ್ಟೆಲ್‌ಗಳಿವೆ. ಅದರಲ್ಲಿ 47 ಹಾಸ್ಟೆಲ್‌ಗಳಿಗೆ ಮಾತ್ರ ಸ್ವಂತ ಕಟ್ಟಡವಿದೆ. 33 ಹಾಸ್ಟೆಲ್‌ಗಳು ಬಾಡಿಗೆ ಕಟ್ಟಡದಲ್ಲಿವೆ, ಭೂಮಿಯ ಲಭ್ಯತೆ ಇದೆ. ಹಿಂದಿನ ಜಿಲ್ಲಾಧಿಕಾರಿಯವರಿದ್ದ ಸಂದರ್ಭದಲ್ಲಿ ಎಲ್ಲಾ ಜನಪ್ರತಿನಿಧಿಗಳನ್ನು ಸೇರಿಕೊಂಡು 33 ಕಟ್ಟಡಗಳು ಬಾಡಿಗೆಯಲ್ಲಿದ್ದರೆ, ಭೂಮಿಯ ಲಭ್ಯತೆ 37 ಹಾಸ್ಟೆಲ್‌ಗಳಿಗಿದೆ. ಸಮಾಜಕಲ್ಯಾಣ ಇಲಾಖೆಯಲ್ಲಿ ಬೇಕಾದಷ್ಟು ಎಸ್.ಸಿ & ಎಸ್.ಟಿ ಗೆ ಸಂಬಂಧಪಟ್ಟಂತೆ ಸುಮಾರು 30,000 ಕೋಟಿ ರೂಪಾಯಿ ಅನುದಾನ ಇದೆ. ತಕ್ಷಣವೇ ಅಲ್ಲಿ ಮಾಡಬಹುದಾಗಿತ್ತು. ಇಲ್ಲಿಯವರೆಗೂ ಯಾವುದೂ ಮಂಜೂರಾತಿಯಾಗಿಲ್ಲ. ಮೊರಾರ್ಜಿ ದೇಸಾಯಿ ಇರಬಹುದು, ಇಂದಿರಾ ವಸತಿ ಶಾಲೆಗಳಿರಬಹುದು, ನೂತನವಾಗಿ ತಾವು ಬಂದ ನಂತರ ಕಲ್ಯಾಣ ಕರ್ನಾಟಕಕ್ಕೆ ಯಾವ ರೀತಿಯಾಗಿ ಅನುಕೂಲಕರವಾದ ವಾತಾವರಣ ನಿರ್ಮಾಣ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಶಿಕ್ಷಣದಲ್ಲಿ ರಾಯಚೂರು ಜಿಲ್ಲೆಯಲ್ಲಿಯೇ ಸುಮಾರು 2,801 ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅಲ್ಲಿರುವ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಸುಮಾರು 3 ಲಕ್ಷದ 75 ಸಾವಿರ ಮಕ್ಕಳಿದ್ದಾರೆ. ಅದರ ಉಸ್ತುವಾರಿ ಕಾರ್ಯದರ್ಶಿಯವರು ಕೂಡ ಇಲ್ಲಿಯೇ ಇದ್ದಾರೆ. ತಮ್ಮ ಇಲಾಖೆಯ ಶ್ರೀ ಕುಮಾರ ನಾಯಕ್‌ರವರು ಪ್ರತಿ ತಿಂಗಳೂ ಎರಡು ಬಾರಿ ಬರುತ್ತಿದ್ದು, ಪ್ರತಿ ಸಲವೂ ಒಂದೊಂದು ತಾಲ್ಲೂಕನ್ನು ಭೇಟಿ ಮಾಡುತ್ತಾರೆ. ಅವರು ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಿರುವುದರಿಂದ ಅವರಿಗೂ ಗೊತ್ತಿದೆ ಹಾಗೂ ಅವರು ಕೆ.ಪಿ.ಟಿ.ಸಿ.ಎಲ್. ನಲ್ಲಿ Managing Director ಆಗಿ ಆ ಭಾಗದಲ್ಲಿ ಕೆಲಸ ಮಾಡಿದ್ದಾರೆ. ಹಾಗಾಗಿ ಅಲ್ಲಿನ ಪರಿಸ್ಥಿತಿಯನ್ನು ಸುಧಾರಿಸುವ ಕೆಲಸವನ್ನು ಮಾಡಿಲ್ಲ. ಹೆಸರಿಗೆ ಮಾತ್ರ ಹೈದರಾಬಾದ್ ಕರ್ನಾಟಕ ಪ್ರದೇಶವೆಂದು ಹೇಳಿ ಅದನ್ನು 'ಕಲ್ಯಾಣ ಕರ್ನಾಟಕ' ಎಂದು ಮಾಡಿದರು. ಅದರಿಂದಲೇ ಈ ಸರ್ಕಾರ ಆ ಭಾಗಕ್ಕೆ ಎಲ್ಲವನ್ನೂ ಕೊಟ್ಟಿದ್ದೇವೆ ಎಂದು ಹೇಳುತ್ತದೆ. ಆ ಭಾಗಕ್ಕೆ ಏನಾದರೂ ನೀಡಿದ್ದರೆ, ಆ ಭಾಗದ ಆ ಜನರ ಆಶೋತ್ತರಗಳನ್ನು ಈಡೇರಿಸುವ ಪ್ರಯತ್ನ ಮಾಡಿದ್ದರೆ ಅದು ಯು.ಪಿ.ಎ. ಸರ್ಕಾರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಾಂಗ್ರೆಸ್ ಸರ್ಕಾರ. ಇದೇ ಬಿ.ಜೆ.ಪಿ. ಕೇಂದ್ರ ಸರ್ಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ನಾನು ಹೆಚ್.ಕೆ.ಡಿ.ಬಿ. ಛೇರ್ಮನ್ ಆಗಿದ್ದೆ. ನಮ್ಮ ನಾಯಕರುಗಳಾಗಿದ್ದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಧರ್ಮಸಿಂಗ್‌ರವರು ಆ ಭಾಗದ ಜನ ಪ್ರತಿನಿಧಿಗಳಾಗಿದ್ದರು. ಮೊನ್ನೆ ಅವರು ಗುಲ್ಬರ್ಗಾದಲ್ಲಿ ತೀರಿಕೊಂಡರು. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಶ್ರೀಮಾನ್ ಅಡ್ವಾಣಿಜೀ ರವರು ಆಕಾಶವಾಣಿ ಸ್ಟೇಷನ್‌ನ್ನು inaugurate ಮಾಡುವುದಕ್ಕೆ ಗುಲ್ಬರ್ಗಾಕ್ಕೆ ಬಂದಿದ್ದರು. ಕೇವಲ ಒಂದು ವರ್ಷದಲ್ಲಿ ಆ ಕಟ್ಟಡವನ್ನು ನಾನೇ ಕಟ್ಟಿಸಿದ್ದೆ. ಆ ಸಂದರ್ಭದಲ್ಲಿ ಬಂದಂತಹ ಅತಿಥಿಗಳಿಗೆ ಕೇವಲ ಎಳನೀರು ನೀಡಲಾಗಿತ್ತು. ಶ್ರೀ ಎಸ್.ಎಂ. ಕೃಷ್ಣರವರು ಮತ್ತು ಆ ಸಂದರ್ಭದಲ್ಲಿ ಇದ್ದ ಸಚಿವರು ಸಹ ಗುಲ್ಬರ್ಗಾದಲ್ಲಿದ್ದರು. ಒಂದು ವರ್ಷದಲ್ಲಿ inauguration ಮಾಡಿದ ಸಂದರ್ಭದಲ್ಲಿ ಬಿಸ್ಕೆಟ್ ಮತ್ತು ಟೀ ಕೊಡಿಸಿದ್ದೆ. ಅವತ್ತು ನಾವೆಲ್ಲರೂ ಹೆಚ್.ಕೆ.ಡಿ.ಬಿ ಕಛೇರಿಯಲ್ಲಿ ಕುಳಿತು ದಿವಂಗತ ಅನಂತಕುಮಾರ್‌ರವರು ಮತ್ತು ಶ್ರೀಮಾನ್ ಯಡಿಯೂರಪ್ಪನವರು ಮಧ್ಯಾಹ್ನ ಜೊತೆಯಲ್ಲಿ ಊಟ ಮಾಡಿದೆವು.

(ಮುಂದು)

(153) 04-03-2020/ 04-20/ ಕೆಹೆಚ್-ಆರ್‌ಎನ್

**ಶ್ರೀ ಎಸ್.ಎಸ್.ಭೋಸ್‌ರಾಜು (ಮುಂದು):**

ರೂಮ್ ನಂ.2 ನಲ್ಲಿ ಇದ್ದಾಗ ಹೋಗಿ ಕೇಳಿದ್ದೇವೆ. ತಾವು ಗೃಹ ಮಂತ್ರಿಗಳಾಗಿರುವುದರಿಂದ 371(ಜೆ) ಗೆ ಅನುಮೋದನೆ ಮಾಡಿಸಿಕೊಡಬೇಕೆಂದು ಕೇಳಿದಾಗ ಕ್ಯಾ ಜೀ ಧರ್ಮಸಿಂಗ್, ಕ್ಯಾ ಮಲ್ಲಿಕಾರ್ಜುನ್ ಖರ್ಗೆ ಕೈಸಾ ಕರ್‌ನೇ ಕೋ ಆತಾ ಎಂದು ಉತ್ತರವನ್ನು ಕೊಟ್ಟು ಸಮಾಧಾನ ಮಾಡಿ ವಾಪಸ್ಸು ಕಳುಹಿಸಿದರು. ಇದನ್ನು ಕಡೆಗೆ ಅನುಮೋದನೆ ಮಾಡುವುದಕ್ಕೆ ಆಗುವುದಿಲ್ಲವೆಂಬ ಬಗ್ಗೆ ಕೇಂದ್ರ ಸರ್ಕಾರದಿಂದ ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರಕ್ಕೆ ಪತ್ರ ಕೂಡ ಬಂದಿತು. ಆ ಭಾಗದಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶವನ್ನು ಕಲ್ಯಾಣ ಕರ್ನಾಟಕ ಪ್ರದೇಶ ಎಂದು ಮಾಡಿದ್ದೀರಿ. ಅದಕ್ಕೆ 371(ಜೆ) ಎಂದು ಕೊಡುವುದರ ಮುಖಾಂತರ ಶಿಕ್ಷಣ, ಆರೋಗ್ಯ ಮತ್ತು developmentಗೆ ಅವಕಾಶವನ್ನು ಕೊಟ್ಟು, 2013-14ನೇ ಸಾಲಿನ ಮಾನ್ಯ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಇದಕ್ಕೆ rules and regulations ಅನ್ನು ಫ್ರೇಮ್ ಮಾಡಿ ಒಂದೂವರೆ ಸಾವಿರ ಕೋಟಿ . . . ಮಾನ್ಯ ಮಂತ್ರಿಯವರೇ ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ನಮ್ಮ 6 ಜಿಲ್ಲೆಗೆ ಅವರೇ ನೇತೃತ್ವವನ್ನು ವಹಿಸಿಕೊಂಡಿರುವವರಾಗಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪದೇ ಪದೇ ನನಗೆ ಉತ್ತರವನ್ನು ಕೇಳುತ್ತಿದ್ದಾರೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಮೇಲೆ ನನಗೆ ಗೌರವ ಇದೆ. ಅವರು concentrate ಮಾಡುತ್ತಿದ್ದಾರೆಯೇ ಎಂದು ಹೇಳುತ್ತಿದ್ದೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವಂತಹ ವಿಚಾರವನ್ನು ಬಹಳ patience ನಿಂದ ಕೇಳುತ್ತಿದ್ದೇನೆ. ಇದರ ಬಗ್ಗೆ ನಾನು ನಂತರದಲ್ಲಿ ಉತ್ತರ ಹೇಳಬೇಕೆಂದು ಸುಮ್ಮನೆ ಕುಳಿತುಕೊಂಡಿದ್ದೇನೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಗೌರವದಿಂದ ಕೇಳುತ್ತಿದ್ದಾರೆ. ಆಯಿತು. ಮಾನ್ಯ ಸಚಿವರೇ ಕುಳಿತುಕೊಳ್ಳಿ. ಪರವಾಗಿಲ್ಲ. ನಾನು ಮಾನ್ಯ ಸಚಿವರ ಗಮನಕ್ಕೆ ಬರಲಿ ಎಂದು ಹೇಳುತ್ತಿದ್ದೇನೆ ಅಷ್ಟೇ. ಅದನ್ನು ಬಿಟ್ಟು ಬೇರೆ ವಿಚಾರ ಇಲ್ಲ. ಮಾನ್ಯ ಸಚಿವರೇ ತಮ್ಮ ಮೇಲೆ ಅಪಾರವಾದಂತಹ ಗೌರವ ಇದೆ. ತಾವು ಅಧಿಕಾರದಲ್ಲಿ ಇದ್ದಾಗಲೂ ಮತ್ತು ಅಧಿಕಾರದಲ್ಲಿ ಇಲ್ಲದೆ ಇದ್ದಾಗಲೂ ಕೂಡ ನಿಮ್ಮ ಮೇಲೆ ನಮಗೆ ಅಪಾರವಾದ ಗೌರವ ಇಟ್ಟುಕೊಂಡು ಬಂದಿದ್ದೇವೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಾಸ್ಟೆಲ್‌ಗಳ ಬಗ್ಗೆ, ಮೊರಾರ್ಜಿ ದೇಸಾಯಿ ಶಾಲೆಗಳ ಬಗ್ಗೆ ಹೇಳಿದ್ದಾರೆ. ರಾಜ್ಯದಲ್ಲಿ 824 ಮೊರಾರ್ಜಿ ದೇಸಾಯಿ ಶಾಲೆಗಳು, ಇಂದಿರಾ ಗಾಂಧಿ ಮತ್ತು ಡಾ॥ ಅಂಬೇಡ್ಕರ್, ವಾಜಪೇಯಿಯವರ ಹೆಸರಿನಲ್ಲಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮನವರ ಹೆಸರಿನಲ್ಲಿ ಶಾಲೆಗಳು ಇವೆ. ಅದರಲ್ಲಿ ನಾವು ಅಧಿಕಾರಕ್ಕೆ ಬರುವವರೆಗೆ ಅಂದರೆ ಈಗಾಗಲೇ ನಾವು ಅಧಿಕಾರಕ್ಕೆ ಬಂದು 6 ತಿಂಗಳಾಯಿತು. ಈಗಾಗಲೇ 451 ಕಟ್ಟಡಗಳನ್ನು ನಿರ್ಮಾಣ ಮಾಡಿದ್ದೇವೆ. School complex ಸ್ವಂತ ಕಟ್ಟಡಗಳು ಇವೆ. ಈಗಾಗಲೇ 159 ಕಟ್ಟಡಗಳ constructions ಪ್ರಾರಂಭ ಮಾಡಿದ್ದೇವೆಂಬುದು ತಮಗೆ ಗೊತ್ತಿರಲಿ. 116 ನಿವೇಶನಗಳಿಗೆ DPR (Detailed Project Report) ತಯಾರು ಮಾಡುವುದಕ್ಕೆ ಹೇಳಿದ್ದೇವೆ. ಮಾನ್ಯ ಸದಸ್ಯರೇ, 70 ವರ್ಷದ ಇತಿಹಾಸವನ್ನು ನೋಡಿ, 6 ತಿಂಗಳ ಇತಿಹಾಸವನ್ನು ನೋಡಿ. ನಾನು ಉತ್ತರವನ್ನು ಕೊಡುವಾಗ ಏನು ಉತ್ತರವನ್ನು ಕೊಡಬೇಕೋ ಅದನ್ನು ಕೊಡುತ್ತೇನೆ. ಇದರ ಬಗ್ಗೆ ತಮಗೆ progress ಗೊತ್ತಿರಲಿ ಎಂದು ಹೇಳುತ್ತಿದ್ದೇನೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ನಾನು ಕಲ್ಯಾಣ ಕರ್ನಾಟಕದ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ವಿನಂತಿ ಮಾಡುವುದೇನೆಂದರೆ, ಕಲ್ಯಾಣ ಕರ್ನಾಟಕ ಹಿಂದುಳಿದ ಪ್ರದೇಶವಾಗಿದೆ. ಅದಕ್ಕಾಗಿ 371(ಜೆ) ಯನ್ನು ಜಾರಿಗೆ ತರಲಾಗಿದೆ. ಕಲ್ಯಾಣ ಕರ್ನಾಟಕ ಎಂದು ಹೆಸರನ್ನು ಇಡಲಾಗಿದೆ, ಅದರಿಂದ ಏನಾದರೂ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಕಲ್ಯಾಣ ಆಗಲಿ ಎಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ತಾವು ಇಲ್ಲಿ ಕುಳಿತುಕೊಂಡು ಅದನ್ನೇ ಮಾಡಿದ್ದೀರಿ. ನಾವೂ ಸಹ ಅದನ್ನೇ ಮಾಡಬೇಕಾಗುತ್ತದೆ. ಇದರಲ್ಲಿ ಬೇರೆ ಏನೂ ವ್ಯತ್ಯಾಸ ಇಲ್ಲ. ಇವತ್ತಿನ ದಿವಸ ಶಿಕ್ಷಣದ ಬಗ್ಗೆ ಹೇಳುವುದಾದರೆ, ರಾಯಚೂರು ಜಿಲ್ಲೆಯಲ್ಲಿ 2801 ಹುದ್ದೆಗಳು ಖಾಲಿ ಇವೆ. ಇದರಿಂದ ಯಾವ ರೀತಿಯಲ್ಲಿ ಶಿಕ್ಷಣವನ್ನು ನೀಡಿ ಹೆಸರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಯಾವ ರೀತಿಯಲ್ಲಿ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಕಲ್ಯಾಣ ಕರ್ನಾಟಕಕ್ಕೆ ಹಿಂದೆ ಹೆಚ್‌ಕೆಆರ್‌ಡಿಬಿ ಇದ್ದಾಗ 44 ಕೋಟಿ, 45 ಕೋಟಿ, 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಮಾನ್ಯ ಗುಂಡೂರಾವ್‌ರವರು ಇದ್ದಾಗಲೂ ಕೂಡ ಪ್ರತಿ ಸರ್ಕಾರ ಬಂದರೂ ಕೂಡ 50 ಕೋಟಿ ರೂಪಾಯಿಗಳನ್ನು ದಾಟಿ ಕೊಟ್ಟಿರುವುದಿಲ್ಲ. ಮಾನ್ಯ ಎಸ್.ಎಂ.ಕೃಷ್ಣರವರು ಇದ್ದಾಗ ನಾನು ಅಧ್ಯಕ್ಷನಾಗಿದ್ದೆ. ಆಗ ಸುಮಾರು 100 ಕೋಟಿ ರೂಪಾಯಿಗಳವರೆಗೆ ಮುಟ್ಟಿಸಲಾಯಿತು. ಇವತ್ತು 371(ಜೆ) ಅನ್ನು ಯುಪಿಎ ಸರ್ಕಾರಕ್ಕೆ ನೀಡಿದ ನಂತರ ಮಾನ್ಯ ಸಿದ್ದರಾಮಯ್ಯ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆ ಮತ್ತು ಇತರರ ಪ್ರಯತ್ನದಿಂದ ಇದಕ್ಕೆ 1500 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರು. 1500 ಸಾವಿರ ಕೋಟಿ ರೂಪಾಯಿಗಳು ಆದ ನಂತರ ಮುಂದುವರೆದು 1500 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಳೆದ ಆರೂವರೆ ವರ್ಷಗಳಲ್ಲಿ ಕಲ್ಯಾಣ ಕರ್ನಾಟಕಕ್ಕೆ ಹೆಚ್‌ಕೆಡಿಬಿಯ ಬಗ್ಗೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ. ಆರ್ಟಿಕಲ್ 371(ಜೆ) ಪ್ರಕಾರ ಎಷ್ಟು ಹಣ ಕೊಟ್ಟಿದ್ದಾರೆ. ಎಷ್ಟು ಹಣ ಕಡಿಮೆಯಾಗಿದೆ?

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ತಾವು ಏನೂ ಕೊಟ್ಟಿಲ್ಲ?

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ತಾವು ಆರೂವರೆ ವರ್ಷಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳಿ. ದಯವಿಟ್ಟು we want clarification. ತಾವು ಆರೂವರೆ ವರ್ಷಗಳಲ್ಲಿ ಹೈದರಾಬಾದ್–ಕರ್ನಾಟಕ ಜನರಿಗೆ ಎಷ್ಟು ದುಡ್ಡನ್ನು ಕೊಡಲಾಗಿದೆ. ಎಷ್ಟು ಹಣ ಖರ್ಚು ಮಾಡಲಾಗಿದೆ. ಅದರ ಬಗ್ಗೆ ದಯವಿಟ್ಟು ಹೇಳಬೇಕು. Enlighten ಮಾಡಿ. ಇದರ ಬಗ್ಗೆ ನಮಗೂ ಗೊತ್ತಾಗಬೇಕು.

**ಶ್ರೀ ಎನ್.ಎಸ್.ಬೋಸ್‌ರಾಜು:–** ಮಾನ್ಯ ಸಭಾಪತಿಯವರೇ, ತಮಗೆ ಬೇಕಾದರೆ ಇದರ ಬಗ್ಗೆ ಲೆಕ್ಕವನ್ನು ಕೊಡುತ್ತೇವೆ. ತಮಗೆ ಒಳ್ಳೆಯ ಭಾವನೆ ಇದ್ದರೆ, ದಯವಿಟ್ಟು, ಆ ಭಾಗದ ಬಗ್ಗೆ ನಿಮಗೆ ಕಳಕಳಿ ಇದ್ದರೆ ...

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಶೇಕಡಾ 100 ರಷ್ಟು ...

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ಒಂದು ನಿಮಿಷ. ಸದನದಲ್ಲಿ ಒಂದು ದಿವಸ ಕಲ್ಯಾಣ ಕರ್ನಾಟಕದ ಏರಿಯಾದ ಬಗ್ಗೆ ಚರ್ಚೆ ಮಾಡಲಿ. ಎಲ್ಲಾ ಬಂಧುಗಳು ಬಂದು ಕುಳಿತುಕೊಳ್ಳಲಿ. ಇದರ ಬಗ್ಗೆ ತಮಗೆ ಪೂರ್ಣವಾದ ವಿವರ ಸಿಗುತ್ತದೆ. ಏನು ಕೊಟ್ಟಿದ್ದೇವೆ. ಏನು ನಡೆಯುತ್ತಿದೆ. ಅಲ್ಲಿ ಏನು ಪರಿಸ್ಥಿತಿ ಇದೆ ಎಂಬುದು ಗೊತ್ತಾಗುತ್ತದೆ? ಒಂದೂವರೆ ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಸುಳ್ಳೇ, ಯುಪಿಎ ಸರ್ಕಾರಕ್ಕೆ 371(ಜೆ) ಅನ್ನು ಕೊಟ್ಟಿರುವುದು ಸುಳ್ಳೇ, ಅದರಿಂದ ಲಾಭವಾಗಿರುವುದು ಸುಳ್ಳೇ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ರಾಜ್ಯಸಭೆ, ಲೋಕಸಭೆ, ವಿಧಾನಸಭೆ ಮತ್ತು ವಿಧಾನ ಪರಿಷತ್‌ನಲ್ಲಿ ನಿಮ್ಮ majority ಇತ್ತೇ,

(ಗೊಂದಲ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ...

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಇದು ನಾಲ್ಕು ಮನೆಗಳಾದ ರಾಜ್ಯಸಭೆ, ಲೋಕಸಭೆ, ವಿಧಾನಸಭೆ ಮತ್ತು ವಿಧಾನ ಪರಿಷತ್ ಒಪ್ಪಿಕೊಂಡು ತೀರ್ಮಾನವಾಗಿರುವಂತಹದ್ದು.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ತಮ್ಮ ಕೈ–ಕಾಲು ಹಿಡಿದುಕೊಂಡು 371(ಜೆ) ಅನ್ನು ತಂದಿರುವಂತಹದ್ದು. ಇದನ್ನು ತಮ್ಮ ಸರ್ಕಾರ ಏಕೆ ಮಾಡಲಿಲ್ಲ?

(ಗೊಂದಲ)

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದ ಭಾಷಣದಲ್ಲಿ ಎರಡು ವಿಷಯಗಳನ್ನು ತೋರಿಸಿದ್ದಾರೆ. ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳಿಗೆ ....

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಪ್ರಕಾಶ್ ರಾಥೋಡ್‌ರವರೇ ಕುಳಿತುಕೊಳ್ಳಿ. ನಂತರದಲ್ಲಿ ತಮಗೆ ಅವಕಾಶವನ್ನು ಕೊಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಅದು ತಪ್ಪಿದೆ. ಏಕೆಂದರೆ, ಬಿಜೆಪಿ ಸರ್ಕಾರ ಇದ್ದಾಗ 371(ಜೆ) ಅನ್ನು ರಿಜೆಕ್ಟ್ ಮಾಡಿದ್ದರು. ಇದರ ಬಗ್ಗೆ ನಾವು ಹೋರಾಟ ಮಾಡಿದ್ದೇವೆ.

**ಸಭಾಪತಿಯವರು:–** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ ತಾವು ದಯಮಾಡಿ ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತಾ . . .

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ಬೋಸ್‌ರಾಜುರವರೇ, ಬೇಗ ಮುಗಿಸಿ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಅವರು ನಿಂತುಕೊಂಡರೆ ನಾನು ಏನು ಮಾಡಲಿ.

**ಸಭಾಪತಿಯವರು:–** ಮಾನ್ಯ ಬೋಸ್‌ರಾಜುರವರೇ, ತಾವು ಏನು ಮಾಡುವುದಕ್ಕೆ ಆಗುತ್ತದೆ. ಬೇಗ ಮುಗಿಸಿ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯಪಾಲರ ರಾಜ್ಯ ವಿಧಾನ ಮಂಡಲದ ಭಾಷಣದಲ್ಲಿ ಕ್ರಮ ಸಂಖ್ಯೆ.41 ಮತ್ತು 42 ರಲ್ಲಿ ರಾಯಚೂರು ಬಗ್ಗೆ ಉಲ್ಲೇಖ ಮಾಡಿದ್ದಾರೆ. ಉದಾಹರಣೆಗೆ, “ರಾಯಚೂರಿನಲ್ಲಿ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ) ಯ ಸ್ಥಾಪನೆಯನ್ನು ಮಂಜೂರು ಮಾಡಲಾಗಿದ್ದು, ಇದರಿಂದ ಬಹುದಿನಗಳ ಬೇಡಿಕೆಯನ್ನು ಈಡೇರಿಸಿದಂತಾಗಿದೆ” ಎಂದು ಹೇಳುತ್ತಾರೆ. ಇವರು ಬಂದು ಐಐಐಟಿ ಯನ್ನು ಮಾಡಿದ್ದಾರೆಯೇ, ಈಗಾಗಲೇ ಒಂದು ವರ್ಷದ ಬ್ಯಾಚ್ ಹೈದರಾಬಾದ್‌ನಲ್ಲಿ ನಡೆಯುತ್ತಿದ್ದು, ಅದರಲ್ಲಿ 36 student ಇದ್ದಾರೆ. ಎರಡನೇ ಬ್ಯಾಚ್‌ನಲ್ಲಿ 60 ಮಂದಿಗೆ ರಾಯಚೂರಿನಲ್ಲಿ ಪ್ರಾರಂಭ ಮಾಡಬೇಕೆಂದು ಹೇಳಿದ್ದೇವೆ. ಹಿಂದಿನ ಸರ್ಕಾರದಲ್ಲಿ ಕಟ್ಟಿರುವಂತಹ ಹೊಸ ಇಂಜಿನಿಯರ್ ಕಾಲೇಜು ಕಟ್ಟಡದಲ್ಲಿ ಮಾಡಬೇಕೆಂದು ಎಲ್ಲರೂ ಸೇರಿಕೊಂಡು ನಿರ್ಣಯವನ್ನು ತೆಗೆದುಕೊಂಡರು. ಆದರೆ ಈ ಸರ್ಕಾರ ಇದನ್ನು ರಾಜ್ಯಪಾಲರ ಭಾಷಣದ ಪುಸ್ತಕದಲ್ಲಿ ತೋರಿಸಿದರೆ. ಇದನ್ನು ತಾವು ಮಾಡಿದ ಹಾಗೆ ಆಗುತ್ತದೆಯೇ, ಈಗಾಗಲೇ ಒಂದು ವರ್ಷ ಆಯಿತು. 65 ಎಕರೆ ಜಾಗ ಬೇಕೆಂದು ಸರ್ವೆ ನಂ.99/1 ವಡವಟ್ಟಿಯಲ್ಲಿ ಜಾಗವನ್ನು ಸಹ ಕೊಟ್ಟಿದ್ದೇವೆ. ಮಾನ್ಯ ಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಬಂದು ಜಾಗವನ್ನು ನೋಡಿಕೊಂಡು ಹೋದರು. ಇದನ್ನು ತಾವು ಮಾಡಿದ ಹಾಗೆ ಆಗುತ್ತದೆಯೇ, ಇವರು ನಾವು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ರಾಯಚೂರಿಗೆ ವಿಶ್ವವಿದ್ಯಾನಿಲಯವನ್ನು ಕೊಟ್ಟಿದ್ದೇವೆಂದು ಬರೆಯಲಾಯಿತು. ರಾಯಚೂರು ವಿಶ್ವವಿದ್ಯಾನಿಲಯದ ಬಗ್ಗೆ 2017–18ನೇ ಸಾಲಿನ ಬಜೆಟ್ ಅನ್ನು ತೆಗೆದು ನೋಡಿ. ಅಂದಿನ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾವನೆಯನ್ನು ಹಣಕಾಸು ಸಚಿವರಿಗೆ ತೋರಿಸಿದರು. ಅದಕ್ಕೆ ಘೋಷಣೆ ಮಾಡಿ, ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದರು. ಅದಕ್ಕೆ ವಿಶೇಷಾಧಿಕಾರಿಯನ್ನು ಹಾಕಿದರು. 2 ವರ್ಷದಿಂದ ವಿಶೇಷಾಧಿಕಾರಿ ಅಲ್ಲಿದ್ದಾರೆ. ಅವರ ಹತ್ತಿರ ನಮ್ಮ ಉಪಮುಖ್ಯಮಂತ್ರಿಯವರು ಮಾತನಾಡಿ ಬಂದಿದ್ದಾರೆ. ಅದು ಆವತ್ತಿನ ದಿವಸ ಆಗಿರುವಂತಹದ್ದು. ಇದರ ಬಗ್ಗೆ ಕ್ಯಾಬಿನೇಟ್ ಡಿಸಿಷನ್ ಆಯಿತು. ಈ ವಿಧೇಯಕ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ರಾಜ್ಯಪಾಲರ ಹತ್ತಿರ ಹೋಗಿ, ಇದರ ಬಗ್ಗೆ ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ಪಾಸ್ ಆಯಿತು. ಅಂಕಿತ ಆಗಿರಲಿಲ್ಲ. ಮುಂದಿನ ಸಮ್ಮಿಶ್ರ ಸರ್ಕಾರದಲ್ಲಿ ಎಲ್ಲಾ ರಾಯಚೂರು ಜಿಲ್ಲೆಯ ಜನಪ್ರತಿನಿಧಿಗಳು ಅದಕ್ಕೆ ordinance ಮಾಡಿಸಿ ಎಂದು ಕೇಳಿದರು. It is very urgency ಎಂದು ರಾಜ್ಯಪಾಲರಲ್ಲಿ ಮತ್ತೆ ಹಾಕಿದರು. ಆ ರೀತಿಯಾಗಿ ಇದು ಪೆಂಡಿಂಗ್ ಆಗಿದೆ. ಈಗಾಗಲೇ ವಿಶೇಷಾಧಿಕಾರಿ ಅಲ್ಲಿದ್ದಾರೆ. ಇದು ಆಗಿರುವಂತಹ ವಿಷಯವನ್ನು ಇಲ್ಲಿ ಉಲ್ಲೇಖ ಮಾಡಿದ್ದಾರೆ. ಇದು ತಾವು ಮಾಡಿದ ಹಾಗೆ ಆಗುತ್ತದೆಯೇ, ಯಾವ ರೀತಿಯಲ್ಲಿ ಇದನ್ನು ರಾಜ್ಯಪಾಲರ ಹತ್ತಿರ ಹೇಳಿಸಿದ್ದಾರೆ. ಯಾರೋ ಮಾಡಿರುವಂತಹದ್ದನ್ನು ತಾವು ಮಾಡಿರುವಂತಹದ್ದು ಎಂದು ತೋರಿಸಿ, ನಾವು 6 ತಿಂಗಳು ಅಧಿಕಾರ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಇದಕ್ಕೆ ಯಾವುದಾದರೂ ಒಂದು ಸಂದರ್ಭ ಇರಬೇಕು. ಇದು ಹೌದೇ ಅಥವಾ ಇಲ್ಲವೇ ಎಂಬುದರ ಬಗ್ಗೆ ವೆರಿಫೈ ಮಾಡಲಿ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಇಲ್ಲೇ ಇದ್ದಾರೆ. ವಡವಟ್ಟಿ ಹಳ್ಳಿಯಿಂದ ಸರ್ವೆ ನಂ.99/1 ರೆವಿನ್ಯೂ ಸೆಕ್ರೆಟರಿಯವರನ್ನು ಕೇಳಿಕೊಳ್ಳಲಿ. ಮುಖ್ಯ ಕಾರ್ಯದರ್ಶಿಯವರು ದೂರವಾಣಿ ಕರೆಯನ್ನು ಮಾಡಿದರೆ 24 ಗಂಟೆಗಳಲ್ಲಿ ಜಿಲ್ಲಾಧಿಕಾರಿಗಳು ಆಗುವುದಿಲ್ಲವೆಂದು ರಿಸ್ಪಾನ್ಸ್ ಮಾಡಿ ಹೋಗಿದ್ದಾರಲ್ಲವೇ? ಆ ಜಿಲ್ಲಾಧಿಕಾರಿಗಳೇ ಇದನ್ನು ಮಾಡಿಕೊಟ್ಟಿರುವುದು. ಇದು ಈ ರೀತಿ ಮಾಡಿರುವುದು.

**ಸಭಾಪತಿಯವರು:–** ಮಾನ್ಯ ಎನ್.ಎಸ್.ಬೋಸ್‌ರಾಜುರವರೇ, ನಾಲ್ಕೂವರೆ ಗಂಟೆಗೆ ತಾವು ಮಾತನಾಡುವುದನ್ನು ಮುಗಿಸಿಬಿಡಿ. ನಂತರ ಸಂವಿಧಾನದ ಮೇಲೆ ಚರ್ಚೆ ಮಾಡಬೇಕು. ತಮಗೆ ಮತ್ತೆ ಅವಕಾಶವನ್ನು ಕೊಡುತ್ತೇವೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ಎಸ್.ಬೋಸ್‌ರಾಜುರವರು ಮಾತನಾಡುವುದು ಮುಗಿದುಬಿಡಲಿ. ನಂತರ ತಾವು ಸಂವಿಧಾನದ ಮೇಲೆ ಪ್ರಸ್ತಾಪ ಮಾಡಬಹುದು.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಶಿಕ್ಷಣದ ವಿಷಯದಲ್ಲಿ ...

**ಸಭಾಪತಿಯವರು:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನಾಲ್ಕೂವರೆ ಗಂಟೆಗೆ ಸಂವಿಧಾನದ ಮೇಲೆ ಚರ್ಚೆಗೆ ಪ್ರಸ್ತಾವನೆ ಆಗುತ್ತದೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಶಿಕ್ಷಣ ವಿಷಯದಲ್ಲಿ ತಾವೆಲ್ಲಾ ವಿಚಾರ ಮಾಡಬೇಕೆಂಬ ಮಾತನ್ನು ಹೇಳುತ್ತಿದ್ದೇನೆ. ಮೊನ್ನೆಯ ದಿವಸ ರಾಜ್ಯದಲ್ಲಿ ಎಲ್ಲಿಯೂ ಸಹ ಈ ರೀತಿಯಲ್ಲಿ ಆಗಿರುವುದಿಲ್ಲ. ಇದು ರಾಯಚೂರು ಜಿಲ್ಲೆಯಲ್ಲಿ ಆಗಿದ್ದು, ಅಲ್ಲಿ 7 ಮಂದಿ ಶಿಕ್ಷಕರನ್ನು ಅಮಾನತ್ತು ಮಾಡಿದ್ದಾರೆ. ಅವರನ್ನು ಏಕೆ ಅಮಾನತು ಮಾಡಿದ್ದಾರೆ? ಮಕ್ಕಳಿಗೆ ಷೂ, ಸಾಕ್ಸ್‌ನ್ನು ಸರಬರಾಜು ಮಾಡುವುದರಲ್ಲಿ ಹೆಚ್ಚು–ಕಡಿಮೆ ಮಾಡಿದ್ದಾರೆ ಎಂದು ಗುಲ್ಬರ್ಗಾ Commissioner ನವರು 7 ಮಂದಿ ಶಿಕ್ಷಕರನ್ನು ಅಮಾನತ್ತು ಮಾಡಿದ್ದಾರೆ. ನಂತರ 50 ಮಂದಿ ಯೂನಿಯನ್ ಅಧ್ಯಕ್ಷರು ಎಲ್ಲರೂ ಸಹ ಬಂದು ಈ ಜವಾಬ್ದಾರಿ ನಮಗೆ ಕೊಡುವುದು ಬೇಡ,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಾವು ಕೌಂಟರ್ signature ಮಾಡಿದರೆ ರಾಜಕಾರಣಿಗಳು, ಎಂಎಲ್‌ಎ ಮತ್ತು ಎಂಎಲ್‌ಸಿ ಗಳು ಬರುತ್ತಾರೆ. ಇಂತಹವರಿಗೆ ಏಜೆನ್ಸಿಯನ್ನು ಕೊಡುತ್ತಾರೆ. ನಮಗೆ ಸಹಿಯನ್ನು ಮಾಡಿ ಎಂದು ಹೇಳುತ್ತಾರೆ. ನಾವು ಸಹಿಯನ್ನು ಮಾಡುತ್ತೇವೆ. ಇದರ ಶಿಕ್ಷೆ ನಮಗೆ ಆಗುತ್ತಿದೆ. ಇದು ಆಗಬಾರದು. ಈ ರೀತಿಯಾಗಿ ಸರ್ಕಾರದ ಆಡಳಿತದ ಲೋಪದೋಷಗಳಿಂದ ಇವತ್ತಿನ ದಿವಸ 7 ಮಂದಿ ಶಿಕ್ಷಕರು ಅಮಾನತ್ತು ಆಗಿದ್ದಾರೆ. ಆ ಶಿಕ್ಷಕರು ಈ ಜವಾಬ್ದಾರಿ ನಮಗೆ ಬೇಡವೆಂದು ಹೇಳುತ್ತಾರೆ. ಸೈಕಲ್ ಅನ್ನು ಇಲ್ಲಿಂದಲೇ ಕೊಡುತ್ತಿದ್ದರು. ಸಮವಸ್ತ್ರವನ್ನು ಸಹ ಇಲ್ಲಿಂದಲೇ ಕೊಡುತ್ತಿದ್ದರು. ಅದೇ ರೀತಿ ಷೂ, ಸಾಕ್ಸ್‌ಗಳನ್ನು ಇಲ್ಲಿಂದಲೇ ಕೊಡಲಿ ಎಂಬುದು ಇವರ ಪ್ರಾರ್ಥನೆಯಾಯಿತು. ಇದನ್ನು ಈ ಸರ್ಕಾರ ಗಮನಿಸಬೇಕಾಗುತ್ತದೆ. ಈ ರಾಜ್ಯದಲ್ಲಿ ಎಲ್ಲಿಯೂ ಸಹ ಈ ರೀತಿ ಆಗಿರುವುದಿಲ್ಲ, ರಾಯಚೂರು ಜಿಲ್ಲೆಯಲ್ಲಿ ಮಾತ್ರ ಆಗಿದೆ.

(ಮುಂದು)

**(154) 04/03/2020/4:30/ಎಸ್‌ಪಿಆರ್/ವಿಕೆ**
**ಶ್ರೀ ಎನ್.ಎಸ್.ಭೋಸ್‌ರಾಜು(ಮುಂದು):**

ನನಗೆ ತಿಳಿದ ಹಾಗೆ, ಈ ವಿಚಾರವನ್ನು ಪರಿಶೀಲಿಸಿದರೆ ಹಾಗೂ ಎಲ್ಲಾ ಕಡೆಗಳಲ್ಲಿ ನ್ಯಾಯಯುತವಾಗಿ ನೋಡಿದರೆ ಅರ್ಧದಷ್ಟು ಶಿಕ್ಷಕರು ಇವತ್ತಿನ ದಿವಸ ಅಮಾನತ್ತುಗೊಳ್ಳುತ್ತಾರೆ. ಖಾಸಗಿ ವ್ಯಕ್ತಿಗಳಿಗೆ, ಅಂಗನವಾಡಿ ಕಾರ್ಯಕರ್ತರು, ಮುಂಖಡರುಗಳು ಹಾಗೂ ಇನ್ನಿತರೆಯವರಿಗೆ ಸರಬರಾಜು ಮಾಡುವ ಗುತ್ತಿಗೆಯನ್ನು ಕೊಡುತ್ತಾರೆ. ನಂತರದಲ್ಲಿ ದಿನಗಳಲ್ಲಿ ವಿಚಾರಣೆಯಾಗಿ, ದೂರು ಬಂದಾಗ ಶಿಕ್ಷಕರು ಅಮಾನತ್ತುಗೊಳ್ಳುವ ಪರಿಸ್ಥಿತಿಯುಂಟಾಗುತ್ತದೆ. ರಾಜ್ಯದಲ್ಲಿ ಆಡಳಿತ ಸುಧಾರಣೆ ಮಾಡಬೇಕಾದರೆ, ಸರ್ಕಾರ ಇಂತಹ ಎಲ್ಲಾ ವಿಷಯಗಳನ್ನು ಗಮನಿಸಬೇಕಾಗುತ್ತದೆ. ಕೇವಲ ಘೋಷಣೆ ಮಾಡಿದರೆ ಸಾಕಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬೀದರ್ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ರೈತರು 10-20 ಕ್ವಿಂಟಾಲ್ ಬೇಳೆಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡಬೇಕೆಂದು ಒತ್ತಾಯ ಮಾಡಿದಾಗ, ತಕ್ಷಣವೇ ಖರೀದಿ ಮಾಡುವುದಕ್ಕೆ ತಿಳಿಸಿದರು. ನಮ್ಮ ಭಾಗದಲ್ಲಿನ ಎಲ್ಲಾ ಸಂಘಗಳು ಹಾಗೂ ರೈತರು ಸರ್ಕಾರದ ಖರೀದಿಗಾಗಿ ಕಾಯುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾಗಿ ಹೇಳಿಕೆ ನೀಡಿ ಈಗಾಗಲೇ 15 ದಿನಗಳಾಗಿವೆ. ಆದರೆ, ಇದುವರೆವಿಗೂ ಸಹ ಖರೀದಿ ಮಾಡುವುದಕ್ಕಾಗಲಿಲ್ಲ. ರಾಜ್ಯದ ಮುಖ್ಯಮಂತ್ರಿಗಳು ಜಬಾಬ್ದಾರಿಯುತವಾಗಿ ಹೇಳಿದರು. ರಾಜ್ಯದ ರೈತರ ವಿಷಯದಲ್ಲಿ ಮುಖ್ಯಮಂತ್ರಿಗಳಿಗೆ ಕಳಕಳಿಯಿದೆ. ಆದ್ದರಿಂದಲೇ ಆ ರೀತಿಯಾದ ಹೇಳಿಕೆಯನ್ನು ನೀಡಿದ್ದಾರೆ. ಆದರೆ ಅದನ್ನು ಅನುಷ್ಠಾನಗೊಳಿಸಬೇಕು. ಆದರೆ ಇದಕ್ಕೆ ಸಚಿವ ಸಂಪುಟ ಅಥವಾ ಇಲಾಖೆಯ ಅಧಿಕಾರಿಗಳು ಸಹಕಾರ ನೀಡುತ್ತಿಲ್ಲ, ಯಾವ ಕಾರಣಕ್ಕಾಗಿ ಈ ರೀತಿಯಾಗುತ್ತಿದೆ? ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿರುವ ಇನ್ನೊಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ರಾಯಚೂರು ಹಾಗೂ ದಾಸರ ನಾಡು ಹಾಗೂ ಜಗನ್ನಾಥ ದಾಸರ ಸ್ಥಳ ಮಾನ್ವಿಗೆ ಮಾನ್ಯ ಮುಖ್ಯಮಂತ್ರಿಗಳು ಭೇಟಿ ನೀಡಿದಾಗ, ಆರ್.ಎಸ್.ಎಸ್.ನವರು ಅಥವಾ ಇನ್ಯಾರೋ ಹೇಳಿದಾಗ, ಮಾನ್ಯ ಮುಖ್ಯಮಂತ್ರಿಗಳು ಅಲ್ಲಿನ ಕಾರ್ಯಕ್ರಮವೊಂದರಕ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೇರವಾಗಿ ಹೆಲಿಕ್ಯಾಪ್ಟರ್ ಮುಖಾಂತರ ಬಂದರು. ನಾನು ವಿಧಾನ ಪರಿಷತ್‌ನ ಸದಸ್ಯನಾಗಿ ಹಾಗೂ ಕಾಂಗ್ರೆಸ್ ಪಕ್ಷದ ಶಾಸಕರು ಮಾನ್ಯ ಮುಖ್ಯಮಂತ್ರಿಗಳಿಗೆ ಹಾರ ಹಾಕಿ ಸ್ವಾಗತಿಸಿದೆವು. ಆ ಸಂದರ್ಭದಲ್ಲಿ ನಾವು ಅಲ್ಲಿನ ಭಾಗದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದರಿಂದ ಇದರ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿದೆವು. ಆಗ ಮುಖ್ಯಮಂತ್ರಿಗಳು ವ್ಯವಸ್ಥೆ ಮಾಡಿ ಕೊಡುವುದಾಗಿ ಹೇಳಿದ್ದರು. ಆದರೆ ಇದುವರೆವಿಗೂ ಸಹ ಮಾಡಿಲ್ಲ. ಆದರೆ ನಂತರದಲ್ಲಿ ಈ ವ್ಯವಸ್ಥೆಯನ್ನು ಮಾಡಿಸಿಕೊಳ್ಳಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಜಗನ್ನಾಥ ದಾಸರ ದೇವಸ್ಥಾನಕ್ಕೆ ನೇರವಾಗಿ ಹೋಗಿದ್ದರು. ಆಗ ಅಲ್ಲಿನ ಕೆಲವು ಸಂಘ ಸಂಸ್ಥೆಗಳು ಕಾರ್ಯಕ್ರಮವನ್ನು ಮಾಡಿ, ಅನುದಾನ ನೀಡಬೇಕೆಂದು ಕೋರಿದರು. ಆಗ ಮುಖ್ಯಮಂತ್ರಿಗಳು ತಕ್ಷಣವೇ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಘೋಷಿಸಿದರು. ಆದರೆ ಇದುವರೆವಿಗೂ ಸಹ ಒಂದು ರೂಪಾಯಿಗಳ ಅನುದಾನವು ಬಿಡುಗಡೆಗೊಂಡಿಲ್ಲ. ಶ್ರೀ ಅಂಬುಕ್ ಕುಮಾರ್ ಎಂಬ ಅಧಿಕಾರಿಯು ಆಗಿನ ಜಿಲ್ಲಾಧಿಕಾರಿಗಳಾಗಿದ್ದರು. ಆ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈಗ ಅಧಿಕಾರಿಗಳನ್ನು ಕರೆಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಎರಡು ಕೋಟಿ ರೂಪಾಯಿಗಳ ...

**ಶ್ರೀ ಎನ್.ಎಸ್.ಭೋಸ್‌ರಾಜು(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಆಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಮಾತನಾಡಲಿ. ನಾನು ಇರುವುದನ್ನೇ ಹೇಳುತ್ತಿದ್ದೇನೆ. ಈಗ ಅವರು ಏಕೆ ಮಧ್ಯದಲ್ಲಿ ಮಾತನಾಡುತ್ತಾರೆ?

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡುತ್ತಿರೋ ಅಥವಾ ಇಲ್ಲವೋ? ಮಾತನಾಡಲು ಅವಕಾಶ ನೀಡುವುದಿಲ್ಲವೆಂದಾದರೆ, ನಾನು ಸದನದಿಂದ ಹೊರಗೆ ಹೋಗುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದನದಲ್ಲಿ ಇಷ್ಟು ಗಂಭೀರವಾದ ಆರೋಪಗಳನ್ನು ಮಾಡುತ್ತಿರುವಾಗ, ನಾನು ಹೇಳುವುದನ್ನು ಕೇಳಬೇಕು. ಅನೇಕ ಬಾರಿ ಎಲ್ಲಾ ಮುಖ್ಯಮಂತ್ರಿಗಳು ಕೆಲವು ಕಡೆಗಳಲ್ಲಿ ಹಣ ಬಿಡುಗಡೆಯ ಘೋಷಣೆಯನ್ನು ಮಾಡುತ್ತಾರೆ. ಆಗ ಸಂಘ ಸಂಸ್ಥೆಗಳು ಹಣವನ್ನು ತೆಗೆದುಕೊಳ್ಳಬೇಕು. **(ಗೊಂದಲ)** ಮಾನ್ಯ ಸದಸ್ಯರು ಶಾಸಕರಾಗಿ ಕೆಲಸ ಮಾಡಿದ್ದವರು. ಆ ಸಂಘ ಸಂಸ್ಥೆಗಳು ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಇನ್ನೂ ಹಣ ಬಿಡುಗಡೆಗೊಂಡಿಲ್ಲ ಎಂದು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಯಾವ ಮುಖ್ಯಮಂತ್ರಿಗಳು ಹಣ ಬಿಡುಗಡೆ ಮಾಡಿದರೆ, ಅದು ತನ್ನಷ್ಟಕ್ಕೇ ತಾನೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲಾಖೆಯ ಖಜಾನೆಗೆ ಹೋಗುವುದಿಲ್ಲ. ಇದರ ಬಗ್ಗೆ ಫಾಲೋಅಪ್ ಮಾಡಬೇಕು. ಮಾನ್ಯ ಸದಸ್ಯರು ನಾನು ಮಾತನಾಡುವುದನ್ನು ಕೇಳಬೇಕು.

**ಶ್ರೀ ಎನ್.ಎಸ್.ಭೋಸ್‌ರಾಜ್:–** ಮಾನ್ಯ ಸಭಾಪತಿಯವರೇ, ಇದಾದ ನಂತರದ್ದನ್ನು ನಾನು ಹೇಳುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಆರೋಪ ಮಾಡುವುದಕ್ಕೆ ಮುಂಚೆ . . .

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾನಾಯಕರೇ, ಮಧ್ಯಾಹ್ನ 4:30 ಗಂಟೆಗೆ ಮಾನ್ಯ ಸಭಾಪತಿಯವರು ಸಂವಿಧಾನದ ಬಗ್ಗೆ ಪ್ರಸ್ತಾಪ ಮಾಡುತ್ತಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಏನು ಬೇಕಾದರೂ ಹೇಳಬಹುದೇ? ಸರ್ಕಾರ ಮಧ್ಯ ಪ್ರವೇಶ ಮಾಡಬಾರದೇ? **(ಗೊಂದಲ)** ಜವಾಬ್ದಾರಿಯಿಂದ ಕೆಲಸ ಮಾಡಬೇಕು. **(ಗೊಂದಲ)** ವಿರೋಧ ಪಕ್ಷದ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಬೇಕಾದರೂ ಹೇಳಬಹುದೇ? **(ಗೊಂದಲ)** ಬೆಳಿಗ್ಗೆಯಿಂದ ಸಂಜೆಯವರೆಗೆ ... ಇದು ಬಹಳ ಅನ್ಯಾಯ.

**(ಗೊಂದಲ)**

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ಚಿಂಚೋಳಿ ಬ್ರಿಡ್ಜ್‌ಗೆ ಬಂದಾಗ ಐವತ್ತು ಲಕ್ಷ ರೂಪಾಯಿಗಳ ಅನುದಾನವನ್ನು ಘೋಷಣೆ ಮಾಡಿದ್ದರು. ಆದರೆ ಇನ್ನೂ ಸಹ ಬಿಡುಗಡೆಮಾಡಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಭೋಸ್‌ರಾಜ್‌ರವರೇ, ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಭೋಸ್‌ರಾಜ್‌ರವರೇ, ತಾವು ತಮ್ಮ ಮಾತುಗಳನ್ನು ಮುಗಿಸುತ್ತೀರೋ?

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಆದರೆ ಅವಕಾಶ ನೀಡಬೇಕು. ನಾನು ಐದು ನಿಮಿಷವೂ ಸಹ ಮಾತನಾಡಿಲ್ಲ. ನಾನು ಇಂತಹ ಮಾತುಗಳನ್ನು ಏಕೆ ಹೇಳುತ್ತಿದ್ದೇನೆ ಎನ್ನುವುದನ್ನು ಸರ್ಕಾರವು ಅರ್ಥಮಾಡಿಕೊಳ್ಳಬೇಕು. ಯಾವುದೇ ಪಕ್ಷವು ಅಧಿಕಾರದಲ್ಲಿರಲಿ. ನಾನು ಯಾರನ್ನೂ ಸಹ ದೂಷಿಸುತ್ತಿಲ್ಲ. ಅಲ್ಲಿಯೇ ಯಲ್ಲಮ್ಮ ದೇವಿ ದೇವಸ್ಥಾನವಿದೆ. ಅಲ್ಲಿಗೂ ಸಹ ಮಾನ್ಯ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋದರು. ಆಗಲೂ ಸಹ ಅದೇ ಅಧಿಕಾರಿಯು ಮುಖ್ಯಮಂತ್ರಿಗಳ ಜೊತೆಗೆ ಇದ್ದರು. ಆಗ ಐವತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ, ಕೆಲಸಗಳನ್ನು ಪ್ರಾರಂಭ ಮಾಡಿ ಎಂದು ಆಶ್ವಾಸನೆ ನೀಡಿದರು. ಆದರೆ ಒಂದೇ ಒಂದು ರೂಪಾಯಿಯೂ ಸಹ ಬಂದಿಲ್ಲ. ಇತ್ತೀಚೆಗೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಚಿಂಚೋಳಿ ಹತ್ತಿರ ಮಾನ್ಯ ಮುಖ್ಯಮಂತ್ರಿಗಳು ಬಂದರು. ಅಲ್ಲಿ ಹಾಲು ಮತಸ್ಥ ಸಮುದಾಯದ ಕಾರ್ಯಕ್ರಮವಿತ್ತು. ಆ ಸಂದರ್ಭದಲ್ಲಿ ಮಾನ್ಯ ರಘುನಾಥ್ ರಾವ್ ಮಲ್ಕಾಪೂರೆರವರೂ ಸಹ ಉಪಸ್ಥಿತರಿದ್ದರು. ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಆಶ್ವಾಸನೆಯನ್ನು ಜಾರಿಗೊಳಿಸಬೇಕೇನ್ನುವ ಉದ್ದೇಶದಿಂದ ನಾನು ಇವುಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆಗ ಮುಖ್ಯಮಂತ್ರಿಗಳು *Adivasi Development Board* ಮಾಡುತ್ತೇನೆಂದು ಹೇಳಿದ್ದರು. ಇದು ಅಲ್ಲಿನ 49 minute communities ಸಂಬಂಧಪಟ್ಟ ವಿಚಾರವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟ ನಂತರ ಅಲ್ಲಿನ ಸ್ವಾಮಿಗಳು ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವಂತೆ ಹಾಗೂ ಫಾಲೋಅಪ್ ಮಾಡುವಂತೆ ನನಗೆ ಹೇಳಿದ್ದಾರೆ. ಅದಕ್ಕಾಗಿ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಇದನ್ನು ಸರ್ಕಾರವು ಗಮನಿಸಬೇಕು. ಇತ್ತೀಚಿನ 20 ದಿನಗಳ ಹಿಂದೆ, ಮುಖ್ಯಮಂತ್ರಿಗಳು *Adivasi Development Board* ತಕ್ಷಣವೇ ಮಾಡುವುದಾಗಿ ಘೋಷಿಸಿದರು. ಇದನ್ನು ಸರ್ಕಾರದ ಗಮನಕ್ಕೆ ಏಕೆ ತಂದಿದ್ದೇನೆ ಎಂದರೆ, ರಾಜಕಾರಣಿಗಳು ಘೋಷಣೆ ಮಾಡುತ್ತಿರುತ್ತಾರೆ, ಕಾರ್ಯದರ್ಶಿಗಳು ತಂದ ಕಡತಗಳಿಗೆ ಸಹಿ ಮಾಡುತ್ತಿರುತ್ತಾರೆ. ಆಡಳಿತ ಪಕ್ಷವು ಬದಲಾವಣೆಯಾಗುತ್ತಿರುತ್ತವೆ. ಆದರೆ ಅಧಿಕಾರಿಗಳು ಯಾರೂ ಸಹ ಬದಲಾಗುವುದಿಲ್ಲ. ಕೇವಲ ಇಲಾಖೆಗಳಿಗೆ ವರ್ಗಾವಣೆ ಹೊಂದುತ್ತಿರುತ್ತಾರೆ. ಅಧಿಕಾರಿಗಳು ರಾಜಕಾರಣಿಗಳ ಆಶ್ವಾಸನೆಗಳನ್ನು ಕಾರ್ಯರೂಪಕ್ಕೆ ತಂದರೆ ಮಾತ್ರವೇ ಆಡಳಿತ ಸುಧಾರಣೆಯಾಗುವುದಕ್ಕೆ ಸಾಧ್ಯತೆಗಳಿವೆ. ಈ ದಿಸೆಯಲ್ಲಿ ನಾವು ಯಾವ ರೀತಿಯಾಗಿ ಪ್ರಯತ್ನ ಮಾಡುತ್ತಿದ್ದೇವೆ? ವಿರೋಧ ಹಾಗೂ ಆಡಳಿತ ಪಕ್ಷಗಳು ಜಗಳ ಮಾಡುವುದಿಷ್ಟೇ, ಸರ್ಕಾರವು ಬದಲಾಗುತ್ತಿರುತ್ತದೆ ಹಾಗೂ ಅಧಿಕಾರಿಗಳು ವರ್ಗಾವಣೆ ಹೊಂದುತ್ತಿರುತ್ತಾರೆ. ನಾವು ಅಧಿಕಾರದಲ್ಲಿದ್ದಾಗ ನೀಡಿರುವ ಆಶ್ವಾಸನೆಗಳನ್ನು ಈಡೇರಿಸದಿದ್ದರೆ, ಸ್ಥಳೀಯರು ಜನಪ್ರತಿನಿಧಿಗಳ ಅಂಗಿಯನ್ನು ಹರಿಯುತ್ತಾರೆ ಹಾಗೂ ಮನೆಗೆ ಕಳುಹಿಸುತ್ತಾರೆ. ಅಧಿಕಾರಿಗಳು ಹಂತ ಹಂತವಾಗಿ ಪದೋನ್ನತಿ ಹೊಂದಿ ಮುಖ್ಯ ಕಾರ್ಯದರ್ಶಿಗಳಾಗಿ ನಿವೃತ್ತಿಯನ್ನು ಹೊಂದುತ್ತಾರೆ. ಆದ್ದರಿಂದ ಮೊದಲು ಸರ್ಕಾರವು ಆಡಳಿತ ಸುಧಾರಣೆ ಮಾಡಬೇಕು. ಮುಖ್ಯಮಂತ್ರಿಗಳು ನೀಡಿರುವ ಆಶ್ವಾಸನೆಯನ್ನು ಸರ್ಕಾರ ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಬೇಕೇನ್ನುವ ಉದ್ದೇಶಕ್ಕಾಗಿ ನಾನು ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮುಖ್ಯಮಂತ್ರಿಗಳು ಹೇಳಿದ್ದೆಲ್ಲವೂ ಆಗುತ್ತಿದೆ ಎಂದು ತಿಳಿದುಕೊಂಡರೆ, ಅದು ಕಲ್ಯಾಣ ಕರ್ನಾಟಕವಾಗುವುದಿಲ್ಲ. ಇದಕ್ಕೆ ಬೇರೆಯ ಮಾತನ್ನು ಹೇಳಬೇಕಾಗುತ್ತದೆ. ಆದರೆ ಅದನ್ನು ನಾನು ಇಲ್ಲಿ ಹೇಳುವುದಿಲ್ಲ. ಹೈದ್ರಾಬಾದ್–ಕರ್ನಾಟಕ ಪ್ರದೇಶವನ್ನು ಕಲ್ಯಾಣ ಕರ್ನಾಟಕವನ್ನಾಗಿ ಮಾಡಿದ್ದೇವೆ; ಎಲ್ಲಾ ಸವಲತ್ತುಗಳನ್ನು ನೀಡಿದ್ದೇವೆ ಎಂದುಕೊಳ್ಳಬಾರದು. ನಮ್ಮ ಭಾಗದಲ್ಲಿ ನೀರಿನ ಸಮಸ್ಯೆ ಇದೆ. ತುಂಗಭದ್ರ ಎಡದಂಡೆ ಕಾಲುವೆಯ ಬಹಳಷ್ಟು

“ನ್ಯಾಯಾಲಯದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಮಸ್ಯೆಗಳಿವೆ. ಇದಕ್ಕೆ 65 ವರ್ಷಗಳ ಇತಿಹಾಸವಿದೆ. ಆ ಭಾಗದಲ್ಲಿ ಪ್ರಾರಂಭ ಮಾಡಿ ಬೆಳೆದ ಸೋನಾ ಮಸೂರಿ ಅಕ್ಕಿಯನ್ನೂ ಇಡೀ ದೇಶಕ್ಕೆ ಸರಬರಾಜು ಮಾಡಲಾಗುತ್ತದೆ. ಆ ಭಾಗದಲ್ಲಿ ನೀರಿನ ಸಮಸ್ಯೆಯಿಂದಾಗಿ ಜನರು ಪರದಾಡುತ್ತಿದ್ದಾರೆ. ಇಂದಿಗೂ ಸಹ ನೀರಿಗಾಗಿ ಮುಷ್ಕರ ನಡೆಯುತ್ತಿದೆ. ಈ ಕಾರಣಕ್ಕಾಗಿ ಸಮಾನಾಂತರ ಜಲಾಶಯವನ್ನು ನಿರ್ಮಾಣ ಮಾಡಬೇಕು. ಇದರ ಬಗ್ಗೆ 2017–18 ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪವಾಗಿದೆ. ಮುಂದಿನ ದಿನಗಳಲ್ಲಿ ಇದರ ಬಗ್ಗೆ DPR (Detailed Project Report) ಮಾಡುವುದಕ್ಕೆ ಹೇಳಿದ್ದರು.

**ಶ್ರೀ ಗೋವಿಂದ ಎಂ.ಕಾರಜೋಳ (ಉಪಮುಖ್ಯಮಂತ್ರಿಗಳು, ಲೋಕೋಪಯೋಗಿ ಹಾಗೂ ಸಮಾಜ ಕಲ್ಯಾಣ ಇಲಾಖೆ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸರ್ಕಾರವನ್ನು ನಡೆಸಿದ್ದರು. ಅವರು ಆ ರೀತಿಯಾಗಿ ಹೇಳಿದರೆ, ಹೇಗೆ? ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿದ್ದರಿಂದ ಸುಮಾರು 30 ಟಿ.ಎಂ.ಸಿ.ಯಷ್ಟು ನೀರಿನ ಸಂಗ್ರಹಣೆ ಕಡಿಮೆಯಾಗುತ್ತಿದೆ. ಸಮಾನಾಂತರ ಜಲಾಶಯ ಮಾಡಬೇಕೆಂಬ ಯೋಜನೆಯು ಇದೆ. ಇದನ್ನು ನಾವೊಬ್ಬರು ಮಾಡುವುದಕ್ಕಾಗುತ್ತದೆಯೇ? ಇದು ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ಈ ಮೂರು ರಾಜ್ಯಗಳ ಸಮಸ್ಯೆಯಾಗಿದೆ. ಮೂರು ರಾಜ್ಯಗಳಲ್ಲಿ ಮೊದಲು ಒಪ್ಪಂದವಾದ ನಂತರ ಜಲಾಶಯದ ಯೋಜನೆಯನ್ನು ತೆಗೆದುಕೊಳ್ಳುವುದಕ್ಕಾಗುತ್ತದೆ. ಈ ಜಲಾಶಯ ನಿರ್ಮಾಣಕ್ಕೆ ಆರು ಸಾವಿರ ಕೋಟಿ ರೂಪಾಯಿಗಳಷ್ಟು ಹಣದ ಅವಶ್ಯಕತೆ ಇದೆ. ಈ ಯೋಜನೆಯ ಜಾರಿಯಿಂದಾಗಿ 30 ಟಿ.ಎಂ.ಸಿ. ಪ್ರಮಾಣದಷ್ಟು ನೀರು ಸಂಗ್ರಹಣೆಯಾಗುತ್ತದೆ. ಇದು inter-state problem ಇದೆ. ಇಂತಹದ್ದನ್ನು ಮಾನ್ಯ ಸದಸ್ಯರು ಹೇಳಿದರೆ ಹೇಗೆ?

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಅಲ್ಲಿ ನಾನು ಎರಡು ಬಾರಿ ಕಾಡಾ ಅಧ್ಯಕ್ಷನಾಗಿ ಎರಡು ರಾಜ್ಯಗಳ ನಿರ್ವಹಣೆ ಮಾಡಿದ್ದೇನೆ. ಈ ವಿಷಯದ ಬಗ್ಗೆ ನನಗೆ ತಿಳಿದಿದೆ. ಮಾನ್ಯ ಉಪಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಮಾಹಿತಿ ಇಲ್ಲ. ಹೀಗಾಗಿ ನಾನು ಹೇಳುತ್ತೇನೆ. ನಾನು ಈಗಾಗಲೇ ಅಲ್ಲಿನ ನೀರಾವರಿ ಸಚಿವರ ಜೊತೆಗೆ ಮಾತನಾಡಿದ್ದೇನೆ.

**ಸಭಾಪತಿಯವರು:–** ಮಾನ್ಯ ಭೋಸ್‌ರಾಜ್‌ರವರೇ, ನಿಮಗೆ ಮಾತನಾಡಲು ನಾಳೆಯ ದಿವಸ ಅವಕಾಶ ನೀಡುತ್ತೇನೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಅಲ್ಲಿನ ಮುಖ್ಯ ಇಂಜಿನಿಯರ್‌ಗಳು ಈ ವಿಚಾರದಲ್ಲಿ ಮೊದಲು ಡಿ.ಪಿ.ಆರ್. ಮಾಡಿ ತಂದು ಕೊಟ್ಟರೆ, ಸರ್ಕಾರವು 14 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. ಆದರೆ ಸರ್ಕಾರವು ಆ ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಆ ಯೋಜನೆಯ ಡಿ.ಪಿ.ಆರ್. ಮಾಡಿ, 14 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಬೋರ್ಡ್‌ನಲ್ಲಿಟ್ಟರೆ, ಅವರುಗಳು ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಮಾಡುವುದಕ್ಕಾಗುವುದಿಲ್ಲ. ಮೂರು ರಾಜ್ಯಗಳ ಒಪ್ಪಂದ ಆದಮೇಲೆ ಡಿ.ಪಿ.ಆರ್. ಮಾಡಬೇಕಾಗುತ್ತದೆ. ಇದಕ್ಕೆ ಮೂರು ರಾಜ್ಯಗಳು ಕರಾರು ಮಾಡಬೇಕಾಗುತ್ತದೆ. ಬೇರೆ ರಾಜ್ಯಗಳು ಅವರ ಪಾಲಿನ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುವುದು ತಪ್ಪು. ನಾನು ಅದನ್ನು ಒಪ್ಪುವುದಿಲ್ಲ. That's not correct. ಈಗ ಮಾನ್ಯ ಮಂತ್ರಿಗಳು ಹೇಳ್ತುತ್ತಿರುವುದು, ಡಿ.ಪಿ.ಆರ್. ಮಾಡುವಂತಹ ಯೋಜನೆ, ...

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಲಿ. ನಾನು ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತೇನೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಗಳು ಯಾವಾಗ ಬೇಕಾದರೂ ಉತ್ತರವನ್ನು ಕೊಡಲಿ. ಪರವಾಗಿಲ್ಲ. ಆದರೆ, ನನ್ನ ಮಾತುಗಳನ್ನು ಕೇಳಬೇಕು. ಸರ್ಕಾರವು ಯಾವುದೇ ರೀತಿಯಾದ ಕನೆಕ್ಷನ್‌ನ್ನು ತೆಗೆದುಕೊಳ್ಳುತ್ತಿಲ್ಲ. 1,633 ಅಡಿಯಿಂದ ಮೇಲೆ overflow ಆಗುವ ನೀರನ್ನು through flood flow canal ಉಪಯೋಗ ಮಾಡಿಕೊಳ್ಳಬೇಕು. ಆದರೆ, ಬೋರ್ಡಿನಲ್ಲಿ ಮೂರು ರಾಜ್ಯದ ಕಾರ್ಯದರ್ಶಿಗಳು ಸೇರಿದಾಗ, ನಮ್ಮ ರಾಜ್ಯ ಸರ್ಕಾರವು ಡಿ.ಪಿ.ಆರ್.ನ್ನು ಸಿದ್ಧಪಡಿಸಿ, ಇತರೆ ರಾಜ್ಯದ ಕಾರ್ಯದರ್ಶಿಗಳಿಗೆ ನೀಡಿದರೆ, ಅವರುಗಳು ಅದನ್ನು ತಮ್ಮ ರಾಜ್ಯ ಸರ್ಕಾರದ ಮುಂದೆ ಮಂಡಿಸುವುದಾಗಿ ಬೇರೆ ರಾಜ್ಯದ ಅಧಿಕಾರಿಗಳು ಹೇಳಿದ್ದಾರೆ. ಆ ಸಭೆಗೆ ನಾನೂ ಸಹ ಹಾಜರಾಗಿದ್ದೆ. ಎರಡೂ ರಾಜ್ಯಗಳ ಜೊತೆಗೆ ಮಾತನಾಡಿದ್ದೇವೆ. ಇತರ ರಾಜ್ಯ ಸರ್ಕಾರಗಳು ಈ ಯೋಜನೆಯ ಬಗ್ಗೆ ನಿರ್ಣಯ ತೆಗೆದುಕೊಂಡಾಗ, ಬೋರ್ಡ್‌ನಲ್ಲಿ ಒಪ್ಪಿಗೆ ನೀಡುವುದಾಗಿ ಹೇಳಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರವು ಈ ಯೋಜನೆಯ ಡಿ.ಪಿ.ಆರ್. ಮಾಡಿ ಅವಶ್ಯವಿರುವ 14 ಕೋಟಿ ರೂಪಾಯಿಗಳನ್ನು ಮೊದಲು ಕೊಡಬೇಕೆಂದು ಹೇಳುತ್ತಿದ್ದೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮೂರು ರಾಜ್ಯಗಳ ಒಪ್ಪಿಗೆಯಾಗದ ಹೊರತು ಡಿ.ಪಿ.ಆರ್. ಹೇಗೆ ಮಾಡುವುದಕ್ಕಾಗುತ್ತದೆ. ಹೀಗೆ ಮಾಡಿದ್ದಲ್ಲಿ, ನಾಳೆಯ ದಿವಸ ಬೇರೆ ರಾಜ್ಯಗಳ ಪಾಲಿನ ನೀರನ್ನು ಕೊಡಬೇಕಾಗುತ್ತದೆ. ಆದರೆ ಬೇರೆ ರಾಜ್ಯಗಳು ಅವರ ಪಾಲಿನ ಹಣವನ್ನು ಕೊಡಬೇಕು. ಯೋಜನೆಯ ಡಿ.ಪಿ.ಆರ್. ಗೆ ನಾವು 14 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಹೀಗಾಗಿ ಬೇರೆ ರಾಜ್ಯಗಳು ಅವರುಗಳ ಪಾಲಿನ ಹಣವನ್ನೂ ಕೂಡ ಕೊಡಬೇಕಾಗುತ್ತದೆ. ಇದು ಮೂರು ರಾಜ್ಯಗಳ ಸಮಸ್ಯೆಯಾಗಿದೆ. ಮಾನ್ಯ ಸದಸ್ಯರು ಹೇಳಿದಂತಾಗುವುದಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಗಳು ಈ ಯೋಜನೆಯ ಹಿನ್ನೆಲೆ ಹಾಗೂ ವಿವರಗಳನ್ನು ತಿಳಿದುಕೊಳ್ಳಬೇಕು. ಬೇರೆ ರಾಜ್ಯಗಳು ಒಪ್ಪಿಗೆ ನೀಡುವ ಪ್ರಶ್ನೆಯೇ ಬರುವುದಿಲ್ಲ. ಯೋಜನೆಯ ಡಿ.ಪಿ.ಆರ್.ನ್ನು ಸಿದ್ಧಪಡಿಸಿ, ಮಂಡಳಿಯಲ್ಲಿ ಮಂಡಿಸಿದಾಗ, ಬೇರೆ ರಾಜ್ಯಗಳು...

**ಸಭಾಪತಿಯವರು:–** ಮಾನ್ಯ ಭೋಸ್‌ರಾಜ್‌ರವರೇ, ಇದು ಪ್ರಶ್ನೋತ್ತರ ಅಲ್ಲ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ನಾವು ಯಾವ ರೀತಿಯ ನಿರ್ಣಯ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ನಾವು ಬೇರೆ ರಾಜ್ಯಗಳಿಗೆ ತೋರಿಸಬೇಕಾಗುತ್ತದೆ. ಈ ಯೋಜನೆಯಿಂದಾಗಿ ಮೂರು ರಾಜ್ಯಗಳಿಗೆ ಉಪಯೋಗವಾಗುತ್ತದೆ. ಈ ಯೋಜನೆಯಲ್ಲಿ 22 ಟಿ.ಎಂ.ಸಿ.ಯಷ್ಟು ನೀರು ನಮ್ಮ ರಾಜ್ಯಕ್ಕೆ ಹಾಗೂ 11 ಟಿ.ಎಂ.ಸಿ.ಯಷ್ಟು ನೀರು ಬೇರೆ ರಾಜ್ಯಗಳಿಗೆ ದೊರೆಯುತ್ತದೆ. ಈ ಯೋಜನೆಗೆ ಆರೂವರೆ ಸಾವಿರ ರೂಪಾಯಿಗಳಷ್ಟು ಹಣವನ್ನು ನೀಡಲು ಬೇರೆ ರಾಜ್ಯದವರು ತಯಾರಿದ್ದಾರೆ. ಈ ಹಿಂದೆ ಶ್ರೀ ಚಂದ್ರಬಾಬು ನಾಯ್ಡುರವರ ಸರ್ಕಾರವು ಅಸ್ತಿತ್ವದಲ್ಲಿದ್ದಾಗ, ನಾವು ಅವರೊಂದಿಗೆ ಮಾತನಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ರಾಯಚೂರು ಜಿಲ್ಲೆಗೆ ಭೇಟಿ ನೀಡಿದಾಗ, ಸ್ಟೇಡಿಯಂನಲ್ಲಿ ಘೋಷಣೆ ಮಾಡಿದ್ದಾರೆ. ಬೇರೆ ಮಾನ್ಯ ಸದಸ್ಯರು ಹೇಳಿದ್ದಾರೆಂದು ಮಾನ್ಯ ಉಪಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಆದರೆ ಅವರು ಈ ಯೋಜನೆಯ ಹಿನ್ನೆಲೆಯಲ್ಲಿ ತಿಳಿದುಕೊಳ್ಳಬೇಕು. ಮಾನ್ಯ ಉಪಮುಖ್ಯಮಂತ್ರಿಗಳು ಈ ವಿಷಯದ ಬಗ್ಗೆ ಸಭೆಯೊಂದನ್ನು ಆಯೋಜಿಸಿ, ನಮ್ಮ ಭಾಗದ ಜನ ಪ್ರತಿನಿಧಿಗಳನ್ನು ಸಭೆಗೆ ಕರೆಯಬೇಕು. ಉಪಮುಖ್ಯಮಂತ್ರಿಗಳಿಗೆ ಯಾರೋ ತಪ್ಪು ಕಲ್ಪನೆಯನ್ನು ನೀಡಿದ್ದಾರೆ. ಆಗ ನಾವು ಮಾತನಾಡುತ್ತೇವೆ.

**ಸಭಾಪತಿಯವರು:–** ಸಂವಿಧಾನದ ಮೇಲೆ ಚರ್ಚೆಯನ್ನು ತೆಗೆದುಕೊಳ್ಳಲು ಇನ್ನು ಹತ್ತು ನಿಮಿಷಗಳ ಕಾಲಾವಕಾಶವಿದೆ. ಆ ನಂತರದಲ್ಲಿ ಪ್ರಶ್ನೋತ್ತರವನ್ನು ತೆಗೆದುಕೊಳ್ಳಲಾಗುವುದು.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನಮಗೆ ಮಾತನಾಡಲು ಅವಕಾಶ ನೀಡಿ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಅಲ್ಲಿನ *RDS* (Rajolibanda Diversion Scheme) canal... ನನಗೆ ಮಾತನಾಡಲು ಅವಕಾಶ ಕೊಡಬೇಕು.

**ಶ್ರೀ ಎಂ.ಕೆ.ಪ್ರಾಣೇಶ್:–** ನಾನು ಸಭಾಪತಿಯವರೊಂದಿಗೆ ಮಾತನಾಡುತ್ತಿದ್ದೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಬೇರೆ ಸದಸ್ಯರು ಇದರಲ್ಲಿ intervene ಆಗದೇ ಇದ್ದರೆ ನಾನು ಮಾತನಾಡಬಹುದು.

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಕಾಲಾವಕಾಶವನ್ನು ನೀಡಬೇಕು ಹಾಗೂ ಸಮಯವನ್ನು ನಿಗದಿಪಡಿಸಬೇಕು.

**ಸಭಾಪತಿಯವರು:–** ತಮಗೆ ಮಾತನಾಡಲು ಅವಕಾಶವನ್ನು ನೀಡಲಾಗುವುದು.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ಅಲ್ಲಿ *RDS* (Rajolibanda Diversion Scheme) ಎಂಬುದಾಗಿ ಇದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನೀವು ಪುನಃ, ಪುನಃ ಅದೇ ವಿಚಾರವನ್ನು ಹೇಳುತ್ತೀರಿ. ಅದಕ್ಕೆ ಆಡಳಿತ ಪಕ್ಷದವರು ಎದ್ದು ನಿಲ್ಲುತ್ತಾರೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಮಾನ್ಯ ಸಭಾಪತಿಯವರೇ, ನಾನು ನಿಮಗೆ ಹೇಳುತ್ತಿದ್ದೇನೆ. ಅದು damage ಆಗಿದೆ.

**(ಮುಂದು)**

(155)/4–3–2020/4–40/ಎಲ್‌ಎಂ/ವಿಕೆ

**ಶ್ರೀ ಎನ್.ಎಸ್.ಭೋಸ್‌ರಾಜು**(ಮುಂದು):

ಮಾನ್ಯ ಸಭಾಪತಿಗಳೆ, ಅದು damage ಆಗಿದೆ. ಅದನ್ನು ಸರಿಪಡಿಸದೆ ಹೋದರೆ ಮುಂದಿನ ದಿನಗಳಲ್ಲಿ ಅಲ್ಲಿನ ನೀರಾವರಿ ಪ್ರದೇಶದಲ್ಲಿ ವ್ಯವಸಾಯ ಮಾಡಲು ಆಗುವುದಿಲ್ಲ. ಈ ಕೆಲಸವನ್ನು ತೆಲಂಗಾಣ ರಾಜ್ಯದವರು ಮತ್ತು ಕರ್ನಾಟಕ ರಾಜ್ಯದವರು ಸೇರಿ ಮಾಡಬೇಕಾಗುತ್ತದೆ. ಹಿಂದಿನ ತೆಲಂಗಾಣದ ಮುಖ್ಯಮಂತ್ರಿಗಳನ್ನು ಕರೆಯಿಸಿ ಮಾತನಾಡಿದ್ದಾರೆ, ಮೊದಲು ನಾವು ಖರ್ಚು ಮಾಡಬೇಕಾಗುತ್ತದೆ. ನಂತರ ಅವರು reimburse ಮಾಡುತ್ತಾರೆ. ಈ ಕೆಲಸವನ್ನು ಕೇಂದ್ರದಿಂದ approval ಮಾಡಿಸಿಕೊಂಡು ನಮ್ಮ ರಾಜ್ಯದವರು ಮಾಡಬೇಕಾಗುತ್ತದೆ. ಡ್ಯಾಂ ಸರಿ ಮಾಡದಿದ್ದರೆ ಅದು ಒಡೆದು ಕರ್ನಾಟಕ ಮತ್ತು ತೆಲಂಗಾಣ ಎರಡು ರಾಜ್ಯದ ರೈತರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆ ಅನೇಕ ಬಾರಿ ಮಾಧ್ಯಮದವರು ಬರೆದಿದ್ದಾರೆ. ಅದರ ಕಡೆಗೆ ಯಾರು ಗಮನ ಹರಿಸುತ್ತಿಲ್ಲ.

ರಾಯಚೂರು ಜಿಲ್ಲೆಯಲ್ಲಿ 60 ಆಸ್ಪತ್ರೆಗಳಿದ್ದು, ಅಲ್ಲಿ 19 ಜನ ವೈದ್ಯರ ಕೊರತೆ ಇದೆ. ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಶಿಕ್ಷಣ, ಆರೋಗ್ಯ ಮತ್ತು ಕೆಲವು ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ನೇರವಾಗಿ ಕ್ರಮ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ಈ ವಿಷಯದಲ್ಲಿ ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸುತ್ತೇನೆ, ಕೇವಲ ಕಲ್ಯಾಣ ಕರ್ನಾಟಕ ಎಂದು ಹೆಸರು ಇಟ್ಟರೆ ಆ ಭಾಗಕ್ಕೆ ಏನು ಮಾಡಿದ ಹಾಗೆ ಆಗುವುದಿಲ್ಲ. ಆ ಭಾಗದಲ್ಲಿ ಯಾವ ಯೋಜನೆಗಳನ್ನು ತರುತ್ತಾರೆ; ಅಭಿವೃದ್ಧಿಗೆ, ಶಿಕ್ಷಣಕ್ಕೆ ಮತ್ತು ಆರೋಗ್ಯಕ್ಕೆ ಎಷ್ಟು ಅನುದಾನವನ್ನು ಕೊಡುತ್ತಾರೆ ಎನ್ನುವುದು ಮುಖ್ಯವಾಗುತ್ತದೆ. 2000 ಕೋಟಿ ರೂ.ಗಳನ್ನು ಆ ಭಾಗದ ಅಭಿವೃದ್ಧಿ ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರಂತೆ ಈ ಬಜೆಟ್‌ನಲ್ಲಿ ಆ ಹಣವನ್ನು ಘೋಷಣೆ ಮಾಡಬೇಕು. ಮುಂದಿನ ದಿನಗಳಲ್ಲಿ ಆ ಭಾಗದ ಅಭಿವೃದ್ಧಿಗೆ ಸರ್ಕಾರ ಪ್ರಯತ್ನ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಸಭಾಪತಿಯವರು:–** ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆ ನಾಳೆಯು ಮುಂದುವರೆಯುತ್ತದೆ. ಈಗ ಭಾರತ ಸಂವಿಧಾನದ ಮೇಲಿನ ವಿಶೇಷ ಚರ್ಚೆ ತೆಗೆದುಕೊಂಡು ನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಗಳೆ, ಮಾತನಾಡಲು ನಮಗೂ ಅವಕಾಶ ಕೊಡಿ.

**ಸಭಾಪತಿಯವರು:–** ನಾವು ನಾಳೆ ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ತಾವು ಮೊದಲು ಸಂವಿಧಾನ ಮೇಲಿನ ಚರ್ಚೆಯ ಪ್ರಸ್ತಾವನೆಯನ್ನು ಮಾಡಿ. ನಂತರ ಪ್ರಶ್ನೋತ್ತರ ಕಲಾಪವನ್ನು ತೆಗೆದುಕೊಳ್ಳಬಹುದು.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಗಳೆ, ತಾವು ಆಡಳಿತ ಪಕ್ಷದವರು ಹೇಳುವುದನ್ನೇ ಕೇಳಿ, ಅವರು ಹೇಳಿದ ಹಾಗೆಯೇ ಮಾಡಿ; ನಮಗೆ ಮಾತ್ರ ಮಾತನಾಡಲು ಅವಕಾಶವನ್ನೇ ಕೊಡಬೇಡಿ.

**5. ಭಾರತ ಸಂವಿಧಾನದ ಮೇಲಿನ ವಿಶೇಷ ಚರ್ಚೆಯ ಪ್ರಸ್ತಾವನೆ**

**ಸಭಾಪತಿಯವರು:–** ಸದನದಲ್ಲಿ ಉಪಸ್ಥಿತರಿರುವ ಮಾನ್ಯ ಉಪ ಸಭಾಪತಿಯವರು, ಮಾನ್ಯ ಸಭಾನಾಯಕರು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಚಿವರುಗಳು ಮತ್ತು ಮೇಲ್ಮನೆಯ ಎಲ್ಲಾ ಗೌರವಾನ್ವಿತ ಶಾಸಕರುಗಳು . . .

(ಲಗತ್ತಿಸಲಾಗಿದೆ)

(ಮುಂದು)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(156+157)04–03–2020(4–50+5–00ಬಿಎಸ್‌ಡಿ/ಬಿಎನ್‌ಎಸ್

**6. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಸಭಾಪತಿಯವರು:–** ಮಾನ್ಯ ಪ್ರದೀಪ್ ಶೆಟ್ಟರ್ ರವರು ಪ್ರಶ್ನೆ ಕೇಳಲು ಸದನದಲ್ಲಿ ಇಲ್ಲ ಹಾಗೂ ಮಾನ್ಯ ಟಿ.ಎ. ಶರವಣ ರವರು ಸದನದಲ್ಲಿ ಇಲ್ಲ, ನಂತರ ಶ್ರೀ ತಿಪ್ಪಣ್ಣ ಕಮಕನೂರ ಅವರೇ, ತಮ್ಮ ಪ್ರಶ್ನೆಯನ್ನು ಕೇಳಿ.

**ಪ್ರಶ್ನೆ ಸಂಖ್ಯೆ: 289**
**(ಉತ್ತರದ ಪ್ರತಿ ಲಗತ್ತಿಸಿದೆ.)**

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೇ? ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿ ಕಾಗಿಣಾ ಸೇತುವೆಯು ಪ್ರವಾಹದಿಂದ ಮುಳುಗಿ ಸಂಚಾರ......

**ಸಭಾಪತಿಯವರು:–** ಇಂತಹ ಸಂಖ್ಯೆಯ ಪ್ರಶ್ನೆಯನ್ನು ಕೇಳುತ್ತೇನೆ ಎಂದು ಹೇಳಿ.

**ಶ್ರೀ ಗೋವಿಂದ ಎಂ. ಕಾರಜೋಳ:** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹೊಸದಾಗಿ ಅನೇಕ ಸದಸ್ಯರುಗಳು ಸದನಕ್ಕೆ ಆಗಮಿಸಿದ್ದು, ಅವರಿಗೆ proper training ಇರುವುದಿಲ್ಲ. ನಮ್ಮಲ್ಲಿ ಒಂದು ಪದ್ಧತಿ ಇದ್ದು, ಹೊಸದಾಗಿ ಬಂದಿರುವ ಸದಸ್ಯರುಗಳಿಗೆ ಎರಡು–ಮೂರು ದಿವಸ ತರಬೇತಿ ಕೊಡುವ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಹೊಸ ಸದಸ್ಯರುಗಳಿಗೆ ಪ್ರಶ್ನೆ ಕೇಳುವ ವಿಧಾನ ತಿಳಿದಿರುವುದಿಲ್ಲ. ಆದ್ದರಿಂದ ತರಬೇತಿ ಕೊಡುವ ಬಗ್ಗೆ ವಿಚಾರ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

**ಸಭಾಪತಿಯವರು:–** ಇದೇ training.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೇ? ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಮಳಖೇಡದಲ್ಲಿ ಕಾಗಿಣಾ ಸೇತುವೆಯು ಪ್ರವಾಹದಿಂದ ಮುಳುಗಿ ಸಂಚಾರ ಸ್ಥಗಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಹೊಸ ಸೇತುವೆ ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿದೆಯೇ; ನಿರ್ಧರಿಸಿದ್ದಲ್ಲಿ, ಹೊಸ ಸೇತುವೆ ನಿರ್ಮಾಣದ ಸಂಪೂರ್ಣ ವಿವರಗಳನ್ನು ನೀಡುವುದು;

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸದಸ್ಯರು ಪೂರಕ ಪ್ರಶ್ನೆಗಳನ್ನು ಕೇಳಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ನಾನು ಉತ್ತರಗಳನ್ನು ನೀಡಿದ್ದು, ಉತ್ತರಗಳು ಮಾನ್ಯ ಸದಸ್ಯರಿಗೆ satisfaction ಆಗದಿದ್ದರೆ supplementary question ಗಳನ್ನು ಕೇಳಬಹುದು. ಅವರು ನಾನು ನೀಡಿರುವ ಉತ್ತರವನ್ನು ಓದಿಕೊಳ್ಳಬಹುದು.

**ಶ್ರೀ ತಿಪ್ಪಣ್ಣ ಕಮಕನೂರ:–** ಹೊಸ ಸೇತುವೆ ಮಂಜೂರಾಗಿದ್ದರೆ ಕಾಮಗಾರಿ ಯಾವ ಹಂತದಲ್ಲಿದೆ?

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಕಾಮಗಾರಿ ಯಾವ ಹಂತದಲ್ಲಿದೆ ಎಂಬ ಪ್ರಶ್ನೆಗೆ ' ಇ ' ದಲ್ಲಿ ಉತ್ತರವನ್ನು ಹಾಗೂ ಇದಕ್ಕೆ ಸಂಬಂಧಪಟ್ಟ technical details ಅನ್ನು ಸಹ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಪೂರ್ಣ ಮಾಹಿತಿಯನ್ನು ಉತ್ತರದಲ್ಲಿ ನೋಡಬಹುದು.

**ಶ್ರೀ ತಿಪ್ಪಣ್ಣ ಕಮಕನೂರ:–** ಮಾನ್ಯ ಸಭಾಪತಿಯವರೇ, ಕಾಗಿಣಾ ನದಿಯು ಗುಲ್ಬರ್ಗದಿಂದ ಮಳಖೇಡದ ಮುಖೇನ ಸೇಡಂಗೆ ಹೋಗುತ್ತದೆ. ಕಾಗಿಣಾ ಸೇತುವೆಯು ಬಹಳ ಹಳೆಯದಾಗಿದ್ದು, ಆ ಸೇತುವೆಯ ಮೇಲೆ ಒಂದು ವಾಹನವನ್ನು ನಿಲ್ಲಿಸಿ ಮತ್ತೊಂದು ವಾಹನವನ್ನು ಬಿಡುವ ಪರಿಸ್ಥಿತಿ ಇದೆ. ಇದಲ್ಲದೇ ಜನದಟ್ಟಣೆ ಸಹ ಇದೆ. ಪ್ರವಾಹ ಬಂದಾಗ ಒಂದೆರೆಡು ದಿನಗಳು ಓಡಾಡಲು ತೊಂದರೆಯಾಗುತ್ತಿದೆ. ಆದ್ದರಿಂದ ತಕ್ಷಣ ಆ ಕಾಮಗಾರಿಯನ್ನು ಪ್ರಾರಂಭ ಮಾಡಬೇಕು, ಟೆಂಡರ್ ಪ್ರಕ್ರಿಯೆ ಸಹ ಪೂರೈಸಿದ್ದು ಕೆಲಸ ಮಾತ್ರ ನಿಧಾನ ಗತಿಯಲ್ಲಿದ್ದು, ತಕ್ಷಣ ಸರ್ಕಾರವು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದ್ದು, ರೂ.26 ಕೋಟಿಗಳಿಗೆ ಟೆಂಡರ್ ಕೊಟ್ಟಿದ್ದು, ಸೆಪ್ಟಂಬರ್‌ನೊಳಗೆ ಕೆಲಸ ಮುಕ್ತಾಯವಾಗಿದ್ದು, ಈ ಅವಧಿಯೊಳಗೆ ಕೆಲಸವನ್ನು ಮುಕ್ತಾಯಗೊಳಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 234**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ನೀಡಿದ್ದು, ಈ ಪ್ರಶ್ನೆಯನ್ನು ಸದನದಲ್ಲಿ ನಾಲ್ಕೈದು ವರ್ಷಗಳಲ್ಲಿ ಸುಮಾರು ಏಳೆಂಟು ಬಾರಿ ಪ್ರಶ್ನಿಸಿದ್ದೇನೆ. 2013 ರಲ್ಲಿ ಈ ಕಾಮಗಾರಿ M/s. DNR Company ಗೆ ಮಂಜೂರಾಗಿತ್ತು. ಅವರು ಅರ್ಧಂಬರ್ಧ ಕಾಮಗಾರಿ ಕೈಗೊಂಡು 2015 ರಲ್ಲಿ ಕೆಲಸ ಕೈಬಿಟ್ಟು, ಇಲ್ಲಿಯವರೆಗೂ ಆ ರಸ್ತೆಯನ್ನು maintenance ಮಾಡಿಲ್ಲ. ಪ್ರಾರಂಭದಲ್ಲಿ ದೇವದುರ್ಗದಿಂದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರಾಯಚೂರಿಗೆ ಈ ರಸ್ತೆಯಲ್ಲಿ private bus ಗಳು ಹೋಗುತ್ತಿದ್ದವು. ಆ ತಾಲ್ಲೂಕಿನಲ್ಲಿ ಯಾವುದೇ ಸರ್ಕಾರಿ ಬಸ್ಸುಗಳು ಇರಲಿಲ್ಲ. ಇಂತಹ ಪ್ರಮುಖ ರಸ್ತೆಗಳ ಪರಿಸ್ಥಿತಿ ಈಗಾಗಿದ್ದು, ಇದರ ಬಗ್ಗೆ ಅನೇಕ ಬಾರಿ ಪ್ರಶ್ನೆಗಳನ್ನು ಕೇಳಿರುವುದರಿಂದ ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ, ಇದನ್ನು sanction ಮಾಡಿ ಟೆಂಡರ್ ಕರೆಯುತ್ತೇವೆ ಎಂದು ಹೇಳುತ್ತಾರೆ. ಯಾವಾಗ ಟೆಂಡರ್ ಕರೆಯುತ್ತಾರೆ ಎಂಬುದು ಪ್ರಮುಖವಾಗಿದೆ. ಏಕೆಂದರೆ ಮೂರರಿಂದ ಆರು ಅಡಿ ಆಳದವರೆಗೂ ಗುಂಡಿಗಳು ಬಿದ್ದಿವೆ. ಲೋಕೋಪಯೋಗಿ ಇಲಾಖೆಯವರನ್ನು ಗುಂಡಿಗಳನ್ನು ಮುಚ್ಚುವ ಬಗ್ಗೆ ಕೇಳಿದರೆ M/s. DNR Company ಗೆ ಆಗಿದ್ದು, ಅದು ಕ್ಲೋಸ್ ಆಗುವವರೆಗೂ ಲೋಕೋಪಯೋಗಿ ಇಲಾಖೆ maintenance ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದಿಂದ ರಸ್ತೆಗೆ ಹಣ ಮಂಜೂರು ಮಾಡಿದ್ದು, maintenance ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಪ್ರತಿ ದಿನ ಬೆಳಿಗ್ಗೆ ದೇವದುರ್ಗದಿಂದ ಗೂಗಲ್ ಮತ್ತು ಸಂಕೇಶ್ವರಹಾಳಕ್ಕೆ ಮಕ್ಕಳು ಶಾಲೆಗೆ ಹೋಗುತ್ತಾರೆ. ಆ contractor ಅನ್ನು blacklist ಗೆ ಸೇರಿಸುವ ಕೆಲಸವನ್ನು ಬಿಟ್ಟು, rescind ಮಾಡಿ ಹೊಸ ಕೆಲಸಗಳನ್ನು ಅವರಿಗೆ ಕೊಟ್ಟಿದ್ದಾರೆ. ಅವರ ವಿರುದ್ಧ ಯಾವ ಕ್ರಮಗಳನ್ನು ತೆಗೆದುಕೊಂಡಿಲ್ಲ. ಇದನ್ನು ಜನರು ಎಷ್ಟು ದಿವಸ ಎಂದು ಸಹಿಸುತ್ತಾರೆ? ಹತ್ತಾರು ಬಾರಿ ಪ್ರಶ್ನೆಗಳನ್ನು ಕೇಳಿದರೂ ಇದೇ ಉತ್ತರವನ್ನು ಕೊಡುತ್ತಾರೆ. ಪ್ರಶ್ನೆ ಕೇಳುವುದಕ್ಕೆ ನಮಗೂ ಒಂದು limit ಇಲ್ಲವೇ? ನಾವು ಪ್ರಶ್ನೆಗಳನ್ನು ಕೇಳಬೇಕೋ ಅಥವಾ ಹಾಗೆ ಬಿಟ್ಟುಬಿಡಬೇಕೋ?

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಈಗಾಗಲೇ 57.9 ಕಿಲೋಮೀಟರ್ ಉದ್ದದ ರಸ್ತೆಯನ್ನು ಪೂರ್ಣಗೊಳಿಸಿದ್ದು, ಮೊದಲನೆಯ Agency ಏನಿತ್ತು, ಅವರು ಕೆಲಸ ಮಾಡದೇ ಇರುವುದರಿಂದ ಟೆಂಡರ್ ರದ್ದು ಮಾಡಿ, ಈಗಾಗಲೇ ಟೆಂಡರ್ ಕರೆದಿದ್ದೇವೆ. ಆ ಟೆಂಡರ್ ಪ್ರಕ್ರಿಯೆಯ Notification copy ಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಟೆಂಡರ್ ಕರೆಯಲು ನೋಡುತ್ತೇವೆ ಅಥವಾ ಮುಂದಕ್ಕೆ ಕರೆಯುತ್ತೇವೆ ಎಂದೇನೂ ಇಲ್ಲ. ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಪ್ರತಿಯನ್ನು ಕಳುಹಿಸಿಕೊಡುತ್ತೇನೆ. ಮೂರು ಕೆಲಸಗಳ ಬಗ್ಗೆ separate ಆಗಿ ಟೆಂಡರ್ ಕರೆಯಲು ಸೂಚಿಸಿದ್ದು, ಅದರಂತೆ ಮೂರು ಕೆಲಸಗಳ ಬಗ್ಗೆ ಟೆಂಡರ್ ಕರೆದಿದ್ದಾರೆ. ಪ್ರತಿಗಳನ್ನು ಕಳುಹಿಸಿಕೊಡುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಮಾನ್ಯ ಸಭಾಪತಿಯವರೇ, ಮೊನ್ನೆ–ನಿನ್ನೆವರೆಗೂ ಟೆಂಡರ್ ಕರೆದಿರಲಿಲ್ಲ. ನಾನು ಪ್ರಶ್ನೆ ಕೇಳಿದ ನಂತರ ಟೆಂಡರ್ ಕರೆದಿದ್ದಾರೆಯೋ ಎಂದು ಗೊತ್ತಿಲ್ಲ. ನಾನು ಚಪ್ಪಲಿ ಸವೆಯುವವರೆಗೂ ಲೋಕೋಪಯೋಗಿ ಇಲಾಖೆಗೆ ತಿರುಗಾಡಿದ್ದೇನೆ. Rescind ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ Tender Notification ಪ್ರತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತಿದ್ದೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:–** ಅಲ್ಲಿ ಕೆಲಸ ನಿಂತ ನಂತರ ನಾನು ಲೋಕೋಪಯೋಗಿ ಇಲಾಖೆಯ Secretary ಮತ್ತು Additional Chief Secretary ರವರುಗಳನ್ನು ಭೇಟಿ ಮಾಡಿದ್ದೇನೆ. ಅವರು rescind ಮಾಡುವುದಕ್ಕೆ ಮೂರು ವರ್ಷಗಳನ್ನು ತೆಗೆದುಕೊಂಡರು. ಅವರು ಮೂರು ಅಥವಾ ಆರು ವರ್ಷಗಳನ್ನು ತೆಗೆದುಕೊಳ್ಳಲಿ. ಆದರೆ ಅಲ್ಲಿನ ಹುಡುಗರ ಗತಿ ಏನು? ಮುಂಜಾನೆ ಶಾಲಾ–ಕಾಲೇಜುಗಳಿಗೆ 20 ಕಿಲೋಮೀಟರ್ ಪ್ರಯಾಣ ಮಾಡಬೇಕು. ಪ್ರತಿ ದಿನ ಜಗಳವಾಡುತ್ತಾರೆ. ನಾನು ಮೊನ್ನೆ ಲೋಕೋಪಯೋಗಿ ಇಲಾಖೆಗೆ ಹೋಗಿದ್ದಾಗ ಟೆಂಡರ್ ಕರೆದಿಲ್ಲ, ಎಲ್ಲವೂ ತಯಾರಿದ್ದು, ಟೆಂಡರ್ ಕರೆಯುತ್ತೇವೆ ಎಂದು ತಿಳಿಸಿದ್ದಾರೆ. 15 ದಿವಸಗಳ ಹಿಂದೆ PWD Department's Secretary Office ಗೂ ಹೋಗಿದ್ದೇನೆ. ಆಗಲೂ ಟೆಂಡರ್ ಕರೆದಿಲ್ಲ. ನನ್ನ ಪ್ರಶ್ನೆ ಹೋದ ಕೂಡಲೇ ಟೆಂಡರ್ ಕರೆದಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಅವರ ಪ್ರಶ್ನೆ ತಲುಪಿ ಬೆಳಗಾಗುವುದರೊಳಗೆ ಹೇಗೆ ಟೆಂಡರ್ ಕರೆಯಲು ಸಾಧ್ಯ? ಆ ರೀತಿ ಇರುವುದಿಲ್ಲ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದ್ದು, ಇಡೀ ರಾಜ್ಯದಲ್ಲಿ ದೇವದುರ್ಗ ತಾಲ್ಲೂಕು ಬಹಳ ಹಿಂದುಳಿದಿದ್ದು, ಅಲ್ಲಿ ತೊಂದರೆಯಾಗಿರುವ ಬಗ್ಗೆ ನನ್ನ ಗಮನಕ್ಕೂ ಬಂದಿದ್ದು, ಆ ಕಾರಣದಿಂದ ಅದನ್ನು expedite ಮಾಡಿ ಕರೆದಿದ್ದೇವೆ. ಮಾನ್ಯ ಸದಸ್ಯರ ನಿರೀಕ್ಷೆಯಂತೆ ಆ ಕೆಲಸವನ್ನು ಮುಗಿಸಿಕೊಡುತ್ತೇನೆ.

(ಮುಂದು)

(158)/04.03.2020/5.10/ಹೆಚ್‌ವಿ–ಕೆಎಸ್

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:228**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಮೀನುಗಾರಿಕೆ ಇಲಾಖೆಯ ವಿವಿಧ ವೃಂದದ ಅಧಿಕಾರಿಗಳಿಗೆ ನೀಡಲಾಗುತ್ತಿರುವ ವೇತನ ಇತರೆ ರಾಜ್ಯಗಳಿಗಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ನನ್ನ ಪ್ರಶ್ನೆಗೆ, ಮಾನ್ಯ ಸಚಿವರು 'ಕರ್ನಾಟಕ ರಾಜ್ಯ ಮತ್ತು ವಿವಿಧ ರಾಜ್ಯಗಳಲ್ಲಿ ಪ್ರತಿಯೊಂದು ಹುದ್ದೆಗಳ ಪದನಾಮ, ವಿದ್ಯಾರ್ಹತೆ ಕರ್ತವ್ಯ ಮತ್ತು ಜವಾಬ್ದಾರಿ, ಕಾರ್ಯವ್ಯಾಪ್ತಿ ಹಾಗೂ ನೇಮಕಾತಿ ವಿಧಾನಗಳು ಬೇರೆಬೇರೆಯಾಗಿರುವುದರಿಂದ ಯಾವುದೇ ರಾಜ್ಯ ಸರ್ಕಾರಗಳು ನೀಡುವ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ವೇತನವನ್ನು ಇತರೆ ರಾಜ್ಯಗಳಿಗೆ ತುಲನೆ ಮಾಡುವುದು ಸಮಂಜಸವಲ್ಲ' ಎನ್ನುವ ಉತ್ತರವನ್ನು ನೀಡಿದ್ದಾರೆ. ಮತ್ಸ್ಯೋದ್ಯಮ ಎನ್ನುವುದು ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದಾಗಿದೆ. ಇಲಾಖೆಯಲ್ಲಿ ಪೂರ್ಣ ಪ್ರಮಾಣದ ಅಧಿಕಾರಿಗಳು ಇಲ್ಲದೇ ಹೋದರೆ, ಮತ್ಸ್ಯೋದ್ಯಮ ಕೃಷಿಗೆ ಯಾವ ರೀತಿಯಲ್ಲಿ ಅನಾನೂಕೂಲವಾಗುತ್ತದೆ ಎನ್ನುವುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮತ್ಸ್ಯೋದ್ಯಮ ಎನ್ನುವುದು ಉದ್ಯೋಗ ಇಲ್ಲದೇ ಇರುವವರಿಗೆ ಉದ್ಯೋಗವನ್ನು ಕಲ್ಪಿಸಿ ಕೊಡುವಂತಹ ಕ್ಷೇತ್ರವಾಗಿದೆ. ಮತ್ಸ್ಯೋದ್ಯಮ ಎನ್ನುವುದು ಒಳನಾಡಿನ ಕರಾವಳಿ ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ರಾಜ್ಯದಲ್ಲಿ ಇರುವಂತಹ ಎಲ್ಲ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಮತ್ಸ್ಯೋದ್ಯಮವನ್ನು ಅತ್ಯುತ್ತಮ ಕೃಷಿಯನ್ನಾಗಿ ಪರಿವರ್ತನೆ ಮಾಡಲು ಅನುಕೂಲವಾಗಬೇಕು ಎನ್ನುವ ವಿಚಾರದ ಹಿನ್ನೆಲೆಯಲ್ಲಿ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ. ತಾಲ್ಲೂಕು ಮಟ್ಟದಲ್ಲಿ ಮತ್ಸ್ಯೋದ್ಯಮ ಕೃಷಿಗೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ಸಬ್ಸಿಡಿಯ ವಿತರಣೆ ಗಹನವಾಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, ವೇತನ ಶ್ರೇಣಿ ಕಡಿಮೆ ಇದ್ದಲ್ಲಿ ವೇತನ ಶ್ರೇಣಿ ಪರಿಷ್ಕರಣೆ ಮಾಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು ಹಾಗೂ ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುವುದು ಎನ್ನುವ ನನ್ನ ಮೂರನೆಯ ಪ್ರಶ್ನೆಗೆ ಮಾನ್ಯ ಸಚಿವರು 'ಅನ್ವಯಿಸುವುದಿಲ್ಲ' ಎನ್ನುವ ಉತ್ತರವನ್ನು ನೀಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ತಾಲ್ಲೂಕು ಅಧಿಕಾರಿಗಳನ್ನು ಯಾವ ಹೆಸರಿನಿಂದ ಕರೆಯಬೇಕೆನ್ನುವುದು ನಮಗೆ ಅರ್ಥವಾಗುತ್ತಿಲ್ಲ. ತಾಲ್ಲೂಕು ಅಧಿಕಾರಿಗಳಿಗೂ ಮತ್ತು ಜಿಲ್ಲಾ ಅಧಿಕಾರಿಗಳು ಒಂದೇ ಗ್ರೇಡ್ ಇದೆ. ಇದನ್ನು ಯಾವ ರೀತಿಯಲ್ಲಿ ಬೇರ್ಪಡಿಸಲಾಗಿದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕಾಗಿದೆ. ಮೀನುಗಾರಿಕೆ ಇಲಾಖೆಯಲ್ಲಿ ಸಹಾಯಕರ ಗ್ರೇಡ್–2 ವೃಂದ 126, ಸಹಾಯಕರ ಗ್ರೇಡ್–1 ವೃಂದ 33 ಮಂಜೂರಾಗಿದೆ....... ಹೀಗೆ ಹಲವಾರು ಮಾಹಿತಿಯನ್ನು ನೀಡಿದ್ದಾರೆ. ಆದರೆ ಇವುಗಳು ಪರಿಪಕ್ವವಾಗಿ ವಿಂಗಡಣೆಯಾಗಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟನೆ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, 'ಮೀನುಗಾರಿಕೆ ಇಲಾಖೆಯ ವಿವಿಧ ವೃಂದದ ಅಧಿಕಾರಿಗಳಿಗೆ ನೀಡಲಾಗುತ್ತಿರುವ ವೇತನ ಇತರೆ ರಾಜ್ಯಗಳಿಗಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಾನು ಸ್ಪಷ್ಟವಾದ ಉತ್ತರವನ್ನು ನೀಡಿದ್ದೇನೆ. ಕಾಲಕಾಲಕ್ಕೆ ತಕ್ಕಂತೆ ವೇತನ ಆಯೋಗವು ಮಾಡುವ ಶಿಫಾರಸ್ಸಿನಂತೆ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳ ವೇತನವನ್ನು ನಿಗದಿಪಡಿಸಲಾಗಿರುತ್ತದೆ. ಮೀನುಗಾರಿಕೆ ಇಲಾಖೆಯ ತಾಂತ್ರಿಕ ವರ್ಗಗಳು ಮತ್ತು ಅವುಗಳ ಹೆಚ್ಚುವರಿ ಕಾರ್ಯಕ್ಷೇತ್ರಕ್ಕೆ ಬರುವಂತಹ ಕೃಷಿ ಇಲಾಖೆ ಮತ್ತು ತೋಟಗಾರಿಕೆಯಲ್ಲಿರುವ ಅಧಿಕಾರಿಗಳಿಗೆ ಸಮಾನ ವೇತನವನ್ನು

ಕೊಡುವುದಕ್ಕೆ ಸಾಧ್ಯವಿಲ್ಲವೇ ಎನ್ನುವ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಆದರೆ, ವೇತನ ಆಯೋಗವು ನೀಡಿರುವ ನಿಗದಿತಗೊಳಿಸಿರುವ ರೂಪುರೇಖೆಗಳು ಮತ್ತು ಮಾನದಂಡಗಳ ಆಧಾರದ ಮೇಲೆ ನಾವು ಸಿಬ್ಬಂದಿಗಳಿಗೆ ವೇತನವನ್ನು ಕೊಡುವಂತಹ ವ್ಯವಸ್ಥೆ ನಮ್ಮ ಇಲಾಖೆಯಲ್ಲಿದೆ.

ಮೀನುಗಾರಿಕೆ ಇಲಾಖೆಗೆ ಸಮಾನಾಂತರವಾಗಿರುವ ಕೃಷಿ ಇಲಾಖೆಯ ಅಧಿಕಾರಿಗಳ ವೇತನವನ್ನು ಹೆಚ್ಚು ಮಾಡಿದರೆ, ಮೀನುಗಾರಿಕಾ ಇಲಾಖೆಗೆ ಅನುಕೂಲವಾಗುತ್ತದೆ ಎನ್ನುವ ಮಾತುಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಈಗಿರುವ ಪರಿಸ್ಥಿತಿಯಲ್ಲಿ ವೃಂದ ಮತ್ತು ನೇಮಕಾತಿಯಲ್ಲಿ ಯಾವ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆಯೋ ಅದೇ ಮಾನದಂಡದ ಆಧಾರದ ಮೇಲೆ ಸಂಬಳವನ್ನು ಕೊಡುವಂತಹ ಪದ್ಧತಿ ಇದೆ. ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕ್ರಮವನ್ನು ಕೈಗೊಳ್ಳಲಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ತೋಟಗಾರಿಕಾ ಇಲಾಖೆ, ಪಶು ಸಂಗೋಪನಾ ಇಲಾಖೆ ಮತ್ತು ಮೀನುಗಾರಿಕಾ ಇಲಾಖೆ ಇವೆಲ್ಲವೂ ಕೃಷಿ ಇಲಾಖೆಗೆ ಸಂಬಂಧಪಟ್ಟವುಗಳಾಗಿವೆ. ಇವುಗಳಿಗೆ ಒಂದೇ ವಿಶ್ವವಿದ್ಯಾಲಯವಿದೆ. ನಾಲ್ಕು ವರ್ಷಗಳ ಕಾಲ ಓದಿ ಪದವಿಯನ್ನು ಪಡೆದುಕೊಂಡಿದ್ದಾರೆ. ಒಂದೇ ಪದವಿ–ಸಮಾನ ಹುದ್ದೆ. ಸಮಾನ ಹುದ್ದೆಗೆ ಸಮಾನ ವೇತನವನ್ನು ನೀಡಬೇಕೇ ಬೇಡವೇ ಎನ್ನುವುದನ್ನು ಅವರು ಹೇಳಬೇಕಾಗುತ್ತದೆ. ನಮ್ಮ ಸಂವಿಧಾನದಲ್ಲಿ ಸಮಾನ ಹುದ್ದೆಗೆ ಸಮಾನ ವೇತನವೆಂದು ಕೊಟ್ಟಿದ್ದಾರೆ. ಇದನ್ನು ಅವರು ಕಲ್ಪಿಸಿ ಕೊಟ್ಟಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕರಾವಳಿ ಪ್ರದೇಶದಿಂದ ಬಂದವರು. ಅವರು ನ್ಯಾಯ ಒದಗಿಸಿಕೊಡಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಇದು ಪರಂಪರೆಯಿಂದ ನಡೆದುಕೊಂಡು ಬಂದಿರುವ ವೇತನ ಪರಿಷ್ಕರಣೆಯ ಒಂದು ಭಾಗವಾಗಿದೆ. ಅವರ ಮೂಲ ಪ್ರಶ್ನೆಯಲ್ಲಿರುವ ವಿಚಾರಗಳೇನೆಂದರೆ, ಕೃಷಿ ಇಲಾಖೆಯ ಎ.ಡಿ.ಯವರಿಗೆ 20 ಸಾವಿರ ರೂಪಾಯಿಗಳ ವೇತನವನ್ನು ನೀಡಲಾಗುತ್ತಿದೆ. ಮೀನುಗಾರಿಕೆಯ ಇಲಾಖೆ ಕೃಷಿ ಇಲಾಖೆಯ ಸ್ವರೂಪಗಳನ್ನು ಹೋಲುವಂತಹ ಇಲಾಖೆಯಾಗಿದೆ. ಆದರೆ, ಈ ಇಲಾಖೆಯ ಎ.ಡಿ.ಯವರ ವೇತನ 23–25 ಸಾವಿರ ರೂಪಾಯಿಗಳಾಗಿವೆ. ಈ ವೇತನವನ್ನು ಸಮಾನಗೊಳಿಸಬೇಕೆನ್ನುವುದು ಇವರ ಉದ್ದೇಶವೆಂದು ನಾನು ಭಾವಿಸಿದ್ದೇನೆ. ಆದರೆ, ಪ್ರತಿಯೊಂದು ಇಲಾಖೆಗಳಲ್ಲಿಯೂ ವೃಂದ ಮತ್ತು ನೇಮಕಾತಿ ನಿಯಮಗಳ ಆಧಾರದ ಮೇಲೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವೇತನ ನಿಗದಿಪಡಿಸಲಾಗುತ್ತದೆ. ಮಾನ್ಯ ಶಾಸಕರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದೇನು ಕ್ರಮಗಳನ್ನು ಕೈಗೊಳ್ಳಬಹುದು ಎನ್ನುವುದನ್ನು ಪರಿಶೀಲಿಸಲಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ಕೇಳಿರುವ ಉದ್ದೇಶದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಈ ರಾಜ್ಯದಲ್ಲಿ ಮತ್ಸ್ಯೋದ್ಯಮ ಎನ್ನುವುದು ಒಂದು ಪ್ರಮುಖ ಕೃಷಿಯಾಗಿದೆ. ಇದನ್ನು ಅಭಿವೃದ್ಧಿಪಡಿಸಬೇಕೆನ್ನುವುದು ನನ್ನ ಉದ್ದೇಶವಾಗಿದೆ. ಇದು ರಾಜ್ಯದ ಯಾವುದೋ ಒಂದು ಭಾಗಕ್ಕೆ ಸೀಮಿತವಾಗಬಾರದು ರಾಜ್ಯದ ಮೂಲೆಮೂಲೆಯಲ್ಲಿರುವ ಎಲ್ಲ ತಾಲ್ಲೂಕುಗಳಿಗೂ ವಿಸ್ತರಣೆಯಾಗಬೇಕು. ಮಾನ್ಯ ಮೀನುಗಾರಿಕಾ ಸಚಿವರ ಊರಿನಲ್ಲಿ ಒಂದು ಹಳೆಯ ಮೀನುಗಾರಿಕಾ ಕಾಲೇಜು ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು, ಶ್ರೀ ಭೋಜೇಗೌಡರು ಮತ್ತು ನನ್ನ ಅಭಿಪ್ರಾಯ ಒಂದೇ ಆಗಿದೆ. ಮುಂದೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಎನ್ನುವುದರ ಬಗ್ಗೆ ಪರಿಶೀಲಿಸಲಾಗುವುದೆಂದು ನಾನು ಹೇಳಿದ್ದೇನೆ. ಇಲ್ಲಿಯವರೆಗಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳಲಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:269**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ಎಸ್.ಭೋಸ್‌ರಾಜು:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಾಕಷ್ಟು ವಿವರವಾಗಿ ಉತ್ತರವನ್ನು ಕೊಟ್ಟಿದ್ದಾರೆ. 'ರಾಯಚೂರು ಜಿಲ್ಲೆಗೆ 2019-20ನೇ ಸಾಲಿನಲ್ಲಿ ವಸತಿ ಇಲಾಖೆಯ ವಿವಿಧ ವಸತಿ ಯೋಜನೆಗಳ ಮುಖಾಂತರ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು ಇಲ್ಲಿಯವರೆವಿಗೂ ಮಂಜೂರಾಗಿರುವ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು' ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ವಸತಿ ಸಚಿವರು '2019-20ನೇ ಸಾಲಿನ ಸರ್ಕಾರದ ಪ್ರಧಾನ ಮಂತ್ರಿ ಅವಾಸ್ ಯೋಜನೆ(ಗ್ರಾಮೀಣ) ವಸತಿ ಯೋಜನೆ' ಯಡಿ ಮಂಜೂರು ಮಾಡಲಾಗಿದ್ದು 2133 ಮನೆಗಳ ಪೈಕಿ 135 ಮನೆಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು ಉಳಿದ 1998 ಮನೆಗಳನ್ನು ಪ್ರಾರಂಭಿಸಬೇಕಾಗಿದೆ' ಎನ್ನುವ ಉತ್ತರವನ್ನು ನೀಡಿದ್ದಾರೆ. ನಾವು ಈಗಾಗಲೇ 2020-21ನೇ ಸಾಲಿನಲ್ಲಿದ್ದೇವೆ. ಒಂದು ವರ್ಷದಲ್ಲಿ ಕೇವಲ 135 ಮನೆಗಳನ್ನು ಮಾತ್ರ ಸರ್ಕಾರ ನಿರ್ಮಾಣ ಮಾಡಿದೆ. ಮುಂದುವರೆದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

'ರಾಜ್ಯ ಸರ್ಕಾರದ ವಸತಿ ಯೋಜನೆಯಡಿ 2019–20ನೇ ಸಾಲಿಗೆ ಮನೆಗಳನ್ನು ಮಂಜೂರು ಮಾಡಿರುವುದಿಲ್ಲ' ಎನ್ನುವ ಉತ್ತರವನ್ನು ನೀಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ರಾಯಚೂರು ನಗರದಲ್ಲಿ ಸುಮಾರು 55 ಕೊಳಚೆ ಪ್ರದೇಶಗಳಿವೆ. ರಾಯಚೂರು ನಗರದ 5 ಕೊಳಚೆ ಪ್ರದೇಶಗಳಲ್ಲಿ 'ಪ್ರಧಾನ ಮಂತ್ರಿ ಆವಾಸ್' ಯೋಜನೆಯಡಿಯಲ್ಲಿ 2016–17ನೇ ಸಾಲಿನಲ್ಲಿ 1050 ಮನೆಗಳು ಮಂಜೂರಾಗಿದ್ದು, 751 ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. 2017–18ನೇ ಸಾಲಿನಲ್ಲಿ 500 ಮನೆಗಳು ಮಂಜೂರಾಗಿದ್ದು, 300 ಮನೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಯಡಿಯಲ್ಲಿ ಬಡವರು ಮತ್ತು ಕೊಳಚೆ ಪ್ರದೇಶದಲ್ಲಿರುವವರಿಗೆ ಮನೆ ನಿರ್ಮಾಣ ಮಾಡಿಕೊಡುವುದರಲ್ಲಿ 2–3 ವರ್ಷಗಳಷ್ಟು ವಿಳಂಬವಾಗುವುದಕ್ಕೆ ಕಾರಣವೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಈ ವಿಳಂಬ ಸರ್ಕಾರದ ನಿರ್ಲಕ್ಷ್ಯದಿಂದ ಆಗಿದೆಯೇ ಅಥವಾ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿದೆಯೇ ಎನ್ನುವುದನ್ನು ಮಾನ್ಯ ವಸತಿ ಸಚಿವರು ಸ್ಪಷ್ಟಪಡಿಸಬೇಕಾಗಿದೆ.

**ಶ್ರೀ ವಿ.ಸೋಮಣ್ಣ:–** ಸನ್ಮಾನ್ಯ ಸಭಾಪತಿಯವರೇ, ರಾಯಚೂರು ಜಿಲ್ಲೆಗೆ 'ಪ್ರಧಾನ ಮಂತ್ರಿ ಆವಾಸ್' ಯೋಜನೆಯಡಿಯಲ್ಲಿ 2013–14ನೇ ಸಾಲಿನಿಂದ ಇಲ್ಲಿಯವರೆಗೆ ಸುಮಾರು 1,94,746 ಮನೆಗಳನ್ನು ನಿರ್ಮಾಣ ಮಾಡಿ ಕೊಡಲಾಗಿದೆ. ಅದರಲ್ಲಿ 1,28,958 ಮನೆಗಳನ್ನು ಸುಮಾರು 1,229 ಕೋಟಿ 53 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಉಳಿದ ಜಿಲ್ಲೆಗಳಲ್ಲಿ 27,574 ಮನೆಗಳ ನಿರ್ಮಾಣ ಕಾರ್ಯ ಬಾಕಿ ಇದೆ. ನಮಗೆ ಲಭ್ಯವಿರುವ ಸೋಶಿಯೋ–ಎಕನಾಮಿಕ್ ಸೆನ್ಸಸ್ ಪ್ರಕಾರ ಇಡೀ ರಾಜ್ಯದಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ 86 ಸಾವಿರ ಮನೆಗಳ ನಿರ್ಮಾಣ ಕಾರ್ಯವನ್ನು ಮಾತ್ರ ಕೈಗೆತ್ತಿಕೊಳ್ಳಬಹುದಾಗಿದೆ.

ಸನ್ಮಾನ್ಯ ಸಭಾಪತಿಯವರೇ, 2019–20ನೇ ಸಾಲಿನಲ್ಲಿ 'ಪ್ರಧಾನ ಮಂತ್ರಿ ಆವಾಸ್' ಯೋಜನೆಯಡಿಯಲ್ಲಿ ಮಂಜೂರಾಗಿದ್ದ 2133 ಮನೆಗಳನ್ನು ಹಂಚಿಕೆ ಮಾಡುವುದಕ್ಕೆ ಕೆಲವು ನಿಬಂಧನೆಗಳನ್ನು ವಿಧಿಸಿದ್ದೇವೆ. ಸುಮಾರು 15 ಲಕ್ಷ ಮನೆಗಳನ್ನು ಸರ್ಕಾರ ಹಂಚಿಕೆ ಮಾಡಿದಂತಹ ಸಂದರ್ಭದಲ್ಲಿ ಯಾವ ರೀತಿಯ ಅನಾನೂಕೂಲತೆಗಳಾಗಿದ್ದವು ಎನ್ನುವುದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಈ ಮನೆಗಳ ಹಂಚಿಕೆಯಲ್ಲಿ ಪಾರದರ್ಶಕತೆಯನ್ನು ತರಬೇಕೆನ್ನುವ ಉದ್ದೇಶದಿಂದ ಮತ್ತು ಅರ್ಹ ಫಲಾನುಭವಿಗಳಿಗೆ ಈ ಮನೆಗಳನ್ನು ಹಂಚಿಕೆ ಮಾಡಬೇಕೆನ್ನುವ ದೃಷ್ಟಿಯಿಂದ ನಾನು ಈ ಖಾತೆಯ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ನನ್ನ ಕಛೇರಿಯಲ್ಲಿ ನಾನು ಮತ್ತು ನನ್ನ ಅಧಿಕಾರಿಗಳು ದಿನಗಟ್ಟಲೆ ಕುಳಿತುಕೊಂಡು ಚರ್ಚೆ ಮಾಡಿ ಈ ಮನೆಗಳನ್ನು ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವ ನಿಟ್ಟಿನಲ್ಲಿ ರೂಪುರೇಶೆಗಳನ್ನು ತಯಾರು ಮಾಡಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ಅರ್ಹ ಫಲಾನುಭವಿಗಳಿಗೆ ಈ ಮನೆಗಳ ಹಂಚಿಕೆ ಮಾಡುವಲ್ಲಿ ಸಾಕಷ್ಟು ವ್ಯವಹಾರಗಳು ನಡೆದಿವೆ. ಈ ಅವ್ಯವಸ್ಥೆಗಳನ್ನು ಮನಗಂಡು ಹಣ ಬಿಡುಗಡೆಗೊಳಿಸುವುದಕ್ಕೆ ಒಂದು ನೀತಿ ನಿಯಮವನ್ನು ರೂಪಿಸಿದ್ದೇವೆ. ನಗರಪ್ರದೇಶಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಹಣ ಬಿಡುಗಡೆಗೊಳಿಸುವ ಅಧಿಕಾರವನ್ನು ನೀಡಲಾಗಿದೆ. ಶಾಸಕರು ಅರ್ಹ ಫಲಾನುಭವಿಗಳನ್ನು ಗುರುತಿಸಿ ಕಳುಹಿಸಿಕೊಟ್ಟರೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಒಂದೇ ಒಂದು ಸೆಕೆಂಡ್‌ನಲ್ಲಿ ಹಣ ಬಿಡುಗಡೆಗೊಳಿಸುತ್ತಾರೆ.

(ಮುಂದುವರಿದಿದೆ)

(159) 4.3.2020 5.20 ಪಿಕೆ:ಕೆಎಸ್

**ಶ್ರೀ ವಿ.ಸೋಮಣ್ಣ(ಮುಂದುವರೆದಿದೆ)**

ಬಡವರ್‍ಯಾರಿದ್ದಾರೋ, ಯಾರು ನಿರ್ಗತಿಕರಾಗಿದ್ದಾರೋ ಅಂಥವರಿಗೆ ಮನೆಗಳನ್ನು ಹಂಚಿಕೆ ಮಾಡುವುದಕ್ಕೆ ನಮ್ಮಲ್ಲಿ ಹಣಕಾಸಿನ ತೊಂದರೆಯಾಗಲಿ ಅಥವಾ ಮತ್ತೊಂದಾಗಲಿ ಇಲ್ಲ. ಆದರೆ, ಇದ್ದವರೇ ಎಲ್ಲವನ್ನೂ ಪಡೆಯುವ ಸಂದರ್ಭ ಸೃಷ್ಟಿಯಾಗಿದ್ದರಿಂದ, ಇಂಥದ್ದಕ್ಕೆ ಅಂಕುಶ ಹಾಕಬೇಕಿದೆ. ಈಗಾಗಲೇ ತಮ್ಮ ಜಿಲ್ಲೆಯಲ್ಲಿ 1,94,746 ಮನೆಗಳ ಪೈಕಿ 1,28,958 ಮನೆಗಳ ನಿರ್ಮಾಣಕ್ಕೆ ರೂ. 1,229.53 ಕೋಟಿ ಖರ್ಚು ಮಾಡಿದ್ದೇವೆ. ಇನ್ನುಳಿದಿರುವ 27 ಸಾವಿರ ಮನೆಗಳಿಗೆ ಸಂಬಂಧಪಟ್ಟಂತೆ ಆದ್ಯತೆಯ ಮೇರೆಗೆ ಮುಂದಿನ ಪ್ರಕ್ರಿಯೆಗಳನ್ನು ಕೈಗೊಂಡ ತಕ್ಷಣ ಹಣವನ್ನು ಬಿಡುಗಡೆ ಮಾಡುತ್ತೇವೆ. 2019–20, 2020–2021 ಈ ಸಾಲುಗಳಲ್ಲಿ ಒಂದು ನಾರ್ಮ್ಸ್ ಮಾಡಿ, ಈ ವರ್ಷದ ಜೂನ್ ತಿಂಗಳ ಒಳಗೆ ಹಳೆಯದೇನೇನಿದೆ ಅವುಗಳಿಗೆ ಒಂದು ರೂಪ ಕೊಟ್ಟು ಮುಕ್ತಾಯ ಮಾಡಿ ಹೊಸ ಅಧ್ಯಾಯವನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆ ಈ ಸದನದಲ್ಲಿ ಮತ್ತು ಆ ಸದನದಲ್ಲಿ ಚರ್ಚೆ ಮಾಡಿ, ಇನ್ನು ಮುಂದೆ ಪಾರದರ್ಶಕವಾಗಿ, ಎಷ್ಟು ಬಡವರಿದ್ದಾರೆ, ಯಾವ ಯಾವ ಹಳ್ಳಿಗಳಲ್ಲಿದ್ದಾರೆ, ಯಾವ ಗ್ರಾಮಗಳಲ್ಲಿದ್ದಾರೆ ಎನ್ನುವುದನ್ನು ಗುರುತಿಸುವುದಕ್ಕೆ ಹೊಸ ಸಿಸ್ಟಮ್ ತರುವ ತೀರ್ಮಾನ ಮಾಡಿದ್ದೇವೆ. ಇನ್ಯಾರು ನಿರ್ಗತಿಕರಿದ್ದಾರೋ ಅಂಥವರ ಪಟ್ಟಿಯನ್ನು ಕೊಟ್ಟರೆ ನಮ್ಮ ಅಧಿಕಾರಿಗಳ ಮೂಲಕ ಅದಕ್ಕೆ ಸ್ಪಂದಿಸುವ ಕೆಲಸ ಮಾಡುತ್ತೇನೆ. ಈ ವಿಚಾರದಲ್ಲಿ ಪಾರದರ್ಶಕತೆ ಇಲ್ಲದೇ ಇದ್ದುದರಿಂದ ಅನೇಕ ಗೊಂದಲಗಳಾಗಿದ್ದವು. ಈ ಕುರಿತು ಒಂದು ಪುಸ್ತಕ ಮಾಡಿಸಿದ್ದೇವೆ; ಆ ಪುಸ್ತಕವನ್ನು ಎಲ್ಲರಿಗೂ ಕಳುಹಿಸಿಕೊಡುತ್ತಿದ್ದೇವೆ. ಇದರಲ್ಲಿ ಆ ಪಾರ್ಟಿ ಈ ಪಾರ್ಟಿ ಎಂಬುದಿಲ್ಲ. ಯಾರು ಬಡವರಿದ್ದಾರೋ, ಯಾರು ನಿರ್ಗತಿಕರಿದ್ದಾರೋ ಅವರ ಹತ್ತಿರ ನಾವು ಹೋಗಬೇಕಿದೆ. ಪಂಚಾಯಿತಿಯಲ್ಲಿ ಏನಾಗಿದೆ, ಮತ್ತೊಂದೇನಾಗಿದೆ ಎಂಬ ಬಗ್ಗೆ ಇನ್ನೊಂದು ಸಲ ಚರ್ಚೆ ಮಾಡೋಣ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ರಾಯಚೂರಿನ ಸ್ಲಮ್‌ಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಲ್ಲಿ 70 ಕೊಳಚೆ ಪ್ರದೇಶಗಳಿವೆ. 21,215 ಮನೆಗಳಾಗಬೇಕಾಗಿದೆ. 86,343 ಜನಸಂಖ್ಯೆ ಇದೆ. ನಾವು ಈಗ ಕೆಲವು ಕಡೆ ಮನೆಗಳನ್ನು ಕಟ್ಟುವುದಕ್ಕೆ ಸುಮಾರು ಹಣವನ್ನು ಬಿಡುಗಡೆ ಮಾಡಿದ್ದೇವೆ. ಇದನ್ನು ಆದ್ಯತೆಯ ಮೇಲೆ ಮಾಡಬೇಕಾಗಿದೆ. ಇನ್ನು 2 ವರ್ಷದಲ್ಲಿ ರಾಯಚೂರು ಜಿಲ್ಲೆಯಲ್ಲಿನ ಎಲ್ಲಾ ಕೊಳಚೆ ಪ್ರದೇಶಗಳಲ್ಲಿ ಆದ್ಯತೆಯ ಮೇಲೆ ಮನೆಗಳನ್ನು ಕಟ್ಟುವುದರ ಜೊತೆ, ಸರ್ಕಾರಿ ಜಾಗದಲ್ಲಿ ಏನು ಮನೆ ಕಟ್ಟಿಕೊಂಡಿದ್ದಾರೋ ಅದು ಅವರಿಗೆ ಸ್ವಂತ ಆಗಬೇಕು ಎನ್ನುವ ನಿಟ್ಟಿನಲ್ಲಿ ತೀರ್ಮಾನ ಮಾಡಬೇಕು, ಕಾರ್ಯೋನ್ಮುಖರಾಗಬೇಕು ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಚಿಂತನೆ ಮಾಡುತ್ತಿದ್ದಾರೆ.

**ಶ್ರೀ ಎನ್.ಎಸ್.ಭೋಸ್‌ರಾಜು:–** ಹಿಂದಿನ ಸರ್ಕಾರ ಏನು ಮಾಡಿತ್ತೋ ಅದನ್ನು ನೀವು ಮುಂದುವರೆಸುತ್ತಿರುವುದರಿಂದ ಈ ದಿಸೆಯಲ್ಲಿ ಸಾಧನೆಯಾಗಿದೆ. ಆದರೆ, 2019–20ನೇ ಸಾಲಿನಲ್ಲಿ ಕೊಳಚೆ ಪ್ರದೇಶಗಳಿಗೆ ಮಂಜೂರು ಆಗಿರುವ ಮನೆಗಳು ಎಷ್ಟು ಎನ್ನುವುದು ನನ್ನ ಪ್ರಶ್ನೆಯಾಗಿತ್ತು. ಅದಕ್ಕೆ ನೀವು, 2019–20ನೇ ಸಾಲಿನಲ್ಲಿ ಮಂಜೂರು ಮಾಡಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ.

**ಶ್ರೀ ವಿ.ಸೋಮಣ್ಣ:–** ಖಂಡಿತ ಮಂಜೂರು ಮಾಡಿಲ್ಲ. ಇಡೀ ರಾಜ್ಯದಲ್ಲೆಲ್ಲೂ ಮಂಜೂರು ಮಾಡಿಲ್ಲ. ಹಳೆಯದಿರುವುದನ್ನೆಲ್ಲಾ ಮುಗಿಸೋಣ. ಅದಾದ ಮೇಲೆ ಹೊಸದನ್ನು ಮಾಡೋಣ. ಯಾರಾದರೂ ನಿರ್ಗತಿಕರು ಬೀದಿಯಲ್ಲಿದ್ದಾರೆ ಎಂದು ನಿಮ್ಮ ಗಮನದಲ್ಲಿ ಇದ್ದರೆ ಅಂಥವರ ಪಟ್ಟಿ ಕೊಟ್ಟರೆ ಅದನ್ನು ಮಾಡೋಣ. ಬಾಕಿಯದ್ದನ್ನು ಪರಿಶೀಲಿಸೋಣ.

**<u>ಪ್ರಶ್ನೆ ಸಂಖ್ಯೆ: 258 + 305</u>**
**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗಳಿಗೆ ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು. ಈ ಯೋಜನೆಗಳನ್ನು ಅನುಷ್ಠಾನ ಮಾಡುವುದರಲ್ಲಿ ಅಡಚಣೆ ಮತ್ತು ನ್ಯೂನತೆಗಳಿವೆ. ಮೊದಲನೆಯದಾಗಿ, ಸಹಾಯಧನ ಕಾಲಾನುಕಾಲಕ್ಕೆ ಬಿಡುಗಡೆ ಆಗುತ್ತಿಲ್ಲ. ಎಷ್ಟೋ ಜನ ಹಾನಿಗೊಳಗಾಗಿದ್ದ ತಮ್ಮ ಗುಡಿಸಲುಗಳನ್ನು ಕಿತ್ತು ಬೀದಿಯಲ್ಲಿ ನಿಂತಿದ್ದಾರೆ. ಮತ್ತೆ, 3 ತಿಂಗಳುಗಳ ಒಳಗಾಗಿ ಮನೆ ಕಟ್ಟಲು ಪ್ರಾರಂಭ ಮಾಡಬೇಕು ಎನ್ನುವ ಕಂಡೀಷನ್ ಇದೆ. ಆದರೆ ಮನೆ ಕಟ್ಟಲು ಪರವಾನಿಗಿ ಸಿಕ್ಕಿರುವುದಿಲ್ಲ, ಸಾಲ ಮಂಜೂರು ಆಗಿರುವುದಿಲ್ಲ. ಸಾಲ ಸಿಗುತ್ತದೆ, ಸಹಾಯ ಧನ ಬರುತ್ತದೆ ಎಂದು ಜನ ತಮ್ಮ ಗುಡಿಸಲನ್ನು ಕಿತ್ತುಹಾಕಿ ಮನೆ ಕಟ್ಟಲು ಪ್ರಾರಂಭ ಮಾಡುತ್ತಾರೆ. ಆದರೆ, ಅಂಥವರಿಗೆ ಇದುವರೆಗೂ ಸಹಾಯಧನ ಬಂದಿಲ್ಲ. 3 ತಿಂಗಳ ಒಳಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನೆ ಕಟ್ಟಲು ಪ್ರಾರಂಭ ಮಾಡದೇ ಇರುವಂತಹ ಸುಮಾರು 20–30 ಸಾವಿರ ಮನೆಗಳನ್ನು ಕ್ಯಾನ್ಸಲ್ ಮಾಡಿದ್ದಾರೆ. ಅವು ಬೇರೆ ಇಲಾಖೆಗೆ ಅಥವಾ ಬೇರೆ ಜಿಲ್ಲೆಗಳಿಗೆ ವರ್ಗಾವಣೆಯಾಗುತ್ತದೆ ಎಂದಿದ್ದಾರೆ. ಈ ನಿಟ್ಟಿನಲ್ಲಿ ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ವಿವರಗಳನ್ನು ಕೇಳಬಯಸುತ್ತೇನೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ 2013–14 ರಿಂದ 2018–19ನೇ ಸಾಲಿನವರೆಗೆ 1,55,870 ಮನೆಗಳನ್ನು ಪೂರ್ಣಗೊಳಿಸಿದ್ದೇವೆ. ಅದರಲ್ಲಿ 5 ಲಕ್ಷ ಮನೆಗಳು ಪ್ರಗತಿಯಲ್ಲಿದ್ದು, 1,95,287 ತಳಪಾಯ, 1,36,000 ಗೋಡೆ ಮತ್ತು 1,73,000 ಛಾವಣಿಯ ಹಂತದಲ್ಲಿವೆ. ಇದಲ್ಲದೇ, 2013–14ನೇ ಸಾಲಿನಲ್ಲಿ 2,55,343 ಮನೆಗಳನ್ನು ನಾವು ಬ್ಲಾಕ್ ಮಾಡಿದ್ದೆವು. ಅದನ್ನು ಈಗ ತೆರವುಗೊಳಿಸಿದ್ದೇವೆ. ತೆರವುಗೊಳಿಸಿದ ಮೇಲೆ Vigil Application ಮೂಲಕ ಜಿಲ್ಲಾಧಿಕಾರಿಗಳಿಗೆ, ಸಿಇಓ ಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು, ಇಷ್ಟು ಮನೆಗಳು ಪೂರ್ಣವಾಗಿವೆ ಎಂದು ಹೇಳಿದ ತಕ್ಷಣ ಆ ಸಂಬಂಧ ದುಡ್ಡನ್ನು ಬಿಡುಗಡೆ ಮಾಡುತ್ತಿದ್ದೇವೆ. ಸುಮಾರು ರೂ. 123 ಕೋಟಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಬಾಕಿ ಇರುವಂತಹ ಮನೆಗಳು ಪೂರ್ಣವಾಗುತ್ತಿದ್ದಂತೆ ರೂ. 845 ಕೋಟಿ 27 ಲಕ್ಷಗಳನ್ನು ಬಿಡುಗಡೆ ಮಾಡುತ್ತೇವೆ.

ಮಾನ್ಯ ತಿಪ್ಪೇಸ್ವಾಮಿಯವರು ಮಂಡ್ಯ ಮತ್ತು ತುಮಕೂರು ಜಿಲ್ಲೆಗಳ ಸಂಬಂಧ ಏನು ಮಾಡಿದ್ದೀರಿ ಎಂದು ಕೇಳಿದರು. ತುಮಕೂರಿನಲ್ಲಿ ಒಟ್ಟು ಮಂಜೂರಾದ ಮನೆಗಳು 70,727. ಪೂರ್ಣ ಆಗಿರುವುದು 31,886. ಪ್ರಗತಿಯಲ್ಲಿರುವ ಮನೆಗಳು 19,102. ಪ್ರಾರಂಭವಾಗಬೇಕಾಗಿರುವುದು 19,280 ಮನೆಗಳು. ಬ್ಲಾಕ್ ಆಗಿರುವ ಮನೆಗಳು ಕೇವಲ 459. ಅದೇರೀತಿ ಮಂಡ್ಯ ಜಿಲ್ಲೆಯಲ್ಲಿ 40,776 ಮನೆಗಳು ಮಂಜೂರಾಗಿವೆ. 19,320 ಮನೆಗಳು ಪೂರ್ಣಗೊಂಡಿವೆ. 8,967 ಮನೆಗಳು ಪ್ರಗತಿಯಲ್ಲಿವೆ. 12,018 ಮನೆಗಳು ಪ್ರಾರಂಭ ಆಗಬೇಕಾಗಿದೆ. 471 ಮನೆಗಳು ಸ್ಥಗಿತವಾಗಿವೆ. ಈ ಎಲ್ಲಕ್ಕಿಂತ ಮಿಗಿಲಾಗಿ ಇವತ್ತೇನು ಯೋಜನೆಗಳನ್ನು ಕೈಗೆತ್ತಿಗೊಂಡಿದ್ದೇವೆಯೋ ಆ ಸಂಬಂಧ ತಾಲ್ಲೂಕುವಾರು ಮಾಹಿತಿಯನ್ನು ಕೊಟ್ಟಿದ್ದೇವೆ. ಅದಲ್ಲದೇ, ಫಲಾನುಭವಿಗಳ ಆಯ್ಕೆಯಲ್ಲಿ ಯಾವುದೇ ಕಾರಣಕ್ಕೂ ಅನಾನುಕೂಲ ಆಗಬಾರದು ಎನ್ನುವ ದೃಷ್ಟಿಯಿಂದ ಕೆಲವು ನಿಬಂಧನೆಗಳನ್ನು ಹಾಕಿದ್ದೇವೆ; ಅದನ್ನೂ ಕೂಡ ಕಾರ್ಯರೂಪಕ್ಕೆ ತರುವ ಕೆಲಸ ಮಾಡುತ್ತೇವೆ. ಈ ಕಾರ್ಯಕ್ರಮಗಳ ಜೊತೆಯಲ್ಲಿ, ಯಾರು ಅರ್ಹರಿದ್ದಾರೋ ಅಂಥವರನ್ನು ಮುಖ್ಯ ವಾಹಿನಿಗೆ ತರುವುದು ಉತ್ತಮವಾದ ಕೆಲಸವಾಗಿದೆ.

ಮಾನ್ಯ ಸಭಾಪತಿಯವರೇ, 2010–11ನೇ ಸಾಲಿನ ಬಾಕಿ ಇರುವ ಮನೆಗಳು ಕಟ್ಟಿಲ್ಲ ಎಂದು ಇವತ್ತಿಗೂ ಬಿಲ್ ಬರುತ್ತಿದೆ. ಒಂದು ಮನೆಗೆ 4–5 ಬಿಲ್‌ಗಳು ಬರುತ್ತವೆ. ಸುಮಾರು 8–10 ಕಡೆ ಈ ರೀತಿ ಆಗುತ್ತದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಚಿವರು ಹೇಳುತ್ತಿರುವುದನ್ನು ಒಪ್ಪುತ್ತೇವೆ. ಆದರೆ ಇಂತಹ ಅವ್ಯವಸ್ಥೆಗೆ ಕಾರಣರಾದ ಅಧಿಕಾರಿಗಳಿಗೆ ಶಿಕ್ಷೆ ಕೊಟ್ಟಿರುವ ಯಾವುದಾದರೂ ನಿದರ್ಶನಗಳಿವೆಯೇ?

**ಶ್ರೀ ವಿ.ಸೋಮಣ್ಣ:–** ಇದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಡಾ:ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ, ಬಸವ ವಸತಿ ಯೋಜನೆ ಇತ್ಯಾದಿ ಯೋಜನೆಗಳು ಇರುವುದರಿಂದ ಡೂಪ್ಲಿಕೇಷನ್ ಆಗಿರಬಹುದು. ಆ ರೀತಿಯಾಗಿರುವುದನ್ನು ತಾವು ಕ್ಯಾನ್ಸಲ್ ಮಾಡಬಹುದು.

**ಶ್ರೀ ವಿ.ಸೋಮಣ್ಣ:–** ಹಾವೇರಿಯಲ್ಲಿ ಪ್ರಕೃತಿಯಿಂದ ಆಗಿರುವ ಅನಾಹುತದಲ್ಲಿ ಸುಮಾರು ಕೋಟ್ಯಾಂತರ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇವೆ. ನಾನೇ ಅಲ್ಲಿಗೆ ಸ್ವತಃ ಹೋಗಿದ್ದೆ. ಹಾವೇರಿ ಜಿಲ್ಲೆಯ ಸಿಗ್ಗಾವಿ ತಾಲ್ಲೂಕಿನ ತಹಸೀಲ್ದಾರರು ಯಾರದೋ ಹೆಸರಿನಲ್ಲಿರುವ ಸುಮಾರು ರೂ. 7 ಲಕ್ಷ ಹಣವನ್ನು ಬೇರೆಯವರ ಅಕೌಂಟ್‌ಗೆ ಹಾಕಿದ್ದರಿಂದ ಆತನ ಮೇಲೆ ಎಫ್ಐಆರ್ ಹಾಕಲಾಗಿದೆ. ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ, ಅಲ್ಲಿನ ಶಾಸಕರಾದ ಸಹೋದರಿ ಪೂರ್ಣಿಮ ಶ್ರೀನಿವಾಸ್‌ರವರ ಕ್ಷೇತ್ರದಲ್ಲಿ ನಾನೇ ಸ್ವತಃ ಹೋಗಿದ್ದೆ. ಆ ಜಿಲ್ಲೆಯ ಸಿಇಓ; ಬಹುಶಃ ಅವರ ಹೆಸರು ಸತ್ಯಭಾಮ ಇರಬಹುದು, ಸರಿಯಾಗಿ ನನಗೆ ಜ್ಞಾಪಕ ಬರುತ್ತಿಲ್ಲ. ಆ ಹೆಣ್ಣು ಮಗಳು ಸುಮಾರು 25–26 ಗ್ರಾಮಗಳಿಗೆ ಹೋಗಿ ಎಲ್ಲವನ್ನೂ ಹುಡುಕಿದಾಗ ಒಂದು ಮನೆಗೆ, ಒಂದು ನಿವೇಶನಕ್ಕೆ 4 ಸಲ ಹಣವನ್ನು ತೆಗೆದುಕೊಂಡಿರುವುದು ಕಂಡುಬಂದಿದೆ.

(ಮುಂದು ...)

(160) 04–03–2020/ 05–30/ ಕೆಹೆಚ್(ಬಿಕೆಪಿ)–ಜಿಆರ್
**ಶ್ರೀ ವಿ.ಸೋಮಣ್ಣ (ಮುಂದು):**

ದನದ ಕೊಟ್ಟಿಗೆ ಮತ್ತು ಹಂದಿ ಗುಡಿಸಲುಗಳನ್ನು ತೋರಿಸಿ ದುಡ್ಡು ತೆಗೆದುಕೊಂಡಿರುವ 8 ಜನರ ಮೇಲೆ ಎಫ್.ಐ.ಆರ್., ಆಗಿದೆ. ಸುಮಾರು ಹತ್ತಾರು ಜನರ ಮೇಲೆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ವಿಚಾರವಾಗಿ ಈ ಸದನಕ್ಕೆ ಎಲ್ಲಾ ಮಾಹಿತಿಯನ್ನು ಕೊಡುವುದಕ್ಕೆ ತಯಾರಾಗಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿಯವರಿಗೆ ನಾನು ವಿನಂತಿ ಮಾಡುವುದು ಇಷ್ಟೆ. ನಾವು ಯಾವುದೇ ಉದ್ದೇಶಪೂರ್ವಕವಾಗಿ ಒಬ್ಬನೇ ಒಬ್ಬ ಅರ್ಹ ಫಲಾನುಭವಿಗೆ ಅಂದರೆ, ಯಾರು ಅರ್ಹತೆಯನ್ನು ಹೊಂದಿ ಮನೆ ಬೇಕೆಂದು ಕಾಯುತ್ತಿದ್ದಾನೆ, ಅಂತಹವರಿಗೆ ಅನಾನುಕೂಲ ಆಗಬಾರದು; ಅವರ ಹೆಸರು ಹೇಳಿ ಎಲ್ಲೋ ಒಂದು ಕಡೆ ಹಣವನ್ನು ಲಪಟಾಯಿಸುವಂತಹ ಕೆಲಸ ಏನು ನಡೆಯುತ್ತಿತ್ತು, ಇದಕ್ಕೆ ಸ್ವಲ್ಪಮಟ್ಟಿಗೆ ಕಡಿವಾಣ ಹಾಕಿದ್ದೇವೆ. ನಾವು ಯಾವುದೇ ದುಡ್ಡನ್ನು ನಿಲ್ಲಿಸುವುದಿಲ್ಲ. ಈ ವಿಚಾರದಲ್ಲಿ ನಾವು ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯಸ್ಥರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ, ಅವರು ಏನು ಪಟ್ಟಿಯನ್ನು ಕಳುಹಿಸಿಕೊಡುತ್ತಿದ್ದಾರೆ, ಅದಕ್ಕೆ ನಾವು ಏನು ಮಾಡುತ್ತಿದ್ದೇವೆ ಎಂದರೆ, ಇದಕ್ಕೆ Third Party

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Inspection ಅನ್ನು ಮಾಡಿಸುತ್ತಿದ್ದೇನೆ. ನಾನು ಬಂದ ತಕ್ಷಣ 59,000 ಮನೆಗಳಿಗೆ ಹಣ ಬಿಡುಗಡೆ ಮಾಡಿಸುವ ಮುನ್ನ ಇದರ ಬಗ್ಗೆ 3ನೇ ವ್ಯಕ್ತಿಯ ಕಡೆಯಿಂದ ಚೆಕ್ ಮಾಡಿಸಿ ಎಂದು ಹೇಳಿ ನಮ್ಮ ಕಾರ್ಯದರ್ಶಿಯವರಿಗೆ ಹೇಳಿದೆ. 59,000 ಮನೆಗಳಿಗೆ ಹಣ ಬಿಡುಗಡೆ ಮಾಡಬೇಕೆಂದು ಕಳುಹಿಸಿಕೊಟ್ಟಿದ್ದರೂ ಸಹ ಅದರಲ್ಲಿ ಸುಮಾರು 1299 ಜನರದ್ದು ಬೋಗಸ್ ಇತ್ತು. ಪ್ರಾಯಶಃ ಇದೆಲ್ಲದರ ಬಗ್ಗೆ ನಾವು ತಮಗೆ ರೆಕಾರ್ಡ್‌ನಲ್ಲಿ ಕೊಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿಯ ಗ್ರಾಮೀಣ ಭಾಗದಲ್ಲಿ ಅದರಲ್ಲೂ ಮಾನ್ಯ ಸದಸ್ಯರಾದ ಶ್ರೀ ಬೆಲ್ಲದ ರವರ ಮತಕ್ಷೇತ್ರದಲ್ಲಿ 1200 ಮನೆಗಳು ಮಂಜೂರಾಗಿದ್ದು, ಆ ಮನೆಗಳು ಯಾರ್‍ಯಾರ ಹೆಸರಿನಲ್ಲಿ ಇದೆ ಮತ್ತು ಯಾರ್‍ಯಾರ ಹೆಸರಿಗೆ ಬಂದಿದೆ ಎಂಬುದರ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ. ಮನೆ ಇರುವವರು ಸಹ ಮನೆಯನ್ನು ತೆಗೆದುಕೊಂಡು ಬೇರೆಯವರಿಗೆ ಮಾರಾಟ ಮಾಡುತ್ತಾರೆ. ಈ ವಿಚಾರದಲ್ಲಿ ನಾನು ಸುಮಾರು 4 ತಿಂಗಳುಗಳಿಂದ ಪ್ರಯತ್ನ ಮಾಡುತ್ತಿದ್ದೇನೆ. ರಾಜ್ಯದ ಎಲ್ಲಾ ಕಡೆಯೂ ಕೂಡ ಈ ರೀತಿಯಲ್ಲಿಯೇ ಇದೆ. ಪ್ರಸ್ತುತ ನಾನು ಹುಬ್ಬಳ್ಳಿ–ಧಾರವಾಡದ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಅಲ್ಲಿನ 4 ಸಾವಿರ ಮನೆಗಳನ್ನು ಯಾರ್‍ಯಾರಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ ಮತ್ತು ಅಲ್ಲಿನ ಮನೆಗಳಲ್ಲಿ ಯಾರೂ ಸಹ ಇರುವುದಿಲ್ಲ. ಈ ಮನೆಗಳನ್ನು ಬೇರೆಯವರಿಗೆ ಬಾಡಿಗೆ ಕೊಟ್ಟಿದ್ದಾರೋ, ಖರೀದಿಗೆ ಕೊಟ್ಟಿದ್ದಾರೋ ಗೊತ್ತಿಲ್ಲ. ಈ ಬಗ್ಗೆ ನಾನು 4 ತಿಂಗಳಿನಿಂದ ಪ್ರಯತ್ನ ಪಡುತ್ತಿದ್ದೇನೆ. ಈ ವಿಚಾರದಲ್ಲಿ ಜಿಲ್ಲಾಧಿಕಾರಿಯವರು, ಸಿ.ಇ.ಓ., ಮತ್ತು ತಮ್ಮ ಶಾಸಕರೂ ಸಹ ಅಸಹಾಯಕರಾಗಿದ್ದಾರೆ. ಅದಕ್ಕೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಅದಕ್ಕೋಸ್ಕರ ನಾವು ...

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿ.ಸೋಮಣ್ಣನವರು ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ, ಅದಕ್ಕೆ ಹೊಂದಿಕೊಂಡಂತೆ ಕೆಲವೊಂದು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು ಬಹಳಷ್ಟು ಕಾಳಜಿ ವಹಿಸಿ, ಹಣ ಅವ್ಯವಹಾರವಾಗದಂತೆ, ಇದರಲ್ಲಿ ಅಧಿಕಾರಿಗಳು ಭಾಗಿಯಾಗಿರಲಿ, ಇದರಲ್ಲಿ ಫಲಾನುಭವಿಗಳು ಭಾಗಿಯಾಗಿರಲಿ, ಅವರ ಮೇಲೆ ಹದ್ದಿನ ಕಣ್ಣು ಇಟ್ಟು, ತಪ್ಪಿತಸ್ಥರ ವಿರುದ್ಧ ಎಫ್.ಐ.ಆರ್. ದಾಖಲಿಸುವ ಮಟ್ಟಕ್ಕೆ ಮಾನ್ಯ ಸಚಿವರು ಹೋಗಿದ್ದಾರೆಂದರೆ ಬಹುತರವಾಗಿ ಪಾರದರ್ಶಕತೆ ಈ ಇಲಾಖೆಯಲ್ಲಿ ಬರುವುದಕ್ಕೆ ತಾವು ಪ್ರಾಮಾಣಿಕವಾದ ಪ್ರಯತ್ನ ಮಾಡಿರುವುದಕ್ಕೆ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ನಾನು ನೋಡಿದಂತೆ ಒಬ್ಬ ಫಲಾನುಭವಿಯ ಹೆಸರಿನಲ್ಲಿ 5–6 ಮನೆಗಳು ಹಂಚಿಕೆಯಾಗಿವೆ. ಮತ್ತೆ ಕೆಲವು ಮನೆಗಳನ್ನು ಬಾಡಿಗೆಗೆ ಕೊಟ್ಟಿದ್ದಾರೆ, ಈ ಮನೆಗಳನ್ನು ಎಷ್ಟೋ ಮಂದಿ ಅನಧಿಕೃತವಾಗಿ ಮಾರಾಟ ಮಾಡಿದ್ದಾರೆ. ಬಡವರು ಅಂದರೆ ಯಾರಿಗೆ

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಲೆ ಮೇಲೆ ಸೂರು ಇಲ್ಲ. ಯಾರೋ ಒಬ್ಬ ಸಾಹುಕಾರನ ಮನೆ ಹಿಂದೆ ಆ ಮನೆಯ ಗೋಡೆಗೆ ಗುಡಿಸಲು ಹಾಕಿಕೊಂಡು 20-30 ವರ್ಷಗಳಿಂದ ಹಾಗೆಯೇ ಇದ್ದಾರೆ, ಅವರಿಗೆ ಮನೆಯೇ ಇರುವುದಿಲ್ಲ. ಯಾರು ಬಲಿಷ್ಠರಿದ್ದಾರೆ, ಯಾರು ರಾಜಕಾರಣಿಗಳ ಹಿಂದೆ-ಮುಂದೆ ಓಡಾಡಿಕೊಂಡಿದ್ದಾರೆ, ಅವರು ಒಂದು ಮನೆಯಲ್ಲ, 10-10 ಮನೆಗಳನ್ನು ಹಂಚಿಕೆ ಮಾಡಿಸಿಕೊಂಡಿದ್ದಾರೆ. ದಯಮಾಡಿ ನಾನು ಸಭಾಪತಿಯವರ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ, ಮಾನ್ಯ ಸಚಿವರು ಇಟ್ಟಂತಹ ಹೆಜ್ಜೆ ಅದರಲ್ಲೂ ಒಪ್ಪಿಗೆಯಾಗುವಂತಹ ಹೆಜ್ಜೆಯನ್ನು ಇಟ್ಟಿದ್ದಾರೆ. ಇದರಲ್ಲಿ ಯಾರ್ಯಾರು ಅವ್ಯವಹಾರ ಮಾಡಿದ್ದಾರೆ, ಅವರನ್ನು ಬಲಿ ಹಾಕಬೇಕು. ಅವರು ಫಲಾನುಭವಿಯಾಗಲಿ, ಅಧಿಕಾರಿಯಾಗಲಿ, ಅವರ ಮೇಲೆ ನಿರ್ದಾಕ್ಷಿಣ್ಯವಾದಂತಹ ಕ್ರಮ ಕೈಗೊಳ್ಳಬೇಕು. ಯಾರ ತಲೆ ಮೇಲೆ ಗುಡಿಸಲು ಮುಕ್ತ ರಾಜ್ಯ/ರಾಷ್ಟ್ರ  ನಿರ್ಮಾಣ ಮಾಡುತ್ತೇವೆ ಎಂದು ನಾವುಗಳು ಹೇಳುತ್ತೇವೆಯೋ, ಈಗ ಆ ರೀತಿಯ ಗುಡಿಸಲುಗಳು ಹಾಗೆಯೇ ಉಳಿದಿವೆ. ಅದಕ್ಕೋಸ್ಕರ ಆ ದಿಸೆಯಲ್ಲಿ ಮಾನ್ಯ ಸಚಿವರು ದಿಟ್ಟ ಹೆಜ್ಜೆಯನ್ನಿಡಿ. ಆ ರೀತಿಯಾದಲ್ಲಿ ಮಾನ್ಯ ಸಚಿವರಿಗೆ ನಮ್ಮೆಲ್ಲರ ಬೆಂಬಲ ಇರುತ್ತದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ಅಂಶವನ್ನು ಗಮನಿಸಬೇಕು.  ಯಾರನ್ನು ಬಲಿ ಹಾಕಿದರೆ ಅವನಿಗೆ ಮನೆ ಸಿಗುವುದಿಲ್ಲ. ಮತ್ತೊಂದು ವಿಷಯ ನನಗೆ ಅರ್ಥವಾಗದೇ ಇರುವುದೇನೆಂದರೆ, ಈ block ಮತ್ತು ತೆರವು ಎಂದು ತಾವು ಏನು ಹೇಳುತ್ತೀರಿ? ಇದು ಆ ವರ್ಗದ ಜನರಿಗೆ ಎಫೆಕ್ಟ್ ಆಗುತ್ತದೆಯೇ? ಇದರ ಬಗ್ಗೆ ನಮಗೆ ಅರ್ಥವಾಗುವುದಿಲ್ಲ, ಜನರಿಗೆ ಹೇಗೆ ಅರ್ಥವಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಆಶ್ರಯ ಸಮಿತಿಯ ಅಧ್ಯಕ್ಷರು ಯಾರು ಎಂದು ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ವಿ.ಸೋಮಣ್ಣ:-** ಆಶ್ರಯ ಸಮಿತಿಯ ಅಧ್ಯಕ್ಷರು ಎಂ.ಎಲ್.ಎ. ಆಗಿರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಅಲ್ಲಿ ಯಾರು ಇದ್ದಾರೆ?

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ನಾನು ಇದರ ಬಗ್ಗೆ ಮಾಹಿತಿಯನ್ನು ಕೊಡುವುದಕ್ಕೆ ಬಯಸುತ್ತೇನೆ. ಮಾಜಿ ಪ್ರಧಾನ ಮಂತ್ರಿಗಳಾದ ರಾಜೀವ್ ಗಾಂಧಿಯವರು ಬೇಲೂರು ಘೋಷಣೆಯನ್ನು ಒಂದು ಒಳ್ಳೆಯ ಕಾನ್ಸೆಪ್ಟ್ ಇಟ್ಟುಕೊಂಡು ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಸೂರು ಇಲ್ಲದವರಿಗೆ ಅನುಕೂಲ ಮಾಡೋಣ ಎನ್ನುವ ದೃಷ್ಟಿಯಿಂದ ಮಾಡಿದರು. ಈಗಾಗಲೇ 17-20 ವರ್ಷಗಳು ಕಳೆದವು. ಪಂಚಾಯಿತಿಗೆ ಅಧಿಕಾರವನ್ನು ಕೊಟ್ಟು, ಆ ಪಂಚಾಯಿತಿಯವರು ಯಾವ ರೀತಿಯಲ್ಲಿ ಇದ್ದಾರೆ ಎನ್ನುವುದಕ್ಕಿಂತ ಹೆಚ್ಚಿನದಾಗಿ ಪಂಚಾಯಿತಿ ಸದಸ್ಯರು ಅಧ್ಯಕ್ಷರು,

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಿ.ಡಿ.ಓ., ಮತ್ತು ಕಂದಾಯ ನಿರೀಕ್ಷಕರೆಲ್ಲರೂ ಸೇರಿಕೊಂಡು ಇದನ್ನು ಒಂದು ದೊಡ್ಡ ದಂಧೆಯನ್ನಾಗಿ ಮಾಡಿದ್ದಾರೆ. ಪ್ರಾಮಾಣಿಕವಾಗಿ ಹೇಳುವುದಾದರೆ, ನಾನು ಕಳೆದ ಬಾರಿ ಮಂತ್ರಿಯಾಗಿದ್ದೆ. ಇದರ ಬಗ್ಗೆ ನನಗೂ ಸಹ ಇಷ್ಟೊಂದು ಅನುಭವ ಇರಲಿಲ್ಲ. ಆದಾದ ಮೇಲೆ ಅಲ್ಲಿ 3–4 ವರ್ಷ ನೋಡಿದೆ. ಆದಾದ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮತ್ತೆ ಅದೇ ಖಾತೆಯನ್ನು ನನಗೆ ಕೊಟ್ಟಿದ್ದಾರೆ. ಇದಾದ ಮೇಲೆ ಇದನ್ನು ನಾನು war footing ನಲ್ಲಿ ಕೈಗೆತ್ತಿಕೊಂಡು, ನಾನೇ ಸುಮಾರು ಹತ್ತಾರು ಕಡೆ ಹೋಗಿ, ನಮ್ಮ ಕಾರ್ಯದರ್ಶಿಗಳು, ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಇರಬಹುದು. ಇವರುಗಳ ಜೊತೆ ವಿಡಿಯೋ ಕಾನ್ಫರೆನ್ಸ್, ಸಿ.ಇ.ಓ., ಅವರೊಂದಿಗೆ ವಿಡಿಯೋ ಕಾನ್ಫರೆನ್ಸ್ ಈ ರೀತಿಯಲ್ಲಿ ಎಲ್ಲವನ್ನು ಮಾಡಿದ್ದೇವೆ. ಈ ಸಂಬಂಧ ನಾನು 3–4 ಜಿಲ್ಲೆಗಳಿಗೆ ಹೋಗಿದ್ದು, ಅದರ ಮಾಹಿತಿಯನ್ನು ತಮಗೆ ಕೊಡುತ್ತೇನೆ. ಕೆಲವರು ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಇದರಲ್ಲಿ ಒಂದು ಸತ್ಯ ಏನೆಂದರೆ, ಈ ಸದನದಲ್ಲಿ ಮನಸ್ಸು ಮಾಡಿದರೆ ಪಂಚಾಯಿತಿಯ ಬಗ್ಗೆ ನಾನು ಮಾತನಾಡುತ್ತೇನೆ. ಅಧ್ಯಕ್ಷರು ಏನಾಗಿದ್ದಾರೆ ಎಂದರೆ, ಅವರೇ ನನ್ನನ್ನು ಕೇಳುತ್ತಾರೆ. ಆ ಅಧ್ಯಕ್ಷರು ರಾತ್ರಿ ಒಂದು ಗಂಟೆ, ಎರಡು ಗಂಟೆಗೆ ಫೋನ್ ಮಾಡುತ್ತಾರೆ. 'ಅವನ್ಯಾರಯ್ಯಾ, ಬಂದೇ ಪಿಶಾಚಿ ನನ್ನ ಮಗ ನೀನು, ನಾವು ಹೇಗೋ ಮಾಡಿಕೊಂಡು ಹೋಗುತ್ತಿದ್ದೆವು. ನಮ್ಮ ದುಡ್ಡನ್ನೆಲ್ಲಾ ಹಿಡಿದು ಹಾಕುತ್ತಿದ್ದೀಯಾ', ಇದೇ ರೀತಿಯ ಭಾಷೆಯನ್ನು ಉಪಯೋಗ ಮಾಡುತ್ತಾರೆ. ಅವರು ಎಣ್ಣೆಯನ್ನು ಕುಡಿದು, ರಾತ್ರಿ ಒಂದು ಗಂಟೆಗೆ ಫೋನ್ ಮಾಡುತ್ತಾರೆ. ನಾನು ನಿಜವಾದ ಫಲಾನುಭವಿಯಾದರೆ ಅವನು ನಮ್ಮನ್ನು ನೋಡಿದ್ದಾನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಎಣ್ಣೆ ಹಾಕಿರುತ್ತಾರೆ. ಅದಕ್ಕೆ ಆ ರೀತಿ ಮಾತನಾಡುತ್ತಾರೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಏಕೆಂದರೆ, ನಾನು ...

**ಶ್ರೀ ಕಾಂತರಾಜ್ (ಬಿಎಂಎಲ್):–** ಮಾನ್ಯ ಸಭಾಪತಿಯವರೇ, ಪಂಚಾಯಿತಿ ಅಧಿಕಾರವನ್ನು ...

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ನಾನು ವಿನಂತಿ ಮಾಡುವುದೇನೆಂದರೆ, ಈ ಬ್ಲಾಕ್ ಏನಾಗಿದೆ ಎಂದರೆ, ನಾನು ಹಿಂದೆ ಇದ್ದಾಗ ನಮ್ಮ ಅಧಿಕಾರಿಗಳು ನಾನು ಬರುವುದಕ್ಕೆ ಮುಂಚಿತವಾಗಿ ಇದರ ಬಗ್ಗೆ ಗೊಂದಲವಾಗಿತ್ತು. ಮೊದಲು ಜಿ.ಪಿ.ಎಸ್., ಅಳವಡಿಸಲಾಗಿತ್ತು. ಆದರೆ, ಅದು ನಂತರ ಇರಲಿಲ್ಲ. ಆದರೆ, ನಾವು ಬಂದ ತಕ್ಷಣ ಜಿ.ಪಿ.ಎಸ್., ಅನ್ನು ಆನ್ ಮಾಡಿದ್ದೇವೆ. App ಗೆ ಅಳವಡಿಸಿದ್ದೇವೆ. ಆಧಾರ್ ಕಾರ್ಡ್‌ನ್ನು involve ಮಾಡಿದ್ದೇವೆ. ಅದಲ್ಲದೇ ಬಿ.ಪಿ.ಎಲ್., ಕಾರ್ಡ್‌ನ್ನು involve ಮಾಡಿದ್ದೇವೆ. ಇಷ್ಟೆಲ್ಲಾ ಮಾಡಿದ್ದರೂ ಕೂಡ ಕೆಳ ಹಂತದಲ್ಲಿರುವ ನಮ್ಮ ಅಧಿಕಾರಿಗಳು ಪಿ.ಡಿ.ಓ., ರೆವಿನ್ಯೂ ಇನ್ಸ್‌ಪೆಕ್ಟರ್, ನಮ್ಮ ಇಲಾಖೆಯ ಕೆಲವು ಅಧಿಕಾರಿಗಳು ಇರಬಹುದು. ಇವರೆಲ್ಲರೂ ಸೇರಿಕೊಂಡು ಪಂಚಾಯಿತಿ; ನನಗೆ ಆ ಪಂಚಾಯಿತಿಯ ಛೇರ್‌ಮನ್ ಸ್ವಾಮಿ, ರಾತ್ರಿ ಎಲ್ಲಿ ಇರುತ್ತೀರಿ ಎಂದು ಕೇಳುತ್ತಾನೆ. ಈ ರೀತಿಯ ದುರಂತ ದೊಡ್ಡ ಕ್ಯಾನ್ಸರ್ ಇದ್ದ ಹಾಗೆ. ನಮ್ಮ ಇಲಾಖೆಯು ಈ ಕ್ಯಾನ್ಸರ್

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಅನ್ನು ತಮ್ಮೆಲ್ಲರ ಸಹಕಾರದಿಂದ ತೆಗೆಯುವುದಕ್ಕೆ ಪ್ರಯತ್ನ ಮಾಡಿದೆ. ನಾನು ಅಧಿಕಾರದಲ್ಲಿ ಎಷ್ಟು ದಿನ ಇರುತ್ತೇನೆ ಎಂಬ ಖಾತ್ರಿ ನನಗಿಲ್ಲ. ನಾನು ಏನು ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ ಎಂದರೆ, ಯಾರು ನಿಜವಾಗಿ ಇರುವವರು ಇದ್ದಾರೆ. ಅಂಥವರಿಗೆ ತಲುಪಬೇಕೆಂಬುದು ನನ್ನ ಉದ್ದೇಶವಾಗಿದೆ. ಮಾನ್ಯ ಸಭಾಪತಿಯವರೇ, ಇದನ್ನು ನಾನು ಬಹಳ ಆಳವಾಗಿ ಅಧ್ಯಯನ ಮಾಡಿದ್ದೇನೆ. ನನಗೆ ನೋವಾಗಿರುವುದು ಏನೆಂದರೆ, ನನ್ನ ಸ್ವಂತ ಊರಿನಲ್ಲಿಯೇ 190 ಮನೆಗಳು ಇವೆ. ಇಡೀ ಊರಿನಲ್ಲಿಯೇ ನನ್ನ ಒಂದೇ ಮನೆ ನನ್ನ ಸಮಾಜದ್ದು, ನನಗೆ ಗೊತ್ತಿಲ್ಲದ ಹಾಗೆ ನಮ್ಮ ಮನೆಗೆ ದನ ಕಟ್ಟುವುದಕ್ಕೆ ಒಂದು ಕೊಟ್ಟಿಗೆಯನ್ನು ಕೊಟ್ಟು 40 ಸಾವಿರ ರೂಪಾಯಿಗಳನ್ನು ಕೊಟ್ಟು, ನನ್ನ ಸಹೋದರನ ಹತ್ತಿರ ಸಹಿ ಮಾಡಿಸಿಕೊಂಡು ಹೋಗಿದ್ದ. ಈ ವಿಚಾರ ನನಗೆ ಗೊತ್ತಾದ ತಕ್ಷಣ ಆ ಅಧಿಕಾರಿಯನ್ನು ಅಮಾನತು ಮಾಡಿ, ಸಂಸದರಾದ ಮಾನ್ಯ ಡಿ.ಕೆ. ಸುರೇಶ್‌ಕುಮಾರ್‌ರವರ ಎದುರಿಗೆ ಅವರನ್ನು ಕರೆದು ವಿಚಾರಿಸಿದಾಗ ಅವನು ಒಂದು ಮಾತನ್ನು ಹೇಳುತ್ತಾನೆ. ಅದೇನೆಂದರೆ, ಏನೋ ಮಂತ್ರಿಯವರಿಗೆ ಮನೆ ಕೊಟ್ಟರೆ ಸುಮ್ಮನೆ ಆಗುತ್ತಾರೆ ಅಂದುಕೊಂಡಿದ್ದೆ ಎಂದು ಹೇಳಿದ. ನಂತರ ಆ ದುಡ್ಡನ್ನು ವಾಪಸ್ಸು ಕೊಡಿಸಲಾಯಿತು. ಈ ರೀತಿಯ ಅನೇಕ ಉದಾಹರಣೆಗಳ ಜೊತೆಯಲ್ಲಿ ಇದೊಂದನ್ನು ನಾವು ಸರಿ ಮಾಡದೇ ಹೋದರೆ ಎಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟರೂ ಕೂಡ ಅದು ಸರಿ ಆಗುವುದಿಲ್ಲ. ಆದುದರಿಂದ ಇದನ್ನು ಪಾರದರ್ಶಕತೆಗೆ ತರುತ್ತಿದ್ದೇವೆ. ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರೇ, ಎಷ್ಟು ಮನೆಗಳು ಇವೆ ಎಂದು ತಾವು ಹೇಳಿದರೆ, ಅಷ್ಟು ಮನೆಗಳಿಗೂ ಹಣವನ್ನು ಕೊಡುತ್ತೇವೆ. ಆದರೆ, ಅನಾವಶ್ಯಕವಾಗಿ ದುಡ್ಡು ಕೊಡು ಎಂದರೆ, ನಾವು ಕೊಡುವುದಕ್ಕೆ ಆಗುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಷ್ಟೆಲ್ಲಾ ವಿಚಾರಗಳನ್ನು ಹೇಳಿದ್ದಾರೆಯಲ್ಲವೇ, ಇದಕ್ಕೆ remedy ಏನು? ಇದೆಲ್ಲವುಗಳಿಂದ ಹಣ ಲೂಟಿ ಆಗುತ್ತಿದೆ. ಅಧಿಕಾರ ಕೇಂದ್ರಗಳು ಭ್ರಷ್ಟಾಚಾರ ವಿಕೇಂದ್ರಿಕರಣ ಆಗಿದೆ. ಇದರ ಬಗ್ಗೆ ಯಾರು ಹೇಳುವ ಅವಶ್ಯಕತೆ ಇಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆ? ಹಿಂದೆ ಇದ್ದ ಪದ್ಧತಿಯಲ್ಲಿ ಕನಿಷ್ಟಪಕ್ಷ ಮಾನ್ಯ ಶಾಸಕರು ಇದ್ದಾಗ ಸ್ವಲ್ಪ ಸ್ವಲ್ಪ ಹಣ ಸಿಗುತ್ತಿತ್ತು. ಈಗ ಅದು ಇಲ್ಲವೆಂದಾದರೆ, ಇದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಕ್ರಮ ವಹಿಸುವುದಕ್ಕೆ ಮುಂದಾಗಿದ್ದೇವೆ. ಪಂಚಾಯಿತಿ ಛೇರ್‌ಮನ್‌ಗೆ ಅಧಿಕಾರ ಏನಿದೆ? ಆ ಪಂಚಾಯಿತಿ ಛೇರ್‌ಮನ್‌ನ ಅಧಿಕಾರವನ್ನು ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಅದನ್ನು withdraw ಮಾಡಿ, ಪಾರದರ್ಶಕತೆಗೆ ತಂದು ಯಾರು ಎಂ.ಎಲ್.ಎ., ಎಂ.ಎಲ್.ಸಿ., ಗಳು ಇದ್ದಾರೆ. ಅವರನ್ನು ಯಾವ ಯಾವ ರೀತಿಯಲ್ಲಿ ಅವರನ್ನು ಪಾರದರ್ಶಕತೆಗೆ ತಂದು, ವಾಸ್ತವವಾಗಿ ಫಲಾನುಭವಿಗಳು ಯಾರಿದ್ದಾರೆ, ಆ ಫಲಾನುಭವಿಗಳನ್ನು ಗುರುತಿಸಿದರೆ, ಹಳೆಯದನ್ನು ಈ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಜೂನ್ ತಿಂಗಳೊಳಗೆ ಪೂರ್ಣವಾಗಿ ತೆಗೆದು ಅದನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಬಗ್ಗೆ ಒಂದು ಕಾಯಿದೆಯನ್ನು ತರುತ್ತೇವೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ತಾವು ಸದನ ಸಮಿತಿಯನ್ನು ಮಾಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಣ್ಣನವರೇ, ದಯಮಾಡಿ, ಅವರಿಗೆ accountability fix ಮಾಡಿ, ಅವರಿಗೆ ಏನು ಶಿಕ್ಷೆಯನ್ನು ಕೊಡುತ್ತೀರೋ ಕೊಡಿ. ಆದರೆ, ಅಧಿಕಾರದ ವಿಕೇಂದ್ರಿಕರಣ ವ್ಯವಸ್ಥೆಗೆ ಧಕ್ಕೆ ತರಬಾರದು.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು . . .

**ಶ್ರೀ ಕಾಂತರಾಜ್ (ಬಿಎಂಎಲ್):–** ಮಾನ್ಯ ಸಭಾಪತಿಯವರೇ, ಸರ್ಕಾರದ ಕಾರ್ಯಕ್ರಮಗಳನ್ನು improve ಮಾಡಬೇಕೇ ವಿನಃ ಅವುಗಳನ್ನು ತೆಗಳಬಾರದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಪಂಚಾಯತ್ ರಾಜ್ ವ್ಯವಸ್ಥೆಯನ್ನು . .

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸೋಮಣ್ಣನವರೇ, . . . .

**ಶ್ರೀ ಕಾಂತರಾಜ್ (ಬಿಎಂಎಲ್):–** ಮಾನ್ಯ ಸಭಾಪತಿಯವರೇ, ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಕೊಡಬೇಕು.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಒಂದು ಸದನ ಸಮಿತಿಯನ್ನು ಮಾಡೋಣ.

**ಶ್ರೀ ಕಾಂತರಾಜ್ (ಬಿಎಂಎಲ್):–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅರ್ಧ ಗಂಟೆ ಕಾಲಾವಕಾಶ ಕೊಡಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನಾನು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಬಂದವನು, ತಾವು ಕೂಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಬಂದಿರುವವರು. ಅಧಿಕಾರ ವಿಕೇಂದ್ರಿಕರಣ ವ್ಯವಸ್ಥೆಗೆ ಧಕ್ಕೆ ಬರದೇ ಇರುವ ರೀತಿಯಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ, ಅವರು ಯಾವುದೇ ಉನ್ನತ ಸ್ಥಾನದಲ್ಲಿ ಇದ್ದರೂ ಕೂಡ ಅವರ ಮೇಲೆ ನಿರ್ದಿಷ್ಟವಾದ ಕ್ರಮ ಕೈಗೊಂಡು, ಶಿಕ್ಷೆಗೆ ಒಳಪಡಿಸುವಂತಹ ಕೆಲಸವಾಗಬೇಕು.

(ಮುಂದು)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(161)04–03–2020(5–40)ಎಸ್‌ವಿ(ಎಂವಿ)–ಜಿಆರ್
**ಶ್ರೀ ಎಸ್.ಆರ್.ಪಾಟೀಲ್ (ಮುಂದು)**

ಆದುದರಿಂದ ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ. ಅದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಏನಾಗಿದೆ ಎಂದು ನನ್ನಲ್ಲಿ ಇದ್ದಂತಹ ತಿಳುವಳಿಕೆಯನ್ನು ತಿಳಿಸಿದ್ದೇನೆ. ತಪ್ಪಿತಸ್ಥರು ಯಾರೇ ಇದ್ದರು ಸಹ ಅವರು ತಪ್ಪಿತಸ್ಥರು. ಅಂತಹವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಮುಂದೆ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸಹ ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಸಹ ಅರ್ಹ ಫಲಾನುಭವಿಗಳನ್ನು ಹೊರತುಪಡಿಸಿ, ಬೇರೆ ಯಾರಿಗೂ ನೀಡಬಾರದೆಂದು ತಿಳಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡುವುದಾದರೆ ನೀಡಿ. ಆದರೆ, ಇನ್ನು ಮುಂದೆ ಇಂತಹವುಗಳಿಗೆ ಅವಕಾಶವಿಲ್ಲ.

**(ಗೊಂದಲ)**

**ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸರ್ಕಾರ ವಿಕೇಂದ್ರೀಕರಣ ಮಾಡಬೇಕು ಎಂದು ಹೇಳಿದೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ವಿ.ಸೋಮಣ್ಣನವರು ಹಿರಿಯ ಸಚಿವರು. ಅವರು ಅಗಾಧವಾದ ಅನುಭವ ಇರತಕ್ಕಂತಹವರು. ವಿಶೇಷವಾಗಿ ಈ ಇಲಾಖೆಯ ಬಗ್ಗೆ ಬಹಳ ಅಗಾಧವಾದ ಮತ್ತು ಸಮುದ್ರದಷ್ಟು ಆಳಕ್ಕೆ ಹೋಗಿರುವಂತಹವರು. ಅವರು ಅದನ್ನು ಸಂಪೂರ್ಣವಾಗಿ ಅರಿತು ಮಾತನಾಡಿದ್ದಾರೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ, ಬಹಳ ವಿಪರ್ಯಾಸದ ಸಂಗತಿ ಎಂದರೆ, ಸಭಾನಾಯಕರು ಮತ್ತು ಮಾನ್ಯ ಸಭಾಪತಿಯವರು ಇಬ್ಬರೂ ಕೂಡ ಅದೇ ಕ್ಷೇತ್ರದಿಂದ ಬಂದಿರುವಂತಹವರು. ಸಭಾನಾಯಕರು ಮಾತನಾಡಲಿಲ್ಲವೆಂಬುದು ನನಗೆ ಬಹಳ ದುಃಖಕರವಾಗಿದೆ.

**ಸಭಾಪತಿಯವರು:–** ಅದಕ್ಕೇ ನಾನು ಸಭಾನಾಯಕರನ್ನು ಕರೆಯಬೇಕೆಂದುಕೊಂಡಿದ್ದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ವಸತಿ ಅರ್ಹರಿಗೆ ಸಿಗಬೇಕು ಎನ್ನುವ ಕಾರಣಕ್ಕೋಸ್ಕರ ಸರ್ಕಾರ ಮತ್ತು ಮಂತ್ರಿಗಳು ಕೆಲವು ಯೋಜನೆಗಳನ್ನು ರೂಪಿಸುತ್ತಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದುಡ್ಡು ಕೊಡದೇ ಯಾರೂ ಮನೆಯನ್ನು ಕೊಡುವುದಿಲ್ಲ. ಒಬ್ಬೊಬ್ಬರಿಗೆ ನಾಲ್ಕೈದು ಮನೆಯನ್ನು ಕೊಡುತ್ತಾರೆ. ಅದಕ್ಕೆ ಸರ್ಕಾರ ಏನು ಮಾಡುತ್ತಿದೆ. ಅದು ಪುಕ್ಕಟೆಯಾಗುತ್ತಿದೆಯೇ? ಅಲ್ಲಿ ಎಲ್ಲಾ ರೀತಿಯ ಭ್ರಷ್ಟಾಚಾರ ನಡೆಯುತ್ತಿದೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಏನು ಹೇಳುತ್ತಾರೆಂದು ಕೇಳಬೇಕು. ಅದನ್ನು ಅವರು ಹೇಳಲಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಪಿ.ಡಿ.ಓ. ಅವರನ್ನು ಜೈಲಿಗೆ ಹಾಕಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬಡವರಿಗೆ ಮತ್ತು ಅರ್ಹರಿಗೆ ಮನೆ ಸಿಗಬೇಕು ಎನ್ನುವುದರ ಬಗ್ಗೆ ಸರ್ಕಾರ ಕಾರ್ಯಪ್ರವೃತವಾಗಿದೆ. ಈ ಮಧ್ಯದಲ್ಲಿ ಗ್ರಾಮಪಂಚಾಯಿತಿಗೆ ಮತ್ತು ಗ್ರಾಮಸಭೆಗೆ ಇರುವಂತಹ ಅಧಿಕಾರದ ಬಗ್ಗೆ ಸಂಬಂಧಪಟ್ಟಂತಹ ಚರ್ಚೆಗಳನ್ನು ಸ್ಥಳೀಯ ಸಂಸ್ಥೆಯ ಪ್ರತಿನಿಧಿಗಳು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಿದರೆ, ವಿಸ್ತೃತವಾಗಿ ಚರ್ಚೆ ಮಾಡಿ, ನ್ಯಾಯಸಮ್ಮತವಾದಂತಹ ಮತ್ತು ಕಾನೂನು ಬದ್ಧವಾದಂತಹ ತೀರ್ಮಾನವನ್ನು ತೆಗೆದುಕೊಳ್ಳೋಣ. ಅರ್ಧ ಗಂಟೆ ಕಾಲಾವಧಿ ಚರ್ಚೆಯಲ್ಲಿ ಸರ್ಕಾರದ ನಿಲುವು ಮತ್ತು ನಿಮ್ಮ ನಿಲುವು ಎಲ್ಲವೂ ಸಹ ಇದೆ.

**ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪಂಚಾಯಿತ್ ವ್ಯವಸ್ಥೆಯನ್ನು ...

**ಪ್ರಶ್ನೆ ಸಂಖ್ಯೆ: 242 + 254**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಬಳಿ ಹೆಚ್ಚು ಮಾತನಾಡುವುದಿಲ್ಲ. ಇವತ್ತು ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ನಡೆಯುತ್ತಿರುವಂತಹ 68 ಶಾಲೆಗಳು ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ 119 ಶಾಲೆಗಳು. ಈ ಶಾಲೆಗಳಲ್ಲಿ ಕೆಲಸ ಮಾಡುವಂತಹವರಿಗೆ ಸರ್ಕಾರಿ ನೌಕರರಿಗೆ ಕೊಡತಕ್ಕಂಥ ಎಲ್ಲಾ ಸವಲತ್ತುಗಳನ್ನು ಕೊಡುತ್ತೇವೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಇರತಕ್ಕಂಥ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ 824 ಶಾಲೆಗಳು ನಡೆಯುತ್ತಿವೆ. ಈ ಶಿಕ್ಷಣ ಸಂಸ್ಥೆಗಳಿಗೆ 8823 ಹುದ್ದೆಗಳು ಮಂಜೂರಾಗಿದೆ. ಆದರೆ, 5044 ಹುದ್ದೆಗಳು ಖಾಲಿಯಿವೆ. ಈ ವಸತಿ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕಂಥ ನೌಕರರು 6ನೇ ತರಗತಿಯಿಂದ 10ನೇ ತರಗತಿಯವರೆಗೆ ಮತ್ತು ಕೆಲವು ಕಡೆಗಳಲ್ಲಿ 12ನೇ ತರಗತಿಗಳಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿದ್ದಾರೆ ಮತ್ತು ಅವರು ವಸತಿ ಶಾಲೆಗಳಲ್ಲೇ ಉಳಿಯುತ್ತಿದ್ದಾರೆ. ಅಲ್ಲಿನ ಶಿಕ್ಷಕರು ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಿದ್ದಾರೆ. ಆದುದರಿಂದ ಅಲ್ಲಿ ಶೇಕಡಾ 95ರಷ್ಟು ಫಲಿತಾಂಶ ಬರುತ್ತಿದೆ. ಆದರೆ, ಅವರಿಗೆ ಕೆ.ಜಿ.ಐ.ಡಿ., ಈ.ಜಿ.ಐ.ಎಸ್., ಮತ್ತು ಆರೋಗ್ಯ ಜ್ಯೋತಿ ಸಂಜೀವಿನಿ ಇಲ್ಲ. ಸನ್ಮಾನ್ಯ ಕುಮಾರ್ ನಾಯಕ್‌ರವರು ಶಿಕ್ಷಣ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇಲಾಖೆಯಲ್ಲಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದ್ದರು. ಈಗ ಅವರು ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳಾಗಿದ್ದಾರೆ. ಮಾನ್ಯ ಕುಮಾರ್ ನಾಯಕ್‌ರವರು ತಮ್ಮ ವರದಿಯಲ್ಲಿ ಶಿಕ್ಷಣ ಇಲಾಖೆಯ ಎಲ್ಲಾ ಶಿಕ್ಷಕರಿಗೂ ಒಂದು ವಿಶೇಷ ವೇತನ ಭತ್ಯೆಯನ್ನು ಕೊಡಿಸಿದರು. ಆದರೆ, ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಸ್ಥಾಪನೆಯಾಗಿರುವ ಮಾನ್ಯ ಕುಮಾರ್ ನಾಯಕ್ ವರದಿಯ ವಿಶೇಷ ಭತ್ಯೆ ಯಾವುದೂ ಕೂಡ ಇಲ್ಲ. ಇವರಿಗೆ ಯಾವುದೇ ಬಡ್ತಿಗಳು ಇಲ್ಲ. ಆದರೆ, ತಾವು ಉತ್ತರದಲ್ಲಿ ಹೇಳಿರುವುದು, ಇವರುಗಳಿಗೆ 01.04.2018ರಂದು ಜಾರಿಗೆ ಬರುವಂತೆ ನಿವೃತ್ತಿ ಮತ್ತು ಮರಣ ಉಪಧನವನ್ನು ಹೊರತುಪಡಿಸಿ ಮಂಜೂರಾತಿ ಮಾಡಿದ್ದೀರಿ. ಆದರೆ, ಇವುಗಳನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ತೀರ್ಮಾನ ಮಾಡಿದ್ದೀರಿ. ಈ ರೀತಿ ವಸತಿ ಶಿಕ್ಷಣ ಸಂಸ್ಥೆಗಳಿಂದ ತೆಗೆದುಕೊಂಡಂತಹವರು ಇಷ್ಟೆಲ್ಲಾ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ರಾಜ್ಯ ಸರ್ಕಾರಿ ನೌಕರರಿಗೆ, ಶಿಕ್ಷಣ ಇಲಾಖೆಯಲ್ಲಿ ಇರತಕ್ಕಂತಹ ಸರ್ಕಾರಿ ಶಿಕ್ಷಕರಿಗೆ ಇವೆಲ್ಲವೂ ಸಹ ದೊರೆಯುತ್ತದೆ. ಅದಕ್ಕೋಸ್ಕರ ನನ್ನ ಕೊನೆಯ ಪ್ರಶ್ನೆ ಏನೆಂದು ಹೇಳಿದರೆ, ದಯಮಾಡಿ ಇವರೆಲ್ಲರನ್ನು ಕೂಡ ಸಮಾಜ ಕಲ್ಯಾಣ ಇಲಾಖೆಯಲ್ಲಿಯೇ ಇವರ ಹುದ್ದೆಗಳನ್ನು ವಿಲೀನಗೊಳಿಸಿ ಎನ್ನುವಂಥದ್ದು ಬಹಳ ದೀರ್ಘ ಕಾಲದ ಬೇಡಿಕೆ. ಆದರೆ, ತಾವು ಇವುಗಳನ್ನು ವಿಲೀನಗೊಳಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೀರಿ. ಈಗ ನೋಡಿ ಸ್ವಾಮಿ, ಇದೇ ವಸತಿ ಸಂಘ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾರಂಭ ಮಾಡಿದಂತಹ ಶಾಲೆಗಳನ್ನು ಇದೇ ಸರ್ಕಾರ ಅಲ್ಪಸಂಖ್ಯಾತರ ಶಾಲೆಗಳಲ್ಲಿ ವಿಲೀನಗೊಳಿಸಿರುವಂತಹ ನಿದರ್ಶನ ನಮ್ಮ ಮುಂದೆ ಇದೆ. ಸರ್ಕಾರ ನಡೆಸುತ್ತಿರುವಂತಹ 68 ಮತ್ತು 119 ಶಾಲೆಗಳಿಗೆ ಸರ್ಕಾರದ ಎಲ್ಲಾ ಸವಲತ್ತುಗಳನ್ನು ಕೊಡುತ್ತಿದ್ದೀರಿ. ಇವರುಗಳು ಸಂಘದ ಶಾಲೆಗಳಲ್ಲಿ ಇರುವುದರಿಂದ ಈ ಎಲ್ಲಾ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಅವರಿಗೆ ಬಡ್ತಿ ಇಲ್ಲ. ಕೆ.ಜಿ.ಐ.ಡಿ., ಇಲ್ಲ. ಆರೋಗ್ಯ ಯೋಜನೆ ಇಲ್ಲ. ದಯವಿಟ್ಟು ಇಷ್ಟೆಲ್ಲಾ ಉತ್ತಮವಾದ ಕೆಲಸಗಳನ್ನು ಮಾಡುವಂತಹ ಶಿಕ್ಷಕರಿಗೆ, ಇದು ನಿಜಕ್ಕೂ ಕೂಡ ಬಹಳ, ಹಿಂದಿನ ಸರ್ಕಾರಗಳಲ್ಲಿ ಇಬ್ಬರು ಮಾನ್ಯ ಸಚಿವರುಗಳು ಇದನ್ನು ಇಲಾಖೆಗಳಲ್ಲಿ ವಿಲೀನಗೊಳಿಸುತ್ತೇವೆ ಎನ್ನುವಂತಹ ಭರವಸೆಯನ್ನು ಕೆಲವು ಸಭೆಗಳಲ್ಲಿ ನೀಡಿದ್ದರು. ಆದರೆ, ಮಾನ್ಯ ಸಚಿವರು ಇದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ದಯವಿಟ್ಟು ಮಾನ್ಯ ಸಚಿವರು ಇದರ ಬಗ್ಗೆ ಪುನರ್ ಪರಿಶೀಲಿಸಬೇಕು. ಈ ವಸತಿ ಸಂಘದಿಂದ ಆಯ್ಕೆಯಾದಂತಹ ಶಿಕ್ಷಕರು ಬಹಳ ಉತ್ತಮವಾದಂತಹ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಿದ್ದಾರೆ ಮತ್ತು ಶೇಕಡಾ 95ರಷ್ಟು ಫಲಿತಾಂಶವನ್ನು ತರುತ್ತಿದ್ದಾರೆ. ಅವರೆಲ್ಲರೂ ಕೂಡ ವಸತಿ ಶಾಲೆಗಳಲ್ಲಿಯೇ ಉಳಿಯುತ್ತಿದ್ದಾರೆ. ಅವರು ಇಷ್ಟೆಲ್ಲಾ ಸವಲತ್ತುಗಳಿಂದ ವಂಚಿತರಾಗುತ್ತಿದ್ದಾರೆ. ಅವರಿಗೆ ಪಿಂಚಣಿ ಇಲ್ಲ. ಮರಣ ಉಪಧನವಿಲ್ಲ. ಕೆ.ಜಿ.ಐ.ಡಿ. ಇಲ್ಲ. ಆರೋಗ್ಯ ಸಂಜೀವಿನಿ ಇಲ್ಲ ಮತ್ತು ಮಾನ್ಯ ಕುಮಾರ್ ನಾಯಕ್ ವರದಿಯ ವಿಶೇಷ ವೇತನ ಭತ್ಯೆ ಇಲ್ಲ. ಹೀಗಾದರೆ ಅವರು ಹೇಗೆ ಸ್ವಾಮಿ ಜೀವನ ಮಾಡಬೇಕು? ದಯವಿಟ್ಟು ಅವರನ್ನು ಸಮಾಜ ಕಲ್ಯಾಣ ಇಲಾಖೆ ಇಲ್ಲವೇ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸಿ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಮಾನ್ಯ ಸಚಿವರಿಗೆ ಸಾಕಷ್ಟು ವಿಷಯಗಳನ್ನು ತಿಳಿಸಿದ್ದಾರೆ. ಈ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ನಡೆಯುವಂತಹ ಈ ಶಾಲೆಗಳಲ್ಲಿ ಶೇಕಡಾ 95ರಷ್ಟು ಫಲಿತಾಂಶವನ್ನು ಕೊಡುತ್ತಿದ್ದಾರೆ. ಮಾನ್ಯ ಸಚಿವರು ಉತ್ತರ ಕೊಟ್ಟಿರುವಂಥದ್ದನ್ನು ನೋಡಿದರೆ, ಮಂಜೂರಾದ 8823 ಹುದ್ದೆಗಳಲ್ಲಿ 5044 ಹುದ್ದೆಗಳು ಖಾಲಿಯಿವೆ. ಇಷ್ಟು ಇದ್ದರೂ ಸಹ ಅವರು ಶೇಕಡಾ 95ರಷ್ಟು ಫಲಿತಾಂಶ ಕೊಡುತ್ತಿದ್ದಾರೆ. ಏಕೆಂದರೆ, ಈ ಸಮುದಾಯಗಳಿಗೆ ಸೇರಿರುವಂತಹ ಪ್ರತಿಭಾನ್ವಿತ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿರುವುದು ಮೂಲ ಕಾರಣವಾಗಿದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಇದಕ್ಕೆ ಕಾರಣ ಶಿಕ್ಷಕರ ಪರಿಶ್ರಮ. ಈ ಎರಡೂ ತರಹದ ಹಿನ್ನೆಲೆಯಲ್ಲಿ ಒಳ್ಳೆಯ ಶಾಲೆಗಳನ್ನು ನಡೆಸುತ್ತಿದ್ದಾರೆ ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ಇವರಿಗೆ ಏನಾದರೂ ಸವಲತ್ತು ಕೊಡುವುದಕ್ಕೆ ಬಂದಾಗ ಸರ್ಕಾರ ಏಕೆ ಈ ರೀತಿಯ ಎರಡನೆ ದರ್ಜೆಯ ನಾಗರಿಕರ ರೀತಿ ನಡೆಸಿಕೊಳ್ಳುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರಿಗಿಂತ ಕಡಿಮೆ ಸಂಬಳ ಕೊಡುವಂತಹ ಕೆಲಸವನ್ನು ಸಮಾಜ ಕಲ್ಯಾಣ ಇಲಾಖೆ ಏಕೆ ಮಾಡುತ್ತಿದೆ ಎಂದು ಅರ್ಥವಾಗುತ್ತಿಲ್ಲ. ನಿಜವಾಗಿಯೂ ಈ ಶಾಲೆಗಳ ಉದ್ದೇಶ ಏನೆಂದು ಮಾನ್ಯ ಸಚಿವರಿಗೆ ಗೊತ್ತಿದೆ. ಮಾನ್ಯ ಸಚಿವರು ಹಲವಾರು ಬಾರಿ ಸಮಾಜ ಕಲ್ಯಾಣ ಸಚಿವರಾಗಿ ಕೆಲಸ ಮಾಡಿರುವ ಅನುಭವ ಇರುವುದರಿಂದ, ಜವಾಹರ್ ನವೋದಯ ಮಾದರಿ ಶಾಲೆಗಳನ್ನು ಮಾಡಬೇಕೆಂದು ಹೊರಟು, ಅದು ಏನೋ ಮಾಡುವುದಕ್ಕೆ ಹೋಗಿ, ಏನೋ ಮಾಡುತ್ತಿದ್ದೀರಿ ಎನ್ನುವಂತಹ ಸ್ಥಿತಿ ಇದೆ. ಮಾನ್ಯ ಸಚಿವರ ಉತ್ತರ ನನಗೆ ಸಮಾಧಾನ ತಂದಿಲ್ಲ.

**(ಮುಂದು...)**

(162) 04-03-2020 5.50 KG.MD(VK)

**ಶ್ರೀ ಅರುಣ ಶಹಾಪುರ(ಮುಂದು.)**

ಜವಾಹರ್ ನವೋದಯ ಮಾದರಿ ಶಾಲೆಯನ್ನು ಪ್ರಾರಂಭ ಮಾಡಬೇಕೆಂದು ಹೊರಟು, ಏನೋ ಮಾಡುವುದಕ್ಕೆ ಹೋಗಿ ಏನೋ ಮಾಡಿದಂತಹ ಸ್ಥಿತಿ ಇದೆ. ಮಾನ್ಯ ಸಚಿವರ ಉತ್ತರ ನನಗೆ ಏಕೋ ಸಮಾಧಾನ ತಂದಿಲ್ಲ.

ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯ ಮಂತ್ರಿಗಳಾಗಿ ಮತ್ತು ಮಾನ್ಯ ಗೋವಿಂದ ಎಂ.ಕಾರಜೋಳರವರು ಉಪ ಮುಖ್ಯಮಂತ್ರಿಯಾಗಿರಬೇಕಾದರೆ, ಈ ರೀತಿಯ ಉತ್ತರ ನನಗೆ ಏಕೋ ಸಮಾಧಾನ ತಂದಿಲ್ಲ. ನನ್ನ ಪ್ರಶ್ನೆಗೆ "ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯವರು ಅವರದೇ ಆದಕಾರಣಗಳಿಂದ ಅಲ್ಪಸಂಖ್ಯಾತರ ವಸತಿ ಶಾಲೆಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಬೇರ್ಪಡಿಸಿ ಸಿಬ್ಬಂದಿಗಳನ್ನು ಸಹ ನೇಮಿಸಿಕೊಂಡಿರುತ್ತಾರೆ. ಆದ್ದರಿಂದ, ಸದರಿ ವಿಷಯದಲ್ಲಿ ತಾರತಮ್ಯ ಮಾಡುತ್ತಿರುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು" ಉತ್ತರವನ್ನು ನೀಡಿದ್ದಾರೆ. ಅಂದರೆ, ಅವರಿಗೆ ಅದು ಬೇಕಾಗಿಲ್ಲ ಎಂದು ಅನಿಸುತ್ತದೆ. ಅಲ್ಪಸಂಖ್ಯಾತರ ಇಲಾಖೆಗೆ ಬೇಕಾಗಿತ್ತು ಅವರು ತಮ್ಮ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲಾಖೆ ಸಿಬ್ಬಂದಿ ಎಂದು ಅಲ್ಲಿರುವ ಶಿಕ್ಷಕರನ್ನು ಮಾಡಿಕೊಂಡರು. ಅಂದರೆ, ಸಮಾಜ ಕಲ್ಯಾಣ ಇಲಾಖೆಗೆ ಇದು ಬೇಕಾಗಿಲ್ಲವೆಂದು ಬಹಳ ಸ್ಪಷ್ಟವಾಗಿ ತಾರತಮ್ಯ ಆಗುತ್ತಿದೆ ಎಂದು ಕಾಣಿಸುತ್ತದೆ. ಶಿಕ್ಷಕರಿಗೆ ಕೊಡಬೇಕಾಗಿರುವಂತಹ ಸೌಲಭ್ಯಗಳನ್ನು ಕೊಡುವುದಕ್ಕೆ ಆಗುತ್ತಿಲ್ಲ. ಅವರಿಗೆ ಅನ್ಯಾಯ ಆಗುತ್ತಿದೆ. ಆ ಹಿನ್ನೆಲೆಯಲ್ಲಿ ಒಂದು ಅದ್ಭುತವಾಗಿರುವಂತಹ ವ್ಯವಸ್ಥೆಯಲ್ಲಿ ನಡೆದುಕೊಂಡು ಹೋಗುತ್ತಿರುವಂತಹ ಶಿಕ್ಷಕರಿಗೆ ದಯವಿಟ್ಟು ಕೊಡಬೇಕಾಗಿರುವಂತಹ ಸೌಲಭ್ಯಗಳು ಸಿಗಬೇಕೆಂದರೆ, ಅವರನ್ನು ಇಲಾಖೆಯ ಸಿಬ್ಬಂದಿಗಳನ್ನಾಗಿ ಮಾಡಿ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಒಂದೇ ಒಂದು ಉಪ ಪ್ರಶ್ನೆ. ನಮ್ಮ ಮಾಮುಲಿ ಶಾಲೆಗಳಲ್ಲಿ ಇರುವಂತಹ ಶಿಕ್ಷಕರಿಗೆ ಈಗಾಗಲೇ ಒಂದು additional payment ಸಿಕ್ಕಿದೆ. ಶ್ರೀ ಕುಮಾರ್ ನಾಯಕ್ ವರದಿಯ ಮೇಲೆ *ex-gratia payment* ಕೊಟ್ಟ ಕಾರಣಕ್ಕೆ ಇನ್ನೊಂದು *increment* ಸಿಕ್ಕಿ *they are drawing two additional increments.* ಅದು *basic* ಗೆ ಸೇರಿ ಹೋಯಿತು. 24 ಗಂಟೆಗಳ ಕಾಲ ಕೆಲಸ ಮಾಡುವಂತಹ ಶಿಕ್ಷಕರಿಗೆ ಸರ್ಕಾರ ಜವಾರ್ ವಸತಿ ಶಾಲೆ, ನವೋದಯ ವಸತಿ ಶಾಲೆ ಮಾದರಿಯಲ್ಲಿ ವೇತನ ಕೊಡುವುದಾದರೆ, ಹೆಚ್ಚು ವೇತನ ಕೊಡಬೇಕು. ಆದರೆ, ಇವರು regular School Teachers ಗಿಂತ ಕಡಿಮೆ ವೇತನ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ವಸತಿ ಶಿಕ್ಷಣ ಸಂಸ್ಥೆಗಳ ಶಿಕ್ಷಕರಿಗೆ ಏನು ಪ್ರಯೋಜನ ಬಂತು? Minorities ರವರನ್ನು ಇಲಾಖೆಗಳಿಗೆ merge ಮಾಡುತ್ತಾರೆ. ಇವರು ಏನು ಅನ್ಯಾಯ ಮಾಡಿದ್ದಾರೆ? ಜೊತೆಗೆ 32 ಜನರ ನೇಮಕಾತಿ ಆಗಬೇಕು. ಈಗಾಗಲೇ ನೇಮಕಾತಿ ಆದವರ ಪಟ್ಟಿಯಲ್ಲಿ 32 ಜನರ ಹೆಸರಿನ ಪಟ್ಟಿ ನಮ್ಮ ಕಾರ್ಯದರ್ಶಿಯವರ ಬಳಿ ಇದೆ. ಈ 32 ಜನರ ನೇಮಕಾತಿ ಆದೇಶ ನೀಡಿಲ್ಲ. ಬೇರೆಯವರ ನೇಮಕಾತಿಯಾಗಿ ಮೂರು ವರ್ಷಗಳು ಆಗಿವೆ. ಈ 32 ಜನರು ಬಕಪಕ್ಷಿಗಳ ರೀತಿಯಲ್ಲಿ ತರಹ ಕಾಯುತ್ತಿದ್ದಾರೆ. ಅದಕ್ಕೆ ದಯಮಾಡಿ ಉಳಿದೆಲ್ಲ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗೆ ಯಾವ ರೀತಿಯ ಸೌಲಭ್ಯಗಳನ್ನು ಕೊಡುತ್ತಿದ್ದಾರೋ, ಅದೆಲ್ಲವನ್ನು ಯಥವತ್ತಾಗಿ ಕೊಡಬೇಕು. ಏಕೆಂದರೆ, ಅನುದಾನಿತ ಶಾಲೆಗಳಿಗೆ ಕೊಡುತ್ತಿದ್ದಾರೆ. ನಮ್ಮ semi-government ನವರಿಗೂ ಕೊಡಬೇಕಲ್ಲವೇ, ಇದು ಬಹಳ ಅನ್ಯಾಯವಾಗುತ್ತಿದೆ. ನಾವು ಇದನ್ನು ಸಮಿತಿಗಳಲ್ಲಿಯೂ ಸಹ ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗ ಹೊರಟ್ಟಿಯವರು ಶಿಫಾರಸ್ಸು ಮಾಡಿದ್ದೇವೆ. ಇದಕ್ಕೆ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ತಾವು ದಯಮಾಡಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನೌಕರರಿಗೆ ಕೊಡುತ್ತಿರುವಂತಹ ಎಲ್ಲಾ ಸೌಲಭ್ಯಗಳನ್ನು ಯಥವತ್ತಾಗಿ ಇವರಿಗೆ ನೀಡಲೇಬೇಕು ಮತ್ತು ಅದನ್ನು ವಿಸ್ತಾರ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಒಳ್ಳೆಯ ವಿಚಾರವನ್ನು ತಂದಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಶಿಕ್ಷಕರ ವಿಚಾರ ಬಂದಿದೆ ಎಂದರೆ, ಇಡೀ ಸಭೆ ಶಿಕ್ಷಕರದ್ದೇ ಆಗಿಬಿಡುತ್ತದೆ.

**(ಗೊಂದಲ)**

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಅವರ ಸಮಸ್ಯೆ ಅವರಿಗೆ ಇರುತ್ತದೆ. ನಾವು ತಾಳ್ಮೆಯಿಂದ ಕುಳಿತು ಕೇಳಬೇಕಷ್ಟೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಶಿಕ್ಷಕರ ವೇತನ ಸಂಬಂಧ ಚರ್ಚೆ ನಡೆಯುತ್ತಿದೆ. ಶಿಕ್ಷಣ ಅಭಿವೃದ್ಧಿ ಮತ್ತು ಶಿಕ್ಷಣದ ಗುಣಮಟ್ಟದ ಬಗ್ಗೆ ಚರ್ಚೆ ನಡೆಯಲ್ಲ. ಮಾನ್ಯ ಸದಸ್ಯರಾದ ಡಾ||ವೈ.ಎ.ನಾರಾಯಣಸ್ವಾಮಿಯಿಂದ ಹಿಡಿದು, ಅದಕ್ಕೆ ನಮ್ಮ ವಿಧಾನ ಪರಿಷತ್ತು ಸೀಮಿತವಾಗಿದೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಇಲ್ಲಿ ಸಮಸ್ಯೆ ಏನೆಂದರೆ, ಇಷ್ಟೆಲ್ಲಾ ಕೊರತೆಯ ಮಧ್ಯೆ ಶಿಕ್ಷಕರು ಶಿಕ್ಷಣದ ಗುಣಮಟ್ಟವನ್ನು ಕಾಪಾಡುವಂತಹ ಕೆಲಸವನ್ನು ಈಗಾಗಲೇ ಮಾಡಿದ್ದಾರೆ. 95% ಫಲಿತಾಂಶ ಬರುತ್ತಿದೆ. ಮಾನ್ಯ ಸದಸ್ಯರು ಅದನ್ನು ಗಮನಿಸಬೇಕು.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ರೇವಣ್ಣನವರು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು ನಾವು ಶಿಕ್ಷಕರ ವಿಚಾರದಲ್ಲಿ ಏನೇ ಚರ್ಚೆ ಮಾಡಿದರೂ ಸಹ, ಅದು ವಿದ್ಯಾರ್ಥಿಗಳಿಗೆ ಶಿಕ್ಷಣದ ಗುಣಮಟ್ಟಕ್ಕೆ ಪೂರಕವಾಗಿರುತ್ತದೆ ವಿನಃ ನಾವು ಶಿಕ್ಷಕರಿಗಾಗಿ ಯಾವುದನ್ನು ಕೇಳುವುದಿಲ್ಲ. ಇವತ್ತು ಬಹಳ ಚೆನ್ನಾಗಿ ಚರ್ಚೆ ಮಾಡುತ್ತಿದ್ದಾರೆ. ಅದಕ್ಕಾಗಿ ನಾವು ಕೇಳಿದ್ದೇವೆ. ಮಾನ್ಯ ರೇವಣ್ಣನವರು ಹೇಳಿದಂತೆ ಶಿಕ್ಷಕರಿಗಾಗಿ ಅಲ್ಲ. ನಾವು ಅವರ ಮತವನ್ನು ತೆಗೆದುಕೊಂಡು ಬಂದಿರಬಹುದು. ಆದರೆ, ಇವತ್ತು ಈ ಸರ್ಕಾರ ನಾವು ಅವರ ಪ್ರತಿನಿಧಿಗಳೆಲ್ಲರೂ ಈ ನಾಡಿನಲ್ಲಿ ಗುಣಮಟ್ಟದ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕು. ಆದರೆ, ನೇಮಕಾತಿ ಮಾಡಿಕೊಂಡಿರುವಂತಹ ಶಿಕ್ಷಕರಿಗೂ ಅವರ ಹಕ್ಕಿನಲ್ಲಿ ಕೊಡಬೇಕಾಗಿರುವಂತಹ ಎಲ್ಲಾ ಸೌಲಭ್ಯಗಳನ್ನು ಕೊಡಬೇಕೆಂದು ನಮ್ಮ ಚಿಂತನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ನನ್ನ ಹೆಸರನ್ನು ತೆಗೆದುಕೊಂಡು ನಾನು ಹೇಳಿದ್ದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದರು. ನನಗೂ ಅದರ ಬಗ್ಗೆ ಚಿಂತನೆ ಇದೆ. ನನ್ನ ಅನಿಸಿಕೆ ಏನೆಂದರೆ, ಇಷ್ಟು ಒಳ್ಳೆಯ ಚರ್ಚೆ ನಡೆಯುವಂತಹ ವೇಳೆಯಲ್ಲಿ ಶಿಕ್ಷಣದ ಗುಣಮಟ್ಟದ ಬಗ್ಗೆಯೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚರ್ಚೆ ನಡೆಯಲಿ ಎಂದು ಹೇಳಿದ್ದೇನೆಯೇ ಹೊರತು, ಅದರ ಬಗ್ಗೆ ಅವರು ಮಾತನಾಡುವುದಿಲ್ಲವೆಂದು ಹೇಳಿಲ್ಲ. ಇದರಿಂದ ಅವರಿಗೆ ಏನಾದರೂ ನೋವಾಗಿದ್ದರೆ, ನಾನು ಮಾನ್ಯ ಸದಸ್ಯರಾದ ರವಿಕುಮಾರ್‌ರವರು ಅಲ್ಲ, ನಾನು ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರಿಗೆ ಅಭಿನಂದನೆಗಳು. ಈ ವಿಷಯ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಲಿಸ್ಟ್ ಆಗಿದೆ. ಶಿಕ್ಷಣ ಇಲಾಖೆಯಲ್ಲಿ ಪ್ರೌಢ ಶಾಲೆಯ ಶಿಕ್ಷಕರಿಗಾಗಿ ನಿಗದಿಪಡಿಸಿರುವಂತಹ ವಿದ್ಯಾರ್ಹತೆ ಮತ್ತು ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ನೇಮಕಾತಿ ಆಗಿರುವಂತಹ ಶಿಕ್ಷಕರ ವಿದ್ಯಾರ್ಹತೆ ಒಂದೇ ಆಗಿದೆ. ಅವರೆಲ್ಲರೂ ಗ್ರೇಡ್–2 ಶಿಕ್ಷಕರು. ಆದರೆ, ಪ್ರೌಢ ಶಾಲೆಯ ಶಿಕ್ಷಕರಿಗೆ ಮತ್ತು ಮೊರಾರ್ಜಿ ಶಾಲೆಯ ಶಿಕ್ಷಕರಿಗೆ ಕೊಡುತ್ತಿರುವಂತಹ ಸೌಲಭ್ಯಗಳನ್ನು ತೋರಿಸಿದಾಗ ಅದರಲ್ಲಿ ಬಹಳ ತಾರತಮ್ಯ ಇದೆ. Working nature ಅನ್ನು ನೋಡಿದರೂ ಸಹ, ಈಗಾಗಲೇ ಮಾನ್ಯ ಸದಸ್ಯರಾದ ಅರುಣ ಶಹಾಪುರರವರು ಹೇಳಿದಂತೆ, ಅಲ್ಲಿ ಅವರ service, performance, development ನಮ್ಮ ಉಳಿದ ಎಲ್ಲಾ ಶಿಕ್ಷಕರಿಗಿಂತ ಹೆಚ್ಚಿಗೆ ತೋರಿಸುವಂತಹದ್ದಕ್ಕೆ ಸಾಕ್ಷಿಗಳು ಇವೆ. ಮೂರನೆಯದಾಗಿ, minority ನಲ್ಲಿ ಇರುವಂತಹ ಎಲ್ಲಾ ಶಾಲೆಗಳನು merge ಮಾಡಿ, ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ. ಪ್ರಶ್ನೆ ಒಂದಕ್ಕೆ ಉತ್ತರದಲ್ಲಿ "ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ನೋಂದಣಿ ಕಾಯ್ದೆ 1960 ರಡಿಯಲ್ಲಿ ಸ್ಥಾಪಿತವಾದ ಸಂಸ್ಥೆಯಾಗಿದ್ದು, ಸಂಘ ಸಂಸ್ಥೆಗಳ ಸಿಬ್ಬಂದಿಗಳನ್ನು ರಾಜ್ಯ ಸಿವಿಲ್ ಸೇವೆಯಲ್ಲಿ ವಿಲೀನಗೊಳಿಸಲು ಅವಕಾಶವಿರುವುದಿಲ್ಲವೆಂದು" ತಿಳಿಸಿದ್ದಾರೆ. ಮಾನ್ಯ ಸಚಿವರು ಈ ರೀತಿಯಾಗಿ ಉತ್ತರ ಕೊಡುವುದಾಗಿದ್ದರೆ, ಅಲ್ಪಸಂಖ್ಯಾತರ ಇಲಾಖೆಯನ್ನು merge ಮಾಡುವುದಕ್ಕೆ ಈ ಕಾಯ್ದೆ ಅಡ್ಡಿ ಬರಲಿಲ್ಲವೇ? ಏಕೆ ಅವರನ್ನು merge ಮಾಡಿ, ಇವರಿಗೆ ಏಕೆ ಅನ್ಯಾಯ ಮಾಡಿದರು? ಇದು discrimination ಆಗುವುದಿಲ್ಲವೇ? Does it not amount to ultra-vires of the Constitutional provision? ಇದರ ಬಗ್ಗೆ ಇಲಾಖೆಯಲ್ಲಿ ಸಾಕಷ್ಟು ಬಾರಿ ಚರ್ಚೆಯಾಗಿದ್ದರೂ ಸಹ, ಈ ಹಿಂದಿನ ಸರ್ಕಾರದಲ್ಲಿ ಶ್ರೀ ಕುಮಾರ್‌ನಾಯಕ್‌ರವರು ಇದ್ದಾಗಲೂ ಸಹ, ಇದೇ ವಿಚಾರವಾಗಿ ಚರ್ಚೆಯಾದಾಗ ಒಪ್ಪಿರುವಂತಹ ವಿಚಾರಗಳು ಇವೆ. ಆದ್ದರಿಂದ ನನ್ನ ಮನವಿ ಏನೆಂದರೆ, ಅವರನ್ನು ಸಹ merge ಮಾಡಿ ಅವರಿಗೂ ಸಹ ಎಲ್ಲ benefits ಕೊಡಬೇಕು ಎನ್ನುವುದು ನನ್ನ ಮನವಿ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಮಾತನಾಡುತ್ತಿರುವುದನ್ನು ಕೇಳಿಸಿಕೊಂಡು ಕುಳಿತ್ತಿದ್ದೆ. ಮಾನ್ಯ ಸದಸ್ಯರಾದ ಅರುಣ ಶಹಾಪುರರವರು, ಶ್ರೀ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಮರಿತಿಬ್ಬೇಗೌಡರು, ಶ್ರೀ ಶರಣಪ್ಪ ಮಟ್ಟೂರವರು ಮತ್ತು ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಸೇರಿ ಅತ್ಯಂತ ಕಳಕಳಿಯ ಕಾಳಜಿಯನ್ನು ಶಿಕ್ಷಕರ ಬಗ್ಗೆ ವ್ಯಕ್ತಮಾಡಿದ್ದಾರೆ. ಅವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರಾದ ಭೋಜೇಗೌಡರವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೇ? ಅವರಿಗೆ ಅವಕಾಶ ಕೊಡಬೇಕೆಂದರೆ ಕೊಡೋಣ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಅವರಿಗೆ ನಂತರ ಅವಕಾಶ ಕೊಡಿ. “ಎಲ್ಲಮ್ಮನ ಜಾತ್ರೆಯಲ್ಲಿ ಮುಲ್ಲಾನಿಗೆ ಏನು ಕೆಲಸ”.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರಿಗೆ, ದಯಮಾಡಿ ಒಂದು ನಿಮಿಷ ಅವಕಾಶ ಕೊಡಿ. ನಾನು ಮಾನ್ಯ ಸಚಿವರಿಗೆ ಒಂದ ವಿಷಯ ಹೇಳುವುದು ಇದೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಾದ ಭೋಜೇಗೌಡರವರ ತಂದೆಯವರ ಆತ್ಮೀಯ ಗೆಳೆಯ. ನಾನು ಮಾನ್ಯ ಸದಸ್ಯರ ತಂದೆಯವರ ಜೊತೆಗೆ ಇದ್ದೆ. ವಸತಿ ಶಿಕ್ಷಣ ಇಲಾಖೆಯಿಂದ ಅಲ್ಪಸಂಖ್ಯಾತರ ಶಾಲೆಗಳನ್ನು ಬೇರ್ಪಡಿಸಿದ ಮೇಲೆ ಅವರು ನಮ್ಮ ಇಲಾಖೆಯಲ್ಲಿದ್ದಂತಹ ಶಿಕ್ಷಕರನ್ನು ಮತ್ತು ಸಿಬ್ಬಂದಿಯವರನ್ನು ತೆಗೆದುಕೊಳ್ಳಲಿಲ್ಲ. ಅವರದೇ ಆದಂತಹ *Cadre and Recruitment Rules* ಅನ್ನು ರಚನೆ ಮಾಡಿಕೊಂಡು ಪ್ರತ್ಯೇಕವಾಗಿ ನೇಮಕಾತಿ ಮಾಡಿಕೊಂಡಿದ್ದಾರೆ. ಅದಕ್ಕಾಗಿ, ಇದಕ್ಕೂ ಮತ್ತು ಅದಕ್ಕೂ ಹೋಲಿಕೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ವಸತಿ ಶಿಕ್ಷಣ ಇಲಾಖೆಯಲ್ಲಿ 824 ಮತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ 68 ಶಾಲೆಗಳು ಎಸ್.ಸಿ., ಜನಾಂಗಕ್ಕೆ ಸೇರಿದ್ದು, 119 ಶಾಲೆಗಳು ಎಸ್.ಟಿ ಜನಾಂಗಕ್ಕೆ ಸೇರಿವೆ. ಒಟ್ಟು 187 ಆಶ್ರಮ ಶಾಲೆಗಳು ಇವೆ. ಎಲ್ಲವು ಸೇರಿ 1011 ಶಾಲೆಗಳು ನಮ್ಮಲ್ಲಿ ಇವೆ. ಇದರಲ್ಲಿ ಎಸ್.ಟಿ ಇಲಾಖೆಯಲ್ಲಿ ಇರುವಂತಹ ಆಶ್ರಮ ಶಾಲೆಗಳಿಗೆ ಸಮಸ್ಯೆ ಇಲ್ಲ. ಅವರದೇ ಅದಂತಹ ಪ್ರತ್ಯೇಕ ವ್ಯವಸ್ಥೆ ಇದೆ. 824 ಶಾಲೆಗಳನ್ನು Karnataka Co-operative Societies Act 1960 ಕೆಳಗಡೆ register ಆಗಿದಂತಹ Society ಅಡಿಯಲ್ಲಿ ಕೆಲಸ ಮಾಡುತ್ತೀವೆ. ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರರವರು ಮತ್ತು ಶ್ರೀ ಮರಿತಿಬ್ಬೇಗೌಡರವರು ಅವರಿಗೆ ಯಾವುದೇ ಸೌಲಭ್ಯಗಳನ್ನು ಕೊಡುತ್ತಿಲ್ಲವೆಂದು ಹೇಳಿದ್ದಾರೆ. Except DCRG (*Death-cum-Retirement Gratuity)* ಬಿಟ್ಟು ಉಳಿದ ಎಲ್ಲಾ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. DCRG ಅವರಿಗೆ ಸಿಗುತ್ತಿಲ್ಲ. ಅದನ್ನು ಕೊಡಬೇಕು ಎನ್ನುವುದು ಅವರ ಬೇಡಿಕೆ. ನಾನು ಅದನ್ನು ಅಲ್ಲಗಳೆಯುವುದಿಲ್ಲ.

(ಮುಂದು.,)

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(163)04–03–2020(6–00)ಎಂವಿ–ಎಂಡಿ(ವಿಕೆ)
**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು)**

ಏಕೆಂದರೆ, ವಸತಿ ಶಾಲೆಗಳಲ್ಲಿ ಇರತಕ್ಕಂಥ ಶಿಕ್ಷಕರು ಹೆಚ್ಚು ಶ್ರಮ ವಹಿಸಿ ಕೆಲಸ ಮಾಡುತ್ತಿದ್ದಾರೆ. ಆದುದರಿಂದ ಅವರಿಗೆ ವಸತಿ ಸೌಲಭ್ಯವನ್ನು ಕೂಡ ನಮ್ಮ ಕ್ಯಾಂಪಸ್‌ನ ಶಿಕ್ಷಣ ಸಮುಚ್ಚಯದೊಳಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಅಲ್ಲಿ ಕೇವಲ ಶೇಕಡಾ 95–96ರಷ್ಟು ಮಾತ್ರವಲ್ಲ 100ಕ್ಕೆ 100ರಷ್ಟು ಫಲಿತಾಂಶ ಬರುತ್ತಿದೆ. ಇನ್ನು ಕೆಲವು ಶಾಲೆಗಳಲ್ಲಂತೂ ಶೇಕಡಾ 100ರಷ್ಟು ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುತ್ತಿದ್ದಾರೆ. ಅಲ್ಲಿನ ಶಿಕ್ಷಕರು ಬಹಳ ಉತ್ತಮವಾದ ಶಿಕ್ಷಣವನ್ನು ನೀಡುತ್ತಿದ್ದಾರೆ. ಅದಕ್ಕೆ ನಾನು ಅಲ್ಲಿನ ಶಿಕ್ಷಕ ವರ್ಗ ಮತ್ತು ಸಿಬ್ಬಂದಿ ವರ್ಗದವರನ್ನು ಅಭಿನಂದಿಸುತ್ತೇನೆ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ, ಇಲ್ಲಿ separate Cadre and Recruitment Rules ಇಲ್ಲದೇ ಇರುವುದರಿಂದ, ಅವರನ್ನು Societies Registration Act ಅಡಿಯಲ್ಲಿ ನೇಮಕ ಮಾಡಿರುವುದರಿಂದ, ಇದನ್ನು ತ್ವರಿತವಾಗಿ ಮಾಡುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ ಎಂಬುದರ ಬಗ್ಗೆ ನಾನು ಉತ್ತರವನ್ನು ನೀಡಿದ್ದೇನೆ. ಮಾನ್ಯ ಸದಸ್ಯರ ಸಲಹೆ ಏನಿದೆ ಎಂದರೆ, Residential school ನಿಗಮವನ್ನು ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸಿ ಎಂದು ಹೇಳುತ್ತಾರೆ. ಆದರೆ, ಅದನ್ನು ಶಿಕ್ಷಣ ಇಲಾಖೆಯಲ್ಲಿ ವಿಲೀನಗೊಳಿಸುವುದು ಬೇಡ. ನಮ್ಮ ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಸರಾಸರಿ ಉತ್ತೀರ್ಣರಾಗುವವರ ಸಂಖ್ಯೆ ಶೇಕಡಾ 67ರಿಂದ 68ರಷ್ಟು ಮತ್ತು ಅದು ಶೇಕಡಾ 70ರ ಒಳಗೆ ಮಾತ್ರ ಇದೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಆದರೆ, ಇಲ್ಲಿ ಶೇಕಡಾ 96ರಿಂದ 100ರಷ್ಟು ಫಲಿತಾಂಶವಿದೆ. ಇಲ್ಲಿ ಬಡವರ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಸಿಗುತ್ತಿದೆ. ಅದಕ್ಕಾಗಿ ಅದನ್ನು ಪ್ರತ್ಯೇಕ ಮಾಡಿರುವ ವ್ಯವಸ್ಥೆ ಸರಿ ಇದೆ. ಅದನ್ನು ವಿಲೀನಗೊಳಿಸುವಂತಹ ವ್ಯವಸ್ಥೆ ಬೇಡ. ಈ ವಸತಿ ಶಿಕ್ಷಣ ಶಾಲೆಗಳನ್ನು 1995–96ರಲ್ಲಿ ಪ್ರಾರಂಭ ಮಾಡಿದ್ದು, ಆ ಸಂದರ್ಭದಲ್ಲಿ ನಾನು ಜನತಾದಳ ಪಕ್ಷದ ಸರ್ಕಾರದಲ್ಲಿ ಇದ್ದೆ. ಅವತ್ತಿನ ಕಾಲದಲ್ಲಿ ನಮ್ಮ ನೆರೆ ರಾಜ್ಯವಾದ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಾದ ದಿವಂಗತ ಎನ್.ಟಿ.ರಾಮರಾವ್ ಅವರು ಅಲ್ಲಿ ಸುಮಾರು 200 ವಸತಿ ಶಾಲೆಗಳನ್ನು ಪ್ರಾರಂಭ ಮಾಡಿದ್ದರು. ಆ ಶಾಲೆಗಳು ಬಹಳ ಹೆಸರುವಾಸಿಯಾಗಿದ್ದವು. ನಾವು ಅವುಗಳನ್ನು ನೋಡಿಕೊಂಡು ಬಂದಿದ್ದೆವು. ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದರು ಮತ್ತು ಶ್ರೀ ರಮೇಶ್ ಜಿಗಜಿಣಗಿಯವರು ಸಮಾಜ ಕಲ್ಯಾಣ ಸಚಿವರಾಗಿದ್ದರು. ಆಗ ನಾನು ಎಸ್.ಸಿ. ಮತ್ತು ಎಸ್.ಟಿ. ಸಮಿತಿಯಲ್ಲಿ ಇದ್ದೆ. ಆ ರೀತಿ ನಮ್ಮಲ್ಲೂ ಸಹ ಮಾಡಬೇಕೆಂದು ನಾನು ಅವರಿಗೆ ವಿನಂತಿ ಮಾಡಿದ್ದೆ. ಅಂದಿನಿಂದ ಇವತ್ತಿನವರೆಗೂ ಈ ಸಂಸ್ಥೆಗಳು Societies Act ಅಡಿಯಲ್ಲಿ Registration ಆಗಿ ಉಳಿದಿರತಕ್ಕಂತಹವು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದಕ್ಕೆ ಇದರ ಬಗ್ಗೆ ಮಾನ್ಯ ಸದಸ್ಯರು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಸದಸ್ಯರಾದ ಮಾನ್ಯ ಅರುಣ ಶಹಾಪುರ ರವರು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದರು, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದು ಮತ್ತು ಮಾನ್ಯ ಗೋವಿಂದ ಎಂ. ಕಾರಜೋಳರವರು ಸಮಾಜ ಕಲ್ಯಾಣ ಸಚಿವರಾಗಿರುವಾಗ ಇದು ಆಗದೇ ಹೋದರೆ ಹೇಗೆ ಎಂದು ಹೇಳಿದ್ದಾರೆ. ಅವರ ಶಿಫಾರಸ್ಸಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾವು ಕೂಡ ಈ ವಿಷಯದ ಬಗ್ಗೆ ಗಂಭೀರವಾಗಿ ಯೋಚಿಸಿದ್ದೇವೆ. ಏಕೆಂದರೆ, ಈ ಶಿಕ್ಷಕರಿಗೆ ಏನಾದರೂ ಅನುಕೂಲ ಮಾಡಿಕೊಡಬೇಕು ಎನ್ನುವಂತಹ ನಿಟ್ಟಿನಲ್ಲಿ ಇದ್ದೇವೆ. ಅದಕ್ಕೆ ಸಂಬಂಧಪಟ್ಟಂತೆ ಕಡತ ಓಡಾಡುತ್ತಿದೆ. ಅದನ್ನು ಅಂತಿಮಗೊಳಿಸಿ, ಅದರ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಸಂದರ್ಭ ಬಂದಾಗ, ಇವತ್ತು ಯಾರ‍್ಯಾರು ಇದಕ್ಕೆ ಸಂಬಂಧಪಟ್ಟಂತೆ ಮಾತನಾಡಿದ್ದಾರೆ, ಅವರೆಲ್ಲರನ್ನು ಸಹ ಕರೆಯುತ್ತೇನೆ. ನಾನು ಅವರನ್ನು ಬಿಟ್ಟು ಏನೂ ಮಾಡುವುದಿಲ್ಲ. ಅವರನ್ನು ಕರೆದು ಅವರ ಜೊತೆಯಲ್ಲಿ ಚರ್ಚೆ ಮಾಡಿ, ಏನೇನು ನಿರ್ಣಯ ಮಾಡಬಹುದು ಎನ್ನುವುದರ ಬಗ್ಗೆ ಖಂಡಿತವಾಗಿ ಒಂದು ಸಭೆಯನ್ನು ಕರೆಯುತ್ತೇನೆ. ಅದರ ಬಗ್ಗೆ ಯಾರೂ ಸಹ ಆತಂಕಪಡುವಂತಹ ಅವಶ್ಯಕತೆ ಇಲ್ಲ. ಎಲ್ಲರಿಗೂ ಒಳ್ಳೆಯದಾಗಲಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಒಂದು ಮಾಹಿತಿಯನ್ನು ತಿಳಿಸಬೇಕಾಗಿದೆ. ಅವರಿಗೆ ಇರುವಂತಹ ಮಾಹಿತಿಯ ಪ್ರಕಾರ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ನಿಜವಾಗಿಯೂ ಒಂದು option ಕೊಟ್ಟರು. ನಮ್ಮಲ್ಲಿನ ಯಾವ ಶಿಕ್ಷಕರು ಅಲ್ಪಸಂಖ್ಯಾತರ ಶಾಲೆಗಳಿಗೆ ಹೋಗುತ್ತಾರೆ, ಅಂತಹವರಿಗೆ ಅವಕಾಶವನ್ನು ಕೊಟ್ಟಿದ್ದಾರೆ. ಆದುದರಿಂದ ಮಾನ್ಯ ಸಚಿವರಿಗೆ ಸರಿಯಾದ ಮಾಹಿತಿ ಬಂದಿಲ್ಲವೆಂಬುದು ನನ್ನ ಭಾವನೆಯಾಗಿದೆ. ಅಲ್ಲಿ ಸಾಧ್ಯವಾಗಿರುವುದು ಇಲ್ಲಿ ಏಕೆ ಆಗುತ್ತಿಲ್ಲ ಎಂಬ ಪ್ರಶ್ನೆ ಮೂಡಿದೆ. ಎರಡನೆಯದಾಗಿ, ಈ ಬೇಡಿಕೆಯ ಹಿಂದಿನ ನೋವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಅರ್ಥ ಮಾಡಿಕೊಂಡಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಪಡೆದ ನಂತರ ನನಗೂ ಸಹ ಮನವರಿಕೆಯಾಗಿದೆ. ಶ್ರೀ ಕುಮಾರ್ ನಾಯಕ್‌ರವರ ವರದಿಯ ಪ್ರಕಾರ ಶಿಕ್ಷಣ ಇಲಾಖೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಿಕ್ಷಕರಿಗೆ ವಿಶೇಷ ವೇತನ ಭತ್ಯೆಯನ್ನು ನೀಡುತ್ತಿದ್ದಾರೆ. ಇವರಿಗೆ ಎರಡು ವರ್ಷವಾದರೂ ಸಹ ಸಿಗದೇ ಇದ್ದರೆ ಹೇಗೆ? ಪ್ರತಿ ನಿರ್ಣಯಕ್ಕೂ ಮತ್ತು ಪ್ರತಿಬಾರಿ ಡಿ.ಎ. ಮೊತ್ತ ಹಾಕಬೇಕಾದರೂ ಸಹ Executive Council ಸಭೆಯಾಗಬೇಕು. ಹೀಗಾಗಿ ಅವರು ಬಹಳ suffer ಆಗುತ್ತಿದ್ದಾರೆ. ಈಗ ಶಿಕ್ಷಕರು ಇಷ್ಟು ಮಾಡಿಯೂ ಸಹ ನಾವು ಏಕೆ suffer ಆಗಬೇಕು ಎನ್ನುವ ಕಾರಣಕ್ಕಾಗಿ ಅವರಿಂದ ಬೇರೆ ಬೇರೆ ಬೇಡಿಕೆಗಳು ಬರುತ್ತಿವೆ. ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಕರಿಗಿಂತ ಹೆಚ್ಚು ಕೊಡುಗೆ ಕೊಡುತ್ತಿರುವುದರಿಂದ, ಅವರಿಗೂ ಸಹ ಹೆಚ್ಚಿನ ಪ್ರಮಾಣದಲ್ಲಿ ಸವಲತ್ತುಗಳನ್ನು ಕೊಡಬೇಕು ಎನ್ನುವುದಷ್ಟೇ ನಮ್ಮ ಬೇಡಿಕೆಯಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಗುಣಮಟ್ಟದ ಶಿಕ್ಷಣವನ್ನು ಕಲಿತಿರುವಂತಹವರು. ಏಕೆಂದರೆ, ಅಂದಿನ ಕಾಲದ ಗುಣಮಟ್ಟದ ಶಿಕ್ಷಣದಲ್ಲಿ 'ಮುದ್ದಣ್ಣ ಮನೋರಮೆ ಸಲ್ಲಾಪ' ದಂತಹ ಪಾಠವನ್ನು ಕಲಿತಿರುವಂತಹವರು. ಜೊತೆಗೆ 'ವಾಲ್ಮೀಕಿ ರಾಮಾಯಣ' ಮತ್ತು 'ಪುಣ್ಯಕೋಟಿ' ಗದ್ಯಪಾಠಗಳನ್ನು ಕಲಿತಿರುವಂತಹವರು. ನಮ್ಮ ಶಿಕ್ಷಕರು 24x7 ಕೆಲಸ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಆ ಶಿಕ್ಷಕರ ಪಾಲಿಗೆ ಪುಣ್ಯಕೋಟಿ ಆಗಬೇಕೆಂದು ಕೇಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ಕಾಳಜಿ ಮತ್ತು ಒಳ್ಳೆಯ ನುಡಿಗಳಿಂದ ಅದನ್ನು ಪರಿಗಣನೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅದಕ್ಕೆ ಅವರಿಗೆ ನನ್ನ ಅಭಿನಂದನೆಗಳು. ಆದರೆ ಅದನ್ನು ವಿಲೀನಗೊಳಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ನಾನು ಅವರಿಗೆ ಒಂದು ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಸರ್ಕಾರಿ ಶಾಲೆಯಲ್ಲಿ ಕೊಡುವಂತಹ ಸವಲತ್ತುಗಳನ್ನು ಕೊಡುವ ತೀರ್ಮಾನಕ್ಕೆ ಬರುವುದು ಒಳ್ಳೆಯದು ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ನಿಮ್ಮಗೆ ಸಚಿವರ ಉತ್ತರ ಸಾಕಾಗಲಿಲ್ಲವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಇನ್ನು ಉಪ ಪ್ರಶ್ನೆಯನ್ನು ಕೇಳಿಲ್ಲ. ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸಮಸ್ಯೆಯನ್ನು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ. ಅದಕ್ಕೆ ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದಂತೆ, ಡಿ.ಸಿ.ಆರ್.ಜಿ. ಬಿಟ್ಟು ಉಳಿದೆಲ್ಲಾ ಸವಲತ್ತುಗಳನ್ನು ನೀಡಿದ್ದೇವೆಂದು ಹೇಳಿದ್ದಾರೆ. ಆದರೆ, ನೋಡಿ ಸ್ವಾಮಿ ಕೆ.ಜಿ.ಐ.ಡಿ. ಇಲ್ಲ. ಆರೋಗ್ಯ ಜ್ಯೋತಿ ಸಂಜೀವಿನಿ ಇಲ್ಲ. ಶ್ರೀ ಕುಮಾರ್ ನಾಯಕ್ ವರದಿಯ ವಿಶೇಷ ವೇತನ ಭತ್ಯೆ ಇಲ್ಲ ಮತ್ತು ಯಾವುದೇ ರೀತಿಯ ಬಡ್ತಿಗಳು ಇಲ್ಲ. ಮತ್ತೆ ನವೋದಯ ಶಾಲೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರಿಗೆ ಅಲ್ಲಿ ಶೇಕಡಾ 10ರಷ್ಟು ವಸತಿ ಭತ್ಯೆಯನ್ನು ನೀಡುತ್ತಾರೆ. ಆದರೆ, ಇವರಿಗೆ ವಸತಿ ಭತ್ಯೆ ಕೂಡ ಇಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸಮಸ್ಯೆಯನ್ನು ಅರ್ಥ ಮಾಡಿಕೊಂಡಿದ್ದಾರೆ. ಅವರು ಬಹಳ ಸಮರ್ಥರಿದ್ದಾರೆ, ಇವರ ಕಾಲದಲ್ಲಾದರೂ ಕೂಡ, ಈಗ ಮಾನ್ಯ ಉಪ ಮುಖ್ಯಮಂತ್ರಿಗಳೇ ಇವರು ಕೊಡುತ್ತಿರುವ ಗುಣಾತ್ಮಕ ಶಿಕ್ಷಣದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವರು ಗ್ರಾಮೀಣ ಪ್ರದೇಶದ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಇಂತಹ ಒಂದು ಉತ್ತಮವಾದಂತಹ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಗಿಂತ ಉತ್ತಮವಾದ ಶಿಕ್ಷಣ ವ್ಯವಸ್ಥೆ ಇಲ್ಲಿ ನಡೆಯುತ್ತಿದೆ. ಇದು ಬಡವರ ಕಲ್ಯಾಣಕ್ಕಾಗಿ ಇರುವಂಥದ್ದು. ಅದನ್ನು ಪರಿಶೀಲನೆ ಮಾಡಿ, ನಮ್ಮನ್ನು ಕರೆದು ಮಾತನಾಡುತ್ತೇನೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದುದರಿಂದ ಅವರು ಯಾವುದರ ಬಗ್ಗೆ ಪರಿಶೀಲನೆ ಮಾಡುತ್ತಾರೆ ಮತ್ತು ಯಾವ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಮಯದೊಳಗೆ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ದಯವಿಟ್ಟು ತಿಳಿಸಬೇಕು. ಇದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳೇ ಕಾಯಕಲ್ಪ ನೀಡಬೇಕು. ಈ ಶಿಕ್ಷಕರನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಪೂರ್ಣ ಪ್ರಮಾಣದಲ್ಲಿ ವಿಲೀನಗೊಳಿಸುವಂತಹ ಕೆಲಸ ಅವರ ಅವಧಿಯಲ್ಲಿ ಆಗಬೇಕು. ಅದನ್ನು ಅವರು ಯಾವ ಸಮಯದಲ್ಲಿ ಮಾಡುತ್ತಾರೆಂದು ದಯಮಾಡಿ ತಿಳಿಸಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರವನ್ನು ಬಹಳ ವಿವರವಾಗಿ ನೀಡಿದ್ದೇನೆ. ಇನ್ನುಳಿದಂತೆ ಮಾನ್ಯ ಸದಸ್ಯರ ಉಪ ಪ್ರಶ್ನೆಗಳನ್ನು ಮತ್ತು ಅವರ ಸಲಹೆಗಳನ್ನು ಪರಿಶೀಲನೆ ಮಾಡುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಸಭೆ ಕರೆಯುತ್ತೇನೆ. ಆ ಸಭೆಗೆ ಮಾನ್ಯ ಸದಸ್ಯರನ್ನು ಸಹ ಕರೆಯುತ್ತೇನೆಂದು ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇದರ ಮಧ್ಯದಲ್ಲಿ ಸದಸ್ಯರಾದ ಮಾನ್ಯ ಎಸ್.ಎಲ್.ಭೋಜೇಗೌಡರು ಮಾತನಾಡಿದರು. ನನಗೆ ಗೊತ್ತಿರುವಂತೆ ಭೋಜೇಗೌಡರ ತಂದೆಯವರು ಬಹಳ ಅದ್ಭುತ ಕಲಾವಿದರು ಎಂಬುದನ್ನು ಕೇಳಿ ತಿಳಿದುಕೊಂಡಿದ್ದೇನೆ. ಆದರೆ ಸದಸ್ಯರಾದ ಮಾನ್ಯ ಭೋಜೇಗೌಡರು ಅದ್ಭುತ ಕಲಾವಿದರು ಮತ್ತು ರಸಿಕರೂ ಹೌದು ಎಂಬ ಮಾತನ್ನು ಕೇಳಿದ್ದೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಎಸ್.ಎಲ್.ಭೋಜೇಗೌಡರು ರಸಿಕರು ಎಂದು ಹೇಳುವುದಕ್ಕೆ ಅವರು 'ಮುದ್ದಣ್ಣ ಮನೋರಮೆ ಸಲ್ಲಾಪ'ದ ಬಗ್ಗೆ ಪ್ರಸ್ತಾಪ ಮಾಡಿರುವುದೇ ಒಂದು ಸಾಕ್ಷಿಯಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಆದಷ್ಟು ಬೇಗ ಒಂದು ಸಭೆ ಕರೆದು, ಎಲ್ಲಾ ವಿಚಾರಗಳನ್ನು ಚರ್ಚೆ ಮಾಡಿ, ಯಾವ್ಯಾವುದನ್ನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಖಂಡಿತವಾಗಿ ಮಾಡೋಣ.

**(ಪ್ರಶ್ನೆ ಸಂಖ್ಯೆ: 217)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ಕಾರವಾರ ಜಿಲ್ಲೆಯ ಬಂದರು ಇಲಾಖೆಯಲ್ಲಿ ಹೊರಗುತ್ತಿಗೆ ಸಿಬ್ಬಂದಿಗೆ ಕಿರುಕುಳ ನಿರಂತರವಾಗಿದ್ದು, ಅವರ ವೇತನದ ಅಲ್ಪ ಪಾಲನ್ನು ಗುತ್ತಿಗೆದಾರರು ಪಡೆಯುತ್ತಿರುವ ಬಗ್ಗೆ ದೂರು ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಅವರು ಅದರ ಬಗ್ಗೆ ದೂರು ಬಂದಿಲ್ಲವೆಂದು ಹೇಳಿದ್ದಾರೆ.

**(ಮುಂದು...)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(164) 04.03.2020 06.10 LL-AK
**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ(ಮುಂದುವರೆದಿದ್ದು...)**

ಬಂದರು ಇಲಾಖೆಯಲ್ಲಿ ಹಾಲಿ 51 ಸಿಬ್ಬಂದಿಗಳು ಹೊರ ಗುತ್ತಿಗೆಯಲ್ಲಿ ದುಡಿಯುತ್ತಿದ್ದಾರೆ. ಆದರೆ, ಇವರು ಹೊರಗುತ್ತಿಗೆದಾರರಿಗೆ (ಕಂಪನಿಗೆ) ಪ್ರತಿಯೊಬ್ಬ ಹೊರಗುತ್ತಿಗೆ ನೌಕರರು ಪ್ರತಿ ತಿಂಗಳು 2 ಸಾವಿರ ರೂಪಾಯಿ ಕಮೀಷನ್ ಕೊಡಲೇಬೇಕು. ಅದು ಕೊಟ್ಟರೆ ಮಾತ್ರ ಅವರಿಗೆ ಪಗಾರ ಆಗುತ್ತದೆ. ಪಾಪ, ಅವರು "ಏತಕ್ಕೆ 2 ಸಾವಿರ ರೂಪಾಯಿ ಮುರಿದುಕೊಳ್ಳುತ್ತೀರೆಂದು" ಹೇಳಿದರೆ, ಅವರನ್ನು "ನೌಕರಿಯಿಂದ ಹೊರಗೆ ತೆಗೆಯುತ್ತೇವೆಂದು" ಹೇಳುತ್ತಾರೆ. ಏಕೆಂದರೆ, ಅವರ ಕೆಲಸ ಹೊರಗುತ್ತಿಗೆ ಆಧಾರದ ಮೇರೆಗೆ ಇರುತ್ತದೆ. ಈ ಪರಿಸ್ಥಿತಿ ಅಲ್ಲಿ ಇದೆ. ಹಾಗಾಗಿ, ಹೊರಗುತ್ತಿಗೆ ನೌಕರರಿಗೆ ಏನು ವೇತನ ನೀಡಲಾಗುತ್ತದೆ ಅದನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡುತ್ತೇನೆ. ಅಲ್ಲದೇ, ಮತ್ತೊಬ್ಬ ಶ್ರೀ ನಾರಾಯಣ ಎಂಬ ನಿವೃತ್ತ ನೌಕರರು ಪುನಃ ಆ ಇಲಾಖೆಗೆ ಬರುತ್ತಾನೆಂದು ದಿನಪತ್ರಿಕೆಯಲ್ಲಿ ಬಂದಿದೆ. ಕರಾವಳಿ ಮುಂಜಾನೆ ದಿನಪತ್ರಿಕೆಯಲ್ಲಿ, "ಸ್ವಾಮಿ ಕಾರ್ಯಕ್ಕೆ ಬರುವನೇ ನಿವೃತ್ತ ನಾರಾಯಣ" ಎಂದು ವರದಿಯಾಗಿದೆ. ಅಂದರೆ ಇವರು ನಿವೃತ್ತರಾಗಿದ್ದಾರೆ. ಆದರೂ ಆತ, "ಬಂದರು ಇಲಾಖೆಯಲ್ಲಿ ಎಲ್ಲವನ್ನೂ ಫೋನ್ ಮುಖಾಂತರ ನಡೆಸುತ್ತಾರೆ. ಆದುದರಿಂದ, ಇವರನ್ನು ಅಲ್ಲಿಗೆ ಪುನಃ ನೇಮಿಸಿಕೊಳ್ಳಬಾರದೆಂದು" ದಿನಪತ್ರಿಕೆಯಲ್ಲಿ ವರದಿಯಾಗಿದೆ. ಅಲ್ಲದೇ, ಈ ನೌಕರರಿಗೆ ಆಗುವಂತಹ ಅನ್ಯಾಯ, ಮೊದಲೇ ಇವರಿಗೆ ವೇತನ ಸಿಗುವುದೇ 15 ರಿಂದ 16 ಸಾವಿರ ರೂಪಾಯಿ. ಅದರಲ್ಲಿ ಕಮೀಷನ್ 2 ಸಾವಿರ ಮುರಿದುಕೊಂಡು ಆ ನಂತರ ವೇತನ ನೀಡುತ್ತಾರೆಂದರೆ ಇದು ನೌಕರರಿಗೆ ಅನ್ಯಾಯ ಮಾಡಿದಂತಾಗಿದೆ. ಅಗತ್ಯವಿದ್ದರೆ ತಾವು ಈ ಬಗ್ಗೆ ತನಿಖೆ ಮಾಡಬಹುದಾಗಿದೆ. ಈ ಬಗ್ಗೆ ನಾವು ಸುಳ್ಳು ಹೇಳುವುದಿಲ್ಲ. ಆ ನೌಕರರು ನಮ್ಮನ್ನು ನೇರವಾಗಿ ಭೇಟಿ ಮಾಡಿರುತ್ತಾರೆ. ಈ ಬಗ್ಗೆ ತಮಗೆ ಪತ್ರ ಬರೆಯುವುದಕ್ಕೆ ಹೆದರುತ್ತಾರೆ. ಏಕೆಂದರೆ, ಆ ನೌಕರರು ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದು, ನಾಳೆ ದಿವಸ ಅವರನ್ನು ಕೆಲಸದಿಂದ ತೆಗೆದರೆ ಏನು ಮಾಡುವುದೆಂದು ಅವರು ಹೆದರುತ್ತಾರೆ. ಇದು ನಿಜವಾದ ಸಂಗತಿಯಾಗಿದೆ. ಆದುದರಿಂದ, ಆ ನೌಕರರಿಗೆ ಸಿಗುವಂತಹ ಪಗಾರ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಿದರೆ ಅವರಿಗೆ ನೇರವಾಗಿ ಸಿಗುತ್ತದೆ ಎಂದು ನಾನು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ವಿನಂತಿ ಮಾಡಿ, ಇದಕ್ಕೆ ಸೂಕ್ತ ಪರಿಹಾರ ಕಂಡುಹಿಡಿಯಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 3 ವಿಚಾರಗಳನ್ನು ಉಲ್ಲೇಖ ಮಾಡಿದ್ದಾರೆ. ಮೊದಲನೆಯದಾಗಿ, ಹೊರಗುತ್ತಿಗೆ ಆಧಾರದ ಮೇರೆಗೆ 51 ಸಿಬ್ಬಂದಿಗಳು ನಮ್ಮ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಕೊಟ್ಟಿರುವಂತಹ ವೇತನದಲ್ಲಿ ತಲಾ 2 ಸಾವಿರ ರೂಪಾಯಿ ಹಣವನ್ನು ಗುತ್ತಿಗೆದಾರರು ವಾಪಸ್ಸು ತೆಗೆದುಕೊಳ್ಳುತ್ತಿದ್ದಾರೆಂದು ಎಂಬ ಗಂಭೀರವಾದ ಆರೋಪವನ್ನು ಮಾಡಿದ್ದಾರೆ. ನಮ್ಮ

ಇಲಾಖೆಗೆ ಇಲ್ಲಿಯವರೆಗೂ ಆ ಬಗ್ಗೆ ದೂರುಗಳು ಬಂದಿರುವುದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಬಹಳ ಸ್ಪಷ್ಟವಾಗಿ ಹೇಳಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ನಿರ್ದಾಕ್ಷಿಣ್ಯವಾದ ತನಿಖೆ ಮಾಡುತ್ತೇವೆ ಮತ್ತು ಹೊರಗುತ್ತಿಗೆ ಆಧಾರದ ಮೇರೆಗೆ ಯಾರಿಗೆ ಗುತ್ತಿಗೆ ಕೊಟ್ಟಿದ್ದೇವೆ ಅವರು ಸಿಬ್ಬಂದಿಗಳಿಗೆ ವೇತನವನ್ನು ಅವರ ಬ್ಯಾಂಕ್ ಖಾತೆಗೆ ಹಾಕುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ತನಿಖೆ ಮಾಡುತ್ತೇವೆ. ಅವರ ವಿರುದ್ಧ ಇಂತಹ ದೂರುಗಳು ಮೇಲ್ನೋಟಕ್ಕೆ ಖಚಿತವಾದರೂ ಸಹ ಆ ಗುತ್ತಿಗೆಯನ್ನು ರದ್ದುಪಡಿಸುತ್ತೇವೆ ಮತ್ತು ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಬೇಕು ಆ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇವೆ ಎನ್ನುವಂತಹ ಉಲ್ಲೇಖಗಳನ್ನು ಈ ಸಂದರ್ಭದಲ್ಲಿ ನೀಡುತ್ತೇನೆ.

ಇದರ ಜೊತೆಗೆ, 51 ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆ ಕೊಟ್ಟಿರುವಂತಹ ಶಿಫಾರಸ್ಸುಗಳನ್ವಯ ಸಂಬಳವನ್ನು ಕೊಡಲಾಗುತ್ತದೆ. ಹೊರಗುತ್ತಿಗೆಯನ್ನು ಟೆಂಡರ್ ಕರೆದು ತೆಗೆದುಕೊಂಡಿರುತ್ತೇವೆ. ಆದರೆ, ಈಗಿರುವ ಗಂಭೀರವಾದ ಆರೋಪ ಏನೆಂದರೆ, ಹೊರಗುತ್ತಿಗೆ ಮೇರೆಗೆ ಯಾರು ನಮಗೆ ಸಿಬ್ಬಂದಿಗಳನ್ನು ಕೊಟ್ಟಿರುತ್ತಾರೆ, ಅವರು ತಮ್ಮ ಸಿಬ್ಬಂದಿಗಳಿಗೆ ಕೊಟ್ಟಿರುವಂತಹ ವೇತನದಲ್ಲಿ 2 ಸಾವಿರ ರೂಪಾಯಿ ಹಣವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ ಎನ್ನುವುದೇ ಇವರ ವಿರುದ್ಧ ಇರುವಂತಹ ಒಟ್ಟಾರೆ ಆರೋಪಗಳು. ಈ ಆರೋಪಗಳ ಮೇಲೆ ತನಿಖೆ ಮಾಡುತ್ತೇವೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಮತ್ತು ಸಿಬ್ಬಂದಿಗಳಿಗೆ ನ್ಯಾಯ ಸಿಗುವಂತಹ ಕೆಲಸವನ್ನು ಮಾಡುತ್ತೇವೆ ಎನ್ನುವಂತಹ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ, ಮಾನ್ಯ ಸದಸ್ಯರು "ಸ್ವಾಮಿ ಕಾರ್ಯಕ್ಕೆ ಬರುವನೇ ನಿವೃತ್ತ ನಾರಾಯಣ" ಎಂದು ದಿನಪತ್ರಿಕೆಯಲ್ಲಿ ವರದಿಯಾಗಿರುವುದನ್ನು ಹೇಳಿದ್ದಾರೆ. ಕಾರವಾರ ಬಂದರಿನಲ್ಲಿ ನಿವೃತ್ತ ಅಧಿಕಾರಿಗಳನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಸುದ್ದಿ ದಿನಪತ್ರಿಕೆಯಲ್ಲಿ ವರದಿಯಾಗಿದೆ. ತೆಗೆದುಕೊಳ್ಳಬಹುದಾದ ನಿವೃತ್ತ ಅಧಿಕಾರಿಗಳಿಗೂ ಹಾಗೂ ಅಲ್ಲಿರುವಂತಹ ಅಧಿಕಾರಿಗಳಿಗೆ ಕೆಲವು ಪೂರ್ವಗ್ರಹಪೀಡಿತವಾದ ಕೆಲವು ಸಮಸ್ಯೆಗಳಿವೆ. ಯಾವುದೇ ಕಾರಣಕ್ಕೂ ಮಾನ್ಯ ಸದಸ್ಯರು ಹೇಳಿರುವಂತಹ ಅಧಿಕಾರಿಗಳನ್ನು ಪುನಃ ತೆಗೆದುಕೊಳ್ಳುವುದಿಲ್ಲವೆನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ.

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ಮಾನ್ಯ ಸಭಾಪತಿಯವರೇ, ಆ ಹೊರಗುತ್ತಿಗೆ ನೌಕರರ ಬ್ಯಾಂಕ್ ಖಾತೆಗೆ ವೇತನ ಪಾವತಿ ಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪಾರದರ್ಶಕ ಕಾಯಿದೆ ಪ್ರಕಾರ ಹೊರಗುತ್ತಿಗೆ ಆಧಾರದ ಮೇರೆಗೆ ಯಾರು ನಮಗೆ ಮಾನವ ಸಂಪನ್ಮೂಲಗಳನ್ನು ಕೊಡುತ್ತಾರೆ ಅವರು ತಮ್ಮ ಹೊರಗುತ್ತಿಗೆ ಕಂಪನಿಗಳ ಮುಖಾಂತರ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡಬೇಕೆಂದು ಕಂಡೀಷನ್ ಇದೆ. ಅದರಲ್ಲಿ ಅವರು ಏನಾದರೂ ತಪ್ಪು ಮಾಡಿದ್ದಾರೆಯೇ ಎಂದು ನಾವು ತನಿಖೆ ಮಾಡುತ್ತೇವೆ. ಅದಕ್ಕೆ ಯಾವುದೇ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಲಿಖಿತ ದೂರು ಬೇಕಾಗಿರುವುದಿಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವ ಆಧಾರದ ಮೇರೆಗೆ ತನಿಖೆ ಮಾಡುತ್ತೇವೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಹಾಗೂ ಆ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯಿಂದ ಎಷ್ಟು ವೇತನ ಸಿಗಬೇಕು ಅಷ್ಟು ವೇತನ ಸಿಗುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 262**

**ಶ್ರೀ ಕೆ. ಹರೀಶ್ ಕುಮಾರ್:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ. ಹರೀಶ್‌ಕುಮಾರ್‌ರವರ ಪ್ರಶ್ನೆಗೆ ನಾಳೆ ಉತ್ತರ ಒದಗಿಸುತ್ತೇವೆ. ಏಕೆಂದರೆ, ಅವರ ಪ್ರಶ್ನೆ ಕೃಷಿ ಸಚಿವರಿಗೆ ಹೋಗಿ ಅಲ್ಲಿಂದ ಉತ್ತರ ಬಂದಿರುತ್ತದೆ. ಆದರೆ, ಮಾನ್ಯ ಸದಸ್ಯರ ಮೂಲ ಪ್ರಶ್ನೆ ಕೃಷಿ ಉತ್ಪನ್ನ ಮಾರುಕಟ್ಟೆ, ಸಹಕಾರ ಇಲಾಖೆಗೆ ಸಂಬಂಧಿಸಿದ್ದಾಗಿದೆ. ಆದುದರಿಂದ, ಅವರ ಪ್ರಶ್ನೆಗೆ ನಾಳೆ ಉತ್ತರ ಒದಗಿಸುತ್ತೇವೆ.

**ಪ್ರಶ್ನೆ ಸಂಖ್ಯೆ: 247**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅ. ದೇವೇಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬಂದಿರುತ್ತದೆ. ಕಳೆದ ಸರ್ಕಾರದ ಅವಧಿಯಲ್ಲಿ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಿದ್ದೇವೆ ಹಾಗೂ ಕಾಮಗಾರಿ ಕೂಡಲೇ ಪ್ರಾರಂಭಿಸುತ್ತೇವೆಂದು ಹೇಳಿದ್ದರು. ಆದುದರಿಂದ, ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸುತ್ತಾರೆ ಹಾಗೂ ತಾವರೆಕೆರೆ ಮತ್ತು ಚೋಳನಾಯಕನಹಳ್ಳಿಯಲ್ಲಿ ಫ್ಲೈಓವರ್ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದಾರೆ ಅದಕ್ಕಾಗಿ ಧನ್ಯವಾದಗಳು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾಗಡಿಯಿಂದ ಬೆಂಗಳೂರಿಗೆ ಬರಬೇಕಾದರೆ ಬಹಳ ಕಷ್ಟವಾಗುತ್ತಿರುವುದನ್ನು ಪರಿಗಣಿಸಿ ಕಳೆದ ಸರ್ಕಾರದ ಅವಧಿಯಲ್ಲಿ ಶ್ರೀ ಸಿದ್ದರಾಮಯ್ಯನವರ ಕಾಲದಲ್ಲಿ ಈ ಕಾಮಗಾರಿ ಪ್ರಾರಂಭವಾಯಿತು. ಆದರೆ, ಉತ್ತರದಲ್ಲಿ ಇನ್ನೂ ಕೂಡ ಪ್ರಾರಂಭಿಕ ಹಂತದಲ್ಲಿಯೇ ಇದೆ. ಜೊತೆಗೆ, ಅ. ದೇವೇಗೌಡರವರು ಚೋಳನಾಯಕನಹಳ್ಳಿಗೂ ಫ್ಲೈಓವರ್ ನಿರ್ಮಿಸಬೇಕೆಂದು ಹೇಳಿದ್ದಾರೆ. ಆದರೆ, ಅದರಲ್ಲಿ ಕೇವಲ ತಾವರೆಕೆರೆಗೆ ಮಾತ್ರ ಫ್ಲೈಓವರ್ ನಿರ್ಮಿಸಬೇಕೆಂದು ಇದೆ. ಚೋಳನಾಯಕನಹಳ್ಳಿ ವಿಷಯ ಇರುವುದಿಲ್ಲ. ಎರಡನೆಯದಾಗಿ, ಬೆಂಗಳೂರಿಗೆ ಬರುವಂತಹ ಎಲ್ಲಾ ರಸ್ತೆಗಳು ಕೂಡ ಇವೊತ್ತಿನ ದಿವಸ ಉತ್ತಮ ರೀತಿಯಲ್ಲಿ ಬಹಳ ದೊಡ್ಡ ರಸ್ತೆಗಳಿವೆ. ಬೆಂಗಳೂರನ್ನು ಕಟ್ಟಿದವರು ಮಾಗಡಿ ಜನಗಳು. ಆದರೆ, ನಮ್ಮ ಭಾಗದಿಂದ ಬರುವ ರಸ್ತೆ ಮಾತ್ರ ನಿಜವಾಗಿಯೂ ಕೂಡ ನಾವು ಬೆಂಗಳೂರನ್ನು ತಲುಪುವುದಕ್ಕೆ ಸಾಧ್ಯವಿಲ್ಲ. ಈ ಕಾಮಗಾರಿಗೆ 2017ರಲ್ಲಿ ಆಡಳಿತಾತ್ಮಕ ಅನುಮೋದನೆ ಸಿಕ್ಕಿರುತ್ತದೆ. ಈ ಬಗ್ಗೆ ಮಾನ್ಯ ಸಚಿವರು ಬಹಳ ಕಾಳಜಿ ವಹಿಸುತ್ತಾರೆ ಹಾಗೂ ಅವರ ಬಗ್ಗೆ ನಮಗೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಂಬಿಕೆ ಇದೆ. ಆದರೆ, ಈ ಕಾಮಗಾರಿಗೆ ಸಮಯ ನಿಗದಿಪಡಿಸಿ ಜಾಗ್ರತೆ ಕೆಲಸ ಆಗಬೇಕೆಂಬುದು ನಮ್ಮ ಕಾಳಜಿಯಾಗಿದೆ.

**ಶ್ರೀ ಅ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಚೋಳನಾಯಕನಹಳ್ಳಿ ಗ್ರಾಮದ ಫ್ಲೈಓವರ್ ಅನ್ನು ಈ ಕಾಮಗಾರಿಯಲ್ಲಿ ಸೇರಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಚೋಳನಾಯಕನಹಳ್ಳಿ ಗ್ರಾಮದಲ್ಲಿಯೂ ಕೂಡ ಫ್ಲೈಓವರ್ ಬೇಕು ಎನ್ನುವುದು ನಮ್ಮ ಬೇಡಿಕೆಯಾಗಿದೆ. ಜೊತೆಗೆ, ಮಾಗಡಿ ಪಟ್ಟಣದಲ್ಲಿ ಏನು ತೊಂದರೆಯಾಗಿದೆಯೆಂದರೆ, ಜಮೀನು ಭೂಸ್ವಾಧೀನದಲ್ಲಿ ಪಟ್ಟಣ ವ್ಯಾಪ್ತಿ ಮತ್ತು ಗ್ರಾಮೀಣ ವ್ಯಾಪ್ತಿಗಳು ಒಂದೇ ವ್ಯಾಪ್ತಿಯಲ್ಲಿ ಬರುವಂತಹ ಸಂದರ್ಭದಲ್ಲಿ ಒಂದು ಜಮೀನಿಗೆ ಒಂದು ಬೆಲೆ, ಇನ್ನೊಂದು ಜಮೀನಿಗೆ ಮತ್ತೊಂದು ಬೆಲೆ ಎಂದು ಆಗಬಾರದು. ಪಟ್ಟಣ ವ್ಯಾಪ್ತಿಯ ಒಳಗಡೆ ಇರುವಂತಹ ಜಮೀನುಗಳಿಗೆ ಎರಡು ರೀತಿಯ ಬೆಲೆ ಇರಬಾರದು. ಇದರಿಂದಾಗಿ, ಜನ ಅಲ್ಲಿ ತೊಂದರೆ ಅನುಭವಿಸುತ್ತಿದ್ದಾರೆ. ಕಂದಾಯ ಸಚಿವರು ಕೂಡ ಈ ಸದನದಲ್ಲಿ ಹಾಜರಿದ್ದಾರೆ ಅವರು ಈ ಸಮಸ್ಯೆಯನ್ನು ಸರಿಪಡಿಸಿಕೊಡಬೇಕು. ಏಕೆಂದರೆ, ಮಾಗಡಿ ಪಟ್ಟಣ ವ್ಯಾಪ್ತಿಯಲ್ಲಿ ಹಾದು ಹೋಗುವಂತಹ ರಸ್ತೆಯಲ್ಲಿ ಪಟ್ಟಣದ ಜನತೆಗೆ ಹಾಗೂ ಪಟ್ಟಣ ವ್ಯಾಪ್ತಿಯ ಪಕ್ಕದಲ್ಲಿರುವ ಜಮೀನುಗಳ ರೈತರಿಗೆ ತೊಂದರೆಯಾಗುತ್ತಿದೆ. ಅವುಗಳನ್ನು ಸರಿಪಡಿಸಿ ಭೂಮಿ ಕಳೆದುಕೊಂಡ ರೈತರಿಗೆ ಹಣ ತಲುಪಿಸುವುದಕ್ಕೆ ಸಹಾಯ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ತಾವರೆಕೆರೆಯಲ್ಲಿ 270 ಮೀಟರ್ ಫ್ಲೈಓವರ್ ಮಾಡುವುದಕ್ಕೆ D.P.R. (Detailed Project Report) ನಲ್ಲಿ ಸೇರಿರುತ್ತದೆ. ಆದರೆ, ಚೋಳನಾಯಕನಹಳ್ಳಿ ಗ್ರಾಮದ ಫ್ಲೈಓವರ್ ಡಿ.ಪಿ.ಆರ್.ನಲ್ಲಿ ಇಲ್ಲ. ಅದಕ್ಕಾಗಿ 'ಇಲ್ಲ' ಎಂದು ಉತ್ತರ ಕೊಟ್ಟಿರುತ್ತೇನೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಅದರ ಅವಶ್ಯಕತೆ ಕಂಡುಬಂದಲ್ಲಿ ಮುಂದೆ ನಾವು ಹೋಗೋಣ.

**ಶ್ರೀ ಅ. ದೇವೇಗೌಡ:–** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಚೋಳನಾಯಕನಹಳ್ಳಿ ಗ್ರಾಮದ ಫ್ಲೈಓವರ್ ಮಾಡುತ್ತೇವೆಂದು ಉತ್ತರ ನೀಡಿದ್ದಾರೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ಚೋಳನಾಯಕನಹಳ್ಳಿ ಗ್ರಾಮದ ಬಳಿ ಒಂದು deep curve ಇದ್ದು, ಅಲ್ಲಿ ಬಹಳ ಅಪಘಾತವಾಗುತ್ತಿರುತ್ತದೆ. ಆ ರಸ್ತೆಯನ್ನು ನೇರ ಮಾಡುವುದಕ್ಕೆ ಅವಕಾಶ ಇದೆ. K-SHIP (Karnataka State Highways Improvement Project) ಇಂಜಿನಿಯರ್‌ಗಳ ಜೊತೆ ಮಾತನಾಡಿ ಆ ರಸ್ತೆಯನ್ನು ನೇರ ಮಾಡಿಸಬೇಕೆಂದು ಕೋರುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ಸದರಿ ರಸ್ತೆಯ ಸ್ಥಳ ಪರಿಶೀಲನೆ ಮಾಡಿ, ಆ ರಸ್ತೆ ನೇರ ಮಾಡಿಸುವುದಕ್ಕೆ ಹೇಳುತ್ತೇನೆ. ಜೊತೆಗೆ, ಈ ಕಾಮಗಾರಿ ಪ್ರಾರಂಭವಾಗಿಲ್ಲ ಎನ್ನುವುದು ನಿಜ. ಏಕೆಂದರೆ, ಈಗಾಗಲೇ ನಮ್ಮ ಕಂಡೀಷನ್ ಪ್ರಕಾರ ಶೇಕಡ 90 ರಷ್ಟು ಜಮೀನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ. ಅದರಲ್ಲಿ ಮರ ಕಡಿಯುವುದಕ್ಕೆ ಅರಣ್ಯ ಇಲಾಖೆಯಿಂದ ಇನ್ನೂ ಕೆಲವು ಕಡೆ ಅನುಮತಿ ಸಿಗಬೇಕಾಗಿದೆ. ಆ ಪ್ರಯತ್ನದಲ್ಲಿ ನಮ್ಮ ಅಧಿಕಾರಿಗಳು ಇದ್ದಾರೆ. ಇದರ ಜೊತೆಗೆ, financial closure ಮತ್ತು ಇತರ ಪೂರ್ವ ಸಿದ್ಧತೆಗಳು ಆಗಬೇಕಾಗಿದೆ. ಆ ಕಾರಣದಿಂದ ಕಾಮಗಾರಿ ವಿಳಂಬವಾಗಿರುತ್ತದೆ. ಮಾನ್ಯ ಸದಸ್ಯರುಗಳು ಏನು ಕಳಕಳಿ ವ್ಯಕ್ತಮಾಡಿದ್ದಾರೆ ಆ ಬಗ್ಗೆ ಕೂಡಲೇ ನಮ್ಮ ಅಧಿಕಾರಿಗಳಿಗೆ ಸೂಚನೆ ನೀಡಿ, ಆದಷ್ಟು ತೀವ್ರವಾಗಿ ಈ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, financial closure ಮತ್ತು ಇತರ ಪೂರ್ವ ಸಿದ್ಧತೆಗಳು ಮುಗಿದ ನಂತರದ 2 ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಅವಧಿ ನಿಗದಿಪಡಿಸಲಾಗಿರುತ್ತದೆಯೇ?

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, 2 ವರ್ಷ ಅವಧಿ ಎಂದು ನಾನು ಹೇಳಿರುವುದಿಲ್ಲ.

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ '24 ತಿಂಗಳುಗಳ ಅವಧಿಯನ್ನು ನಿಗದಿಪಡಿಸಲಾಗಿದೆಯೆಂದು' ಉತ್ತರ ನೀಡಿರುತ್ತಾರೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಉಪಪ್ರಶ್ನೆಗೆ ಉತ್ತರವಾಗಿ ಪೂರ್ವ ಸಿದ್ಧತೆ ಮಾಡಿಕೊಂಡು ಆದಷ್ಟು ಬೇಗ ಕಾಮಗಾರಿ ಪ್ರಾರಂಭ ಮಾಡುತ್ತೇವೆ. ಎರಡನೆಯದಾಗಿ, ಚೋಳನಾಯಕನಹಳ್ಳಿ ಗ್ರಾಮದಲ್ಲಿ ಫ್ಲೈಓವರ್ ನಿರ್ಮಾಣ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಅದರ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವುದಕ್ಕೆ ನಮ್ಮ ಟೆಕ್ನಿಕಲ್ ಸ್ಟಾಫ್‌ಗೆ ಕಳುಹಿಸಿಕೊಡುತ್ತೇನೆ.

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(165)04.03.2020/6.20/ವೈಎಲ್–ಎಕೆ

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ದಯವಿಟ್ಟು ರಸ್ತೆಯನ್ನು ಅಗಲಗೊಳಿಸಲು ಹಾಗೂ ಹೊಸ ರಸ್ತೆಗಳಾಗಿ ಮಾಡುತ್ತಿರುವಂಥ ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಸಂಬಂಧಿಸಿದಂತೆ, ರಸ್ತೆಗಳನ್ನು ಅಭಿವೃದ್ಧಿ ಮಾಡುವ ಸಂದರ್ಭದಲ್ಲಿ ಮರಗಳನ್ನು ತೆರವುಗೊಳಿಸಲಾಗುತ್ತದೆ. ಮರಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ಬಹುಶಃ ಅರಣ್ಯ ಇಲಾಖೆಗೆ ಸೂಚನೆ ನೀಡುವುದು ಸೂಕ್ತವೆಂದು ಅನಿಸುತ್ತದೆ. ಏಕೆಂದರೆ, ಅಶೋಕ ಚಕ್ರವರ್ತಿಯವರ ಕಾಲದಿಂದಲೂ ಸಹ ಭಾರತ ದೇಶದಾದ್ಯಂತ ಪಕ್ಷಿಗಳನ್ನು ಗಮನದಲ್ಲಿಟ್ಟುಕೊಂಡು ಸಾಲು ಮರಗಳನ್ನು ನೆಡುತ್ತಿದ್ದರು." ಇಂದಿನ ಸಂದರ್ಭದಲ್ಲಿ ಏನಾಗುತ್ತಿದೆ ಎಂದರೆ, ಈಗಿನ ಮರಗಳು ಹಣ್ಣು ಸಹ ನೀಡುವುದಿಲ್ಲ, ಬೇರೆ ರೀತಿಯಲ್ಲಿಯು ಅನುಕೂಲವಾಗುತ್ತಿಲ್ಲ. ಅರಳಿ ಮರಗಳು, ಆಲದ ಮರಗಳು, ಗೋಣಿ ಮರ, ನೇರಳೆ ಹಣ್ಣಿನ ಮರ, ಇವೆಲ್ಲದರಿಂದ ಪಕ್ಷಿಗಳ ಜೀವ ಸಂಕುಲ ಉಳಿಯುತ್ತಿತ್ತು. ಸಮಾಜ ಕಲ್ಯಾಣ ಇಲಾಖೆಯು ಇದನ್ನು ಗಮನಿಸುತ್ತಿಲ್ಲ. ರಸ್ತೆಯನ್ನು ಅಗಲ ಮಾಡುವಂತಹ ಸಂದರ್ಭದಲ್ಲಿ ಆ ಯೋಜನೆಗೆ ರೂ.100.00 ಕೋಟಿ ಅಥವಾ ರೂ.500.00 ಕೋಟಿಗಳನ್ನು ಮೀಸಲಿರಿಸಲಾಗುತ್ತದೆ. ರೂ.500.00 ಕೋಟಿಗಳನ್ನು ಮೀಸಲಿಟ್ಟ ಸಂದರ್ಭದಲ್ಲಿ 100 ಕಿಲೋ ಮೀಟರ್ ಸಂಚರಿಸಬೇಕಾದಾಗ 4 ಪಥ ಅಥವಾ 6 ಪಥ ರಸ್ತೆಯನ್ನಾಗಿ ಅಗಲಗೊಳಿಸುವ ಸಂದರ್ಭದಲ್ಲಿ ಮರಗಳನ್ನು ತೆರವುಗೊಳಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಮರಗಳನ್ನು ತೆರವುಗೊಳಿಸಬೇಕೆಂದು ನಿರ್ಧಾರ ಮಾಡಿದಾಗ, ಆ ಮರಗಳನ್ನು ತೆರವುಗೊಳಿಸುವ ಮೊದಲು ಇನ್ನೊಂದು ಮರಗಳನ್ನು ನೆಡಲು ಗುತ್ತಿಗೆದಾರರಿಗೆ ಗುತ್ತಿಗೆ ನೀಡಲಾಗುತ್ತದೆ. ಅದಕ್ಕಾಗಿ ಆ ಮರಗಳನ್ನು ನೆಟ್ಟಿದ ನಂತರ ಹಳೆಯ ಮರಗಳನ್ನು ತೆರವುಗೊಳಿಸುವುದರ ಕಡೆ ಸ್ವಲ್ಪ ಗಮನಹರಿಸಿದರೆ ಒಳ್ಳೆಯದು ಎಂಬ ಸಲಹೆಯನ್ನು ನೀಡುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೆಲಮಂಗಲದಿಂದ ಬೆಂಗಳೂರಿಗೆ ಬರುವ ರಸ್ತೆ ಏನಿದೆ it is the gateway of Bengaluru. ನಾವು ತುಮಕೂರು, ಹಾಸನ ಅಥವಾ ಬೆಳಗಾಂ, ಬಿಜಾಪುರದಿಂದ ಎಲ್ಲಿಂದಲಾದರೂ ಬೆಂಗಳೂರಿಗೆ ಬರಲಿ, ಆ ರಸ್ತೆಗಳಲ್ಲಿ ಮರಗಳೇ ಇಲ್ಲ. ಒಂದೊಂದು ಸಲ ಮಾಗಡಿಗೆ ಹೋಗುವಂಥ ಸಂದರ್ಭದಲ್ಲಿಯು ಸಹ ಆ ದಾರಿಯಲ್ಲಿಯೇ ಹೋಗುತ್ತೇವೆ. ರಸ್ತೆ ಮಾತ್ರ ದೊಡ್ಡದಾಗಿ ನಿರ್ಮಾಣವಾಗಿದೆ. ತಾವು ಹೇಳುವುದು ಸತ್ಯ. ಈಗಲಾದರೂ ಅಂತಹ ಜಾಗಗಳಲ್ಲಿ ಮರಗಳನ್ನು ನೆಡುವಂಥ ಕೆಲಸವಾಗಬೇಕು.

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮರಗಳ ವಿಷಯಕ್ಕೆ ಸಂಬಂಧಿಸಿದಂತೆ, ಆಂಧ್ರ ಪ್ರದೇಶದಲ್ಲಿ ಮರಗಳನ್ನು ಬೆಳೆಸಿ, transport ಮಾಡಿ install ಮಾಡುತ್ತಿದ್ದಾರೆ. ಮರಗಳನ್ನು ಕತ್ತರಿಸಿ ಮತ್ತೆ ಅಲ್ಲಿ ಹೊಸ ಗಿಡಗಳನ್ನು ನೆಟ್ಟಿ ಬೆಳೆಸುವುದರೊಳಗೆ 20, 30 ವರ್ಷಗಳಾಗುತ್ತದೆ. ಹಾಗಾಗಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಬೆಳೆಸಿರತಕ್ಕಂಥ ಮರಗಳನ್ನು ಖರೀದಿಸುವುದಕ್ಕೆ ದುಬಾರಿ ವೆಚ್ಚವಾಗಬಹುದು. ಆದರೆ, ಪರಿಸರದ ಹಿತದೃಷ್ಟಿಯಿಂದ ಆ ರೀತಿ ಮಾಡಿದರೆ ಅನುಕೂಲವಾಗುತ್ತದೆ.

**ಶ್ರೀ ಗೋವಿಂದ ಎಂ ಕಾರಜೋಳ(ಉಪ ಮುಖ್ಯಮಂತ್ರಿಯವರು):–** ಮಾನ್ಯ ಸಭಾಪತಿಯವರೇ, ಮರಗಳು ನೂರಾರು ವರ್ಷಗಳಷ್ಟು ಹಳೆದಾಗಿದ್ದರೆ ಅಂತಹ ಮರಗಳನ್ನು ಬೇರೆ ಕಡೆಗೆ shift ಮಾಡಿ, ನೆಡುವುದಕ್ಕೆ ಸಾಧ್ಯವಿಲ್ಲ, ಅಂತಹ ಮರಗಳು ಹೆಚ್ಚು ಕಾಲ ಬದುಕುವುದಿಲ್ಲ. ಅದಕ್ಕಾಗಿ ಯಾವ ಮರಗಳು 8 ವರ್ಷಗಳು, 10 ವರ್ಷಗಳು, 20 ವರ್ಷಗಳೊಳಗೆ ಇರುವುದನ್ನು ಸಾಮಾನ್ಯವಾಗಿ ಬೇರೆ ಕಡೆ ಸರ್ಕಾರಿ ಜಾಗಕ್ಕೆ ವರ್ಗಾವಣೆ ಮಾಡಿ, ಅದನ್ನು ನೆಟ್ಟಿ ಬೆಳೆಸುವಂಥ ಕೆಲಸ ಮಾಡಲಾಗುತ್ತದೆ. ತಾವೂ ಸಹ 4 ಪಥ, 6 ಪಥ ರಸ್ತೆಗಳನ್ನು ಮಾಡುವ ಸಂದರ್ಭದಲ್ಲಿ ಮರಗಳನ್ನು ತೆರವುಗೊಳಿಸಿ, ಮತ್ತೆ ಹೊಸದಾಗಿ ನೆಡಬೇಕೆಂದು ಹೇಳಿದ್ದೀರಿ. ನಾವು ನಮ್ಮ ಯೋಜನೆಯಲ್ಲಿ ಹಣವನ್ನಿಟ್ಟುಕೊಂಡಿರುತ್ತೇವೆ. ಅರಣ್ಯ ಇಲಾಖೆಯವರಿಗೆ ಆ ಹಣವನ್ನು ನೀಡಿ, ಅವರ ಮುಖಾಂತರ ಆ ಕೆಲಸವನ್ನು ಮಾಡಿಸಲಾಗುತ್ತಿದೆ. ತಾವು ನೀಡಿರತಕ್ಕಂಥ ಸಲಹೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 233**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ:–** ಮಾನ್ಯ ಸಭಾಪತಿಯವರೇ, ಉಪ ಮುಖ್ಯಮಂತ್ರಿಯವರು ವಿವರವಾದ ಉತ್ತರವನ್ನು ಒದಗಿಸಿದ್ದು, ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಜೊತೆಗೆ ಕೊಡಗು ಜಿಲ್ಲೆಗೆ ಸೀಮಿತವಾಗಿ ಪೊನ್ನಂಪೇಟೆ ಮತ್ತು ಕುಶಾಲನಗರ 2 ಹೊಸ ತಾಲ್ಲೂಕುಗಳನ್ನು ನೀಡಲಾಗಿದ್ದು, ಈ ತಾಲ್ಲೂಕುಗಳನ್ನು ಘೋಷಣೆ ಮಾಡಿ ಸುಮಾರು ಒಂದು ವರ್ಷಗಳಾಗಿದೆ. ದಿನಾಂಕ: 28.02.2019ರ ಸರ್ಕಾರದ ಆದೇಶದಲ್ಲಿ ತಾತ್ವಿಕವಾಗಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಆದರೆ, ಇದುವರೆಗೂ ಅಂತಿಮ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ. ಅಂತಿಮ ಅಧಿಸೂಚನೆ ಹೊರಡಿಸದೇ ಅನುದಾನವು ಬರುವುದಿಲ್ಲ, ಕೆಲಸ–ಕಾರ್ಯಗಳು ನಡೆಯುವುದಿಲ್ಲ. ಏಕೆಂದರೆ, ಈಗಾಗಲೇ ವಿಳಂಬವಾಗಿದ್ದು, ಆದಷ್ಟು ಬೇಗ ಅದರ ಕೆಲಸ–ಕಾರ್ಯಗಳನ್ನು ಮಾಡಬೇಕೆಂದು ಕಂದಾಯ ಇಲಾಖೆಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರಲ್ಲಿ ತಮ್ಮ ಮುಖಾಂತರ ವಿನಂತಿಸುವುದೇನೆಂದರೆ, ಬೆಳಗಾವಿ ಜಿಲ್ಲೆಯ ರಾಣಿ ಚೆನ್ನಮ್ಮನವರ ಹೆಸರಿನಲ್ಲಿ ಕಿತ್ತೂರು ತಾಲ್ಲೂಕನ್ನು ರಚಿಸಲಾಗಿದೆ. ಆದರೆ, ಕಿತ್ತೂರು ತಾಲ್ಲೂಕಿನಲ್ಲಿ ಎಲ್ಲಾ ಕಛೇರಿಗಳನ್ನು ಸ್ಥಳಾಂತರಿಸಿರುವುದಿಲ್ಲ. ಮೂಲಭೂತವಾಗಿ ಮಿನಿ ವಿಧಾನಸೌಧವನ್ನು ನಿರ್ಮಿಸಿರುವುದಿಲ್ಲ. ಅದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಅದರ ಜೊತೆಗೆ ಬೆಳಗಾವಿ ಜಿಲ್ಲೆಯಲ್ಲಿ ಕಾಗವಾಡ, ಯರಗಟ್ಟಿ, ಮೂಡಲಗಿ ಎಂಬಲ್ಲಿ ಇನ್ನೂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

3–4 ತಾಲ್ಲೂಕುಗಳ ರಚನೆಯು ಸಹ ಆಗಿದೆ. ಅಲ್ಲಿಯು ಸಹ ಈ ಒಂದು ಕಛೇರಿಯನ್ನು ಪ್ರಾರಂಭಿಸಬೇಕು ಮತ್ತು ಮಿನಿ ವಿಧಾನಸೌಧ ತೆರೆಯಬೇಕು. ಆಡಳಿತಾತ್ಮಕವಾಗಿ ತಾಲ್ಲೂಕುಗಳನ್ನು ಕೆಡವಿ ಸಾರ್ವಜನಿಕರ ಅನುಕೂಲಕ್ಕಾಗಿ ನೂತನ ತಾಲ್ಲೂಕುಗಳ ರಚನೆಯಾಗಿದೆ. ಆದರೆ, ಜನರಿಗೆ ಬೇಕಾದಂಥ ಮೂಲಭೂತ ಸೌಕರ್ಯಗಳನ್ನು, ಕಛೇರಿಗಳನ್ನು ತೆರೆದಾಗ ಮಾತ್ರ, ಅಲ್ಲಿರತಕ್ಕಂಥ ಜನರಿಗೆ ಆಡಳಿತ ಸಮೀಪವಾಗುತ್ತದೆ ಎಂಬ ವಿಚಾರದಲ್ಲಿ ಈ ಒಂದು ಕಛೇರಿಗಳ ಸ್ಥಳಾಂತರ ಮತ್ತು ಅಲ್ಲಿ ಪ್ರತ್ಯೇಕ ತಾಲ್ಲೂಕು ಪಂಚಾಯ್ತಿಗಳ ರಚನೆ ಮತ್ತು ಮಿನಿ ವಿಧಾನಸೌಧ ಕಟ್ಟಡಗಳ ರಚನೆ ಮಾಡಲು, ನಾಳೆ ನಡೆಯುವ ಬಜೆಟ್ ಅಧಿವೇಶನದಲ್ಲಿ ಪ್ರತ್ಯೇಕವಾಗಿ ಅನುದಾನವನ್ನು ತೆಗೆದು ಮೀಸಲಿರಿಸಬೇಕೆಂಬ ವಿನಂತಿಯನ್ನು ತಮ್ಮ ಮೂಲಕ ಸಚಿವರಿಗೆ ಮಾಡುವುದಕ್ಕೆ ಬಯಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟು 50 ತಾಲ್ಲೂಕುಗಳನ್ನು ರಚಿಸಿದ್ದು, ತದನಂತರ ಅನೇಕ ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದಾರೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 4 ಹೊಸ ತಾಲ್ಲೂಕುಗಳನ್ನು ತೆರೆಯಲು ಘೋಷಿಸಲಾಗಿದೆ. ಯಾವುದೇ ತಾಲ್ಲೂಕುಗಳಲ್ಲಿಯು ಸಹ ಮಿನಿ ವಿಧಾನಸೌಧ ಕಟ್ಟಡವನ್ನು ನಿರ್ಮಿಸಲು, ಕೆಲವು ಕಡೆ ರೂ.1.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ, ಇನ್ನು ಕೆಲವು ಕಡೆ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ಈ ರೀತಿಯ ಸಮಸ್ಯೆಗಳಾಗಿವೆ. ನಮಗೆ ತಕ್ಷಣವಾಗಿ ಬೇಕಾಗಿರುವ ತುರ್ತು ಸಮಸ್ಯೆಯೇನೆಂದರೆ, ಮಕ್ಕಳಿಗೆ ಅವಶ್ಯಕವಾಗಿರುವ ಆದಾಯ ಪ್ರಮಾಣ ಪತ್ರ ಅಥವಾ ಬೇರೆ ಬೇರೆ ಇಲಾಖೆಯಿಂದ ಅವಶ್ಯಕತೆ ಇರುವ ಪ್ರಮಾಣ ಪತ್ರಗಳು, ಜಾತಿ ಪ್ರಮಾಣ ಪತ್ರಗಳು ಇವೆಲ್ಲಾ ಪ್ರಮಾಣ ಪತ್ರಗಳಿಗೂ ಮಂಗಳೂರು ತಾಲ್ಲೂಕನ್ನು divide ಮಾಡಿ 3 ತಾಲ್ಲೂಕುಗಳನ್ನಾಗಿ ರಚನೆ ಮಾಡಲಾಗಿದೆ. Parliamentary Secretary to Chief Minister ಆಗಿದ್ದಂತಹ ಸಂದರ್ಭದಲ್ಲಿ ನಾನು ಕಂದಾಯ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದೆ. ಆ ಸಂದರ್ಭದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ ಎಲ್ಲಾ ಇಲಾಖೆಗಳಿಗೆ ಸುತ್ತೋಲೆ ಹೊರಡಿಸಿದ್ದು, ಯಾವುದೇ ಇಲಾಖೆಗೆ ಮತ್ತು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ divide ಆದ ಹೊಸ ತಾಲ್ಲೂಕು ಬರುತ್ತದೆ, ಆ ತಾಲ್ಲೂಕುಗಳನ್ನು ಕೂಡಲೇ shift ಮಾಡಬೇಕೆಂದು ಮಾಡಲಾಗಿತ್ತು. ಆದರೆ, ಕಂದಾಯ ಇಲಾಖೆ ಹೊರತುಪಡಿಸಿ, ಬೇರೆ ಯಾವುದೇ ಇಲಾಖೆಯು ಹೊಸ ತಾಲ್ಲೂಕಿನ ಪರಿಮಿಧಿಯೊಳಗೆ ತಮ್ಮ ಕಛೇರಿಯನ್ನು ಪ್ರಾರಂಭಿಸಿರುವುದಿಲ್ಲ, ಯಾವ ಕೆಲಸವನ್ನು ನಿರ್ವಹಿಸುತ್ತಿಲ್ಲ. ಹಾಗಾಗಿ ಇದು ಗೊಂದಲವನ್ನುಟ್ಟು ಮಾಡಿದೆ. ದಯವಿಟ್ಟು 5–6 ವರ್ಷಗಳಾಗಿದ್ದು, ಇವತ್ತಿಗೆ ತಾಲ್ಲೂಕು ಘೋಷಣೆ ಮಾಡಿ 4 ವರ್ಷಗಳಾಗಿವೆ. ಯಾವುದೇ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ, ಆ ತಾಲ್ಲೂಕುಗಳು ಕಾರ್ಯಾಚರಣೆ ಮಾಡುವಂತೆ ಶ್ರಮ ವಹಿಸಬೇಕೆಂದು ಕೋರುತ್ತೇನೆ.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟು ಜೋಯಿಡಾ ಸೇರಿ 177 ತಾಲ್ಲೂಕುಗಳಿವೆ. ಎಲ್ಲರೂ 176 ತಾಲ್ಲೂಕುಗಳಿವೆ ಎಂದು ತಿಳಿದುಕೊಂಡಿದ್ದಾರೆ. 2017–18ನೇ ಸಾಲಿನಲ್ಲಿ 50 ಹೊಸ ತಾಲ್ಲೂಕುಗಳನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರಚಿಸಲಾಯಿತು. 2019–20ನೇ ಸಾಲಿನಲ್ಲಿ 13 ತಾಲ್ಲೂಕುಗಳನ್ನು ರಚಿಸಲಾಗಿದ್ದು, ಒಟ್ಟು 240 ತಾಲ್ಲೂಕುಗಳಿವೆ. ಮುಂದೆ ಇನ್ನೂ ಎಷ್ಟು ತಾಲ್ಲೂಕುಗಳಾಗುತ್ತವೆ ಎಂಬುದು ಗೊತ್ತಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಚಿವರೇ, 13 ತಾಲ್ಲೂಕುಗಳನ್ನು ಯಾವ ಸಾಲಿನಲ್ಲಿ ರಚಿಸಲಾಯಿತು.

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, 2019–20ನೇ ಸಾಲಿನಲ್ಲಿ 13 ತಾಲ್ಲೂಕುಗಳನ್ನು ರಚಿಸಲಾಗಿದೆ. ಹಳೆಯ ತಾಲ್ಲೂಕು 177 ಇದ್ದು, ಅದರಲ್ಲಿ ಈಗಾಗಲೇ 140 ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ನಿರ್ಮಿಸಲಾಗಿದೆ. ಉಳಿದಂತೆ 25 ತಾಲ್ಲೂಕುಗಳಲ್ಲಿ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ. ರೂ.246.00 ಕೋಟಿಗಳಷ್ಟು ಹಣ ಮಂಜೂರಾಗಿದ್ದು, ಈಗಾಗಲೇ ಅದಕ್ಕೆ ರೂ.170.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನು 12 ತಾಲ್ಲೂಕುಗಳ ರಚನೆಗೆ ಪ್ರಸ್ತಾವನೆ ಬಂದಿಲ್ಲ. ಪ್ರಸ್ತಾವನೆ ಬಂದ ತಕ್ಷಣ ಅದಕ್ಕೂ ಸಹ ಅನುಮೋದನೆ ನೀಡಲಾಗುವುದು. ಯಲಹಂಕದಲ್ಲಿ 50 ಹೊಸ ತಾಲ್ಲೂಕುಗಳನ್ನು ಪ್ರಾರಂಭಿಸಲಾಗಿದ್ದು, ಯಲಹಂಕವನ್ನು ಹೊರತುಪಡಿಸಿ ಉಳಿದ ಕಡೆ ಕಟ್ಟಡವನ್ನು ನಿರ್ಮಿಸಿರುವುದಿಲ್ಲ. ತಾಲ್ಲೂಕುಗಳನ್ನು ಪ್ರಾರಂಭಿಸಲು ಪ್ರತಿ ತಾಲ್ಲೂಕಿಗೆ 2017–18ನೇ ಸಾಲಿನಲ್ಲಿ ಒಂದೊಂದು ತಾಲ್ಲೂಕಿಗೂ ಸುಮಾರು ರೂ.10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. 2019–20ನೇ ಸಾಲಿನಲ್ಲಿಯು ಸಹ ರೂ.5.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈಗಾಗಲೇ ಸ್ಥಳೀಯವಾಗಿ ಲಭ್ಯವಿರುವ ಕಟ್ಟಡಗಳಾದ ತಾಲ್ಲೂಕು ಕಛೇರಿ ಅಥವಾ APMC Yard ಗಳಲ್ಲಿ ಅಥವಾ ಬೇರೆ–ಬೇರೆ ಕಡೆ ಈಗಾಗಲೇ ಕೆಲಸ ಪ್ರಾರಂಭಿಸಲು ಸೂಚಿಸಲಾಗಿದೆ. ಈಗಾಗಲೇ ಹೊಸದಾಗಿ ನಿರ್ಮಿಸಿರುವ 50 ಹೊಸ ತಾಲ್ಲೂಕುಗಳ ಕಛೇರಿಗೆ ತಹಸೀಲ್ದಾರ್ ಗ್ರೇಡ್–1 ಮತ್ತು ತಹಸೀಲ್ದಾರ್ ಗ್ರೇಡ್–2 ರಂತೆ ಒಟ್ಟು 17 ಜನರ ನೇಮಕಾತಿಗೆ ಅನುಮೋದನೆ ನೀಡಲಾಗಿದೆ. ಉಳಿದಂತೆ 50 ಗ್ರಾಮಗಳಿಗಿಂತ ಕಡಿಮೆ ಇರುವ ಕಡೆ ತಹಸೀಲ್ದಾರ್ ಒಳಗೊಂಡಂತೆ 12 ಸಿಬ್ಬಂದಿಗಳನ್ನು ನೇಮಿಸಲಾಗಿದೆ. ಈಗಾಗಲೇ 7 ಕಡೆ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದಿದ್ದು, ಅಲ್ಲೆಲ್ಲಾ ತಾಲ್ಲೂಕು ಕಛೇರಿ ಪ್ರಾರಂಭ ಮಾಡುವುದಕ್ಕೆ ಹೇಳಲಾಗಿದೆ. ಉಳಿದ ಕಡೆ ಪ್ರಸ್ತಾವನೆ ಬಂದ ತಕ್ಷಣ ಅಲ್ಲಿಯು ಸಹ ತಾಲ್ಲೂಕು ಕಛೇರಿಗಳನ್ನು ಪ್ರಾರಂಭ ಮಾಡಲಾಗುವುದು.

(ಮುಂದು)

(166)/04.03.2020/6.30/ಎಸ್‌ಕೆ–ಆರ್‌ಎನ್
**ಶ್ರೀ ಆರ್. ಅಶೋಕ್ (ಮುಂದು)**

ವಿಶೇಷವಾಗಿ ಮಾನ್ಯ ಸದಸ್ಯರಾದ ಶ್ರೀ ಸುನೀಲ್ ಸುಬ್ರಮಣಿಯವರು ಕೇಳಿರುವ ಕೊಡುಗು ಜಿಲ್ಲೆಗೆ ಸಂಬಂಧಪಟ್ಟಂತೆ ಪೊನ್ನಂಪೇಟೆ ತಾಲ್ಲೂಕು ಮಾಡುವ ಬಗ್ಗೆ ಈಗಾಗಲೇ ಪ್ರಸ್ತಾವನೆ ಬಂದಿದೆ. ಅದನ್ನು ಗೆಜೆಟ್ ಮಾಡುತ್ತೇವೆ. ಅದರ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಇದರ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇನೆ. ಅದೇ ರೀತಿ ಕುಶಾಲನಗರ ತಾಲ್ಲೂಕಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಯು ಸ್ವೀಕೃತವಾದ ನಂತರ ಕುಶಾಲನಗರ

ತಾಲ್ಲೂಕಿಗೆ ಅಗತ್ಯವಿರುವ ಕೆಲಸ ಪ್ರಾರಂಭ ಮಾಡುವುದಕ್ಕೆ ಏನೇನು ಅವಶ್ಯಕತೆಯಿದೆ ಅದನ್ನು ಒದಗಿಸಿಕೊಡುತ್ತೇನೆ. ಈ ಬಾರಿಯೂ ಬಜೆಟ್‌ನಲ್ಲಿಯೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಬೇಕಾದರೆ ಕೇಳಿದ್ದೇನೆ. ಹೊಸದಾಗಿ ಮಿನಿ ವಿಧಾನಸೌಧ ನಿರ್ಮಾಣ ಮಾಡುವುದು ಒಳ್ಳೆಯದು. ಅದರ ಮುಖಾಂತರ ಎಲ್ಲೆಲ್ಲಿ ಮಿನಿ ವಿಧಾನಸೌಧಗಳು ಇಲ್ಲವೋ ಅಂತಹ ಕಡೆಗಳಲ್ಲಿ ಮಿನಿ ವಿಧಾನಸೌಧವನ್ನು ನಿರ್ಮಾಣ ಮಾಡುವುದಕ್ಕೆ ಸುಮಾರು ರೂ. 10.00 ಕೋಟಿಗಳು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಅದನ್ನು ಕನ್ಸಿಡರ್ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲಾ ಕಡೆಗಳಲ್ಲಿ ಆದಷ್ಟು ಶೀಘ್ರವಾಗಿ ಮಿನಿ ವಿಧಾನಸೌಧ ನಿರ್ಮಾಣ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಇದರ ಮುಖಾಂತರವೇ ಆಡಳಿತ ನಡೆಯುವಂತಹದ್ದು. ಆರೋಗ್ಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಬೇರೆ ಬೇರೆ ಇಲಾಖೆಗಳು ಇವೆಲ್ಲಾ ಬರಬೇಕಾಗುತ್ತದೆ. ಈ ದೃಷ್ಟಿಯಿಂದ ಈಗ ತಾತ್ಕಾಲಿಕವಾಗಿ ಎಲ್ಲೆಲ್ಲಿ ಸ್ಥಳಗಳ ಅವಶ್ಯಕತೆಯಿದೆಯೋ ಅದನ್ನು ತೆಗೆದುಕೊಂಡು ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಕಟ್ಟಡ ಕಟ್ಟುವಂತಹದ್ದಕ್ಕೆ ಪ್ರಸ್ತಾವನೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಪ್ರಸ್ತಾವನೆಯನ್ನು ತೆಗೆದುಕೊಂಡು ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಅಪ್ಪಾಜಿಗೌಡರೇ, ತಾವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರೇ ಈಗಾಗಲೇ ಒಂದು ವರ್ಷವಾಯಿತು. ಬೇರೆ ಇಲಾಖೆಗಳು ಹೊಸ ತಾಲ್ಲೂಕುಗಳಿಗೆ ಹೋಗಬೇಕು ಹಾಗೂ ತಮ್ಮ ಕಾರ್ಯವ್ಯಾಪ್ತಿಯನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಮಾನ್ಯ ಸಚಿವರೇ ಆ ಇಲಾಖೆಗಳು ಹೊಸ ತಾಲ್ಲೂಕಿಗೆ ಅಂದರೆ ಆರೋಗ್ಯ, ಶಿಕ್ಷಣ, ತೋಟಗಾರಿಕೆ, ಕೃಷಿ ಇಲಾಖೆಗಳು ಸಹ ಹೋಗುತ್ತಿಲ್ಲ. ತಾವು ಈ ಬಗ್ಗೆ ಏನು ನಿಲುವನ್ನು ತೆಗೆದುಕೊಳ್ಳುತ್ತೀರಾ. ಆ ಇಲಾಖೆಗಳು ಅಲ್ಲಿಯೇ ಕುಳಿತುಕೊಂಡರೆ, ಬರೀ ಕಂದಾಯ ಇಲಾಖೆ ಮಾತ್ರ ಇದ್ದರೆ ಏನು ಮಾಡುವುದಕ್ಕೆ ಸಾಧ್ಯ?

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟಂತೆ ಪತ್ರವನ್ನು ಬರೆದು, ಅವರೆನ್ನೆಲ್ಲಾ ಮೀಟಿಂಗ್ ಕರೆಯುವುದಕ್ಕೆ ನಮ್ಮ ಜಿಲ್ಲಾಧಿಕಾರಿಗಳಿಗೆ ಹೇಳುತ್ತೇನೆ. ಆ ಒಂದು ಪಾಯಿಂಟ್‌ನಲ್ಲಿ ಯಾವುದು ಹೊಸ ತಾಲ್ಲೂಕುಗಳಾಗಿವೆ. ಯಾವ್ಯಾವ ಇಲಾಖೆಗಳು ಬರಬೇಕೋ ಆ ಎಲ್ಲಾ ಇಲಾಖೆಗಳು ಹೊಸ ತಾಲ್ಲೂಕಿಗೆ ಹೋಗಿ ಕೆಲಸ ಮಾಡುವಂತಹದ್ದಕ್ಕೆ ಸಂಬಂಧಪಟ್ಟಂತಹ ಇಲಾಖೆಗಳಿಗೆ ಜಿಲ್ಲಾಧಿಕಾರಿಗಳ ಮುಖಾಂತರ ಆದೇಶವನ್ನು ಕೊಡಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಪ್ರಶ್ನೆ ಸಂಖ್ಯೆ: 306**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶನ ಹೊಂದಿದವರು) (ಶ್ರೀ ಎನ್.ಅಪ್ಪಾಜಿಗೌಡರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರವನ್ನು ಸವಿಸ್ತಾರವಾಗಿ ನೀಡಿದ್ದಾರೆ. ನಾನು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಕೇಳುವುದೇನೆಂದರೆ, ಘಟ್ಟ–1ರಲ್ಲಿ ಪ್ರಾರಂಭವಾಗಿರುವಂತಹ ಕಾಮಗಾರಿಗಳು ಎಷ್ಟು? ಈ ಕಾಮಗಾರಿಗೆ ಸಂಬಂಧಪಟ್ಟಂತ ಗುತ್ತಿಗೆದಾರರು ಯಾರಿದ್ದಾರೆ ಹಾಗೂ ಅವರ ಮೇಲೆ ಏನು ಕ್ರಮ ಜರುಗಿಸಿದ್ದೀರಾ? ಘಟ್ಟ–2ನಲ್ಲಿ ಕಾಮಗಾರಿಗಳನ್ನು ಯಾವಾಗ ಪ್ರಾರಂಭ ಮಾಡಲಾಗಿದೆ?

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಘಟ್ಟ–1 ರಡಿಯಲ್ಲಿ 3692 ಕಿ.ಲೋ ಮೀಟರ್‌ಗೆ ಸುಮಾರು ರೂ.4500 ಕೋಟಿಗಳ ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಈ ಕಾಮಗಾರಿಗಳು ಪ್ರಗತಿಯಲ್ಲಿದೆ. ಒಟ್ಟು 394 ಕಾಮಗಾರಿಗಳಿವೆ. ಈಗಾಗಲೇ ಬಹುತೇಕ ಕಾಮಗಾರಿಗಳು ಪ್ರಾರಂಭವಾಗಿದ್ದು, ಅದು ಪ್ರಗತಿಯಲ್ಲಿವೆ. ಮಾನ್ಯ ಸದಸ್ಯರುಗಳಿಗೆ ನೀಡಿರುವ ಲಿಖಿತ ಉತ್ತರದ ಅನುಬಂಧದಲ್ಲಿ ಮಾಹಿತಿಯನ್ನು ನೀಡಿದ್ದೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–**ಮಾನ್ಯ ಸಭಾಪತಿಯವರೇ, ರಸ್ತೆಗಳನ್ನು ಅಗದಿರುವುದು ಎಷ್ಟಿವೆ? ಇದನ್ನು ಪ್ರಾರಂಭ ಮಾಡಿರುವ ಗುತ್ತಿಗೆದಾರರ ಮೇಲೆ ಏನು ಕ್ರಮ ಜರುಗಿಸಿದ್ದಾರೆ? ಘಟ್ಟ–2 ನ್ನು ಯಾವಾಗ ಪ್ರಾರಂಭ ಮಾಡುತ್ತಾರೆ?

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಇನ್ನೂ ಕಾಮಗಾರಿಯ ಅವಧಿ ಮುಗಿಯುವುದಕ್ಕಿಂತ ಮುಂಚೆ ಅವರ ಮೇಲೆ ಕ್ರಮ ಜರುಗಿಸುವುದಕ್ಕೆ ಆಗುವುದಿಲ್ಲ. ನಾವು ಟೆಂಡರ್‌ನಲ್ಲಿ ಸಮಯವನ್ನು ಕೊಟ್ಟಿದ್ದೇವೆ. ಆ ಸಮಯದೊಳಗಾಗಿ ಮುಗಿಸುವುದಕ್ಕೆ ಒತ್ತಡವನ್ನು ಹಾಕಿ ನೋಟಿಸ್ ಕೊಡುತ್ತೇವೆ. ಕಾಮಗಾರಿಯ ಕೆಲಸವನ್ನು ಆಯಾಯ ಕಾಲಕ್ಕೆ ಪ್ರಗತಿ ಮಾಡದೇ ಹೋದರೆ, ಅವರಿಗೆ ನಮ್ಮ terms and conditions ನ ಪ್ರಕಾರ penalty impose ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 237**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) (ಶ್ರೀ ಹೆಚ್.ಎಂ.ರಮೇಶ್ ಗೌಡರವರ ಪರವಾಗಿ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಲಿಖಿತ ಉತ್ತರವನ್ನು ನೀಡಿದ್ದಾರೆ. ನಾನು ಎರಡು ಸಪ್ಲಿಮೆಂಟರಿ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರಶ್ನೆಗಳನ್ನು ಕೇಳ ಬಯಸುತ್ತೇನೆ. ತ್ಯಾಜ್ಯ ವಸ್ತುಗಳನ್ನು ನಿಯಮಾನುಸಾರವಾಗಿ ವಿಲೇವಾರಿ ಮಾಡಲಾಗುತ್ತಿದೆಯೇ; ನಿಯಮಾನುಸಾರವಾಗಿ Effluent Treatment Plant ನ್ನು ಅಲ್ಲಿ ಸ್ಥಾಪಿಸಲಾಗಿದೆಯೇ; ಹಾಗೂ ಅಲ್ಲಿ ಎಷ್ಟು ಬಾಡಿಗೆಯನ್ನು ನಿಗದಿಪಡಿಸಲಾಗಿದೆ; ನಿಗದಿಪಡಿಸಿರುವ ಬಾಡಿಗೆಯನ್ನು ಮೀನು ಉಪಾಹಾರದವರು ಪಾವತಿ ಮಾಡಲಾಗಿದೆಯೇ; ಬಿ.ಬಿ.ಎಂ.ಪಿ ಪ್ರಾಪರ್ಟಿ ಟ್ಯಾಕ್ಸನ್ನು ಪಾವತಿಸಲಾಗಿದೆಯೇ, ಇದು ಸರ್ಕಾರಿ ಪ್ರಾಪರ್ಟಿಯಾಗಿದ್ದರೆ, ಬಿ.ಬಿ.ಎಂ.ಪಿ.ಗೆ ಟ್ಯಾಕ್ಸನ್ನು ಕಟ್ಟುವುದಕ್ಕೆ ಬರುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಇದರ ಬಗ್ಗೆ ಉತ್ತರ ಕೊಟ್ಟರೆ ಬಹಳ ಸಂತೋಷ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ ಮತ್ಸ್ಯದರ್ಶಿನಿ ಮೀನು ಉಪಾಹಾರ ಗೃಹವನ್ನು Karnataka Fisheries Development Corporation (*KFDC*) ಮೂಲಕ ನಡೆಸಲಾಗುತ್ತದೆ. ಅದರ ಶುಚಿತ್ವದ ಮತ್ತು ತ್ಯಾಜ್ಯ ವಸ್ತುಗಳು ಬಗ್ಗೆ ಮಾನ್ಯ ಸದಸ್ಯರು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ.

ಮತ್ಸ್ಯದರ್ಶಿನಿ ಮೀನು ಉಪಾಹಾರ ಗೃಹದಲ್ಲಿ ತಾಜಾ ಮೀನು, ಘನೀಕೃತ ಮೀನು, ಮೀನಿನ ಊಟ ಹಾಗೂ ಮೀನಿನ ಖಾದ್ಯಗಳನ್ನು ಮಾರಾಟ ಮಾಡುವಂತಹದ್ದು ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿದೆ. ಇದು ಬಹಳ ಜನಪ್ರಿಯವಾಗಿರುವಂತಹ ಕೇಂದ್ರವಾಗಿದೆ. ಮತ್ಸ್ಯದರ್ಶಿನಿ ಮೀನು ಉಪಾಹಾರ ಗೃಹದಲ್ಲಿ ದಿನಕ್ಕೆ ಸುಮಾರು 1400 ರಿಂದ 1600 ಜನರು ಅಲ್ಲಿಗೆ ಬಂದು ಮೀನಿನ ಊಟ ಮಾಡುವಂತಹ ಹೋಟೆಲ್ ನಡೆಯುತ್ತಿದೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಯ ಹಿನ್ನೆಲೆಯಲ್ಲಿ ನಾನು ನಿನ್ನೆ ಆ ಹೋಟೆಲ್‌ಗೆ ಭೇಟಿ ಕೊಟ್ಟಿದ್ದೆ. ಮಾನ್ಯ ಸದಸ್ಯರ ಮುಖ್ಯ ಪ್ರಶ್ನೆ ಇರುವಂತಹದ್ದು ತ್ಯಾಜ್ಯ ವಿಲೇವಾರಿಯಿಂದಾಗಿ ಪರಿಸರ ಸ್ವಚ್ಛತೆ ಹಾಳಾಗುತ್ತಿದೆ ಎನ್ನುವುದರ ಬಗ್ಗೆ ನಾನು ಆ ಹೋಟೆಲ್‌ಗೆ ದಿಢೀರ್ ಆಗಿ ಹೋಗಿದ್ದು, ಅಲ್ಲಿರುವ ಅಧಿಕಾರಿಗಳಿಗೆ ಹೇಳಿರಲಿಲ್ಲ. ನಾನು ಅಲ್ಲಿ ಗಮನಿಸಿದ್ದೇನೆ. ಅದರೂ ಕೂಡ ಮಾನ್ಯ ಸದಸ್ಯರು ಹೇಳಿದ ಪ್ರಮಾಣದಲ್ಲಿ ಅಲ್ಲಿ ಏನು ತ್ಯಾಜ್ಯದ ಸಮಸ್ಯೆಯಿಲ್ಲ. ಏಕೆಂದರೆ ನಾವು ತ್ಯಾಜ್ಯವನ್ನು ವಿಲೇವಾರಿ ಮಾಡುವುದಕ್ಕೆ ತಿಂಗಳಿಗೆ ಹನ್ನೊಂದು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಬಿ.ಬಿ.ಎಂ.ಪಿ ಯಿಂದ ಈಗಾಗಲೇ ಗುತ್ತಿಗೆ ನೀಡಿದ್ದೇವೆ. ಈ ಗುತ್ತಿಗೆಯ ಆಧಾರದಲ್ಲಿ ತ್ಯಾಜ್ಯಗಳು ಸಮರ್ಪಕವಾಗಿ ವಿಲೇವಾರಿಯಾಗುತ್ತಿದೆ ಎಂಬುದನ್ನು ನಾನು ಗಮನಿಸಿದ್ದೇನೆ. ಮಾನ್ಯ ಸದಸ್ಯರು ಕ್ಯಾಂಟೀನ್‌ನ ತ್ಯಾಜ್ಯ ವಿಲೇವಾರಿ ಬಗ್ಗೆ ಹೇಳುತ್ತಾರೆ. ಅದೇ ರೀತಿಯ ಉಲ್ಲೇಖವನ್ನು ಮಾಡಬಹುದಾಗಿದೆ. ಸಾಮಾನ್ಯವಾಗಿ ಗ್ರಾಹಕರಿಗೆ ಅತ್ಯಂತ ಕಡಿಮೆ ಬೆಲೆ ದರದಲ್ಲಿ ಹೋಟೆಲ್ ಊಟವನ್ನು ಕಲ್ಪಿಸುವಂಥದ್ದು ಇದಾಗಿದೆ. ಕಬ್ಬನ್ ಪಾರ್ಕ್‌ನಲ್ಲಿರುವ ಮತ್ಸ್ಯದರ್ಶಿನಿಯಲ್ಲಿ ಸುಮಾರು ನಲವತ್ತು ಜನ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆ. ಪ್ರತಿ ತಿಂಗಳಿಗೆ ಹನ್ನೊಂದು ಸಾವಿರದ ಎಂಟನೂರು ರೂಪಾಯಿಗಳ ವೆಚ್ಚದಲ್ಲಿ ಬಿ.ಬಿ.ಎಂ.ಪಿಗೆ ಗುತ್ತಿಗೆ ಇದೆ. ಈ ತ್ಯಾಜ್ಯ ವಿಲೇವಾರಿಗೋಸ್ಕರ ಬಿ.ಬಿ.ಎಂ.ಪಿಗೆ ಕೊಡುತ್ತಿದ್ದೇವೆ. ಕಬ್ಬನ್ ಪಾರ್ಕ್‌ನಲ್ಲಿರುವ

ಈ ಹೋಟೆಲ್‌ನಲ್ಲಿ ಸುಮಾರು ರೂ.2.50 ಲಕ್ಷಗಳಿಂದ ರೂ.4.50 ಲಕ್ಷಗಳವರೆಗೂ ದಿನನಿತ್ಯ ವಹಿವಾಟುಗಳಾಗಿವೆ. ಇಡೀ ರಾಜ್ಯದಲ್ಲಿ ಅತ್ಯಂತ ಹೆಸರುವಾಸಿಯಾಗಿರುವ ಹೋಟೇಲ್ ಆಗಿದೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ ಹಾಗೆ ಜನಪ್ರಿಯವಾದ ಮತ್ಸ್ಯದರ್ಶಿನಿ ಹೋಟೇಲ್ ಆಗಿದೆ. ಸಾರ್ವಜನಿಕರು ಸಾಲಿನಲ್ಲಿ ನಿಂತುಕೊಂಡು ಊಟ ತೆಗೆದುಕೊಳ್ಳುತ್ತೇವೆ. ಲಾಭದಾಯಕವಾಗಿದೆ, ಅದರ ಜಾಗ ಸಹ ಲೋಕೋಪಯೋಗಿ ಇಲಾಖೆಗೆ ಸೇರಿರುತ್ತದೆ. S.R ದರ ಫಿಕ್ಸ್ ಮಾಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಸುಮಾರು ಹದಿನಾಲ್ಕು ವರ್ಷಗಳಿಂದ ಬಾಡಿಗೆ ನೀಡಿಲ್ಲವೆಂದು ತಿಳಿಸಿರುತ್ತಾರೆ. ಇದರ ಅರ್ಥ ಏನು? ಆದರೆ, ಬಾಡಿಗೆ ಮೊತ್ತ enhance ಆಗಿದೆ. ಆದರೆ ಲಾಭ ಮಾತ್ರ ಬರುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಹೇಳುತ್ತಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹೋಟೇಲ್‌ಗೆ ಲಾಭ ಮಾತ್ರ ಚೆನ್ನಾಗಿ ಆಗುತ್ತಿದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಬಾಡಿಗೆ ಪಾವತಿ ಆಗಿಲ್ಲವೆಂಬುದನ್ನು ಉತ್ತರದಲ್ಲಿ ಮಾಹಿತಿ ಒದಗಿಸಲಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ಗೌಡರವರ ಪರವಾಗಿ ಮಾನ್ಯ ಹಿರಿಯ ಸದಸ್ಯರು ಉಪ ಪ್ರಶ್ನೆಯನ್ನು ಕೇಳಿದ್ದಾರೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಅನುಭವಸ್ಥರಾಗಿರುವಂತಹವರು. ಹಾಗಾಗಿ ನಮ್ಮಲ್ಲಿ ಯಾವುದೇ ಗೊಂದಲಗಳು ಕೂಡ ಇಲ್ಲ. ತಮ್ಮ ಅಭಿಪ್ರಾಯಗಳು ಸಮರ್ಪಕವಾಗಿದ್ದರೆ ಅದನ್ನು ಸರ್ಕಾರ ಪರಿಗಣಿಸುತ್ತದೆ. ನಮಗೆ ಸಿಕ್ಕಿರುವ ಮಾಹಿತಿ ಪ್ರಕಾರ ಲೋಕೋಪಯೋಗಿ ಇಲಾಖೆಯ ಕಟ್ಟಡ ಎಸ್.ಆರ್. ಪ್ರಕಾರ ಬಾಡಿಗೆ ನಿಗದಿ ಪಡಿಸಲಾಗಿದೆ. ಹೋಟೆಲ್ ಮೀನುಗಾರಿಕೆ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತದೆ. ನಮ್ಮ ಇಲಾಖೆಯ ವ್ಯಾಪ್ತಿಗೆ ಮೀನುಗಾರಿಕೆ ಇಲಾಖೆ ಮತ್ತು *KFDC* ಇಲಾಖೆಯು ಬರುತ್ತದೆ. ಇದು ಸಾರ್ವಜನಿಕವಾಗಿ ಕಡಿಮೆ ದರದಲ್ಲಿ ಊಟದ ವ್ಯವಸ್ಥೆಯನ್ನು ಮಾಡಬೇಕೆಂದು ಬಾಡಿಗೆಯನ್ನು ಸಾಂಕೇತಿಕವಾಗಿ ಮೀನುಗಾರಿಕೆ ಇಲಾಖೆಗೆ ಪಾವತಿಸುವಂಥ ಪರಿಪಾಠ ಇಲ್ಲಿಯವರೆಗೂ ನಡೆದುಕೊಂಡು ಬಂದಿದೆ. ಅದು ಯಾವ ರೀತಿಯಲ್ಲಿದೆ ಎಂಬುದನ್ನು ನಾವು ನಿಗದಿಪಡಿಸುತ್ತೇವೆ, ಮಾನ್ಯ ಸದಸ್ಯರು ಹೇಳಿರುವ ಅಂಶವನ್ನು ಸಹ ಗಮನದಲ್ಲಿಟ್ಟುಕೊಳ್ಳುತ್ತೇವೆ. ನಾವು ಕೆಲವು fry ಕೊಡುತ್ತಾ ಇರುತ್ತೇವೆ. ನಮ್ಮಲ್ಲಿ ಊಟದ ದರವನ್ನು ಅರವತ್ತು ರೂಪಾಯಿ, ಎಪ್ಪತ್ತು ರೂಪಾಯಿ, ಎಂಭತ್ತು ರೂಪಾಯಿವರೆಗೂ ನಿಗದಿ ಮಾಡುತ್ತೇವೆ. ಅದೇ ಗುಣಮಟ್ಟದ ಮೀನಿನ ಫೈವ್ ಸ್ಟಾರ್ ಹೋಟೆಲ್‌ಗೆ ಹೋದರೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೂ.1,000.00 ವರೆಗೂ ದರವನ್ನು ನಿಗದಿಪಡಿಸುತ್ತಾರೆ. ಅದೇ ಗುಣಮಟ್ಟದ, ಮಾನದಂಡದ ಚೌಕಟ್ಟಿನ ವ್ಯವಸ್ಥೆಯಲ್ಲಿ ತಯಾರಿಸಿದ್ದು, ಎಂಭತ್ತು ರೂಪಾಯಿ, ತೊಂಬತ್ತು ರೂಪಾಯಿ ನಿಗದಿಪಡಿಸುತ್ತೇವೆ. ಹಾಗಾಗಿ ಗ್ರಾಹಕರಿಗೆ ಅನುಕೂಲವಾಗಬೇಕೆನ್ನುವುದಕ್ಕಾಗಿ ಮಧ್ಯಮ ವರ್ಗದವರಿಗೆ ಊಟಕ್ಕೆ ಅನುಕೂಲವಾಗಲಿ ಎಂಬ ಕಾರಣದಿಂದ ಈ ರೀತಿ ಕಡಿಮೆ ದರವನ್ನು ನಿಗದಿಪಡಿಸಲಾಗಿದೆ. ನಮಗೆ ಪ್ರಶ್ನೆ ಬಂದಿರುವುದು, ಶುಚಿತ್ವವನ್ನು ಕಾಪಾಡಲಾಗುತ್ತಿದೆಯೇ ಎನ್ನುವುದು ಮತ್ತು ತ್ಯಾಜ್ಯದ ವಿಲೇವಾರಿಯನ್ನು ಸಮರ್ಪಕವಾಗಿ ಮಾಡಲಾಗುತ್ತಿದೆಯೇ ಎಂಬುದಾಗಿದೆ. ನಾನು ಸಹ ಹೋಟೆಲ್‌ಗೆ ಹೋಗಿ ನೋಡಿಕೊಂಡು ಬಂದಿದ್ದೇನೆ.

(ಮುಂದು...)

(167) 04.03.2020 6.40 ಟಿಸಿಹೆಚ್–ಆರ್‌ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):**

ಅದು ಮೀನುಗಾರಿಕೆ ಇಲಾಖೆಯ ನಿವೇಶನವಾದ್ದರಿಂದ, ಪಿಡಬ್ಲ್ಯೂಡಿಯವರು ಏನು ದರವನ್ನು ನಿಗದಿಪಡಿಸಿದ್ದಾರೆ, ಅದನ್ನು ಗಮನದಲ್ಲಿಟ್ಟುಕೊಂಡು ನಮ್ಮದೇ ಕೆ.ಎಫ್.ಡಿ.ಸಿ ನಿರ್ವಹಣೆ ಮಾಡುತ್ತಿರುವುದರಿಂದ, ಸಮರ್ಪಕವಾಗಿ ವ್ಯವಸ್ಥೆಗಳನ್ನು ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಸದರಿ ಕಟ್ಟಡದ ಬಾಡಿಗೆಯನ್ನು ಲೋಕೋಪಯೋಗಿ ಇಲಾಖೆಯ ಎಸ್.ಆರ್. ರೇಟ್ ಪ್ರಕಾರ ನಿಗದಿಪಡಿಸಲಾಗಿದೆ. ಕೆಎಫ್‌ಡಿಸಿ ಇದುವರೆವಿಗೂ ಬಾಡಿಗೆ ಮೊತ್ತವನ್ನು ಪಾವತಿಸಿರುವುದಿಲ್ಲ. ಬಾಡಿಗೆ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಲಾಗಿದೆ. ಹಾಗಾದರೆ ಸರ್ಕಾರ ಕಳೆದ 14 ವರ್ಷಗಳಿಂದ ಕ್ರಮ ತೆಗೆದುಕೊಂಡಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಪಿಡಬ್ಲ್ಯೂಡಿಯವರು ಅವರ ಮಾನದಂಡದಲ್ಲಿ ಕಟ್ಟಡದ ಬಾಡಿಗೆ ದರವನ್ನು ನಿಗದಿಪಡಿಸಿರುತ್ತಾರೆ. ಅದು ನಮ್ಮ ಇಲಾಖೆಯ ಕಟ್ಟಡವಾಗಿರುತ್ತದೆ. ನಮ್ಮ ಇಲಾಖೆ ವ್ಯಾಪ್ತಿಯಲ್ಲಿ ಬರುವಂತಹ ಕಟ್ಟಡದಲ್ಲಿ ಕೆಎಫ್‌ಡಿಸಿ ಸಂಸ್ಥೆಯು ಹೋಟೆಲ್ ನಡೆಸುತ್ತಿರುವುದರಿಂದ, ನಾವು ಪ್ರತಿ ತಿಂಗಳು ಸುಮಾರು 50–60 ಸಾವಿರ ರೂಪಾಯಿಗಳಿಗೆ ಬಾಡಿಗೆ ಕೊಟ್ಟರೆ, ಊಟದ ದರವನ್ನು ಜಾಸ್ತಿ ಮಾಡಬೇಕಾಗುತ್ತದೆ. ಇದು ಪೂರ್ಣ ಪ್ರಮಾಣದಲ್ಲಿ ಒಂದು ಸಹಕಾರಿ ಸಂಸ್ಥೆಯಾಗಿರುತ್ತದೆ. ಕಡಿಮೆ ದರದಲ್ಲಿ ಊಟ ಕೊಡುವ ದೃಷ್ಟಿಯಿಂದ, ಕಡಿಮೆ ದರದಲ್ಲಿ ಬಾಡಿಗೆ ಕೊಡಬಹುದು ಎಂದು ಯೋಚನೆ ಮಾಡಿದ್ದೇವೆ. ಅಷ್ಟಾದರೂ ತಾವು ಏನು ಹೇಳುತ್ತೀರೊ ಅದನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡುತ್ತೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಚಿವರೇ, ನಾವೇನು ನಿಮಗೆ ಬಾಡಿಗೆ ಹೆಚ್ಚಿಗೆ ಮಾಡಿ ಎಂದು ಕೇಳುತ್ತಿಲ್ಲ. ನೀವು ಏಕೆ ಅವರಿಂದ ಬಾಡಿಗೆ ವಸೂಲಿ ಮಾಡುತ್ತಿಲ್ಲವೆಂದು ಕೇಳುತ್ತಿದ್ದೇವೆ. ಒಂದು ವೇಳೆ ನಾಳೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದಿವಸ ಎಸ್.ಆರ್. ರೇಟ್ ಪ್ರಕಾರ ದರ ನಿಗದಿಪಡಿಸದಿದ್ದರೆ ಆಡಿಟ್ ಅಬ್ಜೆಕ್ಷನ್ ಹಾಕುತ್ತಾರೆ. ಸಿ.ಎ.ಜಿ., ವರದಿಯಲ್ಲೂ ಕೂಡ ಬರುತ್ತದೆ. ಯಾರು ಆ ಕ್ಯಾಂಟೀನ್ ಅನ್ನು ನಡೆಸುತ್ತಿದ್ದಾರೊ ಅವರಿಂದ ಆ ಕಟ್ಟಡದ ಬಾಡಿಗೆ ಕೆ.ಎಫ್.ಡಿ.ಸಿ.,ಗೆ ಪಾವತಿ ಆಗಬೇಕಲ್ಲವೇ? ಇಲ್ಲವೆಂದರೆ ಅದು ಸರಿಯಾದ ಕ್ರಮ ಆಗುವುದಿಲ್ಲ. ನಾಳೆ ದಿವಸ ತಪ್ಪಾಗುತ್ತದೆ. ಎಷ್ಟು ಬಾಡಿಗೆ ದರವನ್ನು ನಿಗದಿಪಡಿಸಲಾಗಿದೆ ಅಷ್ಟನ್ನಾದರು ವಸೂಲಿ ಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, ಕ್ಯಾಂಟೀನ್ ಇರುವ ಸ್ಥಳ ಯಾರ ಹಕ್ಕಿನಲ್ಲಿದೆ. ಬೇರೆಯವರ ಹೆಸರಿನಲ್ಲಿದ್ದರೆ ಅವರು ಲೋಕೋಪಯೋಗಿ ಇಲಾಖೆಯ ಎಸ್.ಆರ್. ದರದ ಪ್ರಕಾರ ಬಾಡಿಗೆ ಪಾವತಿಸುತ್ತಿದ್ದಾರೆಯೆ, ಪಾವತಿಸಲು ಯಾವ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಶ್ನೆ ಕೇಳಿದ್ದಾರೆ. ಹಾಗಾಗಿ, ಪಾವತಿ ಮಾಡುವ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಪಾವತಿ ಮಾಡುವಾಗ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಪಾವತಿ ಮಾಡುತ್ತೇವೆ. ನಮ್ಮಲ್ಲಿ ಏನೂ ತೊಂದರೆ ಇಲ್ಲ. ನಮ್ಮದೇ ಇಲಾಖೆ ಮತ್ತು ನಮ್ಮದೇ ಫೆಡರೇಷನ್ ಆಗಿರುತ್ತದೆ. ಅದನ್ನು ಜನರಿಗೆ ಅನುಕೂಲವಾಗಲಿ ಎಂದು ಮಾಡಿದ್ದೇವೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ನಾನು ಕೂಡ ಆ ಕ್ಯಾಂಟಿನ್‌ಗೆ ಹೋಗಿ ಬಂದಿದ್ದೇನೆ. ಕೆ.ಎಫ್.ಡಿ.ಸಿ ಮೀನಿನ ಊಟ ತುಂಬಾ ಚೆನ್ನಾಗಿದೆ. It is very beautiful.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಅದು ಸ್ವಚ್ಛತೆಯಿಂದ ಕೂಡಿರಬೇಕು ಅಲ್ಲವೇ?

**ಶ್ರೀ ಐವನ್ ಡಿ'ಸೋಜಾ:–** ಅಲ್ಲಿ ಸಿಗಡಿ ಮತ್ತು ಬಾಂಗಡಿ ಮೀನು ಸಹ ದೊರೆಯುತ್ತದೆ. ಮೀನಿನ ಊಟ ಬಹಳ ಚೆನ್ನಾಗಿದೆ.

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ಕ್ಯಾಂಟಿನ್ ಊಟ–ಉಪಹಾರಗಳು ನಿಜವಾಗಿಯೂ ರುಚಿಕರವಾಗಿದೆ, ಚೆನ್ನಾಗಿದೆ. ಈ ಕ್ಯಾಂಟಿನ್ ಬಹಳ ವರ್ಷಗಳಿಂದ ಅಲ್ಲೇ ಇದೆ. ಮಾನ್ಯ ಸಚಿವರು ಹೇಳಿದಂತೆ, ಬಡವರು ದೊಡ್ಡ ದೊಡ್ಡ ಹೋಟೆಲ್‌ಗಳಲ್ಲಿ ಹೋಗುವುದಕ್ಕಿಂತ ಅಲ್ಲಿಗೆ ಹೋಗಬಹುದು. ಅಲ್ಲಿ ಶುಚಿತ್ವ ಕಾಪಾಡಬೇಕು ಎನ್ನತಕ್ಕಂಥದ್ದು ಮೊದಲನೆಯ ಪಾಯಿಂಟ್. ಎರಡನೆಯದಾಗಿ, ಆ ಬಿಲ್ಡಿಂಗ್ ಮೀನುಗಾರಿಕೆ ಇಲಾಖೆಗೆ ಸಂಬಂಧಪಟ್ಟಿರುವುದರಿಂದ, ಅವರೇ ಬಾಡಿಗೆ ವಸೂಲಿ ಮಾಡಬೇಕು. ಇನ್ನು ಎರಡನೇ ಪ್ರಶ್ನೆಗೆ ಮಾನ್ಯ ಶ್ರೀಕಂಠೇಗೌಡರವರು ಅವರಿಂದ ಏಕೆ ಬಾಡಿಗೆ ವಸೂಲಿ ಮಾಡುತ್ತಿಲ್ಲವೆಂದಷ್ಟೇ ಕೇಳುತ್ತಿದ್ದಾರೆ. ಅವರಿಂದ ಬಾಡಿಗೆ ವಸೂಲಿ ಮಾಡಿಕೊಳ್ಳಬೇಕು ಅಷ್ಟೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ಇದನ್ನೆಲ್ಲಾ ಪರಿಹಾರ ಮಾಡುತ್ತೇವೆ. ಸಾಮಾನ್ಯವಾಗಿ ಮಾನ್ಯ ಶಾಸಕರನ್ನೂ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ, ಸ್ವಲ್ಪ ಗುಣಮಟ್ಟ ಕಾಪಾಡಿಕೊಳ್ಳಬೇಕಾಗುತ್ತದೆ. ಹೆಚ್ಚು ಹಣ ಪಾವತಿ ಮಾಡತಕ್ಕಂಥವರಿಗೆ ಕಟ್ಟಡದ ಮೇಲ್ಭಾಗದಲ್ಲಿ ರೂಫ್‌ಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಮಾನ್ಯ ಹೆಚ್.ಎಂ.ರೇವಣ್ಣನವರಿಗೆ ಖುಷಿ ಆಗುವಂತೆ ಹವಾನಿಯಂತ್ರಿತ ವ್ಯವಸ್ಥೆಯನ್ನು ಸಹ ಮಾಡಿ ಅದೇ ದರದಲ್ಲಿ ಅವರಿಗೆ ಕೊಡಲಾಗುವುದು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಹವಾನಿಯಂತ್ರಣ ಬೇಡ.

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 4ನೇ ಮಾರ್ಚ್ 2020ರ ಸಮೂಹ–IIIರ ಲಿಖಿತ ಮೂಲಕ ಉತ್ತರಿಸುವ ಒಟ್ಟು 97 ಪ್ರಶ್ನೆಗಳ ಪೈಕಿ, 92 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಲಿಖಿತ ಉತ್ತರಗಳನ್ನು ಲಗತ್ತಿಸಿದೆ)

**ಸಭಾಪತಿಯವರು:–** ಮಂಡಿಸಲಾಯಿತು.

7. **ನಿಯಮ 330ಎ ಅಡಿಯಲ್ಲಿ ಈ ಹಿಂದೆ ಪ್ರಸ್ತಾಪಿಸಲಾಗಿದ್ದ ವಿಶೇಷ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಸಚಿವರ ಲಿಖಿತ ಹೇಳಿಕೆ**

"ರಾಜ್ಯದಲ್ಲಿ ಅಕ್ರಮವಾಗಿ ಬಿಪಿಎಲ್ ಕಾರ್ಡ್ ದಂಧೆಯು ಹೆಚ್ಚಾಗಿ ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಕಾರ್ಡ್ ಸಿಗದೇ, ಸ್ಥಿತಿವಂತರಿಗೆ ಬಿಪಿಎಲ್ ಕಾರ್ಡ್ ದೊರಕುತ್ತಿರುವ ಬಗ್ಗೆ."

– – – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 20ನೇ ಫೆಬ್ರವರಿ 2020ರಂದು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡರವರು ನಿಮಯ 330ಎ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರ ಲಗತ್ತಿಸಿದೆ)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಂಡಿಸಲಾಯಿತು.

**8. ಶೂನ್ಯ ವೇಳೆಯಲ್ಲಿ ಈ ಹಿಂದೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂದಿಸಿದಂತೆ ಉತ್ತರವನ್ನು ಕೊಡುವಲ್ಲಿ ಸರ್ಕಾರ ವಿಳಂಬ ಮಾಡುತ್ತಿರುವ ಬಗ್ಗೆ.**

– – – – –

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಇತ್ತೀಚೆಗೆ ನಡೆದ ಘಟನೆಗಳು; ಸಾರ್ವಜನಿಕ ಮಹತ್ವವುಳ್ಳ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಮಾನ್ಯ ಸಭಾಪತಿಯವರಿಗೆ ಲಿಖಿತವಾಗಿ ಸಲ್ಲಿಸಿರುತ್ತೇವೆ. ಇವತ್ತು ಉತ್ತರ ಕೊಡದೆ ಇನ್ನೊಂದು ತಿಂಗಳ ನಂತರ ಮಂಡನೆಯಾದರೆ ಏನು ಪ್ರಯೋಜನ? 330ಎ ರಲ್ಲಿ ನಾವು ದೈನಂದಿನ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಲು ಅವಕಾಶ ಕೋರಿ ಮಾನ್ಯ ಸಭಾಪತಿಯವರಿಗೆ ಪತ್ರ ಕೊಟ್ಟಿರುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಾದ ವಿಷಯಗಳಲ್ಲಿ ಮೂರು ವಿಷಯಗಳಿಗೆ ಉತ್ತರ ಬಂದಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಇವತ್ತಿನ ವಿಷಯ ಅಲ್ಲ. ನಾವು ದಿನಾಂಕ 20.02.2020ರಂದು ಕೊಟ್ಟಿದ್ದೇವೆ. ಆದರೆ ಇವತ್ತಿನವರೆಗೂ ಉತ್ತರ ಬಂದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಬಹುತೇಕ ಅದನ್ನು ನಾಳೆ ಮಂಡಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸಭಾನಾಯಕರೇ, ಅದಕ್ಕೆ ಸೋಮವಾರ ಉತ್ತರವನ್ನು ಕೊಟ್ಟುಬಿಡಿ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿಯಮ ಏನಿದೆ ಎಂದರೆ, ಇವತ್ತು ಶೂನ್ಯವೇಳೆ ಅಥವಾ ವಿಶೇಷ ಪ್ರಸ್ತಾವನೆಗೆ ಸಂಬಂಧಿಸಿದಂತೆ ನಿಯಮ 330 ಎ ಅಡಿಯಲ್ಲಿ ಪತ್ರ ಕೊಟ್ಟರೆ ಅದಕ್ಕೆ ಸದನದಲ್ಲಿ ಉತ್ತರ ಕೊಡುವುದಕ್ಕೆ 3 ದಿನಗಳು ಸಮಯ ಇರುತ್ತದೆ. ಸರ್ಕಾರಕ್ಕೆ ಅವೊತ್ತೇ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ, ಅಂತಹ ಕೆಲವು ಕ್ಲಿಷ್ಟಕರ ಸಮಸ್ಯೆಗಳಿರುತ್ತವೆ. ಅವರು ದಿನಾಂಕ 20.02.2020ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಕೊಟ್ಟಿದ್ದಾರೆ. ಇವತ್ತಿಗೆ 14 ದಿನ ಆಯಿತು. ಇನ್ನೂ ಉತ್ತರ ಬಂದಿಲ್ಲ. ಮಾನ್ಯ ಸಭಾನಾಯಕರೇ, ಸರ್ಕಾರದ ನಿಮಯದ ಪ್ರಕಾರ ನಾವು ನಿಮಗೆ three days time ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಕನಿಷ್ಠ ಮೂರು ದಿನಗಳ ಸಮಯ ಇದ್ದು, ಬಹುತೇಕ ನಾಳೆ ಉತ್ತರಗಳನ್ನು ಮಂಡಿಸಲಾಗುವುದು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾನಾಯಕರೇ, ತಾವು ಬಹಳ ಬುದ್ಧಿವಂತರಿದ್ದೀರಿ. ಏಕೆಂದರೆ, ನೀವು ದಕ್ಷಿಣ ಕನ್ನಡ ಜಿಲ್ಲೆಯವರು ಅಲ್ಲವೇ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ಎಷ್ಟು ವೇಗವಾಗಿ ಇದೆಯೆಂದರೆ, ಇವತ್ತು ಕೇಳಿದ ಪ್ರಶ್ನೆಗಳಿಗೆ ಮೂರು ದಿನಗಳಲ್ಲಿ ಉತ್ತರವನ್ನು ಸಿದ್ಧಪಡಿಸಲಾಗುವುದು. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಏನು ಕೇಳುತ್ತಿದ್ದಾರೆಂದರೆ, ಮೊನ್ನೆ ದಿವಸ ನಾವು ಪ್ರಶ್ನೆ ಕೇಳಿದ್ದೇವೆ. ಅದಕ್ಕೆ ಉತ್ತರ ಇನ್ನೂ ಬಂದಿಲ್ಲವೆಂದು ಕೇಳುತ್ತಿದ್ದಾರೆ. ಒಂದು ಅಥವಾ ಎರಡು ವಿಷಯಕ್ಕೆ ಆ ರೀತಿ ಆಗಿರಬಹುದು. ನಾಳೆ ಉತ್ತರ ಮಂಡಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇನ್ನೂ ಮಂಡಿಸಿಲ್ಲ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನೀವು ಸರ್ಕಾರಕ್ಕೆ instructions ಕೊಡಿ. ಶೂನ್ಯವೇಳೆ ಇರಬಹುದು, 330ಎ ಅಡಿಯಲ್ಲಿನ ವಿಶೇಷ ಪ್ರಸ್ತಾವಗಳ ನಿಯಮ ಇರಬಹುದು ಇವುಗಳಿಗೆ ಸಂಬಂಧಿಸಿದಂತೆ ಗರಿಷ್ಠ ಮೂರು ದಿವಸದೊಳಗೆ ಸದನದಲ್ಲಿ ಉತ್ತರವನ್ನು ಮಂಡಿಸಬೇಕು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಎಸ್.ಆರ್.ಪಾಟೀಲ್‌ರವರು ಆಡಳಿತ ಪಕ್ಷದಲ್ಲಿ ಇದ್ದಾಗ ಶೂನ್ಯವೇಳೆಗೆ ಸಂಬಂಧಿಸಿದ ವಿಷಯಗಳಿಗೆ ಪ್ರತಿದಿನ ಉತ್ತರ ಮಂಡಿಸುತ್ತಿದ್ದರು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಡಳಿತ ಪಕ್ಷದವರು ಅಂದೇ ಉತ್ತರ ಕೊಡುತ್ತಿರಲಿಲ್ಲ. ಆಯಿತು ನಾವಂತು ನಾಳೆ ಉತ್ತರ ಕೊಡುತ್ತೇವೆ. ಇವತ್ತು ಶೂನ್ಯವೇಳೆಯಲ್ಲಿ ಕೇಳಿದಂತಹ ಪ್ರಶ್ನೆಗೆ 3 ವಿಷಯಗಳಿಗೆ ಉತ್ತರ ಮಂಡಿಸಿದ್ದೇವೆ. ಹಿಂದೆ ಕೇಳಿದ ಪ್ರಶ್ನೆಗೆ ನಾಳೆ ಅಥವಾ ನಾಡಿದ್ದು ಉತ್ತರ ಮಂಡಿಸುತ್ತೇವೆ.

**9. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

ಅ) ಕೊರೋನಾ ವೈರಸ್ ಕಾಯಿಲೆ ಹರಡುತ್ತಿರುವ ಬಗ್ಗೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್ ಸಿರೋಯಾರವರೇ, ಈಗಾಗಲೇ ಈ ವಿಷಯಕ್ಕೆ ಸಂಬಂಧಿಸಿದಂತೆ, ರಿಪ್ಲೈ ಆಗಿದೆ. ತಾವು ಓದುವುದಾದರೆ ಓದಿ.

**ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ನಾನು ಸದನಕ್ಕೆ ಬಂದಿರಲಿಲ್ಲ. ಇವತ್ತು ನನಗೆ ಮಂಡಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಅಂದರೆ ನಮಗೆ ಉತ್ತರ ಕೊಟ್ಟಿದ್ದಾರೆ. ಆದರೆ, ಅದು COVID-2019 ಬಗ್ಗೆ ಬೆಳಗ್ಗೆಯಿಂದ ಸಂಜೆಯೊಳಗೆ ಎಲ್ಲಾ ಬದಲಾವಣೆ ಆಗುತ್ತಿರುತ್ತದೆ. ಹಾಗಾಗಿ, ಸರ್ಕಾರ ಪ್ರತಿದಿನ ಉತ್ತರ ಕೊಡಬೇಕಾಗುತ್ತದೆ ಎಂದು ಅನಿಸುತ್ತದೆ. Now, I will read out the same which is as follows:-

*"Ever since the information about the outbreak of coronavirus in China came out, people across the world are worried. Scientists are saying the outbreak of coronavirus and its impact on health to crores of people are being affected everywhere. Countries like Japan and Italy have been severly hit. Since India is a very populous country, some are predicting that the outbreak may be serious in our country too.*

*Now, the Union Government has confirmed that two more people are affected with the virus. One is from Telangana and the other is from Delhi. Earlier, three from Kerala were affected with the virus and they were treated and reports suggest that they are out of danger.*

*The government should strictly monitor people coming from Telangana and Kerala. Media reports suggest that one of the affected came from HongKong to Bengaluru. The patient worked in Bengaluru for two days and left for Telangana.*

*My suggestion is: the Health department alone cannot handle the situations. Therefore, the Transport department also should join hands with the health departent to monitor the people coming from these two states.*

*The Unior Government has set up a task force to tackle the crisis. I suggest the health department to get inputs from the central government as to how this should be tackled. We have to sensitise and educate people on this issue. At the same time we should also contain spreading rumours.*

*The sensitivity of this issue should be notified to the Honorable Chief Minister. Therefore, I request you to kindly permit me to raise this issue during the "Zero Hours".*

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಶ್ರೀ ಲೆಹರ್ ಸಿಂಗ್ ಸಿರೋಯಾರವರು ಆಂಗ್ಲ ಭಾಷೆಯಲ್ಲಿ ಓದುತ್ತಿದ್ದಾರಲ್ಲಾ, ಅವರಿಗೆ ಕನ್ನಡ ಬರುವುದಿಲ್ಲವೇ? ಆಂಗ್ಲ ಭಾಷೆಯಲ್ಲಿ ಓದಿದರೆ ನಾವು ಏನೆಂದು ತಿಳಿಕೊಳ್ಳುವುದು. "ಎಲ್ಲಾದರು ಇರು, ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂದು ಅವರಿಗೆ ಕಲಿಸಿಕೊಡಬೇಕಾಗುತ್ತದೆ. ಈಗ ಈ ರಾಜ್ಯಕ್ಕೆ ಬಂದಂತಹ ಐ.ಎ.ಎಸ್., ಅಧಿಕಾರಿಗಳು ಮತ್ತು ಐ.ಪಿ.ಎಸ್., ಅಧಿಕಾರಿಗಳು ಮೂರು ತಿಂಗಳಿನಲ್ಲಿ ಕನ್ನಡ ಕಲಿತು ಕನ್ನಡದಲ್ಲಿ ಮಾತನಾಡುತ್ತಾರೆ. ಆದರೆ ಇವರು ವಿಧಾನ ಪರಿಷತ್ತಿನ ಸದಸ್ಯರಾಗಿ ಬಹಳ ವರ್ಷಗಳಾದರೂ ಕನ್ನಡದಲ್ಲಿ ಓದುತ್ತಿಲ್ಲ.

**ಶ್ರೀ ಐವನ್ ಡಿ'ಸೋಜಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, their proposal himslef is..

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಅವರು ಕನ್ನಡದಲ್ಲೇ ಮಾತನಾಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಕರುನಾಡಿನಲ್ಲಿ ಇದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಶ್ರೀ ಲೆಹರ್‌ಸಿಂಗ್ ಸಿರೋಯಾರವರು ಓದಿರುವುದನ್ನು ಕನ್ನಡಕ್ಕೆ ತರ್ಜುಮೆಯನ್ನಾದರು ಮಾಡಿಸಿ ಕೊಡಿ.

**(ಗೊಂದಲ)**

**ಶ್ರೀ ಲೆಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಇದು ಬಹಳ serious ವಿಷಯವಾಗಿದೆ.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ನಾವು ಕನ್ನಡ ನಾಡಿನಲ್ಲಿ ಇದ್ದೇವೆ. ಇದು ನಮ್ಮ ಸದನ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಇಲ್ಲಿ ಎಲ್ಲರಿಗೂ ಇಂಗ್ಲೀಷ್ ಬರುವುದಿಲ್ಲ. ನಮಗೆ ಅದರ ಪರಿಚಯವಿಲ್ಲ. ಲೆಹರ್ ಸಿಂಗ್ ಸಿರೋಯಾರವರಿಗೆ ಕನ್ನಡ ಬರುವುದಿಲ್ಲ. ನಮಗೆ ಇಂಗ್ಲೀಷ್ ತಿಳಿಯುವುದಿಲ್ಲ. ಈ ರೀತಿ ಆಗಿಬಿಟ್ಟಿದೆ. ಹಾಗಾಗಿ, ಅವರು ಅವರು ಓದುತ್ತಿದ್ದಾರೆ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಇದು ಬಹಳ serious ವಿಷಯವಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅದನ್ನು ಕನ್ನಡದಲ್ಲಿ ತರ್ಜುಮೆ ಮಾಡಿಸಿಕೊಡಬಹುದಾಗಿತ್ತಲ್ಲವೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ನನ್ನದು personal request, ನಾನು ಸದನದಲ್ಲಿ ಪ್ರಸ್ತಾಪಿಸಲು ದಯವಿಟ್ಟು ಅವಕಾಶ ಕೊಡಿ.

**ಸಭಾಪತಿಯವರು:–** ಶ್ರೀ ಲಹರ್ ಸಿಂಗ್ ಸಿರೋಯಾರವರೇ, ನಿಮಗೆ ಕನ್ನಡ ಬರುವುದಿಲ್ಲವೇ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಕನ್ನಡ ಬರುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ಕನ್ನಡದಲ್ಲೇ ಬರೆದುಕೊಂಡು ಓದಬೇಕೆಂದು ಹೇಳಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರು ಕನ್ನಡದಲ್ಲಿ ಓದುವುದು ಬೇಡ. ಕೊನೆಪಕ್ಷ ಅವರು ಅದರ ತಾತ್ಪರ್ಯವನ್ನಾದರು ಹೇಳಲಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಎಸ್.ಆರ್.ಪಾಟೀಲ್‌ರವರೇ, ಇದು ಬಹಳ ಬಹಳ ಗಂಭೀರವಾದ ವಿಚಾರವಾಗಿದೆ. It is a very serious issue. ದಯವಿಟ್ಟು ಸಹಕರಿಸಿ. ಇದಕ್ಕೆ ಉತ್ತರವನ್ನು ಕೊಟ್ಟಿದೆ;

**(ಮುಂದು)**

**(168)4.3.2020/6.50/ಎಂ.ಎಂ–ವಿ.ಕೆ**

**ಸಭಾಪತಿಯವರು:–** ಮಾನ್ಯ ಲಹರ್ ಸಿಂಗ್‌ರವರೇ, ನೀವು ಬೆಳಗ್ಗೆ ಸಚಿವರು ಬಂದಾಗ 23 ಜನರು ಮಾತನಾಡಿದರು. ನೀವು ಕೂಡ ಸದನದಲ್ಲಿಯೇ ಇದ್ದಿರಿ, ಆಗ ತಾವು ಯಾಕೆ ಮಾತನಾಡಿಲ್ಲ ಎಂಬುದಕ್ಕೆ ಉತ್ತರ ಕೊಟ್ಟರೆ ಒಳ್ಳೆಯದು. ಅದಕ್ಕೆ ಕಾರಣವನ್ನು ತಿಳಿಸಿ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಅದಕ್ಕೆ ಕಾರಣವೇನೆಂದರೆ, ನಿನ್ನೆ ತಾವು ನನಗೆ ಹೇಗಾದರೂ ಮಾಡಿ ಶೂನ್ಯ ವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಆಶ್ವಾಸನೆ ಕೊಟ್ಟಿದ್ದಿರಿ. ಆದರೆ ನನಗೆ ಅವಕಾಶ ಕೊಡಲಿಲ್ಲ ನಾನು ಸುಮ್ಮನೆ ಕುಳಿತುಕೊಂಡಿದ್ದೆ. ಆದರೆ ಇನ್ನೂ ನಾನು ಇನ್ನೂ 2–3 ಸಂಗತಿಗಳನ್ನು ಹೇಳುತ್ತೇನೆ. ಇವತ್ತಿನ ಪ್ರಕಾರ...

**ಶ್ರೀ ಹೆಚ್.ಎಂ.ರೇವಣ್ಣ:–** ನಮಗೆ ಅವರು ಪ್ರತಿಯನ್ನೇ ಕೊಡಲಿಲ್ಲ.

**Sri LAHAR SINGH SIROYA:-** It is my right...

**Sri H.M.REVANNA:-** It is taken for granted.

**ಸಭಾಪತಿಯವರು:–** ನನಗೆ ಈಗಲೂ ಅರ್ಥವಾಗುತ್ತಿಲ್ಲ. ಏಕೆಂದರೆ, ಬೆಳಗ್ಗೆಯಿಂದ 23 ಜನ ಸದಸ್ಯರು ಮಾತನಾಡಿದ್ದಾರೆ ತಾವು ಸದನದಲ್ಲಿಯೇ ಇದ್ದಿರಿ, ಯಾವುದನ್ನಾದರೂ ಹೇಳಿದ್ದರೆ ಸಚಿವರಿಗೆ ಸಲಹೆ ಕೊಡಬಹುದಾಗಿತ್ತು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನಿನ್ನೆ ತಾವು ನನಗೆ ಆಶ್ವಾಸನೆ ಕೊಟ್ಟಿದ್ದಿರಿ;

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, . . .

**ಶ್ರೀ ಲಹರ್ ಸಿಂಗ್ ಸಿರೋಯಾ:–** ಅದಕ್ಕೆ ಸಮಾಧಾನವಾಗಿ . . .

**Dr: Y.A.NARAYANASWAMY:-** Mr. Chairman, he wanted to avail it under this provision.

(ಗೊಂದಲ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ರಿಪ್ಲೈ ಆದ ಮೇಲೆ ಈಗ ಏನು ಪ್ರಯೋಜನ? Reply is over.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಸದನದಲ್ಲಿರುವಂತಹ ಎಲ್ಲಾ ಮಾನ್ಯ ಸದಸ್ಯರುಗಳು ಸಮಾಧಾನವಾಗಿ ಕೇಳಿದ್ದಾರೆ, ಅದರಲ್ಲೂ ಮಾನ್ಯ ಶ್ರೀಕಂಠೇಗೌಡರು ಇನ್ನೂ ಒಳ್ಳೆಯ ಸಲಹೆಗಳನ್ನು ಕೊಟ್ಟರು.

**Sri LAHAR SINGH SIROYA:-** After giving this answer there are so many things.

**ಶ್ರೀ ಹೆಚ್.ಎಂ. ರೇವಣ್ಣ:–** ಅವೆಲ್ಲಾ ಆಗುತ್ತವೆ ಬಿಡಿ. ಅವರೇನು ಆರೋಗ್ಯ ಸಚಿವರೇ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಇವತ್ತಿನ ಘಟನೆಯನ್ನು ಹೇಳುತ್ತೇನೆ.

**ಶ್ರೀ ಹೆಚ್.ಎಂ. ರೇವಣ್ಣ:–** ಏನಿದು? ಇಲ್ಲಿ ಏನು ನಡೆಯುತ್ತಿದೆ? ಉತ್ತರ ಕೊಟ್ಟಾಗಿದೆ. Suo moto ಉತ್ತರ ಕೊಡುತ್ತಿದ್ದೇವೆ ಎಂದರು. ಅದಾದ ಮೇಲೂ ಪುನಃ ಅದರ ಬಗ್ಗೆಯೇ ಮಾತನಾಡಿದರೆ ಹೇಗೆ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮತ್ತೆ ಕೆಲವೊಂದು developments ಆಗಿದೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯ ವಿಚಾರಗಳಲ್ಲಿ ಅವರು ಕೇಳುತ್ತಾರೆ. ಅದನ್ನು ಮಂಡಿಸುತ್ತಾರೆ ಅದಕ್ಕೆ ಉತ್ತರ ಕೊಡುತ್ತಾರೆ.

**ಸಭಾಪತಿಯವರು:–** ಇಲ್ಲಿ ಕೇಳಿ, ನನಗೆ ಅರ್ಥವೇ ಆಗಿಲ್ಲ ಅವರು ಕೇಳಿದ್ದು ಹೌದು, ಶೂನ್ಯ ವೇಳೆಯಲ್ಲಿ ಅದನ್ನು ಪ್ರಸ್ತಾಪ ಮಾಡಬೇಕೆಂದು ನೋಟಿಸ್ ಕೊಟ್ಟಿರುವುದು ಕೂಡ ಹೌದು, ಎಲ್ಲಾ ಸತ್ಯ. ಆದರೆ 23 ಜನ ಸದಸ್ಯರು ಮಾತನಾಡಿದಂತಹ ಸಂದರ್ಭದಲ್ಲಿ ಇವರು ಸದನದಲ್ಲಿಯೇ ಇದ್ದರೂ ಸಹ ಏಕೆ ಮಾತನಾಡಿಲ್ಲ?

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ಆಗ ನಾನು ಏಕೆ ಮಾತನಾಡಿಲ್ಲ ಎಂದರೆ, ತಾವು ನಿನ್ನೆ ದಿವಸ ನನಗೆ ಆಶ್ವಾಸನೆ ಕೊಟ್ಟಿದ್ದೀರಿ;

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಶೂನ್ಯ ವೇಳೆಯಲ್ಲಿ ಮಾತನಾಡುವುದಕ್ಕೆ ನೋಟಿಸ್ ಕೊಟ್ಟಿರುತ್ತಾರೆ ನೀವು ಅವರಿಗೆ ಅವಕಾಶ ...

**ಸಭಾಪತಿಯವರು:–** ಇಲ್ಲ, ಹಾಗೆ ಮಾತನಾಡುವುದಕ್ಕೆ ಆಗುವುದಿಲ್ಲ. ಸದನದಲ್ಲಿ ಒಂದು ಸಲ ಪ್ರಸ್ತಾಪವಾಗಿರುವಂತಹ ವಿಚಾರಗಳನ್ನು ಪುನಃ ಮಾತನಾಡುವ ಹಾಗಿಲ್ಲ.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ತಾವು ಮೊನ್ನೆ ನನಗೆ ಆಶ್ವಾಸನೆ ಕೊಟ್ಟಿದ್ದಿರಿ;

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆ ಪ್ರಸ್ತಾವಗಳಿಗೆ ಉತ್ತರ ಕೊಡುವವರು ಯಾರು?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಶೂನ್ಯ ವೇಳೆಯಲ್ಲಿ ಇಷ್ಟೊಂದು ಓದುವುದಕ್ಕೆ ನಿಯಮದಲ್ಲಿ ಅವಕಾಶ ಇಲ್ಲ. ಅವರು ಎಷ್ಟು ಓದಿದ್ದಾರೆ? ಒಂದು ಪುಟ ಓದಿದ್ದಾರೆ. ನಿಯಮಗಳಲ್ಲಿ ಅದಕ್ಕೆ ಅವಕಾಶ ಇದೆಯೇ?

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ತಾವು ಇಷ್ಟು ಪದಗಳಿರಬೇಕೆಂದು ನಿರ್ಬಂಧ ಮಾಡಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:–** ಶೂನ್ಯ ವೇಳೆಯಲ್ಲಿ ಓದುವಂತಹ ಸಂದರ್ಭದಲ್ಲಿ ಇಷ್ಟು ಪದಗಳಿರಬೇಕೆಂದು ತಾವು ತಿಳಿಸಿದ್ದೀರಿ. ಏಕೆಂದರೆ, ಅವರು ಇಂಗ್ಲಿಷ್‌ನಲ್ಲಿ ಹೇಳಿದ್ದರಿಂದ ನಮಗೆ ಅರ್ಥವಾಗಲಿಲ್ಲ.

**ಡಾ: ತೇಜಸ್ವಿನಿ ಗೌಡ:–** ಜಾಣತನದ ಉತ್ತರ ಇದು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಲಹರ್ ಸಿಂಗ್ ಸಿರೋಯಾ:–** ಇದು ಅವಶ್ಯಕವಾದ ವಿಷಯವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

**ಸಭಾಪತಿಯವರು:–** ಮಾನ್ಯ ಲಹರ್‌ಸಿಂಗ್‌ರವರೇ, ನಿಮ್ಮ ಮಾತು ಮುಗಿಯಿತಲ್ಲವೇ? ಮುಂದಿನ ಸರದಿ ಮಾನ್ಯ ವೈ.ಎ. ನಾರಾಯಣಸ್ವಾಮಿಯವರದ್ದು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ನನ್ನ ಮಾತು ಮುಗಿದಿಲ್ಲ, ನಾನು ಇನ್ನೂ ಮಾತನಾಡಬೇಕು, ತಾವು ಅವಕಾಶ ಕೊಟ್ಟರೆ ಈಗ ಕನ್ನಡದಲ್ಲಿ ಮಾತನಾಡುತ್ತೇನೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಮಾತನಾಡಲು ಅವಕಾಶ ಕೊಟ್ಟರೆ ಅವರು ಕನ್ನಡದಲ್ಲಿ ಮಾತನಾಡುತ್ತಾರೆ.

**ಶ್ರೀ ಹೆಚ್.ಎಂ. ರೇವಣ್ಣ:–** ನೀವು debate ಆಗುವಾಗ ಮಾತನಾಡಿ. ಶೂನ್ಯವೇಳೆಯಲ್ಲಿ ಕೇಳಿದರಲ್ಲವೇ ಅದು ಸಾಕು.

**ಶ್ರೀ ಲಹರ್ ಸಿಂಗ್ ಸಿರೋಯಾ:–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟರೆ ನಾನು ಮತ್ತೊಮ್ಮೆ repeat ಮಾಡುತ್ತೇನೆ.

**ಆ) ಪಡಿತರ ವಿತರಣೆಯ ಮೂಲದಲ್ಲಿಯೇ ಪ್ರತಿ ತಿಂಗಳು 5400 ಟನ್ ಪಡಿತರ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ 25000 ಟನ್ ಪಡಿತರ ಸೋರಿಕೆಯಾಗುತ್ತಿರುವ ಬಗ್ಗೆ.**

– – – – –

**ಡಾ: ವೈ.ಎ. ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಪಡಿತರ ವಿತರಣೆಯ ಮೂಲದಲ್ಲಿಯೇ ಪ್ರತಿ ತಿಂಗಳು 5400 ಟನ್ ಪಡಿತರ ಮತ್ತು ನ್ಯಾಯಬೆಲೆ ಅಂಗಡಿಗಳಲ್ಲಿ 25,000 ಟನ್ ಪಡಿತರ ಸೋರಿಕೆಯಾಗುತ್ತಿದೆ ಎಂದು ದಿನಾಂಕ 04.03.2020ರ ಕನ್ನಡಪ್ರಭ ದಿನಪತ್ರಿಕೆಯಲ್ಲಿ ವರದಿಯಾಗಿದೆ.

ಆಹಾರ ಇಲಾಖೆಯ ಮಾಹಿತಿಯ ಪ್ರಕಾರ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಫಲಾನುಭವಿಗಳಿಗೆ ಅನ್ನಭಾಗ್ಯ ಯೋಜನೆಯಡಿ 7 ಕೆ.ಜಿ ಅಕ್ಕಿ ಕೊಡಬೇಕು ಆದರೆ ಸಗಟು ಮತ್ತು ನ್ಯಾಯಬೆಲೆ ಅಂಗಡಿಯಲ್ಲಿ ಆಗುತ್ತಿರುವ ಸೋರಿಕೆಯ ಪರಿಣಾಮ ಕೇವಲ 5 ಕೆಜಿ ಅಥವಾ 6 ಕೆ.ಜಿ ಮಾತ್ರ ಕೊಡುತ್ತಿದ್ದಾರೆ. ಇನ್ನು ಬಿಪಿಎಲ್ ಕಾರ್ಡುದಾರರಿಗೆ ಅಕ್ಕಿ ಉಚಿತವಾಗಿ ನೀಡಿದರೂ ಥಂಬ್ ಇಂಪ್ರೇಷನ್ ಹೆಸರಿನಲ್ಲಿ ನ್ಯಾಯಬೆಲೆ ಅಂಗಡಿಯವರು ಹಣ ಲೂಟಿ ಮಾಡುತ್ತಿದ್ದು, ಹೆಬ್ಬೆರಳು ಮುದ್ರೆ ಪಡೆಯಲು ತಲಾ ಹತ್ತು ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಇದರ ಪ್ರಕಾರ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಿಂಗಳಿಗೆ 7 ರಿಂದ 8 ಕೋಟಿ ಹಣ ಅಕ್ರಮವಾಗಿ ನ್ಯಾಯಬೆಲೆ ಅಂಗಡಿಯವರು ಲೂಟಿ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ.

ರಾಜ್ಯದಲ್ಲಿ ಸುಮಾರು 1.16 ಕೋಟಿ ಬಿಪಿಎಲ್ ಪಡಿತರ ಕಾರ್ಡ್‌ಗಳಿವೆ ಸುಮಾರು 21 ಸಾವಿರಕ್ಕೂ ಅಧಿಕ ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿದೆ. ಇವುಗಳಲ್ಲಿ ಬಹುತೇಕ ನ್ಯಾಯಬೆಲೆ ಅಂಗಡಿಗಳಲ್ಲಿ ಅರ್ಹ ಫಲಾನುಭವಿಗಳಿಗೆ ನ್ಯಾಯಯುತರಾಗಿ ಸಿಗಬೇಕಾದ ಪಡಿತರ ಆಹಾರ ಧಾನ್ಯಗಳು ಹಂಚಿಕೆಯಾಗುತ್ತಿಲ್ಲ. ಈ ಕುರಿತು ಸರ್ಕಾರ ಶೀಘ್ರವಾಗಿ ಕ್ರಮ ಕೈಗೊಳ್ಳಬೇಕು ಎಂದು ತಮ್ಮ ಮುಖಾಂತರ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ವೈ.ಎ. ನಾರಾಯಣಸ್ವಾಮಿಯವರು ಪಡಿತರ ವಿತರಣೆಯಲ್ಲಿ ಆಗುತ್ತಿರುವ ಸಮಸ್ಯೆ ಬಗ್ಗೆ ಉಲ್ಲೇಖಿಸಿದ ಶೂನ್ಯ ವೇಳೆಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಿಂದ ಉತ್ತರವನ್ನು ನೀಡಲಾಗುವುದು.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಸಚಿವರು ಎಲ್ಲಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸಚಿವರು ಈಗ ತಾನೇ ಹೊರಗೆ ಹೋಗಿದ್ದಾರೆ.

**ಶ್ರೀ ಹೆಚ್.ಎಂ. ರೇವಣ್ಣ:–** ಹೊರಗೆ ಹೋದರು ಎಂದರೆ ನಮ್ಮ ಕಡೆ ಬೇರೆ ಅರ್ಥ ಇದೆ.

**(ಸದನದಲ್ಲಿ ನಗುವಿನ ಅಲೆ ತೇಲಿಬಂತು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ವಿರೋಧ ಪಕ್ಷದ ನಾಯಕರು ಈ ಕಡೆಯೇ ನೋಡಬೇಕಾ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ, ನನ್ನದೊಂದು ವಿನಂತಿ ಇದೆ, ದಯಮಾಡಿ ನೀವಿಬ್ಬರೂ ಹೊರಗೆ ಹೋಗಿಬಿಡಿ. ಈ ಸದನ ತಣ್ಣಗಿರುತ್ತದೆ.

**(ಸದನದಲ್ಲಿ ನಗುವಿನ ಅಲೆ ತೇಲಿಬಂತು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ತಾವೆಲ್ಲರೂ ಅದನ್ನೇ ಕಾಯುತ್ತಿದ್ದೀರಿ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಇ) ಮಂಗಳೂರು ಮಹಾನಗರದಲ್ಲಿ ಪರವಾನಗಿ ಪಡೆದ ರಿಕ್ಷಾ ಚಾಲಕರು ತಮ್ಮ ರಿಕ್ಷಾಗಳನ್ನು ಮಾರಾಟ ಮಾಡಲು ಅಥವಾ ವರ್ಗಾವಣೆ ಮಾಡಲು ತೊಂದರೆಯಾಗುತ್ತಿರುವ ಬಗ್ಗೆ.**

– – – – –

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದವನ್ನು ಹೇಳುತ್ತಾ, ದ.ಕ. ಜಿಲ್ಲೆಯ ಮಂಗಳೂರು ಮಹಾನಗರದಲ್ಲಿ ಸುಮಾರು 6000ಕ್ಕೂ ಅಧಿಕ ರಿಕ್ಷಾಗಳು ಸಂಚರಿಸುತ್ತಿದ್ದು ನಗರದಲ್ಲಿ ಪರವಾನಗಿ ಪಡೆದ ರಿಕ್ಷಾ ಚಾಲಕರು ತಮ್ಮ ರಿಕ್ಷಾಗಳನ್ನು ಮಾರಾಟ ಮಾಡಲು ಅಥವಾ ವರ್ಗಾವಣೆ ಮಾಡಲು ಕಳೆದ 12ನೇ ಮಾರ್ಚ್ 2019 ರಿಂದ ಸಾಧ್ಯವಾಗುತ್ತಿಲ್ಲ ಎಂದು ರಿಕ್ಷಾ ಚಾಲಕರು ತಮ್ಮ ಬವಣೆಯನ್ನು ವ್ಯಕ್ತಪಡಿಸಿದ್ದಾರೆ.

ದಿನಾಂಕ: 28–2–2020ರಂದು ಪ್ರಾದೇಶಿಕ ಸಾರಿಗೆ ಇಲಾಖೆಯ ಸಭೆಯಲ್ಲಿ ರಿಕ್ಷಾ ಚಾಲಕರ ಬೇಡಿಕೆಯನ್ನು ಯಾವುದೇ ಸಕಾರಣಗಳನ್ನು ನೀಡದೇ ತಮ್ಮ ಬೇಡಿಕೆಯನ್ನು ನಿರ್ಲಕ್ಷಿಸಲಾಗಿದೆ. ಈ ಬಗ್ಗೆ ಉದಯವಾಣಿ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಲಗತ್ತಿಸಿದ್ದೇನೆ.

ಮೋಟಾರು ವಾಹನ ಕಾಯ್ದೆ ನಿಯಮ 52ರ ಅಡಿಯಲ್ಲಿ ಆಟೋರಿಕ್ಷಾ ವರ್ಗಾವಣೆಗಾಗಿ ಅರ್ಜಿ ನೀಡಿದ ವಯಸ್ಸಿನ ಕಾರಣಕ್ಕಾಗಿ ದುಡಿಯಲು ಆಗದ ಚಾಲಕರು, ಅನಾರೋಗ್ಯದಿಂದ ಬಳಲುವ ಚಾಲಕರು, ಕುಟುಂಬದ ಸದಸ್ಯರು ದೈವಾಧೀನನಾದ ಸಂದರ್ಭಗಳಲ್ಲಿ ಕುಟುಂಬದ ಅಗತ್ಯ ಕೆಲಸಕಾರ್ಯಗಳಿಗೆ ಹಣಕಾಸಿನ ತೊಂದರೆಗೆ ಒಳಗಾದ ಸಂದರ್ಭದಲ್ಲಿ, ಮಾರಾಟ ಮಾಡಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗಿರುವುದರಿಂದ ಕಳೆದ ಒಂದು ವರ್ಷದಿಂದ ರಿಕ್ಷಾಗಳನ್ನು ತಮ್ಮ ಅಂಗಳದಲ್ಲಿ ಇಡಬೇಕಾದ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಪ್ರಾದೇಶಿಕ ಸಾರಿಗೆ ಇಲಾಖೆಯ ದಿವ್ಯನಿರ್ಲಕ್ಷ್ಯಕ್ಕೆ ಕಾರಣವಾಗಿದೆ.

ಈ ಬಗ್ಗೆ ಸಾವಿರಾರು ರಿಕ್ಷಾ ಚಾಲಕರು ತಮ್ಮ ಬೇಡಿಕೆಯನ್ನು ಈಡೇರಿಸಲು ಆರ್‌ಟಿಓ (RTO) ಕಛೇರಿಗೆ, ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಹಿಂದಕ್ಕೆ ಬರುವುದನ್ನು ತಪ್ಪಿಸಲು ದುಡಿಯುವ ವರ್ಗಕ್ಕೆ ತಮ್ಮ ಕೆಲಸಕಾರ್ಯಗಳನ್ನು ನಿಯಮದಂತೆ ಕಾರ್ಯನಿರ್ವಹಿಸಲು ಮಾನ್ಯ ಸಾರಿಗೆ ಸಚಿವರು ಕೂಡಲೇ ಈ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಈ ಸದನದ ಮೂಲಕ ಕೋರುತ್ತೇನೆ. ಇದೊಂದು ಮಹತ್ವವುಳ್ಳ ವಿಚಾರವಾಗಿರುವುದರಿಂದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ಕೃತಜ್ಞತೆಯನ್ನು ಸೂಚಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾದ ಐವನ್ ಡಿ'ಸೋಜಾರವರು ರಿಕ್ಷಾ ಚಾಲಕರ ಸಮಸ್ಯೆ ಬಗ್ಗೆ ಶೂನ್ಯವೇಳೆಯಲ್ಲಿ ಉಲ್ಲೇಖ ಮಾಡಿದರು. ಈ ಶೂನ್ಯವೇಳೆ ಪ್ರಶ್ನೆಗೆ ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರವನ್ನು ಕೊಡಿಸಲಾಗುವುದು.

**ಸಭಾಪತಿಯವರು:–** ಶ್ರೀ ತಿಪ್ಪಣ್ಣ ಕಮಕನೂರ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅವರ ಪರವಾಗಿ;

**ಸಭಾಪತಿಯವರು:–** ಪರವಾಗಿ ನಾಳೆ. ಶ್ರೀ ಯು.ಬಿ. ವೆಂಕಟೇಶ್.

**ಈ) ಮಂಡ್ಯ ಜಿಲ್ಲೆಯ ರೈತರು ಹೊಸ ತಳಿಯ ಭತ್ತ ಬಿತ್ತನೆ ಮಾಡಿ ಬೆಳೆ ನಷ್ಟವಾಗಿರುವ ಬಗ್ಗೆ.**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. ಮಂಡ್ಯ ಜಿಲ್ಲೆಯ ರೈತರು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಒಂದು ಕಡೆ ಬೆಳೆದ ಕಬ್ಬನ್ನು ಕಟಾವು ಮಾಡಲಾಗದೆ ಸಂಕಷ್ಟಕ್ಕೆ ಸಿಲುಕಿದರೆ ಮತ್ತೊಂದು ಕಡೆ ಕಳಪೆ ಭತ್ತದ ಬಿತ್ತನೆ ಬೀಜವನ್ನು ನಾಟಿ ಮಾಡಿ ಬಹುತೇಕ ಜೊಳ್ಳು ಭತ್ತದ ಬೆಳೆಯಿಂದಾಗಿ ತೀವ್ರ ನಷ್ಟಕ್ಕೆ ಒಳಗಾಗಿದ್ದಾರೆ.

ಇಲ್ಲಿನ ಭೂಮಿಗೆ ಹೊಂದಾಣಿಕೆಯಾಗದ ಹಾಗೂ ಈ ಅವಧಿಗೆ ಬೆಳೆ ಬಾರದ ಟಾಟಾ ಪ್ರೋಡಕ್ಷನ್ ಎಂ.ಆರ್.8666 ತಳಿಯ ಭತ್ತದ ಬಿತ್ತನೆ ಬೀಜಗಳನ್ನು ಖರೀದಿಸಿ ನಾಟಿ ಮಾಡಿದ ಹಲವು ರೈತರುಗಳಿಗೆ ಭತ್ತದ ಕಾಳಿನ ಬದಲಾಗಿ ಜೊಳ್ಳಿನ ಬೆಳೆಯ ನೋವನ್ನು ಅನುಭವಿಸುವಂತಹ ಸಂದರ್ಭ ಸೃಷ್ಟಿಯಾಗಿದೆ.

ಮಂಡ್ಯ ನಗರದ ಮಂಜುನಾಥ ಆಗ್ರೋ ಟ್ರೇಡರ್‌ನಲ್ಲಿ ಈ ಬಿತ್ತನೆ ಬೀಜವನ್ನು ಖರೀದಿಸಿದ ಮಂಡ್ಯ ಹಾಗೂ ಮದ್ದೂರು ತಾಲ್ಲೂಕಿನ ರೈತರು ಈ ಬಿತ್ತನೆ ಬೀಜಗಳನ್ನು ನಾಟಿ ಮಾಡಿರುತ್ತಾರೆ. 135 ದಿನಕ್ಕೆ ಕೋಯಿಲು ಬರಬೇಕಾದ ಬೆಳೆಗಳು 150 ದಿನಗಳು ಕಳೆದರು ಕೋಯಿಲು ಬಂದಿಲ್ಲ. ಇದರಿಂದ ರೈತರು ಕಷ್ಟಪಟ್ಟು ಹಾಕಿದ ಬಂಡವಾಳ ಹಾಗೂ ಶ್ರಮಕ್ಕೆ ಪ್ರತಿಫಲ ಸಿಕ್ಕಿಲ್ಲ. ಬಿತ್ತನೆ ಬೀಜ ಮಾರಾಟಗಾರರು ಲಾಭದ ಆಸೆಗೆ ಈ ನೆಲದ ಹವಾಗುಣಕ್ಕೆ ಹೊಂದಿಕೊಳ್ಳದ ಹಾಗೂ ಮಾರಾಟಕ್ಕೆ ಅವಕಾಶವಿಲ್ಲದ ಬಿತ್ತನೆ ತಳಿಗಳನ್ನು ಇಲ್ಲಿ ಮಾರಾಟ ಮಾಡಿ ರೈತರ ಜೀವನದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ಈ ಬಗ್ಗೆ ರೈತರು ಕೃಷಿ ಇಲಾಖೆಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆದ್ದರಿಂದ ಈ ಬಗ್ಗೆ ಕೃಷಿ ಸಚಿವರು ಗಮನ ಹರಿಸಿ ನಷ್ಟಕ್ಕೆ ಒಳಗಾದ ರೈತರುಗಳಿಗೆ ಕಂಪನಿ ಕಡೆಯಿಂದ ಸೂಕ್ತ ಪರಿಹಾರವನ್ನು ಕೊಡಿಸಬೇಕು ಹಾಗೂ ಮುಂದೆ ಈ ರೀತಿಯಾಗದಂತೆ ಕೃಷಿ ಇಲಾಖೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡುವುದರ ಮೂಲಕ ಇಂತಹ ಕಳಪೆ ಬಿತ್ತನೆ ಬೀಜದ ಮಾರಾಟಕ್ಕೆ ನಿರ್ಬಂಧ ಹೇರುವಂತಹ ಕ್ರಮಕ್ಕೆ ಮುಂದಾಗಬೇಕು ಎಂದು ಆಗ್ರಹಿಸುತ್ತೇನೆ.

(ಮುಂದು)

(169) 04–03–2020/ 07–00/ ಕೆಹೆಚ್–ವಿಕೆ
**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):**

ಮಾನ್ಯ ಸಭಾಪತಿಯವರೇ, ಅವರು ಕೊಟ್ಟಿರುವಂತಹ ಭತ್ತದ ಬಿತ್ತನೆ ಬೀಜಗಳೇ ಬೇರೆ, ಇದಕ್ಕೆ ರಸೀದಿ ಹಾಕಿರುವುದೇ ಬೇರೆಯಾಗಿದೆ. ಎಂ.ಆರ್.8666 ತಳಿಯ ಭತ್ತದ ಬಿತ್ತನೆ ಬೀಜಗಳ ಬದಲಾಗಿ ರಸೀದಿಯಲ್ಲಿ ಎಂ.ಆರ್.ಹೆಚ್.8666 ಎಂದು ನಮೂದಿಸಿದ್ದಾರೆ. ಈಗಾಗಲೇ ಇದು ನಿಷಿದ್ಧವಾಗಿದೆ. ಇದರಲ್ಲಿ ಒಂದು ಕ್ವಿಂಟಾಲ್ ಬೆಳೆಯನ್ನು ಬೆಳೆಯುತ್ತೇವೆ ಎಂದು ಕೊಟ್ಟಿದ್ದಾರೆ. ಆದರೆ, ಇಡೀ ಎಕರೆಯಲ್ಲಿ ಒಂದು ಕ್ವಿಂಟಾಲ್ ಭತ್ತದ ಬೆಳೆ ಇಲ್ಲ. ದಯಮಾಡಿ ಇದರ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಟಿ.ಶ್ರೀಕಂಠೇಗೌಡ ರವರು ಮಂಡ್ಯ ಜಿಲ್ಲೆಯ ರೈತರ ಹೊಸ ತಳಿಯ ಭತ್ತ ಬಿತ್ತನೆ ಮಾಡಿ ಬೆಳೆ ನಷ್ಟವಾಗಿರುವ ಬಗ್ಗೆ ಶೂನ್ಯ ವೇಳೆಯಲ್ಲಿ ಗಂಭೀರವಾದ ವಿಚಾರವನ್ನು ಉಲ್ಲೇಖ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಕೃಷಿ ಸಚಿವರಿಂದ ಸಮರ್ಪಕವಾದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರು . . . ಸದನವನ್ನು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಸಮೂಹ–3ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 97 ಪ್ರಶ್ನೆಗಳ ಪೈಕಿ 92 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಗಿದೆ. ತಮ್ಮ ಮುಖಾಂತರ ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಗಮನಕ್ಕೆ ತರುತ್ತಿದ್ದೇನೆ.

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಈಗ ಸಭೆಯನ್ನು ನಾಳೆ ಮಧ್ಯಾಹ್ನ 1.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 7 ಗಂಟೆ 02 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 05ನೇ ಮಾರ್ಚ್ ಮಾಹೆ 2020ರ ಗುರುವಾರದಂದು ಮಧ್ಯಾಹ್ನ 1.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "
~~~~~~